# ಕರ್ನಾಟಕ ಮೌಲ್ಯ ವರ್ಧಿತ ತೆರಿಗೆ ಅಧಿನಿಯಮ, 2003

## ಪ್ರಕರಣಗಳ ಪಟ್ಟಿ

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

**ಪ್ರಕರಣಗಳು:**

**ಅಧ್ಯಾಯ - I**

**ಪ್ರಾರಂಭಿಕ**

1. ಸಂಕ್ಷಿಪ್ತ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ
2. ಪರಿಭಾಷೆಗಳು

**ಅಧ್ಯಾಯ - II**

**ತೆರಿಗೆ ಭಾರ ವ್ಯಾಪ್ತಿ ಮತ್ತು ತೆರಿಗೆ ವಿಧಿಸುವಿಕೆ**

3. ತೆರಿಗೆಯ ವಿಧಿಸುವಿಕೆ
4. ತೆರಿಗೆ ಬದ್ಧತೆ ಮತ್ತು ಅದರ ದರಗಳು
5. ತೆರಿಗೆ ವಿನಾಯಿತಿ
6. ಸರಕುಗಳ ಮಾರಾಟದ ಸ್ಥಳ
7. ಸರಕುಗಳ ಮಾರಾಟದ ಸಮಯ
8. ತೆರಿಗೆಯನ್ನು ಸಂದಾಯ ಮಾಡಲು ಬದ್ಧರಾಗಿರುವ ಏಜೆಂಟರು
9. ನೋಂದಾಯಿತ ವ್ಯಾಪಾರಿಗಳಿಂದ, ಸರ್ಕಾರಗಳಿಂದ ಮತ್ತು ಶಾಸನಬದ್ಧ ಪ್ರಾಧಿಕಾರಗಳಿಂದ ತೆರಿಗೆಯ ಸಂಗ್ರಹ

9-ಎ. ಮೂಲದಲ್ಲೇ ತೆರಿಗೆಯ ಮುರುಗಡೆ (ಕಾಮಗಾರಿ ಕರಾರಿನ ಸಂದರ್ಭದಲ್ಲಿ)

10. ಹುಟ್ಟುವಳಿ ತೆರಿಗೆ, ಹೂಡುವಳಿ ತೆರಿಗೆ ಮತ್ತು ನಿವ್ವಳ ತೆರಿಗೆ
11. ಹೂಡುವಳಿ ತೆರಿಗೆಯ ನಿರ್ಬಂಧಗಳು
12. ಬಂಡವಾಳ ಸರಕುಗಳ ಸಂಬಂಧದಲ್ಲಿ ಹೂಡುವಳಿ ತೆರಿಗೆಯನ್ನು ಕಡಿತಗೊಳಿಸುವುದು
13. ನೋಂದಣಿ ಪೂರ್ವ ಖರೀದಿಗಳು
14. ವಿಶೇಷ ರಿಯಾಯಿತಿ ಯೋಜನೆ
15. ತೆರಿಗೆಯ ಬಗ್ಗೆ ರಾಜಿ
16. ವಿಶೇಷ ತೆರಿಗೆ ಪಾವತಿ ಯೋಜನೆ
17. ಭಾಗಶಃ ರಿಯಾಯಿತಿ
18. ಕ್ಯಾಂಟೀನುಗಳ ಸಂದರ್ಭದಲ್ಲಿ ಮೂಲದಲ್ಲಿ ತೆರಿಗೆಯನ್ನು ಮುರಿದುಕೊಳ್ಳುವುದು
19. ಹೂಡುವಳಿ ತೆರಿಗೆಯನ್ನು ಕಡಿತಗೊಳಿಸಿದ ತರುವಾಯ ಬಳಕೆಯಲ್ಲಿಯ ವ್ಯತ್ಯಾಸ
20. ರಫ್ತು ಮತ್ತು ಅಂತರ ರಾಜ್ಯ ಮಾರಾಟಗಳ ಮೇಲೆ ಹೂಡುವಳಿ ತೆರಿಗೆಯ ಕಡಿತ, ಇತ್ಯಾದಿ
21. ತೆರಿಗೆಯನ್ನು ಮರುಪಾವತಿಸುವುದು

## ಅಧ್ಯಾಯ - III

### ನೋಂದಣಿ


22. ನೋಂದಣಿಯ ಬದ್ಧತೆ

23. ಸ್ವಇಚ್ಛೆಯಿಂದ ನೋಂದಣಿ ಮಾಡಿಸುವುದು.

24. ತಾನಾಗಿಯೇ ನೋಂದಣಿ ಮಾಡಿಸುವುದು

25. ನೋಂದಣಿ

26. ಭದ್ರತೆ

27. ನೋಂದಣಿಯ ರದ್ದಿಯಾತಿ

28. ನೋಂದಣಿಯ ತರುವಾಯ ಆದ ಬದಲಾವಣೆಗಳನ್ನು ತಿಳಿಸುವುದು ನೋಂದಾಯಿತ ವ್ಯಾಪಾರಿಯ ಹೊಣೆಗಾರಿಕೆಯಾಗಿರತಕ್ಕದ್ದು


## ಅಧ್ಯಾಯ - IV

### ಲೆಕ್ಕಪತ್ರಗಳು ಮತ್ತು ದಸ್ತಾವೇಜುಗಳು


29. ತೆರಿಗೆ ಬೆಲೆಪಟ್ಟಿ ಮತ್ತು ಮಾರಾಟ ಬಿಲ್ಲುಗಳು

30. [xxx]

31. ಲೆಕ್ಕ ಪತ್ರಗಳು

32. ಲೆಕ್ಕಪತ್ರಗಳನ್ನು ಉಳಿಸಿಕೊಳ್ಳಬೇಕಾದ ಅವಧಿ

33. ಎಲೆಕ್ಟ್ರಾನಿಕ್ ದಾಖಲೆಗಳು

34. ದಸ್ತಾವೇಜುಗಳು ಮತ್ತು ಮಾಹಿತಿಗಳನ್ನು ಒದಗಿಸಲು ಅಗತ್ಯತೆಗಳು


## ಅಧ್ಯಾಯ - V

### ಆಡಳಿತ ಮತ್ತು ತೆರಿಗೆ ಸಂಗ್ರಹಣೆ


35. ವಿವರ ಪಟ್ಟಿಗಳು

36. ವಿವರ ಪಟ್ಟಿಗಳನ್ನು ಒದಗಿಸಲು ಅಥವಾ ವಿವರ ಪಟ್ಟಿಯ ಮೇಲೆ ಘೋಷಿಸಲಾದ ತೆರಿಗೆಯನ್ನು ಸಂದಾಯ ಮಾಡಲು ಅಥವಾ ಇತರ ಮೊಬಲಗನ್ನು ಸಂದಾಯ ಮಾಡಲು ತಪ್ಪಿದಲ್ಲಿ ಬಡ್ಡಿ

37. ಬಡ್ಡಿಯ ದರ

38. ತೆರಿಗೆಯ ನಿರ್ಧರಣೆ

39. ತೆರಿಗೆಯ ಮರು ನಿರ್ಧರಣೆ

40. ತೆರಿಗೆ ನಿರ್ಧರಣೆಗಾಗಿ ಕಾಲಮಿತಿ

41. ಕೆಲವು ಸಂದರ್ಭಗಳಲ್ಲಿ ತೆರಿಗೆ ನಿರ್ಧರಣೆಯನ್ನು ಅಥವಾ ತೆರಿಗೆಯ ಮರುನಿರ್ಧರಣೆಯನ್ನು ಸರಿಪಡಿಸುವ ಅಧಿಕಾರ

42. ತೆರಿಗೆ, ದಂಡಗಳು, ಬಡ್ಡಿ ಮತ್ತು ಇತರ ಮೊಬಲಗುಗಳ ಸಂದಾಯ ಮತ್ತು ವಸೂಲಿ, ತೀರುವಳಿ ಪ್ರಮಾಣ ಪತ್ರಗಳ ನೀಡಿಕೆ

43. ರಿಸೀವರನ ಕರ್ತವ್ಯಗಳು

44. ಕಂಪೆನಿಗಳಿಗೆ ಸಂಬಂಧಪಟ್ಟಂತೆ ವಿಶೇಷ ಉಪಬಂಧಗಳು

45. ಕೆಲವು ಇತರ ವ್ಯಕ್ತಿಗಳಿಂದ ತೆರಿಗೆ, ದಂಡ ಅಥವಾ ಇತರ ಯಾವುದೇ ಮೊಬಲಗಿನ ವಸೂಲಿ

46. ವ್ಯವಹಾರದ ವರ್ಗಾವಣೆ ಮೇಲೆ ಸಂದಾಯಮಾಡಬೇಕಾದ ತೆರಿಗೆ, ಕಾನೂನು ಸಮ್ಮತ ಪ್ರತಿನಿಧಿಗಳ ಬಗ್ಗೆ ತೆರಿಗೆ ನಿರ್ಧರಣೆ, ಇತ್ಯಾದಿ

47. ವ್ಯಾಪಾರಿಯಿಂದ ತೆರಿಗೆ ರೂಪದಲ್ಲಿ ತಪ್ಪಾಗಿ ಸಂಗ್ರಹಿಸಲಾದ ಮೊಬಲಗುಗಳ ಸಂದಾಯ ಮತ್ತು ಬಟವಾಡೆ

47ಎ. ತೆರಿಗೆ ಮುಂತಾದವುಗಳನ್ನು ಪೂರ್ಣಾಂಕಗೊಳಿಸುವುದು ಇತ್ಯಾದಿ

48. ತೆರಿಗೆಯು ಸ್ವತ್ತಿನ ಮೇಲೆ ಮೊದಲನೇ ಋಣಭಾರವಾಗಿರುವುದು

49. ತೆರಿಗೆಯ ವಸೂಲಿಗಾಗಿ ಕಾಲಮಿತಿಯ ಅವಧಿ

50. ಮರುಪಾವತಿಗಳ ಮೇಲೆ ಬಡ್ಡಿ ಸಂದಾಯ

51. ಕೆಲವು ಪ್ರಕರಣಗಳಲ್ಲಿ ಮರುಪಾವತಿಯನ್ನು ತಡೆಹಿಡಿಯುವ ಅಧಿಕಾರ

52. ದಸ್ತಾವೇಜುಗಳನ್ನು ಹಾಜರುಪಡಿಸುವುದು ಮತ್ತು ಪರಿಶೀಲಿಸುವುದು ಮತ್ತು ಪ್ರವೇಶ, ಶೋಧನೆ ಮತ್ತು ವಶಕ್ಕೆ ತೆಗೆದುಕೊಳ್ಳಲು ಅಧಿಕಾರಗಳು

53. ಚೆಕ್‌ಪೋಸ್ಟ್‌ಗಳ ಸ್ಥಾಪನೆ ಮತ್ತು ಸಾಗಣೆಯಲ್ಲಿರುವ ಸರಕುಗಳ ಪರಿಶೀಲನೆ

54. ರಾಜ್ಯದ ಮೂಲಕ ರಸ್ತೆ ಮಾರ್ಗವಾಗಿ ಸರಕುಗಳ ಸಾಗಣೆ ಮತ್ತು ಸಾಗಣೆ ಪಾಸ್ ನೀಡುವುದು

55. ಸರಕುಗಳ ಕಡಿಮೆ ಮೌಲ್ಯಮಾಪನ ಮಾಡಿದ ಸಂದರ್ಭದಲ್ಲಿ ದಂಡ

56. ಕೆಲವು ಏಜೆಂಟರು ಮಾಹಿತಿ ಒದಗಿಸಲು ಬದ್ಧತೆ

57. ಬ್ಯಾಂಕುಗಳಿಗೆ ಸಂಬಂಧಪಟ್ಟಂತೆ ವಿಶೇಷ ಸಾಕ್ಷ್ಯದ ಅಗತ್ಯತೆಗಳು

**ಅಧ್ಯಾಯ - VI**

**ಪ್ರಾಧಿಕಾರಗಳು ಮತ್ತು ಅಪೀಲು ನ್ಯಾಯಾಧಿಕರಣ**

58. ಆಯುಕ್ತ, ಅಪರ ಆಯುಕ್ತರು, ಜಂಟಿ ಆಯುಕ್ತರು, ಉಪ ಆಯುಕ್ತರು, ಸಹಾಯಕ ಆಯುಕ್ತರು, ರಾಜ್ಯ ಪ್ರತಿನಿಧಿಗಳು ಮತ್ತು ವಾಣಿಜ್ಯ ತೆರಿಗೆ ಅಧಿಕಾರಿಗಳು

59. ಅಧೀನ ಪ್ರಾಧಿಕಾರಗಳಿಗೆ ಸೂಚನೆಗಳು

60. ಸ್ಪಷ್ಟೀಕರಣ ಹಾಗೂ ಪೂರ್ವಭಾವಿ ನಿರ್ಣಯಗಳು

61. ಅಧಿಕಾರಿಗಳ ಅಧಿಕಾರವ್ಯಾಪ್ತಿ ಮತ್ತು ಪದಧಾರಕನ ಬದಲಾವಣೆ

**ಅಧ್ಯಾಯ - VII**

**ಅಪೀಲುಗಳು ಮತ್ತು ಪುನರೀಕ್ಷಣೆಗಳು**

62. ಅಪೀಲುಗಳು

63. ಅಪೀಲು ನ್ಯಾಯಾಧಿಕರಣಕ್ಕೆ ಅಪೀಲು

63ಎ. ಜಂಟಿ ಆಯುಕ್ತರ ಪುನರೀಕ್ಷಣಾ ಅಧಿಕಾರಿಗಳು

64. ಅಪರ ಆಯುಕ್ತರ ಮತ್ತು ಆಯುಕ್ತನ ಪುನರೀಕ್ಷಣಾ ಅಧಿಕಾರಗಳು

65. ಕೆಲವು ಪ್ರಕರಣಗಳಲ್ಲಿ ಉಚ್ಚ ನ್ಯಾಯಾಲಯದಿಂದ ಪುನರೀಕ್ಷಣೆ

66. ಉಚ್ಚನ್ಯಾಯಾಲಯಕ್ಕೆ ಅಪೀಲು

67. ಅಧಿಕಾರವ್ಯಾಪ್ತಿಗೆ ಆಕ್ಷೇಪಗಳು

68. ಉಚ್ಚನ್ಯಾಯಾಲಯಕ್ಕೆ ಸಲ್ಲಿಸಿದ ಮನವಿಗಳು, ಅರ್ಜಿಗಳು ಮತ್ತು ಅಪೀಲುಗಳನ್ನು ಇಬ್ಬರು ನ್ಯಾಯಾಧೀಶರಿಗಿಂತ ಕಡಿಮೆ ಇಲ್ಲದ ನ್ಯಾಯಪೀಠವು ವಿಚಾರಣೆ ಮಾಡತಕ್ಕದ್ದು

69. ತಪ್ಪುಗಳ ಸರಿಪಡಿಸುವಿಕೆ

70. ರುಜುವಾತಿನ ಹೊಣೆ

## ಅಧ್ಯಾಯ - VIII

### ದಂಡಗಳು, ಅಪರಾಧಗಳು ಮತ್ತು ನಿಯಮಗಳ ರಚನಾಧಿಕಾರ

71. ನೋಂದಣಿಗೆ ಸಂಬಂಧಿಸಿದ ದಂಡಗಳು

72. ವಿವರ ಪಟ್ಟಿಗಳಿಗೆ ಸಂಬಂಧಿಸಿದ ದಂಡಗಳು

73. ಅನಧಿಕೃತ ತೆರಿಗೆ ಸಂಗ್ರಹಣೆಗೆ ಸಂಬಂಧಿಸಿದ ದಂಡಗಳು

74. ದಾಖಲೆಗಳನ್ನು ಇಡುವುದಕ್ಕೆ ಮತ್ತು ಪರಿಶೋಧಿತ ಲೆಕ್ಕ ಪತ್ರಗಳ ಹಾಗೂ ವಹಿವಾಟು ಪತ್ರಗಳ ವಿವರ ಪತ್ರವನ್ನು ಸಲ್ಲಿಸುವುದಕ್ಕೆ ಸಂಬಂಧಿಸಿದ ದಂಡಗಳು

75. ದಾಖಲೆಗಳನ್ನು ಹಾಜರುಪಡಿಸುವುದಕ್ಕೆ ಮತ್ತು ಮಾಹಿತಿಯನ್ನು ಒದಗಿಸುವುದಕ್ಕೆ ಸಂಬಂಧಿಸಿದ ದಂಡಗಳು

76. ತೆರಿಗೆ ಬೆಲೆ ಪಟ್ಟಿಗಳಿಗೆ, ಮಾರಾಟದ ಬಿಲ್ಲುಗಳಿಗೆ ಜಮಾ ಚೀಟಿಗಳು ಮತ್ತು ಖರ್ಚು ಚೀಟಿಗಳಿಗೆ ಸಂಬಂಧಿಸಿದಂತೆ ದಂಡಗಳು

77. ಮೊಹರುಗಳಿಗೆ ಮತ್ತು ಲೆಕ್ಕ ನೀಡದಿರುವ ದಾಸ್ತಾನುಗಳಿಗೆ ಸಂಬಂಧಿಸಿದ ದಂಡಗಳು

78. ಅಧಿಕಾರಿಗಳ ವಿರುದ್ಧ ಅಪರಾಧಗಳು

79. ಮೋಸದಿಂದ ತೆರಿಗೆಯನ್ನು ತಪ್ಪಿಸುವುದು

80. ಅಪರಾಧಗಳ ಸಂಜ್ಞೇಯತೆ

81. ಮಾಹಿತಿಯನ್ನು ಬಹಿರಂಗಪಡಿಸುವುದು

82. ಅಪರಾಧಗಳ ರಾಜಿ

83. ಪ್ರಾಸಿಕ್ಯೂಷನ್‌ನಲ್ಲಿ ತೆರಿಗೆ ನಿರ್ಧರಣೆಗಳನ್ನು ಪ್ರಶ್ನಿಸತಕ್ಕದ್ದಲ್ಲ ಎಂಬುದರ ಸಿಂಧುತ್ವ

84. ಕೆಲವು ವ್ಯವಹರಣೆಗಳ ಸಂಬಂಧದಲ್ಲಿ ಪ್ರತಿಷೇಧ ಮತ್ತು ಕಾಲ ಪರಿಮಿತಿ

85. ಈ ಅಧಿನಿಯಮದ ಅಡಿಯಲ್ಲಿ ಉಪಬಂಧಿಸಲಾದಂತೆ ಹೊರತು, ತೆರಿಗೆ ನಿರ್ಧರಣೆಗಳನ್ನು ರದ್ದುಗೊಳಿಸತಕ್ಕದ್ದಲ್ಲ ಅಥವಾ ಮಾರ್ಪಾಟುಗೊಳಿಸತಕ್ಕದ್ದಲ್ಲ

86. ವ್ಯವಹರಣೆಗಳ ಸಂಬಂಧದಲ್ಲಿ ಯಾವುದೇ ಪ್ರಾಧಿಕಾರದ ಮುಂದೆ ಹಾಜರಾಗುವುದು

87. ಸಾಕ್ಷ್ಯ ನೀಡುವುದಕ್ಕಾಗಿ ವ್ಯಕ್ತಿಗಳನ್ನು ಸಮನು ಮಾಡುವ ಅಧಿಕಾರ

88. ನಿಯಮಗಳ ರಚನಾಧಿಕಾರ

89. ನಿಯಮಗಳು ಮತ್ತು ಅಧಿಸೂಚನೆಗಳನ್ನು ರಾಜ್ಯ ವಿಧಾನ ಮಂಡಲದ ಮುಂದೆ ಮಂಡಿಸುವುದು

90. ತೊಂದರೆಗಳನ್ನು ನಿವಾರಿಸಲು ಅಧಿಕಾರ

ಒಂದನೇ ಅನುಸೂಚಿ

ಎರಡನೇ ಅನುಸೂಚಿ

ಮೂರನೇ ಅನುಸೂಚಿ

ನಾಲ್ಕನೇ ಅನುಸೂಚಿ

ಐದನೇ ಅನುಸೂಚಿ

ಆರನೇ ಅನುಸೂಚಿ

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

I

**2004ರ ಸಂಖ್ಯೆ 32.**– ಸರಕುಗಳ ತೆರಿಗೆ ವ್ಯವಸ್ಥೆಯಲ್ಲಿ ಸುಧಾರಣೆಗಳನ್ನು ತರುವ ಸಲುವಾಗಿ ರಾಷ್ಟ್ರೀಯ ಒಮ್ಮತ ಅಭಿಪ್ರಾಯಕ್ಕೆ ಹೊಂದಿಕೆಯಾಗುವಂತೆ ಈಗ ಇರುವ ಮಾರಾಟ ತೆರಿಗೆ ಪದ್ಧತಿಗೆ ಬದಲು ಮೌಲ್ಯವರ್ಧಿತ ತೆರಿಗೆ ಪದ್ಧತಿಯನ್ನು ಪ್ರಾರಂಭಿಸುವುದು ಅವಶ್ಯಕವೆಂದು ಪರಿಗಣಿಸಲಾಗಿದೆ. ಹೊಸ ತೆರಿಗೆ ಶಾಸನವು,-

(i) ಮಾರಾಟದ ಪ್ರತಿಯೊಂದು ಹಂತದಲ್ಲಿ ಸರಕುಗಳ ಮಾರಾಟದ ಮೇಲೆ ತೆರಿಗೆಯನ್ನು ವಿಧಿಸುವ ಮೂಲಕ ತೆರಿಗೆ ವ್ಯಾಪ್ತಿಯನ್ನು ವಿಸ್ತರಿಸುತ್ತದೆ;

(ii) ತೆರಿಗೆ ವಿಧಿಸುವಿಕೆಯನ್ನು ಪಾರದರ್ಶಕಗೊಳಿಸುತ್ತದೆ ಮತ್ತು ಬೇರೆ ಬೇರೆ ಕಡೆ ಹಂಚಿಹೋಗುವುದನ್ನು ನಿವಾರಿಸುತ್ತದೆ;

(iii) ಪ್ರತ್ಯೇಕವಾಗಿ ವಿಧಿಸಲಾದ ತೆರಿಗೆಯನ್ನು ತೋರಿಸುವ ತೆರಿಗೆ ಬೆಲೆಪಟ್ಟಿಗಳನ್ನು, ವ್ಯಾಪಾರಿಗಳು ನೀಡುವಂತೆ ಒತ್ತಾಯಪಡಿಸುತ್ತದೆ;

(iv) ಮಾರಾಟ ಮಾಡಲಾದ ಸರಕುಗಳ ಸಂಬಂಧದಲ್ಲಿ ಯಾವುದೇ ಹಂತದಲ್ಲಿ ಹುಟ್ಟುವಳಿ ತೆರಿಗೆ ಎಂದು ಪರಿಭಾಷಿಸಿದ ಸಂದಾಯ ಮಾಡತಕ್ಕ ತೆರಿಗೆಗೆ ಪ್ರತಿಯಾಗಿ ಮೊದಲಿನ ಹಂತಗಳಲ್ಲಿ ಸಂದಾಯ ಮಾಡಿದ ಎಲ್ಲ ತೆರಿಗೆಗಳನ್ನು (ಬಂಡವಾಳ ಸರಕುಗಳ, ಕಚ್ಚಾ ಸಾಮಗ್ರಿಗಳ, ಘಟಕ ಭಾಗಗಳು ಮತ್ತು ಕೆಲವು ನಿರ್ಬಂಧಗಳೊಡನೆ ಬಳಸಬಹುದಾದವುಗಳು ಒಳಗೊಂಡಂತೆ ಇತರ ಹೂಡುವಳಿಗಳು ಮತ್ತು ಮಾರಾಟ ಮಾಡಲಾದ ಸರಕುಗಳ ಮರು ಮಾರಾಟ ಅಥವಾ ಉತ್ಪಾದನೆ ಅಥವಾ ಸಂಸ್ಕರಣೆಯಲ್ಲಿ ಬಳಸಲಾದ ಪ್ಯಾಕಿಂಗ್ ಸಾಮಗ್ರಿಗಳ ಮೇಲೆ ಹೂಡುವಳಿ ತೆರಿಗೆ ಎಂದು ಪರಿಭಾಷಿಸಿದ ತೆರಿಗೆ ಸಂದಾಯವನ್ನು ಒಳಗೊಂಡಂತೆ) ಕಡಿತ ಮಾಡುತ್ತದೆ ಮತ್ತು ಈ ರೀತಿ ಕಡಿತಗೊಳಿಸುವ ಯೋಜನೆಯನ್ನು ಹೂಡುವಳಿ ರಿಯಾಯಿತಿ ಎಂದು ಕರೆಯಲಾಗುತ್ತದೆ;

(v) ಅಂತರರಾಜ್ಯ ವ್ಯಾಪಾರ ಕ್ರಮದಲ್ಲಿ ರಾಜ್ಯದೊಳಗೆ ಮಾರಾಟ ಮಾಡಿದ ಸರಕುಗಳಿಗೆ ಪ್ರತಿಯಾಗಿ ರಾಜ್ಯದೊಳಗೆ ಖರೀದಿಸಿದ ಹೂಡುವಳಿಗಳ ಮೇಲೆ ಸಂದಾಯ ಮಾಡಿದ ತೆರಿಗೆಗೆ ವಿನಾಯಿತಿ ನೀಡುತ್ತದೆ;

(vi) ದಾಸ್ತಾನು ಅಥವಾ ರವಾನಿಸಿದ ಸರಕಿನ ಮೇಲೆ ರಾಜ್ಯದ ಹೊರಗೆ ಕಳುಹಿಸಲಾದ ಸರಕುಗಳಲ್ಲಿ ಬಳಸಿದ ಹೂಡುವಳಿಗೆ ಶೇಕಡಾ 4 ರಷ್ಟು ಹೆಚ್ಚಿಗೆಯಾಗಿ ಸಂದಾಯ ಮಾಡಿದ ತೆರಿಗೆ ಸಂಬಂಧದಲ್ಲಿ ಸೀಮಿತ ವಿನಾಯಿತಿಗೆ ಉಪಬಂಧಕಲ್ಪಿಸುತ್ತದೆ;

(vii) ಸ್ವಯಂ ತೆರಿಗೆ ನಿರ್ಧಾರಣೆ ಆಧಾರದ ಮೇಲೆ ವ್ಯಾಪಾರಿಗಳು ದಾಖಲ್ಮಾಡಿದ ವಿವರ ಪಟ್ಟಿಗಳನ್ನು ಒಪ್ಪಿಕೊಳ್ಳುವುದಕ್ಕಾಗಿ ಮತ್ತು ಆಯ್ದ ಕೆಲವು ಪ್ರಕರಣಗಳಲ್ಲಿ ಮಾತ್ರ ಲೆಕ್ಕಪುಸ್ತಕಗಳನ್ನು ಪರಿಶೀಲಿಸುವುದಕ್ಕಾಗಿ ಅನುವು ಮಾಡಿಕೊಡುವ ಮೂಲಕ ಸ್ವಯಂ ಕಾರ್ಯ ಪಾಲನೆಗೆ ಪ್ರೋತ್ಸಾಹಿಸುತ್ತದೆ;

(viii) ಕಾನೂನಿನ ವಿವಿಧ ಉಪಬಂಧಗಳನ್ನು ಪಾಲಿಸದಿರುವ ಅಪರಾಧಗಳಿಗೆ ಮತ್ತು ಅವುಗಳ ಉಲ್ಲಂಘನೆಗೆ ಸಂಬಂಧಿಸಿದಂತೆ ವಿವೇಚನಾಧಿಕಾರಕ್ಕೆ ಅವಕಾಶಕೊಡದೆ ಸ್ವಯಂ ಚಾಲನಾ ದಂಡ ವಿಧಿಸುವುದಕ್ಕಾಗಿ ಅವಕಾಶ ಕಲ್ಪಿಸುವ ಮೂಲಕ ಕಾನೂನಿನ ಪರಿಪಾಲನೆಗೆ ಉತ್ತೇಜನ ನೀಡುವುದು;

(ix) ಮಾರಾಟದ ಸಮಯವನ್ನು ಪರಿಭಾಷಿಸುವ ಮೂಲಕ ಅದಕ್ಕೆ ಸಂಬಂಧಪಡುವ ವಿವಾದಗಳನ್ನು ಕಡಿಮೆ ಮಾಡಿ ವಿಳಂಬವಿಲ್ಲದೆ ತೆರಿಗೆ ಸಂದಾಯ ಮಾಡುವುದನ್ನು ಖಚಿತಪಡಿಸುತ್ತದೆ ಮತ್ತು ಖರೀದಿ ಮಾಡುತ್ತದೆ ಮತ್ತು ವ್ಯಾಪಾರಿಗಳಿಗೆ ಸೂಕ್ತ ಸಮಯದೊಳಗೆ ತೆರಿಗೆ ಬೆಲೆಪಟ್ಟಿಗಳನ್ನು ನೀಡುವಂತೆ ಸಹ ವ್ಯಾಪಾರಿಗಳನ್ನು ಅಗತ್ಯಪಡಿಸುತ್ತದೆ.

ಕೆಲವು ಪ್ರಾಸಂಗಿಕವಾದ ಹಾಗೂ ಆನುಷಂಗಿಕವಾದ ಉಪಬಂಧಗಳನ್ನು ಸಹ ಕಲ್ಪಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

**[**2003ರ ವಿಧಾನಸಭೆಯ ವಿಧೇಯಕ ಸಂಖ್ಯೆ 2**]**

(ಭಾರತ ಸಂವಿಧಾನದ ಏಳನೇ ಅನುಸೂಚಿಯ ಎರಡನೇ ಪಟ್ಟಿಯ 54ನೇ ನಮೂದು)

**II**

**2005ರ ಸಂಖ್ಯೆ 6**.- ಈಗಿರುವ ಮಾರಾಟ ತೆರಿಗೆ ವ್ಯವಸ್ಥೆಯ ಬದಲಾಗಿ ರೂಪಿಸಲಾಗಿರುವ ಮೌಲ್ಯವರ್ಧಿತ ತೆರಿಗೆ ವಿನ್ಯಾಸದ ಸಂಬಂಧದಲ್ಲಿ ರಾಷ್ಟ್ರಮಟ್ಟದಲ್ಲಿ ಕೈಗೊಂಡ ತೀರ್ಮಾನಗಳನ್ನು ಜಾರಿಗೊಳಿಸುವುದಕ್ಕಾಗಿ ಮೌಲ್ಯವರ್ಧಿತ ತೆರಿಗೆ ಅಧಿನಿಯಮ, 2004ಕ್ಕೆ ತಿದ್ದುಪಡಿ ಮಾಡುವುದು ಅವಶ್ಯಕವಾಗಿದೆ.

ಈ ಸಂದರ್ಭದಲ್ಲಿ ಇತರ ಪ್ರಾಸಂಗಿಕವಾದ ಮತ್ತು ಆನುಷಂಗಿಕವಾದ ಕೆಲವು ಉಪಬಂಧಗಳನ್ನು ಸಹ ಕಲ್ಪಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

**[**2005ರ ವಿಧಾನಸಭೆಯ ವಿಧೇಯಕ ಸಂಖ್ಯೆ 4**]**

**III**

**2005ರ ಸಂಖ್ಯೆ 11**.- ಆಯವ್ಯಯ ಭಾಷಣದಲ್ಲಿ ಮಾಡಿದ ಪ್ರಸ್ತಾವಗಳನ್ನು ಜಾರಿಗೊಳಿಸಲು ಮೈಸೂರು ಜೂಜು ತೆರಿಗೆ ಅಧಿನಿಯಮ, 1932 (1932ರ ಮೈಸೂರು ಅಧಿನಿಯಮ IX,) ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮ, 1957 (1957ರ ಕರ್ನಾಟಕ ಅಧಿನಿಯಮ 25), ಕರ್ನಾಟಕ ಮನೋರಂಜನಾ ತೆರಿಗೆ ಅಧಿನಿಯಮ, 1958 (1958ರ ಕರ್ನಾಟಕ ಅಧಿನಿಯಮ 30), ಕರ್ನಾಟಕ ವೃತ್ತಿಗಳು, ಕಸಬುಗಳು, ಆಜೀವಿಕೆಗಳು ಮತ್ತು ಉದ್ಯೋಗಗಳ ಮೇಲೆ ತೆರಿಗೆ 1976 (1976ರ ಕರ್ನಾಟಕ ಅಧಿನಿಯಮ 35), ಕರ್ನಾಟಕ ಸರಕುಗಳ ಪ್ರವೇಶ ಮೇಲೆ ತೆರಿಗೆ ಅಧಿನಿಯಮ, 1979 (1979ರ ಕರ್ನಾಟಕ ಅಧಿನಿಯಮ 27), ಕರ್ನಾಟಕ ಲಾಟರಿಗಳ ಮೇಲೆ ತೆರಿಗೆ ಅಧಿನಿಯಮ, 2004 (2004ರ ಕರ್ನಾಟಕ ಅಧಿನಿಯಮ 3), ಕರ್ನಾಟಕ ಕೆಲವು ಸರಕುಗಳ ಪ್ರವೇಶದ ಮೇಲೆ ವಿಶೇಷ ತೆರಿಗೆ ಅಧಿನಿಯಮ, 2004 (2004ರ ಕರ್ನಾಟಕ ಅಧಿನಿಯಮ 29) ಮತ್ತು ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಅಧಿನಿಯಮ, 2003 (2004ರ ಕರ್ನಾಟಕ ಅಧಿನಿಯಮ 32) ಇವುಗಳನ್ನು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಸದರಿ ಅಧಿನಿಯಮಗಳ ಕೆಲವು ಉಪಬಂಧಗಳನ್ನು ಹೆಚ್ಚು ಸಮಂಜಸಗೊಳಿಸಲು ಸಹ ಈ ಅವಕಾಶವನ್ನು ಉಪಯೋಗಿಸಿಕೊಳ್ಳಲಾಗಿದೆ.

ಆದ್ದರಿಂದ ಈ ವಿಧೇಯಕ.

**[**2005ರ ವಿಧಾನಸಭೆಯ ವಿಧೇಯಕ ಸಂಖ್ಯೆ 12**]**

**IV**

**2005ರ ಸಂಖ್ಯೆ 27**.- ತೆರಿಗೆ ವಿನಾಯಿತಿ ನೀಡಲಾದ ಸರಕುಗಳ ಪಟ್ಟಿಯಲ್ಲಿ ಮತ್ತು ಶೇಕಡಾ ನಾಲ್ಕರಷ್ಟು ತೆರಿಗೆ ವಿಧಿಸಲಾದ ಸರಕುಗಳ ಪಟ್ಟಿಯಲ್ಲಿ ಮಾರ್ಪಾಟುಗಳನ್ನು ಮಾಡಿ ರಾಜ್ಯ ಹಣಕಾಸು ಸಚಿವರುಗಳ ಅಧಿಕೃತ ಸಮಿತಿಯು ಕೈಗೊಂಡ ತೀರ್ಮಾನವನ್ನು ಕಾರ್ಯರೂಪಕ್ಕೆ ತರಲು ಮತ್ತು ಗರಿಷ್ಠ ಚಿಲ್ಲರೆ ಬೆಲೆ ಆಧಾರದ ಮೇಲೆ ಔಷಧಿಗಳ ಮೇಲೆ ತೆರಿಗೆ ಸಂದಾಯ ಮಾಡುವ ಆಯ್ಕೆ ಅವಕಾಶಕ್ಕೆ ಉಪಬಂಧ ಕಲ್ಪಿಸಲು ಕರ್ನಾಟಕ ಮೌಲ್ಯ ವರ್ಧಿತ ತೆರಿಗೆ ಅಧಿನಿಯಮ, 2003ನ್ನು ತಿದ್ದುಪಡಿ ಮಾಡಬೇಕಾಗಿದೆ. ತೆರಿಗೆ ದರಗಳಲ್ಲಿನ ಬದಲಾವಣೆಗಳನ್ನು 2005ರ ಮೇ ತಿಂಗಳ ಮೊದಲನೇ ದಿನಾಂಕದಿಂದ ಕಾರ್ಯರೂಪಕ್ಕೆ ಬರುವಂತೆ ಜಾರಿಗೊಳಿಸಬೇಕೆಂದು ಸಹ ಅಧಿಕೃತ ಸಮಿತಿಯು ನಿರ್ಣಯಿಸಿದೆ. ಅಲ್ಲದೆ ಅಧಿಕೃತ ಸಮಿತಿಯು ತೀರ್ಮಾನಿಸಿರುವ ವಿನ್ಯಾಸದಲ್ಲೇ ರಾಜ್ಯಗಳು ಮೌಲ್ಯವರ್ಧಿತ ತೆರಿಗೆಯನ್ನು ಜಾರಿಗೊಳಿಸಿದರೆ ಮಾತ್ರ ಮೌಲ್ಯವರ್ಧಿತ ತೆರಿಗೆಯನ್ನು ಅಳವಡಿಸಿಕೊಳ್ಳುವುದರಿಂದ ಉಂಟಾಗಬಹುದಾದ ಯಾವುದೇ ಆದಾಯ ನಷ್ಟವನ್ನು ತಾನು ಭರ್ತಿಮಾಡಿಕೊಡಲು ಭಾರತ ಸರ್ಕಾರವು ಒಪ್ಪಿಕೊಂಡಿರುತ್ತದೆ. ಆದಕಾರಣ ರಾಜ್ಯ ವಿಧಾನ ಪರಿಷತ್ತು ಅಧಿವೇಶನದಲ್ಲಿ ಇರದೆ ಇದ್ದುದರಿಂದ ಕರ್ನಾಟಕ ಮೌಲ್ಯವರ್ಧಿತ ತೆರಿಗೆ (ತಿದ್ದುಪಡಿ) ಅಧ್ಯಾದೇಶ, 2005ನ್ನು ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಅಧಿನಿಯಮ, 2003 ರಲ್ಲಿ ಮೇಲ್ಕಂಡ ಬದಲಾವಣೆಗಳನ್ನು ತರುವುದಕ್ಕಾಗಿ 2005ರ ಜೂನ್ ಏಳನೇ ದಿನಾಂಕದಂದು ಪ್ರಖ್ಯಾಪಿಸಲಾಯಿತು. ಹೋಟೇಲು ನಡೆಸುವವರಿಗೆ ಕೊಟ್ಟಿರುವ ರೀತಿಯಲ್ಲೇ ಸಿಹಿತಿನಿಸುಗಳ ಅಂಗಡಿಗಳವರಿಗೆ ಮತ್ತು ಐಸ್‌ಕ್ರೀಂ ಅಂಗಡಿಗಳವರಿಗೆ ರಾಜಿ ಸೌಲಭ್ಯವನ್ನು ನೀಡುವ ಮತ್ತು ಸರಕುಗಳ ವರ್ಗಾವಣೆಯ

ಮೇಲೆ ರಾಜ್ಯದ ಹೊರಗಡೆ ರವಾನಿಸಿದ ಎಲ್ಲಾ ಸರಕುಗಳಿಗೆ ಹೂಡುವಳಿ ತೆರಿಗೆ ರಿಯಾಯಿತಿಯನ್ನು ವಿಸ್ತರಿಸುವಂತಹ ಕೆಲವು ಸ್ಪಷ್ಟೀಕರಣ ತಿದ್ದುಪಡಿಗಳನ್ನು ತರಲು ಸಹ ಈ ಅವಕಾಶವನ್ನು ಬಳಸಿಕೊಳ್ಳಲಾಗಿದೆ.

ಸದರಿ ಅಧ್ಯಾದೇಶಕ್ಕೆ ಬದಲಾಗಿ ಈ ವಿಧೇಯಕವನ್ನು ಮಂಡಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

**[**2005ರ ವಿಧಾನಸಭೆಯ ವಿಧೇಯಕ ಸಂಖ್ಯೆ 24**]**

**V**

**2006ರ ಸಂಖ್ಯೆ 4**.- ಆಯವ್ಯಯಪತ್ರದಲ್ಲಿ ಮಾಡಿದ ಪ್ರಸ್ತಾವನೆಗಳನ್ನು ಜಾರಿಗೊಳಿಸುವುದಕ್ಕಾಗಿ ಮತ್ತು ಅದಕ್ಕೆ ಸಂಬಂಧಪಟ್ಟ ವಿಷಯಗಳಿಗಾಗಿ ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಅಧಿನಿಯಮ, 2003ನ್ನು ತಿದ್ದುಪಡಿ ಮಾಡುವುದು ಅವಶ್ಯವೆಂದು ಪರಿಗಣಿಸಲಾಗಿದೆ.

ಕೆಲವು ಅನುಷಂಗಿಕ ಮತ್ತು ಪ್ರಾಸಂಗಿಕ ತಿದ್ದುಪಡಿಗಳನ್ನು ಸಹ ಮಾಡಲಾಗಿದೆ.

ಆದ್ದರಿಂದ ಈ ವಿಧೇಯಕ.

[ 2006ರ ವಿಧಾನಸಭೆಯ ವಿಧೇಯಕ ಸಂಖ್ಯೆ 7 ]

**VI**

**2007ರ ಸಂಖ್ಯೆ 6**.- ಆಯವ್ಯಯದಲ್ಲಿ ಮಾಡಿದ ಪ್ರಸ್ತಾವಗಳನ್ನು ಜಾರಿಗೊಳಿಸುವುದಕ್ಕಾಗಿ ಮತ್ತು ಅದಕ್ಕೆ ಸಂಬಂಧಪಟ್ಟ ವಿಷಯಗಳಿಗಾಗಿ ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಅಧಿನಿಯಮ, 2003ನ್ನು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಕೆಲವು ಅನುಷಂಗಿಕ ಮತ್ತು ಪ್ರಾಸಂಗಿಕ ತಿದ್ದುಪಡಿಗಳನ್ನು ಸಹ ಮಾಡಲಾಗಿದೆ.

ಆದ್ದರಿಂದ ಈ ವಿಧೇಯಕ.

[ 2007ರ ವಿಧಾನಸಭೆಯ ವಿಧೇಯಕ ಸಂಖ್ಯೆ 21 ]

[ಭಾರತ ಸಂವಿಧಾನದ 7ನೇ ಅನುಸೂಚಿಯ 2ನೇ ಪಟ್ಟಿಯ 54ನೇ ನಮೂದನೆಗಳ ಅಡಿಯಲ್ಲಿ ಬರುತ್ತದೆ.]

**VII**

**2008ರ ಸಂಖ್ಯೆ 5**.- ಆಯವ್ಯಯ ಭಾಷಣದಲ್ಲಿ ಮಾಡಿದ ಪ್ರಸ್ತಾವನೆಗಳನ್ನು ಮತ್ತು ಅದಕೆ ಸಂಬಂಧಿಸಿದ ಅಥವಾ ಅದಕ್ಕೆ ಪ್ರಾಸಂಗಿಕವಾದ ವಿಷಯಗಳನ್ನು ಜಾರಿಗೊಳಿಸಲು ಕರ್ನಾಟಕ ಮೌಲ್ಯ ವರ್ಧಿತ ತೆರಿಗೆ ಅಧಿನಿಯಮ, 2003ನ್ನು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ತೆರಿಗೆ ನಿರ್ಧರಣೆಯನ್ನು ಸುವ್ಯವಸ್ಥೆಗೊಳಿಸಲು ಮತ್ತು ಆನುಷಂಗಿಕವಾದ ಕೆಲವು ಇತರ ತಿದ್ದುಪಡಿಗಳನ್ನು ಮಾಡಲು ಸಹ ಈ ಅವಕಾಶವನ್ನು ಉಪಯೋಗಿಸಿಕೊಳ್ಳಲಾಗಿದೆ.

ಆದ್ದರಿಂದ ಈ ವಿಧೇಯಕ.

(2008ರ ವಿಧಾನ ಸಭೆಯ ವಿಧೇಯಕ ಸಂಖ್ಯೆ 2, ಕಡತ ಸಂಖ್ಯೆ ಸಂವ್ಯಶಾಇ 10 ಶಾಸನ 2008)

(ಭಾರತ ಸಂವಿಧಾನದ 7ನೇ ಅನುಸೂಚಿಯ 2ನೇ ಪಟ್ಟಿಯ 54ನೇ ನಮೂದನೆ ಅಡಿಯಲ್ಲಿ ಬರುತ್ತದೆ.)

**VIII**

**2009ರ ಸಂಖ್ಯೆ 5**.- ಆಯವ್ಯಯ ಭಾಷಣದಲ್ಲಿ ಮಾಡಿದ ಪ್ರಸ್ತಾವನೆಗಳನ್ನು ಜಾರಿಗೊಳಿಸಲು ಮತ್ತು ನಿರ್ದಿಷ್ಟವಾಗಿ ಈ ಮುಂದಿನವುಗಳಿಗೆ ಉಪಬಂಧಗಳನ್ನು ಕಲ್ಪಿಸುವುದಕ್ಕಾಗಿ ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಅಧಿನಿಯಮ, 2003ನ್ನು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

(i) ಕೆಲವು ವರ್ಗದ ವ್ಯಾಪಾರಿಗಳು ತಮ್ಮ ಎಲ್ಲಾ ಮಾರಾಟಗಳ ಲೆಕ್ಕಗಳನ್ನು ಇಟ್ಟುಕೊಂಡು ಬರುವಂತೆ ಮತ್ತು ತೆರಿಗೆಯನ್ನು ಸರಿಯಾಗಿ ಸಂದಾಯ ಮಾಡುವಂತೆ ನೋಡಿಕೊಳ್ಳುವುದಕ್ಕಾಗಿ ಅವರುಗಳು ಹಸ್ತಕ್ಷೇಪ

ಮಾಡಲಾಗದ (ಟ್ಯಾಂಪರ್ ಪ್ರೂಫ್) ವಿದ್ಯುನ್ಮಾನ ಬಿಲ್ಲು ನೀಡಿಕೆ ಯಂತ್ರಗಳನ್ನು ಉಪಯೋಗಿಸುವಂತೆ ಕಡ್ಡಾಯಗೊಳಿಸುವುದು;

(ii) ಭಾರತದ ಲೆಕ್ಕ ನಿಯಂತ್ರಕ ಮತ್ತು ಮಹಾಲೆಕ್ಕ ಪರಿಶೋಧಕರು ಇವರು, ನೋಂದಾಯಿತ ವ್ಯಾಪಾರಿಗಳ ಲೆಕ್ಕಪತ್ರಗಳನ್ನು ಪರಿಶೀಲಿಸಲು ಮತ್ತು ಅಂಥ ವ್ಯಾಪಾರಿಗಳು ಸಲ್ಲಿಸಿದ ವಿವರಪಟ್ಟಿಕೆಗಳು ಸರಿಯಾಗಿದೆಯೆಂದು ಪರಿಶೀಲಿಸಲು ಲೆಕ್ಕ ಪರಿಶೋಧನಾ ಸಿಬ್ಬಂದಿ ತಂಡವನ್ನು ನಿಯೋಜಿಸುವುದಕ್ಕೆ ಅಧಿಕಾರವನ್ನು ನೀಡುವುದು;

(iii) ತೆರಿಗೆ ಸಂದಾಯದ ರಾಜಿ ಯೋಜನೆಯನ್ನು ಆಯ್ಕೆ ಮಾಡಿಕೊಂಡ ವ್ಯಾಪಾರಿಯು ತಾನು ಕಳೆದಿದ್ದ ಹೂಡುವಳಿ ತೆರಿಗೆಯನ್ನು ಮರು ಸಂದಾಯ ಮಾಡುವುದು;

(iv) ಸ್ವ–ಇಚ್ಛೆಯಿಂದ ನೋಂದಾಯಿತರಾದ ವ್ಯಾಪಾರಿಗಳ ತೆರಿಗೆ ವಿಧಿಸಬಹುದಾದ ಒಟ್ಟು ವಹಿವಾಟು ಕನಿಷ್ಠ ನೋಂದಾಯಿತ ಪರಿಮಿತಿಯನ್ನು ಮೀರಿದಾಗ ಹೂಡುವಳಿ ತೆರಿಗೆಯನ್ನು ಕಳೆಯಲು ಅವಕಾಶ ಕಲ್ಪಿಸುವುದು;

(v) ನಲ್ವತ್ತು ಲಕ್ಷವನ್ನು ಮೀರಿದ ಒಟ್ಟು ವಹಿವಾಟುವುಳ್ಳ ವ್ಯಾಪಾರಿಗಳ ಲೆಕ್ಕಪತ್ರಗಳನ್ನು ಪರಿಶೋಧಿಸುವುದು;

(vi) ಸರಕುಗಳ ಸಾಗಾಣಿಕೆಗಾಗಿ ತೆಗೆದುಕೊಂಡು ಹೋಗಬೇಕಾದ ದಾಖಲೆಗಳನ್ನು ಅಧಿಸೂಚಿಸುವುದಕ್ಕೆ ವಾಣಿಜ್ಯ ತೆರಿಗೆಗಳ ಆಯುಕ್ತರಿಗೆ ಅಧಿಕಾರವನ್ನು ನೀಡುವುದು;

(vii) ತೀರಿ ಹೋದ ವ್ಯಕ್ತಿಗೆ ನೀಡಿದ್ದ ನೋಂದಾಯಿತ ಪ್ರಮಾಣಪತ್ರವನ್ನು ಅವನ ಕಾನೂನು ಸಮ್ಮತ ವಾರಸುದಾರರಿಗೆ ವರ್ಗಾಯಿಸುವುದು;

(viii) ಅಪೀಲು ಪ್ರಾಧಿಕಾರವು ಅಪೀಲನ್ನು ವಿಲೆ ಮಾಡುವ ಅದೇಶವನ್ನು ಹೊರಡಿಸುವುದಕ್ಕೆ ಕಾಲಪರಿಮಿತಿಯನ್ನು ತೊಂಬತ್ತು ದಿನಗಳಿಗೆ ಹೆಚ್ಚಿಸುವುದು;

ಕೆಲವು ಆನುಷಂಗಿಕ ಮತ್ತು ಪ್ರಾಸಂಗಿಕ ತಿದ್ದುಪಡಿಗಳನ್ನು ಹಾಗೂ ಪ್ರಸ್ತುತ ಉಪಬಂಧಗಳನ್ನು ಸುವ್ಯವಸ್ಥೆಗೊಳಿಸುವುದಕ್ಕಾಗಿ ಕೆಲವೊಂದು ತಿದ್ದುಪಡಿಗಳನ್ನು ಸಹ ಮಾಡಲಾಗಿದೆ.

ಆದ್ದರಿಂದ ಈ ವಿಧೇಯಕ.

(2009ರ ವಿಧಾನ ಸಭೆಯ ವಿಧೇಯಕ ಸಂಖ್ಯೆ 20, ಕಡತ ಸಂಖ್ಯೆ ಸಂವ್ಯಶಾಇ 12 ಶಾಸನ 2009)

(ಭಾರತ ಸಂವಿಧಾನದ 7ನೇ ಅನುಸೂಚಿಯ 2ನೇ ಪಟ್ಟಿಯ 54ನೇ ನಮೂದನೆ ಅಡಿಯಲ್ಲಿ ಬರುತ್ತದೆ.)

## IX

**2010ರ ಅಧಿನಿಯಮ ಸಂಖ್ಯೆ 4.**-ಆಯವ್ಯಯದಲ್ಲಿ ಮಾಡಿದ ಪ್ರಸ್ತಾವಗಳನ್ನು ಜಾರಿಗೊಳಿಸುವುದಕ್ಕಾಗಿ ಮತ್ತು ಅದಕ್ಕೆ ಸಂಬಂಧಪಟ್ಟ ವಿಷಯಗಳಿಗಾಗಿ ಹಾಗೂ ಮುಖ್ಯವಾಗಿ ಈ ಮುಂದಿನವುಗಳಿಗಾಗಿ ಉಪಬಂಧ ಕಲ್ಪಿಸುವುದಕ್ಕಾಗಿ ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಅಧಿನಿಯಮ, 2003ನ್ನು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ:–

(i) ಲೆಕ್ಕ ನಿರ್ವಹಣೆಯನ್ನು ಹಾಗೂ ತೆರಿಗೆ ಕಾನೂನು ಪಾಲನೆಯನ್ನು ಸರಳೀಕರಿಸುವುದಕ್ಕಾಗಿ ಸರಕುಗಳ ಗರಿಷ್ಠ ಚಿಲ್ಲರೆ ಬೆಲೆಗಳ ಆಧಾರದ ಮೇಲೆ ಯಾವುದೇ ಸರಕುಗಳ ಮೇಲೆ ತೆರಿಗೆ ಸಂದಾಯ ಆಯ್ಕೆ ಯೋಜನೆಗೆ ಅವಕಾಶ ಕಲ್ಪಿಸುವುದು;

(ii) ನೋಂದಾಯಿತರಾಗದೇ ಚಿಲ್ಲರೆ ವ್ಯಾಪಾರಿಗಳು ಮಾಡುವ ಮೌಲ್ಯವರ್ಧನೆಯ ಮೇಲೆ ತೆರಿಗೆ ಸಂದಾಯವನ್ನು ಖಚಿತಪಡಿಸಿ ಕೊಳ್ಳಲು ತಂಬಾಕು ಉತ್ಪನ್ನಗಳ ಗರಿಷ್ಠ ಚಿಲ್ಲರೆ ಬೆಲೆಯ ಮೇಲೆ ತೆರಿಗೆ ವಿಧಿಸಲು ಉಪಬಂಧ ಕಲ್ಪಿಸುವುದು;

(iii) ತೆರಿಗೆಯ ಕಾನೂನು ಪಾಲನೆಯನ್ನು ಸರಳೀಕರಿಸುವುದಕ್ಕಾಗಿ ಹಾಗೂ ವಿವಾದಗಳನ್ನು ತಪ್ಪಿಸುವುದಕ್ಕಾಗಿ ಸ್ಪಷ್ಟೀಕರಣ ಹಾಗೂ ಪೂರ್ವಭಾವಿ ನಿರ್ಣಯಗಳ ಪ್ರಾಧಿಕಾರವನ್ನು ರಚಿಸುವುದಕ್ಕಾಗಿ ಉಪಬಂಧ ಕಲ್ಪಿಸುವುದು;

(iv) ಸರ್ಕಾರಕ್ಕೆ ಬಾಕಿ ಇರುವ ತೆರಿಗೆಯ ಸಂದಾಯವನ್ನು ಯಾವುದೇ ವಿಳಂಬವಿಲ್ಲದೆ ಪಾವತಿಸುವುದನ್ನು ಖಚಿತಪಡಿಸಿಕೊಳ್ಳುವುದಕ್ಕಾಗಿ, ವಿದ್ಯುದ್ಮಾನ ವಿಧಾನದ ಮೂಲಕ ವಿವರ ಪಟ್ಟಿಗಳನ್ನು ಸಲ್ಲಿಸುವುದು ಮತ್ತು ತೆರಿಗೆಯನ್ನು ಸಂದಾಯ ಮಾಡುವುದು ಕಡ್ಡಾಯವಾಗುವ

ವ್ಯಾಪಾರಿಗಳ ವರ್ಗವನ್ನು ಅಧಿಸೂಚಿಸುವುದಕ್ಕೆ ವಾಣಿಜ್ಯ ತೆರಿಗೆಗಳ ಆಯುಕ್ತರಿಗೆ ಅಧಿಕಾರ ನೀಡುವುದು;

(v) ಸರಕು ವಾಹನಗಳನ್ನು ತಡೆಯುವುದಕ್ಕಾಗಿ ಮತ್ತು ಪರೀಕ್ಷಿಸುವುದಕ್ಕಾಗಿ ಅಧಿಕಾರಿಗಳನ್ನು ಪ್ರಾಧಿಕಾರಿಸುವುದಕ್ಕಾಗಿ ಅಧಿಸೂಚಿಸಲು ವಾಣಿಜ್ಯ ತೆರಿಗೆಗಳ ಆಯುಕ್ತರಿಗೆ ಅಧಿಕಾರವನ್ನು ನೀಡುವುದು;

(vi) ಚೆಕ್‌ಪೋಸ್ಟುಗಳಲ್ಲಿ ಮತ್ತು ಇತರ ಸ್ಥಳಗಳಲ್ಲಿ ಸರಕು ವಾಹನಗಳನ್ನು ಶೀಘ್ರವಾಗಿ ಪರೀಕ್ಷಿಸಲು ಅನುಕೂಲವಾಗುವಚಿತೆ ಅವುಗಳಲ್ಲಿ ಸಾಗಿಸುತ್ತಿರುವ ಸರಕುಗಳ ವಿವರಗಳನ್ನು ವೆಬ್‌ಸೈಟ್‌ನಲ್ಲಿ ನಮೂದಿಸುವಂತೆ ನಿರ್ದಿಷ್ಟಪಡಿಸಿ ಅಧಿಸೂಚಿಸುವುದಕ್ಕೆ ವಾಣಿಜ್ಯ ತೆರಿಗೆಗಳ ಆಯುಕ್ತರಿಗೆ ಅಧಿಕಾರವನ್ನು ನೀಡುವುದು;

(vii) ಸರಕು ವಾಹನಗಳ ಮಾಲೀಕರು ಅಥವಾ ಪ್ರಭಾರದಲ್ಲಿರುವ ವ್ಯಕ್ತಿಗಳು, ಅವುಗಳನ್ನು ಚೆಕ್ ಪೋಸ್ಟ್ ಅಥವಾ ಸುಂಕದಕಟ್ಟೆಗಳಲ್ಲದ ಇತರ ಸ್ಥಳಗಳಿಗೆ ಪರೀಕ್ಷೆಗಾಗಿ ತೆಗೆದುಕೊಂಡು ಹೋಗಬೇಕಾದ ಸ್ಥಳಗಳನ್ನು ಅಧಿಸೂಚಿಸುವುದಕ್ಕೆ ವಾಣಿಜ್ಯ ತೆರಿಗೆಗಳ ಆಯುಕ್ತರಿಗೆ ಅಧಿಕಾರವನ್ನು ನೀಡುವುದು;

(viii) ವಿವರ ಪಟ್ಟಿಗಳ ತಯಾರಿಕೆಗಾಗಿ ತಪ್ಪು ವಿವರಗಳನ್ನು ಸಲ್ಲಿಸಿದ್ದಕಾಗಿ ದಂಡವನ್ನು ವಿಧಿಸುವುದಕ್ಕೆ ಉಪಬಂಧ ಕಲ್ಪಿಸುವುದು.

ಕೆಲವು ಪ್ರಸ್ತುತ ಉಪಬಂಧಗಳನ್ನು ಸರಳಗೊಳಿಸುವುದಕ್ಕಾಗಿ, ಕೆಲವು ಅನುಷಂಗಿಕ ಮತ್ತು ಪ್ರಾಸಂಗಿಕ ತಿದ್ದುಪಡಿಗಳನ್ನು ಹಾಗೂ ಇತರ ತಿದ್ದುಪಡಿಗಳನ್ನು ಸಹ ಮಾಡಲಾಗಿದೆ.

ಆದ್ದರಿಂದ ಈ ವಿಧೇಯಕ.

(2010ರ ವಿಧಾನ ಸಭೆಯ ವಿಧೇಯಕ ಸಂಖ್ಯೆ 10, ಕಡತ ಸಂಖ್ಯೆ ಸಂವ್ಯಶಾಇ 13 ಶಾಸನ 2010)

(ಭಾರತ ಸಂವಿಧಾನದ 7ನೇ ಅನುಸೂಚಿಯ 2ನೇ ಪಟ್ಟಿಯ 54ನೆಯ ನಮೂದನೆಯಡಿಯಲ್ಲಿ ಬರುತ್ತದೆ.)

## X

**2011ರ ಅಧಿನಿಯಮ ಸಂಖ್ಯೆ 12.–** ಆಯವ್ಯಯದಲ್ಲಿ ಮಾಡಲಾದ ಪ್ರಸ್ತಾವಗಳನ್ನು ಜಾರಿಗೊಳಿಸುವುದಕ್ಕಾಗಿ ಮತ್ತು ಅದಕ್ಕೆ ಸಂಬಂಧಿಸಿದ ವಿಷಯಗಳಿಗಾಗಿ ಹಾಗೂ ಅದರಲ್ಲೂ ನಿರ್ದಿಷ್ಟವಾಗಿ ವಾಣಿಜ್ಯ ತೆರಿಗೆಗಳ ಆಯುಕ್ತರಿಗೆ,–

(i) ನೋಂದಣಿ ಮಾಡಿಕೊಡುವ ಕಾರ್ಯ ವಿಧಾನವು ಸರಳ ಮತ್ತು ಸುಲಭವಾಗಿರುವಂತೆ ಮಾಡಲು, ವ್ಯಾಪಾರಿಯು ಯಾವ ವೆಬ್‌ಸೈಟ್‌ನಲ್ಲಿ ನೋಂದಣಿಗಾಗಿ ಅರ್ಜಿಯನ್ನು ಸಲ್ಲಿಸಬಹುದೋ ಆ ವೆಬ್ ಸೈಟ್‌ನ್ನು ಅಧಿಸೂಚಿಸುವ;

(ii) ಸಾಗಣೆ ಪಾಸಿನ ನೀಡಿಕೆಯನ್ನು ಸುಲಭವಾಗುವಂತೆ ಮಾಡಲು ಮತ್ತು ನಿಯಮ ಪಾಲಿಸದಿರುವುದನ್ನು ಸುಲಭವಾಗಿ ಪತ್ತೆ ಮಾಡುವಂತಾಗಲು ರಾಜ್ಯದ ಮೂಲಕ ರಸ್ತೆ ಮಾರ್ಗವಾಗಿ ಸಾಗಣೆಯಾಗುವ ಸರಕುಗಳಿಗೆ ಸಂಬಂಧಪಟ್ಟ ಮಾಹಿತಿಯನ್ನು ಯಾವ ವೆಬ್‌ಸೈಟ್‌ನಲ್ಲಿ ಒದಗಿಸಬಹುದೋ ಆ ವೆಬ್ ಸೈಟ್‌ನ್ನು ಅಧಿಸೂಚಿಸುವ.

– ಅಧಿಕಾರ ನೀಡಲು ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಅಧಿನಿಯಮ, 2003 ನ್ನು ತಿದ್ದುಪಡಿ ಮಾಡುವುದು ಅವಶ್ಯವೆಂದು ಪರಿಗಣಿಸಲಾಗಿದೆ.

ಕೆಲವು ಆನುಷಂಗಿಕ ಮತ್ತು ಪ್ರಾಸಂಗಿಕ ತಿದ್ದುಪಡಿಗಳನ್ನು ಮಾಡಲು ಹಾಗೂ ಚಾಲ್ತಿಯಲ್ಲಿರುವ ಕೆಲವು ಉಪಬಂಧಗಳನ್ನು ತರ್ಕಬದ್ಧಗೊಳಿಸುವ ಇತರ ತಿದ್ದುಪಡಿಗಳನ್ನು ಸಹ ಮಾಡಲಾಗಿದೆ.

ಆದ್ದರಿಂದ ಈ ವಿಧೇಯಕ.

(2011ರ ವಿಧಾನಸಭೆಯ ವಿಧೇಯಕ ಸಂಖ್ಯೆ:14, ಕಡತ ಸಂಖ್ಯೆ: ಸಂವ್ಯಶಾಇ 12 ಶಾಸನ 2011)

(ಭಾರತ ಸಂವಿಧಾನದ 7ನೇ ಅನುಸೂಚಿಯ 2ನೇ ಪಟ್ಟಿಯ 54ನೆಯ ನಮೂದನೆಯಡಿಯಲ್ಲಿ ಬರುತ್ತದೆ.)

## XI

**2012ರ ತಿದ್ದುಪಡಿ ಅಧಿನಿಯಮ ಸಂಖ್ಯೆ 17.–** ಆಯವ್ಯಯ ಭಾಷಣದಲ್ಲಿ ಮಾಡಿದ ಪ್ರಸ್ತಾವಗಳನ್ನು ಮತ್ತು ಅವುಗಳಿಗೆ ಸಂಬಂಧಿಸಿದ ಇತರ ವಿಷಯಗಳನ್ನು ಜಾರಿಗೊಳಿಸುವುದಕ್ಕಾಗಿ ಮತ್ತು ಸಂಬಂಧಿಸಿದ ಇತರೆ ವಿಷಯಗಳಿಗಾಗಿ ಕರ್ನಾಟಕ ಮೌಲ್ಯವರ್ಧಿತ ತೆರಿಗೆಗಳ ಅಧಿನಿಯಮ 2003ನ್ನು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಕೆಲವು ಆನುಷಂಗಿಕ ಮತ್ತು ಪ್ರಾಸಂಗಿಕ ತಿದ್ದುಪಡಿಗಳನ್ನು ಹಾಗೂ ಕೆಲವು ಪ್ರಸ್ತುತ ಉಪಬಂಧಗಳನ್ನು ಸರಳಗೊಳಿಸುವುದಕ್ಕಾಗಿಯೂ ಕೆಲವು ತಿದ್ದುಪಡಿಗಳನ್ನು ಸಹ ಮಾಡಲಾಗಿದೆ.

ಆದ್ದರಿಂದ ಈ ವಿಧೇಯಕ.

(2012ರ ವಿಧಾನಸಭೆಯ ವಿಧೇಯಕ ಸಂಖ್ಯೆ:3, ಕಡತ ಸಂಖ್ಯೆ:ಸಂವ್ಯಶಾಇ 25 ಶಾಸನ 2012)

(ಭಾರತ ಸಂವಿಧಾನದ 7ನೇ ಅನುಸೂಚಿಯ 2ನೇ ಪಟ್ಟಿಯ 54 ನಮೂದನೆಯಡಿಯಲ್ಲಿ ಬರುತ್ತದೆ.)

## XII

**2012ರ ಅಧಿನಿಯಮ ಸಂಖ್ಯೆ 27.–** ಹೆಚ್ಚುವರಿ ಸಂಪನ್ಮೂಲಗಳನ್ನು ಕ್ರೋಢೀಕರಿಸಲು ಕೆಲವು ಸರಕುಗಳ ಸಂಬಂಧದಲ್ಲಿ ತೆರಿಗೆಯ ದರವನ್ನು ಹೆಚ್ಚಿಸುವುದಕ್ಕಾಗಿ ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಅಧಿನಿಯಮ, 2003ನ್ನು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

(2012ರ ವಿಧಾನಸಭೆಯ ವಿಧೇಯಕ ಸಂಖ್ಯೆ:28, ಕಡತ ಸಂಖ್ಯೆ:ಸಂವ್ಯಶಾಇ 54 ಶಾಸನ 2012)

(ಭಾರತ ಸಂವಿಧಾನದ 7ನೇ ಅನುಸೂಚಿಯ 2ನೇ ಪಟ್ಟಿಯ 54ನೆಯ ನಮೂದನೆಯಡಿಯಲ್ಲಿ ಬರುತ್ತದೆ.)

## XIII

**2013ರ ತಿದ್ದುಪಡಿ ಅಧಿನಿಯಮ ಸಂಖ್ಯೆ 32.–** ಆಯವ್ಯಯ ಭಾಷಣದಲ್ಲಿ ಮಾಡಿದ ಪ್ರಸ್ತಾವಗಳನ್ನು ಮತ್ತು ಅವುಗಳಿಗೆ ಸಂಬಂಧಿಸಿದ ಇತರ ವಿಷಯಗಳನ್ನು ಜಾರಿಗೊಳಿಸುವುದಕ್ಕಾಗಿ ಮತ್ತು ಸಂಬಂಧಿಸಿದ ಇತರೆ ವಿಷಯಗಳಿಗಾಗಿ ಕರ್ನಾಟಕ ಮೌಲ್ಯವರ್ಧಿತ ತೆರಿಗೆಗಳ ಅಧಿನಿಯಮ 2003ನ್ನು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.ಕೆಲವು ಆನುಷಂಗಿಕ ಮತ್ತು ಪ್ರಾಸಂಗಿಕ ತಿದ್ದುಪಡಿಗಳನ್ನು ಹಾಗೂ ಕೆಲವು ಪ್ರಸ್ತುತ ಉಪಬಂಧಗಳನ್ನು ಸರಳಗೊಳಿಸುವುದಕ್ಕಾಗಿಯೂ ಕೆಲವು ತಿದ್ದುಪಡಿಗಳನ್ನು ಸಹ ಮಾಡಲಾಗಿದೆ.ಆದ್ದರಿಂದ ಈ ವಿಧೇಯಕ.

(2013ರ ವಿಧಾನಸಭೆಯ ವಿಧೇಯಕ ಸಂಖ್ಯೆ:8, ಕಡತ ಸಂಖ್ಯೆ:ಸಂವ್ಯಶಾಇ 16 ಶಾಸನ2013)

(ಭಾರತ ಸಂವಿಧಾನದ 7ನೇ ಅನುಸೂಚಿಯ 2ನೇ ಪಟ್ಟಿಯ 54ನೆಯ ನಮೂದನೆಯಡಿಯಲ್ಲಿ ಬರುತ್ತದೆ.)

## XIV

**2013ರ ತಿದ್ದುಪಡಿ ಅಧಿನಿಯಮ ಸಂಖ್ಯೆ 54.–** ಆಯವ್ಯಯ ಭಾಷಣದಲ್ಲಿ ಮಾಡಿದ ಪ್ರಸ್ತಾವಗಳನ್ನು ಮತ್ತು ಅವುಗಳಿಗೆ ಸಂಬಂಧಿಸಿದ ಇತರ ವಿಷಯಗಳನ್ನು ಜಾರಿಗೊಳಿಸುವುದಕ್ಕಾಗಿ ಮತ್ತು ವಿಶೇಷವಾಗಿ ಈ ಮುಂದಿನವುಗಳಿಗೆ, ಎಂದರೆ:–

(i) 2012ರ ಅಧಿನಿಯಮ ಸಂಖ್ಯೆ 17ರ ಮೂಲಕ ತಿದ್ದುಪಡಿಯಾದಂತೆ 39ನೇ ಪ್ರಕರಣದ ಅಡಿಯಲ್ಲಿ ತೆರಿಗೆ
ನಿರ್ಧರಣೆ ಅಥವಾ ತೆರಿಗೆ ಮರು ನಿರ್ಧರಣೆಗಾಗಿ ನಿರ್ದಿಷ್ಟ ಪಡಿಸಿದ ಅವಧಿಯ ಪರಿಮಿತಿಯು ಪೂರ್ವಾನ್ವಯವಾಗಿ ಜಾರಿಗೆ ಬಂದಿದೆ ಎಂಬುದನ್ನು ಸ್ಪಷ್ಟ ಪಡಿಸುವುದಕ್ಕಾಗಿ; ಮತ್ತು

(ii) ವಾಣಿಜ್ಯ ತೆರಿಗೆಗಳ ಆಯುಕ್ತರು ಹೊರಡಿಸಿದ ಯಾವುದೇ ಸ್ಪಷ್ಟೀಕರಣವು, ಸ್ಪಷ್ಟೀಕರಣ ಮತ್ತು ಪೂರ್ವಭಾವಿ ನಿರ್ಣಯಗಳ ಪ್ರಾಧಿಕಾರದ ಸ್ಪಷ್ಟೀಕರಣಕ್ಕೆ ಅಧ್ಯಾರೋಹಿಯಾಗಿರತಕ್ಕದ್ದು ಎಂದು ನಿರ್ದಿಷ್ಟ
ಪಡಿಸುವುದಕ್ಕಾಗಿ,–

–ಉಪಬಂಧಗಳನ್ನು ಕಲ್ಪಿಸಲು ಕರ್ನಾಟಕ ಮೌಲ್ಯವರ್ಧಿತ ತೆರಿಗೆಗಳ ಅಧಿನಿಯಮ 2003ನ್ನು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಕೆಲವು ಪ್ರಸ್ತುತ ಉಪಬಂಧಗಳನ್ನು ಸರಳಗೊಳಿಸುವುದನ್ನು ಒಳಗೊಂಡಂತೆ ಕೆಲವು ತಿದ್ದುಪಡಿಗಳನ್ನು ಕೆಲವು ಆನುಷಂಗಿಕ ಮತ್ತು ಪ್ರಾಸಂಗಿಕ ತಿದ್ದುಪಡಿಗಳನ್ನು ಸಹ ಮಾಡಲಾಗಿದೆ.

ಆದ್ದರಿಂದ ಈ ವಿಧೇಯಕ.

(2013ರ ವಿಧಾನಸಭೆಯ ವಿಧೇಯಕ ಸಂಖ್ಯೆ:08, ಕಡತ ಸಂಖ್ಯೆ:ಸಂವ್ಯಶಾಇ 37 ಶಾಸನ 2013)

(ಭಾರತ ಸಂವಿಧಾನದ 7ನೇ ಅನುಸೂಚಿಯ 2ನೇ ಪಟ್ಟಿಯ 54ನೆಯ ನಮೂದನೆಯಡಿಯಲ್ಲಿ ಬರುತ್ತದೆ.)

## XV

**2014ರ ಅಧಿನಿಯಮ ಸಂಖ್ಯೆ 15.**–ಆಯವ್ಯಯ ಭಾಷಣದಲ್ಲಿ ಮಾಡಿದ ಪ್ರಸ್ತಾವಗಳನ್ನು ಅದರಲ್ಲೂ ವಿಶೇಷವಾಗಿ ನಗರ ಪ್ರದೇಶಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಬಾರ್‌ಗಳು ಮತ್ತು ರೆಸ್ಟೋರೆಂಟ್‌ಗಳು ಹಾಗೂ ಕ್ಲಬ್‌ಗಳು ಲಾಡ್ಜಿಂಗ್‌ಗಳು ಮತ್ತು ಸ್ಟಾರ್ ಹೋಟೆಲ್‌ಗಳಲ್ಲಿ ಮಾರಾಟ ಮಾಡಲಾಗುವ ಬೀರ್, ಪೆನ್ನಿ, ಲಿಕ್ವೆರ್ ಹಾಗೂ ವೈನನ್ನು ಒಳಗೊಂಡಂತೆ ಮದ್ಯದ ಮೇಲೆ ತೆರಿಗೆಯನ್ನು ವಿಧಿಸುವುದಕ್ಕಾಗಿ ಹಾಗೂ ಅದಕ್ಕೆ ಸಂಗತವಾದ ವಿಷಯಗಳಿಗೆ ಉಪಬಂಧವನ್ನು ಕಲ್ಪಿಸಲು ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಅಧಿನಿಯಮ, 2003ಕ್ಕೆ ತಿದ್ದುಪಡಿ ತರುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

(2014ರ ವಿಧಾನಸಭೆಯ ವಿಧೇಯಕ ಸಂಖ್ಯೆ:33, ಕಡತ ಸಂಖ್ಯೆ:ಸಂವ್ಯಶಾಇ 12 ಶಾಸನ 2014)

(ಭಾರತ ಸಂವಿಧಾನದ 7ನೇ ಅನುಸೂಚಿಯ 2ನೇ ಪಟ್ಟಿಯ 54ನೆಯ ನಮೂದನೆಯಡಿಯಲ್ಲಿ ಬರುತ್ತದೆ.)

## XVI

**2015ರ ಅಧಿನಿಯಮ ಸಂಖ್ಯೆ 05.**– ಕೇಂದ್ರ ಸರ್ಕಾರವು ಪರಸ್ಪರ ಒಪ್ಪಂದ ಮಾಡಿಕೊಂಡ ರಾಷ್ಟ್ರಗಳೊಂದಿಗೆ, ರಾಷ್ಟ್ರಗಳ ರಾಯಭಾರ ಕಚೇರಿ ಮತ್ತು ವಾಣಿಜ್ಯ ದೌತ್ಯ ಕಚೇರಿಗಳ (ಕಾನ್ಸುಲೇಟುಗಳ) ರಾಯಭಾರಿಗಳು (ಡಿಪ್ಲೋಮೆಟ್‌ಗಳು) ಮತ್ತು ವಾಣಿಜ್ಯ ದೌತ್ಯ ಅಧಿಕಾರಿಗಳು (ಕಾನ್ಸುಲೇಟು) ಮಾಡಿದ ವೈಯಕ್ತಿಕ ಖರೀದಿಯ ಮೇಲೆ ಮೌಲ್ಯವರ್ಧಿತ ತೆರಿಗೆಯ ಮರುಪಾವತಿಗಾಗಿ ಉಪಬಂಧ ಕಲ್ಪಿಸಲು ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಅಧಿನಿಯಮ, 2003ನ್ನು ತಿದ್ದುಪಡಿ ಮಾಡುವುದು ಅವಶ್ಯವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

(2014ರ ವಿಧಾನಸಭೆಯ ವಿಧೇಯಕ ಸಂಖ್ಯೆ 61:, ಕಡತ ಸಂಖ್ಯೆ:ಸಂವ್ಯಶಾಇ 45 ಶಾಸನ 2014)

(ಭಾರತ ಸಂವಿಧಾನದ 7ನೇ ಅನುಸೂಚಿಯ 2ನೇ ಪಟ್ಟಿಯ 54ನೆಯ ನಮೂದನೆಯಡಿಯಲ್ಲಿ ಬರುತ್ತದೆ.)

## XVII

**2015ರ ಅಧಿನಿಯಮ ಸಂಖ್ಯೆ 15.**– ಆಯವ್ಯಯದಲ್ಲಿ ಮಾಡಲಾದ ಪ್ರಸ್ತಾವನೆಗಳು ಹಾಗೂ ಅದಕ್ಕೆ ಸಂಬಂಧಿಸಿದ ವಿಷಯಗಳಿಗೆ ಮತ್ತು ವಿಶೇಷವಾಗಿ ಈ ಮುಂದಿನವುಗಳನ್ನು ಜಾರಿಗೆ ತರುವುದಕ್ಕಾಗಿ ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಅಧಿನಿಯಮ, 2003ನ್ನು ತಿದ್ದುಪಡಿ ಮಾಡುವುದು ಅವಶ್ಯವೆಂದು ಪರಿಗಣಿಸಲಾಗಿದೆ, ಎಂದರೆ:–

(i) ತಂಬಾಕು ಉತ್ಪನ್ನಗಳಿಗೆ ಹೆಚ್ಚಿನ ದರದಲ್ಲಿ ತೆರಿಗೆ ವಿಧಿಸುವುದಕ್ಕೆ ಉಪಬಂಧ ಕಲ್ಪಿಸುವುದು;

(ii) ಸರ್ಕಾರಿ ಇಲಾಖೆಗಳಿಗೆ ಮತ್ತು ಇತರರಿಗೆ ಮಾಡಲಾದ ಮಾರಾಟಗಳ ಸಂದರ್ಭದಲ್ಲಿ ಮತ್ತು ಉತ್ತಮ ಅನುಪಾಲನೆಯನ್ನು ಖಚಿತಪಡಿಸಲು ರಾಜ್ಯದಲ್ಲಿ ಅವರಿಗೆ ಮಾಡಲಾದ ಯಾವುದೇ ಮಾರಾಟಗಳಿಗೆ ಸಂಬಂಧಿಸಿದಂತೆ ಅವರು ಡೀಲರ್‌ಗೆ ಪಾವತಿಸಬೇಕಾದ ಮೊತ್ತದಲ್ಲಿ, ಕಾಯ್ದೆಯಡಿ, ಅನ್ವಯಿಸತಕ್ಕ ದರದಲ್ಲಿ ಮೂಲದಲ್ಲಿಯೇ ತೆರಿಗೆ ಮುರುಗಡೆ ಮಾಡುವುದಕ್ಕೆ ಉಪಬಂಧ ಕಲ್ಪಿಸುವುದು;

(iii) ಸಂಬಂಧಪಟ್ಟ ತೆರಿಗೆ ಅವಧಿಯಲ್ಲಿ ಹೂಡುವಳಿ ತೆರಿಗೆ ರಿಯಾಯಿತಿಯನ್ನು ಕ್ಲೇಮು ಮಾಡದಿದ್ದರೆ, ತರುವಾಯದ ತೆರಿಗೆ ಅವಧಿಗಾಗಿ ಸಲ್ಲಿಸಿದ ವರದಿಪಟ್ಟಿಯಲ್ಲಿನ ಹಿಂದಿನ ತೆರಿಗೆ ಅವಧಿಗಳ ಹೂಡುವಳಿ ತೆರಿಗೆ ರಿಯಾಯಿತಿಯ ಕ್ಲೇಮ್‌ಗಾಗಿ ಉಪಬಂಧ ಕಲ್ಪಿಸುವುದು. ಇದು ಲೆಕ್ಕಪತ್ರಗಳ ವ್ಯಾಪಾರದ ವಿಧಾನಕ್ಕೆ ಅನುಗುಣವಾಗಿ ಮುಂದಿನ ದಿನಾಂಕದಲ್ಲಿ ಹುಟ್ಟುವಳಿ ತೆರಿಗೆ ಜಮಾವನ್ನು ಕ್ಲೇಮು ಮಾಡಲು ವ್ಯಾಪಾರಿಗೆ ಅನುಕೂಲ ಮಾಡುವುದು;

(iv) ರಾಜ್ಯ ರಾಜಸ್ವವನ್ನು ಕಾಪಾಡಿಕೊಳ್ಳಲು ಕೆಲವು ನಿರ್ಧಿಷ್ಟ ವ್ಯಾಪಾರ ಸರಕುಗಳಲ್ಲಿ ಮಾರಾಟ ನಂತರದ ವಿನಾಯಿತಿಗಳೂ/ವಾರ್ಷಿಕ ರಿಯಾಯ್ತಿಗಳೂ/ವಿಶೇಷ ವಿನಾಯಿತಿಗಳಂತಹ ವ್ಯಾಪಾರ ವಿಧಾನಗಳ ಸೋಗಿನಲ್ಲಿ ಖರೀದಿ ಬೆಲೆಗಿಂತಲೂ ಕಡಿಮೆದರದಲ್ಲಿ ವ್ಯಾಪಾರಿಯು ಸರಕುಗಳನ್ನು ಮಾರಾಟ ಮಾಡಿದ ಸಂದರ್ಭದಲ್ಲಿ ಹೂಡುವಳಿ ತೆರಿಗೆ ಜಮೆಯ ವಿಪರ್ಯಾಯ (reversal) ಉಪಬಂಧವನ್ನು ಕಲ್ಪಿಸುವುದು;

(v) ಸಣ್ಣ ವ್ಯಾಪಾರಿಗಳಿಗೆ ಸಮಾಧಾನವಾಗುವಂತೆ ನೋಂದಣಿ ಮತ್ತು ನೋಂದಣಿಯ ರದ್ಧತಿಗಾಗಿನ ಪ್ರಾರಂಭಿಕ ಮಿತಿಗಳನ್ನು ಹೆಚ್ಚಿಸುವುದಕ್ಕೆ ಉಪಬಂಧವನ್ನು ಕಲ್ಪಿಸುವುದು;

(vi) ಅನಗತ್ಯ ದಸ್ತಾವೇಜುಗಳನ್ನು ಕಡಿಮೆಗೊಳಿಸಲು ಮೊದಲನೇ ಮೇಲ್ಮನವಿ ಪ್ರಾಧಿಕಾರದ ಕರನಿರ್ಧರಣೆ/ಮರುಕರನಿರ್ಧರಣೆ ಆದೇಶಗಳು/ ಹಲವಾರು ತೆರಿಗೆ ಅವಧಿಗಳ ನಡವಳಿಗಳ ವಿರುದ್ಧ ಒಂದೇ ಮೇಲ್ಮನವಿ ಸಲ್ಲಿಸುವುದಕ್ಕೆ ಉಪಬಂಧ ಕಲ್ಪಿಸುವುದು;

(vii) ಕರ್ನಾಟಕ ಮೇಲ್ಮನವಿ ನ್ಯಾಯಾಧಿಕರಣವು ನೀಡಿದ ತಡೆಯಾಜ್ಞೆಯ ದಿನಾಂಕದಿಂದ ಮೇಲ್ಮನವಿಯನ್ನು ವಿಲೆ ಮಾಡಲು ಹೆಚ್ಚಿನ ಸಮಯವನ್ನು ಒದಗಿಸುವುದು.

ಆದ್ದರಿಂದ ಈ ವಿಧೇಯಕ.

(2015ರ ವಿಧಾನಸಭೆಯ ವಿಧೇಯಕ ಸಂಖ್ಯೆ 08:, ಕಡತ ಸಂಖ್ಯೆ:ಸಂವ್ಯಶಾಇ 15 ಶಾಸನ 2015)
(ಭಾರತ ಸಂವಿಧಾನದ 7ನೇ ಅನುಸೂಚಿಯ 2ನೇ ಪಟ್ಟಿಯ 54ನೆಯ ನಮೂದನೆಯಡಿಯಲ್ಲಿ ಬರುತ್ತದೆ.)

## XVIII

**2016ರ ಅಧಿನಿಯಮ ಸಂಖ್ಯೆ 06.–** ಆಯವ್ಯಯದಲ್ಲಿ ಮಾಡಲಾದ ಪ್ರಸ್ತಾವನೆಗಳು ಹಾಗೂ ಅದರ ಕೆಲವು ಪ್ರಾಸಂಗಿಕ ತಿದ್ದುಪಡಿಗಳನ್ನು ಜಾರಿಗೆ ತರುವುದಕ್ಕಾಗಿ ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಅಧಿನಿಯಮ, 2003ನ್ನು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

(2016ರ ವಿಧಾನಸಭೆಯ ವಿಧೇಯಕ ಸಂಖ್ಯೆ 12:, ಕಡತ ಸಂಖ್ಯೆ:ಸಂವ್ಯಶಾಇ 18 ಶಾಸನ 2016)
(ಭಾರತ ಸಂವಿಧಾನದ 7ನೇ ಅನುಸೂಚಿಯ 2ನೇ ಪಟ್ಟಿಯ 54ನೆಯ ನಮೂದನೆಯಡಿಯಲ್ಲಿ ಬರುತ್ತದೆ.)

– – – –

**2004 ರ ಕರ್ನಾಟಕ ಅಧಿನಿಯಮ ಸಂಖ್ಯೆ 32**

(2004 ರ ಡಿಸೆಂಬರ್ ಇಪ್ಪತ್ತೊಂರನೇ ದಿನಾಂಕದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

# ಕರ್ನಾಟಕ ಮೌಲ್ಯ ವರ್ಧಿತ ತೆರಿಗೆ ಅಧಿನಿಯಮ, 2003

(2004ರ ಡಿಸೆಂಬರ್ ಹದಿನೈದನೇ ದಿನಾಂಕದಂದು ರಾಷ್ಟ್ರಪತಿಯವರಿಂದ ಅನುಮತಿಯನ್ನು ಪಡೆಯಲಾಗಿದೆ)

(2005ನೇ ಅಧಿನಿಯಮ ಸಂಖ್ಯೆ 6, 11, 27, 2006ರ 4, 2007ರ 6, 2008ರ 5, 2009ರ 5, 2010ರ 4, 2011ರ 12, 2012ರ 17, 2012ರ 27, 2013ರ 32, 2013ರ 54, 2014ರ 15, 2015ರ 05, 2015ರ 15 ಮತ್ತು 2016ರ 06ರಲ್ಲಿ ತಿದ್ದುಪಡಿಯಾದಂತೆ)

ಕರ್ನಾಟಕ ರಾಜ್ಯದಲ್ಲಿ ಸರಕುಗಳ ಖರೀದಿ ಅಥವಾ ಮಾರಾಟದ ಮೇಲೆ ಮತ್ತಷ್ಟು ತೆರಿಗೆಯನ್ನು ವಿಧಿಸುವುದಕ್ಕಾಗಿ ಉಪಬಂಧ ಕಲ್ಪಿಸಲು ಒಂದು ಅಧಿನಿಯಮ.

ಇದು ಭಾರತ ಗಣರಾಜ್ಯದ ಐವತ್ನಾಲ್ಕನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

## ಅಧ್ಯಾಯ - I

## ಪ್ರಾರಂಭಿಕ

**1. ಸಂಕ್ಷಿಪ್ತ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಮೌಲ್ಯ ವರ್ಧಿತ ತೆರಿಗೆ ಅಧಿನಿಯಮ, 2003 ಎಂದು ಕರೆಯತಕ್ಕದ್ದು.

(2) ಇದು ಸಮಗ್ರ ಕರ್ನಾಟಕ ರಾಜ್ಯಕ್ಕೆ ವ್ಯಾಪ್ತವಾಗುತ್ತದೆ.

(3) ಇದು, ಸರ್ಕಾರವು ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದ ಅಂಥ [1][ದಿನಾಂಕ]ದಿಂದ ಜಾರಿಗೆ ಬರತಕ್ಕದ್ದು ಮತ್ತು ಅಧಿನಿಯಮದ ಬೇರೆ ಬೇರೆ ಉಪಬಂಧಗಳಿಗೆ ಬೇರೆ ಬೇರೆ ದಿನಾಂಕಗಳನ್ನು ಗೊತ್ತುಪಡಿಸಬಹುದು.

1. ಅಧಿನಿಯಮದ 3 ಮತ್ತು 22ನೇ ಪ್ರಕರಣಗಳನ್ನು ಹೊರತುಪಡಿಸಿ ಉಳಿದ ಎಲ್ಲಾ ಪ್ರಕರಣಗಳು ದಿನಾಂಕ: 11.3.2005ನೇ ದಿನಾಂಕದಿಂದ ಜಾರಿಗೆ ಬಂದಿವೆ. ಅಧಿಸೂಚನೆ ಸಂಖ್ಯೆ ಎಫ್‌ಡಿ 55 ಸಿಎಸ್‌ಎಲ್ 2005(1), ದಿನಾಂಕ: 11.3.2005 (ಕರ್ನಾಟಕ ರಾಜ್ಯಪತ್ರ ಭಾಗ IV-A ವಿಶೇಷ ಪತ್ರಿಕೆ 326 ದಿ: 11.3.2005) ಪ್ರಕರಣ 3 ಮತ್ತು 22 ದಿನಾಂಕ: 1.4.2005 ರಿಂದ ಜಾರಿಗೆ ಬಂದಿವೆ. ಅಧಿಸೂಚನೆ ಸಂಖ್ಯೆ ಎಫ್‌ಡಿ 55 ಸಿಎಸ್‌ಎಲ್ 2005(2) ದಿನಾಂಕ: 23.2.2005

(4) ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದ ಅಂಥ ದಿನಾಂಕದ ತರುವಾಯದ ಸರಕುಗಳ ಮಾರಾಟ ಅಥವಾ ಖರೀದಿಯ ಮೇಲೆ ತೆರಿಗೆಯನ್ನು ವಿಧಿಸತಕ್ಕದ್ದು ಮತ್ತು ಸರಕುಗಳ ಬೇರೆ ಬೇರೆ ವರ್ಗ ಅಥವಾ ವರ್ಗಗಳಿಗೆ ಬೇರೆ ಬೇರೆ ದಿನಾಂಕಗಳನ್ನು ಗೊತ್ತುಪಡಿಸಬಹುದು.

**2. ಪರಿಭಾಷೆಗಳು.-** ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು:-

(1) **'ಕೃಷಿ'** ಎಂಬುದು, ಅದರ ವ್ಯಾಕರಣ ವ್ಯತ್ಯಾಸಗಳೊಡನೆ, ತೋಟಗಾರಿಕೆ, ಬೆಳೆಗಳು, ಹುಲ್ಲು ಅಥವಾ ತೋಟದ ಉತ್ಪನ್ನಗಳನ್ನು ಬೆಳೆಸುವುದು ಮತ್ತು ಜಾನುವಾರುಗಳನ್ನು ಮೇಯಿಸುವುದನ್ನು ಒಳಗೊಳ್ಳುತ್ತದೆ, ಆದರೆ ಇದು ಹೈನುಗಾರಿಕೆ, ಕೋಳಿಸಾಕಣೆ, ತಳಿವರ್ಧನೆ ಮತ್ತು ಕೇವಲ ಮರ ಕಡಿಯುವುದನ್ನು ಒಳಗೊಳ್ಳುವುದಿಲ್ಲ;

(2) **'ಕೃಷಿಕ'** ಎಂದರೆ, ಸ್ವತಃ ಭೂಮಿಯನ್ನು ಸಾಗುವಳಿ ಮಾಡುವ ವ್ಯಕ್ತಿ;

(3) **'ಕೃಷಿಯ ಉತ್ಪನ್ನ ಅಥವಾ ತೋಟಗಾರಿಕೆಯ ಉತ್ಪನ್ನ'**ವು ಕಾಫಿಯನ್ನು ಹೊರತುಪಡಿಸಿ ಕೇವಲ ಸ್ವಚ್ಛಗೊಳಿಸುವುದು, ವರ್ಗೀಕರಿಸುವುದು, ವಿಂಗಡಿಸುವುದು ಅಥವಾ ಒಣಗಿಸುವುದನ್ನು ಹೊರತುಪಡಿಸಿ ಬಳಕೆಗೆ ಯೋಗ್ಯಗೊಳಿಸುವುದಕ್ಕಾಗಿ ಯಾವುದೇ ಭೌತಿಕ, ರಾಸಾಯನಿಕ ಅಥವಾ ಇತರ ಸಂಸ್ಕರಣೆಗೆ ಒಳಪಡಿಸಲಾದ ಚಹ, ಬೀಡಿ ಎಲೆಗಳು, ಕಚ್ಚಾ ಗೋಡಂಬಿ, ಚೌಬೀನೆ, ಮರ, ಹುಣಸೆ ಹಣ್ಣು ಮತ್ತು ಅಂಥಹದೇ ಉತ್ಪನ್ನವನ್ನು ಒಳಗೊಳ್ಳುವುದಾಗಿ ಭಾವಿಸತಕ್ಕದ್ದಲ್ಲ;

(4) **'ಅಪೀಲು ನ್ಯಾಯಾಧಿಕರಣ'** ಎಂದರೆ, ಕರ್ನಾಟಕ ಅಪೀಲು ನ್ಯಾಯಾಧಿಕರಣ ಅಧಿನಿಯಮ, 1976ರ (1976ರ ಕರ್ನಾಟಕ ಅಧಿನಿಯಮ 59) ಅಡಿಯಲ್ಲಿ ರಚಿತವಾದ ಕರ್ನಾಟಕ ಅಪೀಲು ನ್ಯಾಯಾಧಿಕರಣ;

(5) **'ತೆರಿಗೆ ನಿರ್ಧರಣೆ'** ಎಂದರೆ, ಈ ಅಧಿನಿಯಮದ ಅಡಿಯಲ್ಲಿ ಮಾಡಿದ ಅಥವಾ ಮಾಡಲಾಗಿದೆ ಎಂದು ಭಾವಿಸಲಾದ ತೆರಿಗೆ ನಿರ್ಧರಣೆ ಮತ್ತು ಇದು ಪುನರ್ ತೆರಿಗೆ ನಿರ್ಧರಣೆಯನ್ನು ಒಳಗೊಳ್ಳುತ್ತದೆ.

[1][(5–ಎ) "**ನಿಗಮಿತ ನಿಕಾಯ**" ಎಂದರೆ, ಒಂದು ನಿಗಮ, ಕಂಪನಿಗಳ ಅಧಿನಿಯಮ, 1956ರ (1956ರ ಕೇಂದ್ರ ಅಧಿನಿಯಮ 1) ಅಡಿಯಲ್ಲಿ ಪರಿಭಾಷಿಸಲಾದ ಒಂದು ಕಂಪನಿ ಹಾಗೂ ಭಾರತದ ಹೊರಗೆ ನಿಗಮಿತವಾದ ಒಂದು ಕಂಪನಿ ಆದರೆ,–

(ಎ) ಒಬ್ಬನೇ ವ್ಯಕ್ತಿಯ ನಿಗಮವನ್ನು

(ಬಿ) ಸಹಕಾರಿ ಸಂಘಗಳಿಗೆ ಸಂಬಂಧಿಸಿದ ಯಾವುದೇ ಕಾನೂನಿನ ಅಡಿಯಲ್ಲಿ ನೋಂದಾಯಿತವಾದ ಒಂದು ಸಹಕಾರಿ ಸಂಘವನ್ನು, ಮತ್ತು

(ಸಿ) ಕಂಪನಿಗಳ ಅಧಿನಿಯಮ, 1956 ರಲ್ಲಿ ಪರಿಭಾಷಿಸಲಾದಂಥ ಕಂಪನಿಯಲ್ಲದ, ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ರಾಜ್ಯಸರ್ಕಾರವು ಈ ಸಂಬಂಧದಲ್ಲಿ ನಿರ್ದಿಷ್ಟಪಡಿಸಬಹುದಾದ ಯಾವುದೇ ಇತರ ನಿಗಮಿತ ನಿಕಾಯವನ್ನು,

– ಒಳಗೊಳ್ಳುವುದಿಲ್ಲ.][1]

1. 2006ರ ಅಧಿನಿಯಮ ಸಂಖ್ಯೆ 4ರ ಮೂಲಕ ದಿನಾಂಕ: 1.4.2006 ರಿಂದ ಸೇರಿಸಲಾಗಿದೆ

[2][[1][(5–ಬಿ) **"ಬ್ರ್ಯಾಂಡ್‌ಮಾಡಿದ"** ಎಂದರೆ, ವ್ಯಾಪಾರ ಮತ್ತು ವ್ಯಾಪಾರ ಸರಕು ಗುರುತುಗಳ ಅಧಿನಿಯಮ, 1958ರ (1958ರ ಕೇಂದ್ರ ಅಧಿನಿಯಮ 43) ಅಥವಾ ವ್ಯಾಪಾರ ಗುರುತುಗಳ ಅಧಿನಿಯಮ, 1999ರ (1999ರ ಕೇಂದ್ರ ಅಧಿನಿಯಮ 47) ಅಡಿಯಲ್ಲಿ ಒಂದು ಹೆಸರಿನಲ್ಲಿ ಅಥವಾ ನೋಂದಾಯಿತವಾದ ಅಥವಾ ನೋಂದಣಿಯು ಇತ್ಯರ್ಥದಲ್ಲಿರುವ ಅಥವಾ ನೋಂದಣಿ ವರ್ಗಾವಣೆಯು ಇತ್ಯರ್ಥದಲ್ಲಿರುವ ವ್ಯಾಪಾರ ಗುರುತಿನ ಅಡಿಯಲ್ಲಿ ಮಾರಾಟ ಮಾಡಲಾದ ಯಾವುವೇ ಸರಕುಗಳು.][1]][2]

1. 2005ರ ಅಧಿನಿಯಮ ಸಂಖ್ಯೆ 6ರ ಮೂಲಕ ದಿನಾಂಕ: 19.3.2005 ರಿಂದ ಸೇರಿಸಲಾಗಿದೆ.
2. 2006ರ ಅಧಿನಿಯಮ ಸಂಖ್ಯೆ 4ರ ಮೂಲಕ ದಿನಾಂಕ: 1.4.2006 ರಿಂದ ಮರು ಸಂಖ್ಯೆಗೊಳಿಸಲಾಗಿದೆ.

(6) **'ವ್ಯವಹಾರ'** ಎಂಬುದು,–

(ಎ) ಯಾವುದೇ ವ್ಯಾಪಾರ, ವಾಣಿಜ್ಯ, ತಯಾರಿಕೆ ಅಥವಾ, ವ್ಯಾಪಾರ, ವಾಣಿಜ್ಯ ಅಥವಾ ತಯಾರಿಕೆಯ ಸ್ವರೂಪದ ಯಾವುದೇ ಉದ್ಯಮ ಅಥವಾ ವ್ಯಾಪಾರ ಸಂಸ್ಥೆಯು, ಅಂಥ ವ್ಯಾಪಾರ, ವಾಣಿಜ್ಯ, ತಯಾರಿಕೆ, ಉದ್ಯಮ ಅಥವಾ ವ್ಯಾಪಾರ ಸಂಸ್ಥೆಯನ್ನು ಪ್ರಯೋಜನ ಅಥವಾ ಲಾಭವನ್ನು ಹೊಂದುವ ಉದ್ದೇಶದಿಂದ ನಡೆಸಲಾಗುತ್ತಿರಲಿ ಅಥವಾ ಇಲ್ಲದಿರಲಿ ಮತ್ತು ಅವುಗಳಿಂದ ಯಾವುದೇ ಲಾಭ ಪ್ರಾಪ್ತವಾಗಿರಲಿ ಅಥವಾ ಪ್ರಾಪ್ತವಾಗಿಲ್ಲದಿರಲಿ, ಇವುಗಳನ್ನು ಮತ್ತು

(ಬಿ) ಅಂಥ ವ್ಯಾಪಾರ, ವಾಣಿಜ್ಯ, ತಯಾರಿಕೆ ಉದ್ಯಮ ಅಥವಾ ವ್ಯಾಪಾರ ಸಂಸ್ಥೆಗೆ ಸಂಬಂಧಿಸಿದ ಅಥವಾ ಪ್ರಾಸಂಗಿಕವಾದ ಅಥವಾ ಸಹಾಯಕವಾದ ಯಾವುದೇ ವ್ಯವಹಾರವನ್ನು,

– ಒಳಗೊಳ್ಳುತ್ತದೆ.

[1][(7) 12ನೇ ಪ್ರಕರಣದ ಉದ್ದೇಶಕ್ಕಾಗಿ "**ಬಂಡವಾಳ ಸರಕು**" ಎಂದರೆ, ಶೀತಲ ಸಂಗ್ರಹಾಗಾರ ಮತ್ತು ಅದೇ ತರಹದ ಸ್ಥಾವರಗಳನ್ನು ಒಳಗೊಂಡಂತೆ ಸ್ಥಾವರ, ಯಂತ್ರೋಪಕರಣ, ಸರಕು ಸಾಗಣೆ ವಾಹನಗಳು, ಸಲಕರಣೆಗಳು, ಮೋಲ್ಡುಗಳು, ಉಪಕರಣಗಳು ಮತ್ತು ಜಿಗ್‌ಗಳು ಮತ್ತು ಮಾರಾಟವನ್ನು ಹೊರತುಪಡಿಸಿ ವ್ಯಾಪಾರದ ಪ್ರಕ್ರಿಯೆಯಲ್ಲಿ ಬಳಸುವಂತಹವುಗಳು;][1]

1. 2006ರ ಅಧಿನಿಯಮ ಸಂಖ್ಯೆ 4ರ ಮೂಲಕ ದಿನಾಂಕ: 1.4.2006 ರಿಂದ ಪ್ರತಿಯೋಜಿಸಲಾಗಿದೆ.

(8) **'ಆಯುಕ್ತ'** ಎಂದರೆ, ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮ 1957ರ (1957ರ ಕರ್ನಾಟಕ ಅಧಿನಿಯಮ 25) 3ನೇ ಪ್ರಕರಣದ ಅಡಿಯಲ್ಲಿ ವಾಣಿಜ್ಯ ತೆರಿಗೆಗಳ ಆಯುಕ್ತನಾಗಿ ನೇಮಕಗೊಂಡ ಯಾವೊಬ್ಬ ವ್ಯಕ್ತಿ;

(9) **'ಕಂಪೆನಿ'** ಎಂಬುದು ಕಂಪೆನಿಗಳ ಅಧಿನಿಯಮ, 1956ರಲ್ಲಿ (1956ರ ಕೇಂದ್ರ ಅಧಿನಿಯಮ 1) ಅದಕ್ಕೆ ಕೊಡಲಾದ ಅರ್ಥವನ್ನೇ ಹೊಂದಿರತಕ್ಕದ್ದು;

(10) ವ್ಯಾಕರಣ ವ್ಯತ್ಯಾಸಗಳು ಮತ್ತು ಸಜಾತೀಯ ಪದಾವಳಿಗಳೊಂದಿಗೆ **'ಸಾಗುವಳಿ ಮಾಡುವುದು'** ಎಂದರೆ, ಯಾವುದೇ ಕೃಷಿ ಕಾರ್ಯವನ್ನು ನಡೆಸುವುದು;

(11) **'ಸ್ವತಃ ಸಾಗುವಳಿ ಮಾಡುವುದು'** ಎಂದರೆ,-

(ಎ) ತನ್ನ ಸ್ವಂತ ದುಡಿಮೆಯ ಮೂಲಕ, ಅಥವಾ

(ಬಿ) ತನ್ನ ಸ್ವಂತ ಕುಟುಂಬದ ದುಡಿಮೆಯ ಮೂಲಕ, ಅಥವಾ

(ಸಿ) ನಗದು ರೂಪದಲ್ಲಿ ಅಥವಾ ವಸ್ತು ರೂಪದಲ್ಲಿ ಆದರೆ, ಬೆಳೆಯ ಪಾಲಿನಲ್ಲಿ ಅಲ್ಲದ, ಸಂದಾಯ ಮಾಡಬೇಕಾದ ಮಜೂರಿಗಳೊಂದಿಗೆ ನೌಕರರ ಮೂಲಕ ಅಥವಾ ತನ್ನ ವೈಯಕ್ತಿಕ ಮೇಲ್ವಿಚಾರಣೆ ಅಥವಾ ತನ್ನ ಕುಟುಂಬದ ಯಾವೊಬ್ಬ ಸದಸ್ಯನ ಮೇಲ್ವಿಚಾರಣೆಯಲ್ಲಿ ಕೂಲಿಗೆ ನೇಮಿಸಿಕೊಳ್ಳಲಾದ ಕಾರ್ಮಿಕರ ಮೂಲಕ,

- ತನ್ನ ಭೂಮಿಯನ್ನು ಸಾಗುವಳಿ ಮಾಡುವುದು.

**ವಿವರಣೆಗಳು:-** (1) ವಿಧವೆ ಅಥವಾ ಅಪ್ರಾಪ್ತ ವಯಸ್ಕ ಅಥವಾ ಯಾವುದೇ ದೈಹಿಕ ಅಥವಾ ಮಾನಸಿಕ ಅಸಮರ್ಥತೆಗೆ ಒಳಗಾಗಿರುವ ವ್ಯಕ್ತಿಯ ಭೂಮಿಯನ್ನು ಅವಳ ಅಥವಾ ಅವನ ಆಳುಗಳು ಅಥವಾ ಕೂಲಿಗೆ ನೇಮಿಸಿಕೊಂಡ ಕಾರ್ಮಿಕರ ಮೂಲಕ ಸಾಗುವಳಿಯನ್ನು ಮಾಡಿದರೆ, ಅದನ್ನು ಸ್ವತಃ ಸಾಗುವಳಿ ಮಾಡುತ್ತಿರುವುದಾಗಿ ಭಾವಿಸತಕ್ಕದ್ದು.

(2) ಅವಿಭಕ್ತ ಕುಟುಂಬದ ಸಂದರ್ಭದಲ್ಲಿ, ಅಂತಹ ಕುಟುಂಬದ ಯಾವನೇ ಸದಸ್ಯನು ಭೂಮಿಯನ್ನು ಸಾಗುವಳಿ ಮಾಡುತ್ತಿದ್ದರೆ, ಅದನ್ನು ಸ್ವತಃ ಸಾಗುವಳಿ ಮಾಡಲಾಗಿದೆಯೆಂದು ಭಾವಿಸತಕ್ಕದ್ದು.

(12) **'ವ್ಯಾಪಾರಿ (ಡೀಲರ್)'** ಎಂದರೆ, ನಗದಿಗಾಗಿಯೇ ಆಗಲಿ ಅಥವಾ ಮುಂದಕ್ಕೆ ಹಾಕಲಾದ ಸಂದಾಯಕ್ಕೆ ಆಗಲಿ ಅಥವಾ ಕಮಿಷನ್, ಸಂಭಾವನೆ ಅಥವಾ ಇತರ ಬೆಲೆಯುಳ್ಳ ಪ್ರತಿಫಲಕ್ಕಾಗಿ ಆಗಲಿ, ನೇರವಾಗಿ ಅಥವಾ ಅನ್ಯಥಾ ಸರಕುಗಳನ್ನು ಖರೀದಿಸುವ, ಮಾರಾಟಮಾಡುವ, ಸರಬರಾಜು ಮಾಡುವ ಅಥವಾ ವಿತರಣೆ ಮಾಡುವ ವ್ಯವಹಾರವನ್ನು ನಡೆಸುತ್ತಿರುವ ಯಾವೊಬ್ಬ ವ್ಯಕ್ತಿ ಮತ್ತು ಅದು,

(ಎ) ಸರ್ಕಾರದ, ಕೇಂದ್ರ ಸರ್ಕಾರದ, ಕರ್ನಾಟಕ ರಾಜ್ಯವನ್ನು ಹೊರತುಪಡಿಸಿ ಇತರ ಯಾವುದೇ ರಾಜ್ಯದ ರಾಜ್ಯ ಸರ್ಕಾರದ, ಒಂದು ಕೈಗಾರಿಕೋದ್ಯಮ, ವಾಣಿಜ್ಯೋದ್ಯಮ ಅಥವಾ ವ್ಯಾಪಾರೋದ್ಯಮ, ಒಂದು ಶಾಸನಬದ್ಧ ನಿಕಾಯ, ಸ್ಥಳೀಯ ಪ್ರಾಧಿಕಾರ, ಕಂಪೆನಿ, ಹಿಂದೂ ಅವಿಭಕ್ತ ಕುಟುಂಬ, ಅಳಿಯ ಸಂತಾನ ಕುಟುಂಬ, ಪಾಲುಗಾರಿಕೆ ಫರ್ಮು, ಸಂಘ, ಕ್ಲಬ್ ಅಥವಾ ಅಂಥ ವ್ಯವಹಾರವನ್ನು ನಡೆಸುತ್ತಿರುವ ಒಂದು ಅಸೋಸಿಯೇಷನ್;

(ಬಿ) ಸಾಂದರ್ಭಿಕ ವರ್ತಕ (ಟ್ರೇಡರ್), ಪ್ರಧಾನಕರ್ತ, ಏಜೆಂಟ್ ಅಥವಾ ಇತರ ಯಾವುದೇ ಸಾಮರ್ಥ್ಯದಲ್ಲಿ ರಾಜ್ಯದಲ್ಲಿ ಸರಕನ್ನು ಖರೀದಿಸುವ, ಮಾರಾಟ ಮಾಡುವ, ಸರಬರಾಜು ಮಾಡುವ ಅಥವಾ ವಿತರಣೆ ಮಾಡುವ, ನಗದಾಗಿಯೇ ಅಗಲಿ ಅಥವಾ ಮುಂದಕ್ಕೆ ಹಾಕಲಾದ ಸಂದಾಯಕ್ಕೆ ಆಗಲಿ ಅಥವಾ ಕಮಿಷನ್ನಿಗಾಗಲಿ, ಸಂಭಾವನೆಗಾಗಲಿ ಅಥವಾ ಇತರ ಬೆಲೆಯುಳ್ಳ ಪ್ರತಿಫಲಕ್ಕಾಗಿ ಆಗಲಿ ನಡೆಸುವ ವ್ಯವಹಾರವೂ ಒಳಗೊಂಡಂತೆ ಸಾಂದರ್ಭಿಕ ವ್ಯವಹಾರಗಳನ್ನು ನಡೆಸುವ ಯಾವೊಬ್ಬ ವ್ಯಕ್ತಿ;

(ಸಿ) ಯಾವೊಬ್ಬ ಪ್ರಧಾನಕರ್ತನ ಪರವಾಗಿ ಸರಕುಗಳ ಖರೀದಿ, ಮಾರಾಟ, ಸರಬರಾಜು ಅಥವಾ ವಿತರಣೆಯ ವ್ಯವಹಾರವನ್ನು ನಡೆಸುತ್ತಿರುವ ಕಮಿಷನ್ ಏಜೆಂಟ್, ದಲ್ಲಾಳಿ ಅಥವಾ ಭರವಸೆ ಕೊಡುವ ಏಜೆಂಟ್ ಅಥವಾ ಹರಾಜುದಾರ ಅಥವಾ ಯಾವುದೇ ಹೆಸರಿನಿಂದ ಕರೆಯಲಾದ ಯಾವೊಬ್ಬ ಇತರ ವಾಣಿಜ್ಯ ಏಜೆಂಟ್;

(ಡಿ) ಅನಿವಾಸಿ ವ್ಯಾಪಾರಿ ಅಥವಾ ಅನಿವಾಸಿ ವ್ಯಾಪಾರಿಯ ಏಜೆಂಟ್, ರಾಜ್ಯದ ಹೊರಗಡೆ ಇರುವ ಫರ್ಮ್ ಅಥವಾ ಕಂಪನಿ ಅಥವಾ ಅಸೋಸಿಯೇಷನ್ನಿನ ಸ್ಥಳೀಯ ಶಾಖೆ;

(ಇ) ತಯಾರಿಕೆಯ ಮೂಲಕ ಅಥವಾ ಅನ್ಯಥಾ ತಾನು ಉತ್ಪಾದಿಸಿದ ಸರಕುಗಳನ್ನು ಮಾರಾಟ ಮಾಡುವ ವ್ಯಕ್ತಿ;

(ಎಫ್) ಯಾವುವೇ ಸರಕುಗಳಲ್ಲಿ ನಗದು, ಮುಂದೂಡಿದ ಸಂದಾಯ ಅಥವಾ ಇತರ ಬೆಲೆಯುಳ್ಳ ಪ್ರತಿಫಲಕ್ಕಾಗಿ ಸ್ವತ್ತಿನ ಕರಾರಿನ ಅನುಸರಣೆಯ ಹೊರತಾದ ವರ್ಗಾವಣೆಯ ವ್ಯವಹಾರದಲ್ಲಿ ತೊಡಗಿಸುವ ವ್ಯಕ್ತಿ;

(ಜಿ) ಕಾಮಗಾರಿಗಳ ಕರಾರಿನ ನಿರ್ವಹಣೆಯಲ್ಲಿ ಒಳಗೊಳ್ಳುವ ಸರಕುಗಳಲ್ಲಿ (ಸರಕುಗಳಾಗಿಯೇ ಆಗಲಿ ಅಥವಾ ಇತರ ರೂಪದಲ್ಲಿಯೇ ಆಗಲಿ) ಸ್ವತ್ತಿನ ವರ್ಗಾವಣೆಯ ವ್ಯವಹಾರದಲ್ಲಿ ತೊಡಗಿರುವ ವ್ಯಕ್ತಿ;

(ಹೆಚ್) ಕಂತು ಖರೀದಿ ಸರಕುಗಳ ಬಟವಾಡೆ ವ್ಯವಹಾರದಲ್ಲಿ ಅಥವಾ ಕಂತುಗಳ ಮೂಲಕ ಸಂದಾಯದ ಯಾವುದೇ ವ್ಯವಸ್ಥೆಯಲ್ಲಿ ತೊಡಗಿರುವ ವ್ಯಕ್ತಿ;

(ಐ) ನಗದು, ಮುಂದಕ್ಕೆ ಹಾಕಿದ ಸಂದಾಯ ಅಥವಾ ಇತರ ಬೆಲೆಯುಳ್ಳ ಪ್ರತಿಫಲಕ್ಕಾಗಿ ಯಾವುದೇ ಉದ್ದೇಶಕ್ಕಾಗಿ (ಒಂದು ನಿರ್ದಿಷ್ಟ ಅವಧಿಗಾಗಿಯೇ ಆಗಲಿ ಅಥವಾ ಇಲ್ಲದಿರಲಿ) ಯಾವುವೇ ಸರಕುಗಳನ್ನು ಉಪಯೋಗಿಸುವ ಹಕ್ಕಿನ ವರ್ಗಾವಣೆಯ ವ್ಯವಹಾರದಲ್ಲಿ ತೊಡಗಿರುವ ವ್ಯಕ್ತಿ;

– ಎಂಬುದನ್ನು ಒಳಗೊಳ್ಳುತ್ತದೆ.

**ವಿವರಣೆಗಳು:–** (1) ವ್ಯವಹಾರದ ಕ್ರಮದಲ್ಲಿಯೇ ಆಗಲಿ ಅಥವಾ ಅದಲ್ಲದೇ ಆಗಲಿ ನಗದಿಗಾಗಿ ಅಥವಾ ಮುಂದೂಡಲಾದ ಸಂದಾಯಕ್ಕಾಗಿ ಅಥವಾ ಕಮಿಷನ್ನಿಗಾಗಿ ಅಥವಾ ಸಂಭಾವನೆ ಅಥವಾ ಇತರ ಬೆಲೆಯುಳ್ಳ ಪ್ರತಿಫಲಕ್ಕಾಗಿ ತನ್ನ ಸದಸ್ಯರಿಂದ ಅಥವಾ ಸದಸ್ಯರಿಗಾಗಿ ಸರಕುಗಳನ್ನು ಖರೀಸುವ, ಮಾರಾಟ ಮಾಡುವ, ಸರಬರಾಜು ಮಾಡುವ ಅಥವಾ ವಿತರಣೆ ಮಾಡುವ ಸಂಘವನ್ನು (ಒಂದು ಸಹಕಾರಿ ಸಂಘವನ್ನು ಒಳಗೊಂಡಂತೆ) ಕ್ಲಬ್ ಅಥವಾ ಫರ್ಮ್ ಅಥವಾ ಒಂದು ಅಸೋಸಿಯೇಷನನ್ನು ಈ ಅಧಿನಿಯಮದ ಉದ್ದೇಶಗಳಿಗಾಗಿ ವ್ಯಾಪಾರಿ ಎಂಬುದಾಗಿ ಭಾವಿಸತಕ್ಕದ್ದು.

(2) ವ್ಯವಹಾರದ ಕ್ರಮದಲ್ಲಿಯೇ ಆಗಲಿ ಅಥವಾ ಅದಲ್ಲದೆ ಆಗಲಿ, ನೇರವಾಗಿ ಅಥವಾ ಅನ್ಯಥಾ ನಗದಿಗಾಗಿ ಅಥವಾ ಮುಂದಕ್ಕೆ ಹಾಕಲಾದ ಸಂದಾಯಕ್ಕಾಗಿ ಅಥವಾ ಕಮಿಷನ್ನಿಗಾಗಿ, ಸಂಭಾವನೆ ಅಥವಾ ಇತರ ಬೆಲೆಯುಳ್ಳ ಪ್ರತಿಫಲಕ್ಕಾಗಿ ಸರಕುಗಳನ್ನು ಖರೀದಿಸುವ, ಮಾರಾಟಮಾಡುವ, ಸರಬರಾಜು ಮಾಡುವ ಅಥವಾ ವಿತರಣೆ ಮಾಡುವ ಕೇಂದ್ರ ಸರ್ಕಾರದ ಅಥವಾ ರಾಜ್ಯ ಸರ್ಕಾರ ಅಥವಾ ಸ್ಥಳೀಯ ಪ್ರಾಧಿಕಾರ ಅಥವಾ ಶಾಸನಬದ್ಧ ನಿಕಾಯವನ್ನು ಈ ಅಧಿನಿಯಮದ ಉದ್ದೇಶಗಳಿಗಾಗಿ ವ್ಯಾಪಾರಿ ಎಂಬುದಾಗಿ ಭಾವಿಸತಕ್ಕದ್ದು.

(3) ಚಲನಚಿತ್ರಗಳನ್ನು ಪ್ರದರ್ಶನಕ್ಕಾಗಿ ಉಪಯೋಗಿಸುವ ಅಧಿಕಾರದ ವರ್ಗಾವಣೆಯ ಸಂಬಂಧದಲ್ಲಿ ಅಂಥ ಅಧಿಕಾರವನ್ನು ಪ್ರದರ್ಶಕನಿಗೆ ವರ್ಗಾವಣೆ ಮಾಡುವ ವ್ಯಕ್ತಿಯನ್ನು ಮತ್ತು ಅಂಥ ಉಪಯೋಗಕ್ಕಾಗಿ ಪ್ರದರ್ಶಕನು ಯಾವ ವ್ಯಕ್ತಿಯಿಂದ ಅಧಿಕಾರವನ್ನು ಪಡೆಯುತ್ತಾನೋ, ಆ ವ್ಯಕ್ತಿಯನ್ನು, ಈ ಖಂಡದ ಮೇರೆಗೆ ವ್ಯಾಪಾರಿ ಎಂಬುದಾಗಿ ಭಾವಿಸತಕ್ಕದ್ದು.

(4) (ಎ)ಸ್ವತಃ ತಾನು ಸಾಗುವಳಿ ಮಾಡಿದ ಭೂಮಿಯಲ್ಲಿ ಬೆಳೆದ ಕೃಷಿ ಉತ್ಪನ್ನವನ್ನು ಮಾತ್ರವೇ ಮಾರಾಟ ಮಾಡುವ ಕೃಷಿಕನನ್ನು ಅಥವಾ ಕೋಳಿ ಸಾಕಾಣಿಕೆಯಲ್ಲಿ ಮಾತ್ರವೇ ತೊಡಗಿರುವ ಮತ್ತು ಅಂಥ ಕೋಳಿ ಫಾರಂನ ಉತ್ಪನ್ನಗಳನ್ನು ಮಾರಾಟ ಮಾಡುವ ವ್ಯಕ್ತಿಯನ್ನು ಈ ಖಂಡದ ಅರ್ಥ ವ್ಯಾಪ್ತಿಯಲ್ಲಿ ವ್ಯಾಪಾರಿ ಎಂಬುದಾಗಿ ಭಾವಿಸತಕ್ಕದ್ದಲ್ಲ.

(ಬಿ) ಒಬ್ಬ ಕೃಷಿಕನು ತಾನೇ ಒಂದು ಕಂಪನಿಯಾಗಿರುವಲ್ಲಿ ಮತ್ತು ತಾನು ಸ್ವತಃ, ನೇರವಾಗಿ ಅಥವಾ ಇತರ ರೀತಿಯಲ್ಲಿ ಕೃಷಿ ಮಾಡುತ್ತಿರುವ ಭೂಮಿಯಲ್ಲಿ ಬೆಳೆದ [1][ಅಡಿಕೆ,][1] ಮೆಣಸು, ಏಲಕ್ಕಿ, ರಬ್ಬರ್, ಚೌಬೀನೆ, ಮರ, ಕಚ್ಚಾ ಗೋಡಂಬಿ ಅಥವಾ ಕಾಫಿಯನ್ನು ಮಾರಾಟ ಮಾಡುತ್ತಿರುವಲ್ಲಿ ಅಂಥ ಕಂಪನಿಯನ್ನು ಅಂಥ ಉತ್ಪನ್ನದ ಮಾರಾಟಕ್ಕೆ ಸಂಬಂಧಿಸಿದ ವಹಿವಾಟುಗಳ ಸಂಬಂಧದಲ್ಲಿ ಒಬ್ಬ ವ್ಯಾಪಾರಿ ಎಂಬುದಾಗಿ ಭಾವಿಸತಕ್ಕದ್ದು.

1. 2008ರ ಅಧಿನಿಯಮ ಸಂಖ್ಯೆ 5ರ ಮೂಲಕ ದಿನಾಂಕ: 1.8.2008 ರಿಂದ ಸೇರಿಸಲಾಗಿದೆ.

(13) **'ದಸ್ತಾವೇಜು'** ಎಂಬುದು ಯಾವುದೇ ವಿಧಾನದಲ್ಲಿಯಾಗಲಿ ಲಿಖಿತವಾದ ಅಥವಾ ಮುದ್ರಿಸಿದ ದಾಖಲೆಗಳು, ಎಲೆಕ್ಟ್ರಾನಿಕ್ ವಿಧಾನದಲ್ಲಿ ರಕ್ಷಿಸಲಾದ (ಸ್ಟೋರ್ ಮಾಡಲಾದ) ಸ್ವಾಮ್ಯಪತ್ರ ಮತ್ತು ಮಾಹಿತಿ ಇವುಗಳನ್ನು ಒಳಗೊಳ್ಳುತ್ತದೆ.

[1][(13–ಎ)**"ವಿದ್ಯುನ್ಮಾನ ತೆರಿಗೆ ರಿಜಿಸ್ಟರ್"** ಎಂದರೆ, ತೆರಿಗೆ ಬೆಲೆಪಟ್ಟಿಯ ನೀಡಿಕೆ ಅಥವಾ ಅಂಥ ಮಾರಾಟದ ಬಿಲ್ಲುಗಳನ್ನು ನೀಡಲು ಮತ್ತು ಅಂಥ ಮಾರಾಟದ ವಿವರಗಳನ್ನು ದಾಖಲಿಸುವ ಉದ್ದೇಶಕ್ಕಾಗಿ ಬಳಸಲಾದ ಒಂದು ಸುಭದ್ರ ಹಣಕಾಸು ವಿದ್ಯುನ್ಮಾನ ಸಾಧನ ಮತ್ತು ಇದು ಒಂದು ಮುದ್ರಣಯಂತ್ರ ಹಾಗೂ ವ್ಯಾಪಾರಿಯ ಅಥವಾ ಅವನ ಏಜಂಟನ ಸಹಿಯನ್ನು ಹಾಕಲು ಬಳಸುವ ಒಂದು ಯಂತ್ರ ಸಾಧನವನ್ನೂ ಒಳಗೊಳ್ಳುತ್ತದೆ."][1]

1. 2009ರ ಅಧಿನಿಯಮ ಸಂಖ್ಯೆ 5ರ ಮೂಲಕ ದಿನಾಂಕ: 1.4.2009ರಿಂದ ಸೇರಿಸಲಾಗಿದೆ.

(14) **'ರಫ್ತು'** ಎಂದರೆ, ಸರಕುಗಳನ್ನು ಭಾರತದ ಸರಹದ್ದುಗಳ ಹೊರಗೆ ರಫ್ತು ಮಾಡುವ ಕ್ರಮದಲ್ಲಿ ಮಾಡಿದ ಮಾರಾಟ, ಹಾಗೂ ಅಂಥ ರಫ್ತಿಗೆ ಕಾರಣವಾದ ಮಾರಾಟ ಅಥವಾ ಭಾರತದ ಸೀಮಾ ಶುಲ್ಕ ಸರಹದ್ದುಗಳನ್ನು ದಾಟಿದ ತರುವಾಯ ಆ ಸರಕುಗಳ ಹಕ್ಕು ಸ್ವಾಮ್ಯದ ದಸ್ತಾವೇಜುಗಳ ವರ್ಗಾವಣೆಯ ಮೂಲಕ ಮಾಡಲಾದ ಮಾರಾಟ ಮತ್ತು ಭಾರತದ ಸರಹದ್ದುಗಳ ಹೊರಗೆ ಸರಕುಗಳ ರಫ್ತಿಗೆ ಕಾರಣವಾದ ಮಾರಾಟಕ್ಕೆ ಮೊದಲು ಅದರ ಸಂಬಂಧದ ಒಪ್ಪಂದ ಅಥವಾ ಆದೇಶವನ್ನು ಪಾಲಿಸುವ ಉದ್ದೇಶಕ್ಕಾಗಿ ಅಂಥ ಒಪ್ಪಂದ ಅಥವಾ ಆದೇಶದ ನಂತರ ಮಾಡಿದ ಯಾವುದೇ ಸರಕುಗಳ ಅಂತಿಮ ಮಾರಾಟವನ್ನು ಸಹ ಒಳಗೊಳ್ಳುತ್ತದೆ.

(15) **'ಸರಕುಗಳು'** ಎಂದರೆ, (ವೃತ್ತ ಪತ್ರಿಕೆಗಳು, ಕ್ರಮಾರ್ಹ ಕ್ಲೇಮುಗಳು, ಸ್ಟಾಕುಗಳು ಮತ್ತು ಷೇರುಗಳು ಮತ್ತು ಭದ್ರತೆಗಳನ್ನು ಹೊರತುಪಡಿಸಿ) ಎಲ್ಲಾ ಬಗೆಯ ಚರ ಸ್ವತ್ತು ಮತ್ತು ಅದು ಜಾನುವಾರು, ಎಲ್ಲಾ ಸಾಮಗ್ರಿಗಳು, ವ್ಯಾಪಾರ ಸರಕುಗಳು ಮತ್ತು ಕಾಮಗಾರಿಗಳ ಕರಾರಿನ ನಿರ್ವಹಣೆಯಲ್ಲಿ ಒಳಗೊಂಡ (ಸರಕುಗಳಂತೆ ಅಥವಾ ಯಾವುದೇ ಇತರ ರೂಪದಲ್ಲಿನ ಸರಕುಗಳನ್ನು ಒಳಗೊಂಡ) ವಸ್ತುಗಳು ಅಥವಾ ಚರ ಸ್ವತ್ತಿನ ಜೋಡಣೆ, ಮೇಲ್ಪಾಟು ಅಥವಾ ದುರಸ್ತಿಯಲ್ಲಿ ಉಪಯೋಗಿಸಲಾಗುವಂಥ ಸರಕುಗಳು ಮತ್ತು ಮಾರಾಟಕ್ಕೆ ಮುಂಚೆ ಅಥವಾ ಮಾರಾಟದ ಕರಾರಿನ ಅಡಿಯಲ್ಲಿ ಪ್ರತ್ಯೇಕಿಸಬೇಕೆಂದು ಒಪ್ಪಿರುವ, ಬೆಳೆಯುತ್ತಿರುವ ಎಲ್ಲಾ ಫಸಲುಗಳು, ಹುಲ್ಲು ಅಥವಾ ಭೂಮಿಗೆ ಲಗತ್ತಾದ ಅಥವಾ ಅದರ ಭಾಗವಾಗಿರುವ ವಸ್ತುಗಳನ್ನು ಒಳಗೊಳ್ಳುತ್ತದೆ.

(16) **'ಸರಕು ವಾಹನ'** ಎಂದರೆ, ಸಂಪೂರ್ಣವಾಗಿಯೇ ಆಗಲಿ ಅಥವಾ ಪ್ರಯಾಣಿಕರ ಜೊತೆಯಲ್ಲೇ ಆಗಲಿ ಸರಕುಗಳನ್ನು ಸಾಗಿಸುವುದಕ್ಕಾಗಿ ಉಪಯೋಗಿಸುವ (ವಿಮಾನಗಳು ಮತ್ತು ರೈಲ್ವೆ ಗಾಡಿಗಳನ್ನು ಹೊರತುಪಡಿಸಿ) ಯಾವುದೇ ಬಗೆಯ ವಾಹನ ಮತ್ತು ಅದು ತಳ್ಳುಗಾಡಿ, ಪ್ರಾಣಿಯಿಂದ ಎಳೆಸುವ ಗಾಡಿ, ಟ್ರ್ಯಾಕ್ಟರ್ – ಟ್ರೈಲರ್ ಮತ್ತು ಅಂಥವುಗಳನ್ನು ಒಳಗೊಳ್ಳುತ್ತದೆ.

(17) **'ಸರ್ಕಾರ'** ಎಂದರೆ, ಕರ್ನಾಟಕ ಸರ್ಕಾರ.

(18) **'ಆಮದು'** ಎಂದರೆ, ಭಾರತದ ಸರಹದ್ದುಗಳೊಂದಿಗೆ ಆಮದಿಗೆ ಕಾರಣವಾದ ಮಾರಾಟ ಅಥವಾ ಖರೀದಿ ಅಥವಾ ಅಂಥ ಆಮದಿನ ಕ್ರಮದಲ್ಲಿ ಮಾಡಿದ ಮಾರಾಟ ಅಥವಾ ಖರೀದಿಯ ಅಥವಾ ಭಾರತದ ಸೀಮಾ ಶುಲ್ಕ ಗಡಿಗಳನ್ನು ದಾಟುವ ಮೊದಲು ಸರಕುಗಳ ಸ್ವಾಮ್ಯದ ದಸ್ತಾವೇಜುಗಳನ್ನು ವರ್ಗಾವಣೆ ಮಾಡುವ ಮೂಲಕ ಮಾಡಿದ ಮಾರಾಟ ಅಥವಾ ಖರೀದಿ ಹಾಗೂ ಖರೀದಿಯ ಪರಿಣಾಮವಾಗಿ ಅಥವಾ ಅನ್ಯಥಾ ರಾಜ್ಯದ ಹೊರಗಿನಿಂದ ಸರಕುಗಳನ್ನು ಪಡೆದುಕೊಳ್ಳುವುದೂ ಸೇರುತ್ತದೆ.

(19) **'ಹೂಡುವಳಿ'** ಎಂದರೆ, ಬಂಡವಾಳ ಸರಕುಗಳು ಸೇರಿದಂತೆ ಒಬ್ಬ ವ್ಯಾಪಾರಿಯು ತನ್ನ ವ್ಯಾಪಾರ ಕ್ರಮದಲ್ಲಿ ಪುನಃ ಮಾರಾಟಕ್ಕಾಗಿ ಅಥವಾ ಇತರ ಸರಕುಗಳ ತಯಾರಿಕೆಯಲ್ಲಿ ಅಥವಾ ಸಂಸ್ಕರಣದಲ್ಲಿ ಅಥವಾ ಪ್ಯಾಕಿಂಗ್‌ನಲ್ಲಿ ಅಥವಾ ದಾಸ್ತಾನು ಮಾಡುವಲ್ಲಿ ಉಪಯೋಗಕ್ಕಾಗಿ ಅಥವಾ ವ್ಯವಹಾರದಲ್ಲಿ ಯಾವುದೇ ಇತರ ಉಪಯೋಗಕ್ಕಾಗಿ ಖರೀದಿಸಿದ ಯಾವುವೇ ಸರಕುಗಳು.

(20) **'ಹೂಡುವಳಿ ತೆರಿಗೆ'** ಎಂಬುದು 10ನೇ ಪ್ರಕರಣದಲ್ಲಿ ಅದಕ್ಕೆ ನೀಡಲಾದ ಅರ್ಥವನ್ನು ಹೊಂದಿರುತ್ತದೆ.

(21) **'ಗರಿಷ್ಠ ಚಿಲ್ಲರೆ ದರ'** ವು ಅಥವಾ **'ಎಂಆರ್‌ಪಿ'**ಯು ಯಾವ ಪೊಟ್ಟಣದಲ್ಲಿ ಸರಕುಗಳು ಇವೆಯೋ ಅದರ ಮೇಲೆ ನಮೂದಿಸಿದ ದರವಾಗಿರತಕ್ಕದ್ದು.

(22) **'ಹುಟ್ಟುವಳಿ ತೆರಿಗೆ'** ಎಂಬುದು 10ನೇ ಪ್ರಕರಣದಲ್ಲಿ ಅದಕ್ಕೆ ನೀಡಲಾದ ಅರ್ಥವನ್ನು ಹೊಂದಿರುತ್ತದೆ.

(23) **'ವ್ಯವಹಾರದ ಸ್ಥಳ'** ಎಂದರೆ, ವ್ಯಾಪಾರಿಯು ಸರಕುಗಳನ್ನು ಖರೀದಿಸುವ ಅಥವಾ ಮಾರಾಟ ಮಾಡುವ ಯಾವುದೇ ಸ್ಥಳ ಮತ್ತು ಅದು,-

(ಎ) ವ್ಯಾಪಾರಿಯು ತನ್ನ ಸರಕುಗಳನ್ನು ದಾಸ್ತಾನು ಮಾಡುವ ಅಥವಾ ಸಂಸ್ಕರಿಸುವ ಯಾವುದೇ ಉಗ್ರಾಣ, ಗೋದಾಮು ಅಥವಾ ಇತರ ಸ್ಥಳ;

(ಬಿ) ವ್ಯಾಪಾರಿಯು ಸರಕುಗಳನ್ನು ಉತ್ಪಾದಿಸುವ ಅಥವಾ ತಯಾರಿಸುವ ಅಥವಾ ಸಂಸ್ಕರಿಸುವ ಯಾವುದೇ ಸ್ಥಳ;

(ಸಿ) ವ್ಯಾಪಾರಿಯು, ದಸ್ತಾವೇಜುಗಳನ್ನು ಒಳಗೊಂಡಂತೆ ತನ್ನ ಲೆಕ್ಕ ಪುಸ್ತಕಗಳನ್ನು ಇಡುವ ಯಾವುದೇ ಸ್ಥಳ ಮತ್ತು ವ್ಯಾಪಾರಿಯು ವ್ಯವಹಾರವನ್ನು ಏಜೆಂಟನ ಮೂಲಕ (ಯಾವುದೇ ಹೆಸರಿನಿಂದ ಕರೆಯಲಿ) ನಡೆಸುತ್ತಿರುವ ಯಾವುದೇ ಸಂದರ್ಭದಲ್ಲಿ ಏಜೆಂಟನ ವ್ಯವಹಾರ ಸ್ಥಳ;

– ಇವುಗಳನ್ನು ಒಳಗೊಳ್ಳುತ್ತದೆ.

(24) **'ನಿಯಮಿಸಲಾದ ಪ್ರಾಧಿಕಾರ'** ಎಂದರೆ, ಸರ್ಕಾರದಿಂದ ಅಥವಾ ಆಯುಕ್ತನಿಂದ, ಆತನಿಗೆ ವಹಿಸಿಕೊಡಬಹುದಾದ ಅಂಥ ಪ್ರಕಾರ್ಯಗಳನ್ನು ನಿರ್ವಹಿಸಲು ಪ್ರಾಧಿಕೃತನಾದ ವಾಣಿಜ್ಯ ತೆರಿಗೆ ಇಲಾಖೆಯ ಒಬ್ಬ ಅಧಿಕಾರಿ.

(25) **'ಪ್ರಸಕ್ತ ಮಾರುಕಟ್ಟೆ ಬೆಲೆ'** ಎಂದರೆ, ಪ್ರಸ್ತುತ ಮಾರುಕಟ್ಟೆಯಲ್ಲಿ ಜಾರಿಯಲ್ಲಿರುವ, ಪ್ರಕಟಿಸಲಾದ ಸಗಟು ಮಾರಾಟ ಬೆಲೆ ಮತ್ತು ಸಗಟು ಮಾರಾಟ ಬೆಲೆಯನ್ನು ಪ್ರಕಟಿಸದಿದ್ದ ಸಂದರ್ಭಗಳಲ್ಲಿ, ಯಾವುವೇ ಸರಕುಗಳ ಪ್ರಸಕ್ತ ಮಾರುಕಟ್ಟೆ ಬೆಲೆ;

(26) **'ಪ್ರಕಟಿಸಲಾದುದು'** ಎಂದರೆ, ಯಾವುದೇ ವಾರ್ತಾ ಪತ್ರಿಕೆಯಲ್ಲಿ, ಪತ್ರಿಕೆಯಲ್ಲಿ ಅಥವಾ ನಿಯತಕಾಲಿಕದಲ್ಲಿ ಪ್ರಕಟಿಸಲಾದುದು ಅಥವಾ ಮಾರುಕಟ್ಟೆ ಸಮಿತಿಯಿಂದ ಅಥವಾ ಇತರ ಯಾವುದೇ ಪ್ರಾಧಿಕಾರದಿಂದ ಅಧಿಸೂಚಿಸಲಾದುದು.

(27) **'ನೋಂದಾಯಿತ ವ್ಯಾಪಾರಿ'** ಎಂದರೆ, ಈ ಅಧಿನಿಯಮದ ಮೇರೆಗೆ ನೋಂದಾಯಿತನಾದ ವ್ಯಾಪಾರಿ.

(28) **'ವಿವರ ಪಟ್ಟಿ'** ಎಂದರೆ, ಈ ಅಧಿನಿಯಮದಿಂದ ಅಥವಾ ಅದರ ಅಡಿಯಲ್ಲಿ ನಿಯಮಿಸಲಾದ ಅಥವಾ ಅನ್ಯಥಾ ಸಲ್ಲಿಸಬೇಕೆಂದು ಅಗತ್ಯಪಡಿಸಲಾದ [1][ನವೀಕರಿಸಿದ ಪಟ್ಟಿಯನ್ನು ಒಳಗೊಂಡಂತೆ][1] ಯಾವುದೇ ವಿವರ ಪಟ್ಟಿ.

1. 2006ರ ಅಧಿನಿಯಮ 4ರ ಮೂಲಕ ದಿನಾಂಕ: 1.4.2006 ರಿಂದ ಸೇರಿಸಲಾಗಿದೆ.

(29) **"ಮಾರಾಟ"** ಎಂದರೆ, ಅದರ ಎಲ್ಲಾ ವ್ಯಾಕರಣ ವ್ಯತ್ಯಾಸಗಳು ಮತ್ತು ಸಜಾತೀಯ ಪದಾವಳಿಗಳೊಂದಿಗೆ ನಗದಿಗಾಗಿ ಅಥವಾ ಮುಂದೂಡಲಾದ ಸಂದಾಯಕ್ಕಾಗಿ ಅಥವಾ ಬೆಲೆಯುಳ್ಳ ಪ್ರತಿಫಲಕ್ಕಾಗಿ ವ್ಯಾಪಾರ ಅಥವಾ ವ್ಯವಹಾರ ಕ್ರಮದಲ್ಲಿ ಒಬ್ಬ ವ್ಯಕ್ತಿಯು ಇನ್ನೊಬ್ಬನಿಗೆ ಮಾಡುವ ಸರಕುಗಳಲ್ಲಿ ಸ್ವಾಮ್ಯದ (ಅಡಮಾನ, ಆಧಾರ, ಪ್ರಭಾರ ಅಥವಾ ಒತ್ತೆಯಲ್ಲದ) ಪ್ರತಿಯೊಂದು ವರ್ಗಾವಣೆ ಮತ್ತು ಇದರಲ್ಲಿ,-

(ಎ) ನಗದು, ಮುಂದೂಡಲಾದ ಸಂದಾಯ ಅಥವಾ ಇತರ ಬೆಲೆಯುಳ್ಳ ಪ್ರತಿಫಲಕ್ಕಾಗಿ ಯಾವುವೇ ಸರಕುಗಳಲ್ಲಿ ಸ್ವತ್ತಿನ ಕರಾರಿನ ಅನುಸರಣೆಯಲ್ಲಿ ಅಲ್ಲದ ಇತರ ವರ್ಗಾವಣೆ;

(ಬಿ) ಕಾಮಗಾರಿಗಳ ಕರಾರನ್ನು ನಿರ್ವಹಿಸುವಲ್ಲಿ ಒಳಗೊಂಡ ಸರಕುಗಳಲ್ಲಿ (ಸರಕುಗಳಾಗಿಯೇ ಆಗಲಿ ಅಥವಾ ಯಾವುದೇ ಇತರ ರೂಪದಲ್ಲಿಯೇ ಆಗಲಿ) ಸ್ವತ್ತಿನ ವರ್ಗಾವಣೆ;

(ಸಿ) ಕಂತು ಖರೀದಿ ಅಥವಾ ಕಂತುಗಳ ಮೂಲಕವಾದ ಯಾವುದೇ ಸಂದಾಯ ಪದ್ಧತಿಯ ಮೇರೆಗೆ ಸರಕುಗಳ ಬಟವಾಡೆ;

(ಡಿ) ನಗದು, ಮುಂದೂಡಲಾದ ಸಂದಾಯ ಅಥವಾ ಇತರ ಬೆಲೆಯುಳ್ಳ ಪ್ರತಿಫಲಕ್ಕಾಗಿ ಯಾವುದೇ ಉದ್ದೇಶಕ್ಕಾಗಿ (ನಿರ್ದಿಷ್ಟ ಅವಧಿಗಾಗಿಯಾಗಲೀ ಅಥವಾ ಅಲ್ಲದಿರಲಿ) ಯಾವುವೇ ಸರಕುಗಳ ಉಪಯೋಗದ ಹಕ್ಕಿನ ವರ್ಗಾವಣೆ;

– ಇವುಗಳು ಒಳಗೊಳ್ಳುತ್ತವೆ.

**ವಿವರಣೆ:-** (1) ಒಂದು ಸಂಘದ (ಸಹಕಾರಿ ಸಂಘವೂ ಸೇರಿದಂತೆ), ಕ್ಲಬ್, ಫರ್ಮ್ ಅಥವಾ ಯಾವುದೇ ಅಸೋಸಿಯೇಷನ್ನಿನ ಸದಸ್ಯರುಗಳಿಗೆ ವ್ಯವಹಾರದ ಕ್ರಮದಲ್ಲಿಯೇ ಆಗಲಿ ಅಥವಾ ಅಲ್ಲದಿರಲಿ, ನಗದಿಗಾಗಿ ಅಥವಾ ಮುಂದೂಡಿದ ಸಂದಾಯಕ್ಕಾಗಿ ಅಥವಾ ಇತರ ಬೆಲೆ ಬಾಳುವ ಪ್ರತಿಫಲಕ್ಕಾಗಿ ಮಾಡುವ ಸರಕುಗಳ ಮಾರಾಟ ಅಥವಾ ವಿತರಣೆಯಲ್ಲಿ ಒಳಗೊಂಡಿರುವ ಸ್ವತ್ತಿನ ವರ್ಗಾವಣೆಯನ್ನು ಈ ಅಧಿನಿಯಮದ ಉದ್ದೇಶಗಳಿಗಾಗಿ ಮಾರಾಟವೆಂಬುದಾಗಿ ಭಾವಿಸತಕ್ಕದ್ದು.

(2) ಆಹಾರವಾಗಿರುವ ಅಥವಾ ಮಾನವ ಬಳಕೆಗಾಗಿನ ಯಾವುದೇ ಇತರ ವಸ್ತುವಾದ ಅಥವಾ ಯಾವುದೇ ಪೇಯವಾದ (ಅದು ಮಾದಕವಾಗಿರಲಿ ಅಥವಾ ಅಲ್ಲದಿರಲಿ) ಸರಕುಗಳನ್ನು ಯಾವುದೇ ಸೇವೆಯ ಮೂಲಕ ಅಥವಾ ಅದರ ಒಂದು ಭಾಗದ ಮೂಲಕ ಅಥವಾ ಇತರ ಯಾವುದೇ ರೂಪದಲ್ಲಿನ ಮಾರಾಟದ ಪ್ರತಿಯೊಂದು ವ್ಯವಹಾರವು, ಅಂತಹ ಮಾರಾಟ ಅಥವಾ ಸೇವೆಯು ನಗದಿಗಾಗಿ, ಮುಂದೂಡಿದ ಸಂದಾಯಕ್ಕಾಗಿ ಅಥವಾ ಇತರ ಬೆಲೆಬಾಳುವ ಪ್ರತಿಫಲಕ್ಕಾಗಿ ಇರುವಲ್ಲಿ, ಆ ಸರಕುಗಳನ್ನು ಮಾರಾಟ ಮತ್ತು ಖರೀದಿ ಮಾಡುವ ವ್ಯಕ್ತಿಯಿಂದ ಅಂಥ ಮಾರಾಟವನ್ನು ಯಾರಿಗೆ ಮಾಡಲಾಗಿದೆಯೋ ಆ ವ್ಯಕ್ತಿಗೆ ಮಾಡಿದ ಮಾರಾಟವೆಂದು ಭಾವಿಸತಕ್ಕದ್ದು.

(3) ಈ ಅಧಿನಿಯಮದಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಇದಕ್ಕೆ ವಿರುದ್ಧವಾಗಿ ಏನೇ ಒಳಗೊಂಡಿದ್ದರೂ ಸಹ,-

(ಎ) ಸರಕುಗಳನ್ನು ಪ್ರಧಾನಕರ್ತನಿಂದ ಅವನ ಮಾರಾಟದ ಏಜೆಂಟನಿಗೆ ಮತ್ತು ಮಾರಾಟದ ಏಜೆಂಟನಿಂದ ಖರೀದಿದಾರನಿಗೆ ವರ್ಗಾಯಿಸಿದಾಗ;

(ಬಿ) ಸರಕುಗಳನ್ನು ಮಾರಾಟಗಾರನಿಂದ ಖರೀದಿಸುವ ಏಜೆಂಟನಿಗೆ ಮತ್ತು ಖರೀದಿಸುವ ಏಜೆಂಟನಿಂದ ಅವನ ಪ್ರಧಾನಕರ್ತನಿಗೆ ವರ್ಗಾಯಿಸಿದಾಗ, ಹಿಂದೆ ಹೇಳಿದ ಎರಡರ ಪೈಕಿ ಯಾವುದೇ ಸಂದರ್ಭದಲ್ಲಿ ಏಜೆಂಟನು.-

(i) ಸರಕುಗಳನ್ನು ಒಂದು ದರದಲ್ಲಿ ಮಾರಾಟ ಮಾಡಿದ್ದು ಮಾರಾಟದ ಉತ್ಪತ್ತಿಗಳನ್ನು ಅವನ ಪ್ರಧಾನಕರ್ತನಿಗೆ ಮತ್ತೊಂದು ದರದಲ್ಲಿ ಹಸ್ತಾಂತರ ಮಾಡಿರುವುದಾಗಿ; ಅಥವಾ

(ii) ಸರಕುಗಳನ್ನು ಒಂದು ದರದಲ್ಲಿ ಖರೀದಿಸಿದ್ದು, ಅವುಗಳನ್ನು ಅವನ ಪ್ರಧಾನಕರ್ತನಿಗೆ ಮತ್ತೊಂದು ದರದಲ್ಲಿ ಹಸ್ತಾಂತರ ಮಾಡಿರುವುದಾಗಿ; ಅಥವಾ

(iii) ಅವನ ಪ್ರಧಾನಕರ್ತನ ಪರವಾಗಿ ಅವನು ಮಾಡಿದ ಮಾರಾಟಗಳ ಅಥವಾ ಖರೀದಿಗಳ ಬಗ್ಗೆ ಅವನು ಮಾಡಿದ ಸಂಪೂರ್ಣ ಸಂಗ್ರಹಣೆಗಳು ಅಥವಾ ಕಡಿತಗಳಿಗಾಗಿ ಅವನು ಪ್ರಧಾನಕರ್ತನಿಗೆ ಲೆಕ್ಕ ಸಲ್ಲಿಸದೇ ಇರುವುದಾಗಿ; ಅಥವಾ

(iv) ಕಾಲ್ಪನಿಕ ಅಥವಾ ಅಸ್ತಿತ್ವದಲ್ಲಿಲ್ಲದ ಪ್ರಧಾನಕರ್ತನಿಗಾಗಿ ಕಾರ್ಯ ನಿರ್ವಹಿಸಿರುವುದಾಗಿ

\- ಕಂಡುಬಂದರೆ

ಈ ಅಧಿನಿಯಮದ ಉದ್ದೇಶಗಳಿಗಾಗಿ ಎರಡು ಸ್ವತಂತ್ರ ಮಾರಾಟಗಳು ಅಥವಾ ಖರೀದಿಗಳು ನಡೆದಿರುವುದಾಗಿ ಭಾವಿಸತಕ್ಕದ್ದು.

(4) ಈ ಪ್ರಕರಣದ ಉದ್ದೇಶಗಳಿಗಾಗಿ, ಕೇಂದ್ರ ಸರ್ಕಾರ, ಯಾವುದೇ ರಾಜ್ಯ ಸರ್ಕಾರ, ಶಾಸನಬದ್ಧ ನಿಕಾಯ ಅಥವಾ ಸ್ಥಳೀಯ ಪ್ರಾಧಿಕಾರವು ವ್ಯವಹಾರ ಕ್ರಮದಲ್ಲಿ ಆಗಲಿ ಅಥವಾ ಆಗಿಲ್ಲದಿರಲಿ, ನಗದಿಗಾಗಿ ಅಥವಾ ಮುಂದೂಡಲಾದ ಸಂದಾಯ ಅಥವಾ ಇತರ ಬೆಲೆಬಾಳುವ ಪ್ರತಿಫಲಕ್ಕಾಗಿ ಆದ ಪ್ರತಿಯೊಂದು ಸ್ವತ್ತಿನ ವರ್ಗಾವಣೆಯನ್ನು ಮಾರಾಟವೆಂದು ಭಾವಿಸತಕ್ಕದ್ದು.

(30) **'ರಾಜ್ಯಪ್ರತಿನಿಧಿ'** ಎಂದರೆ, 58ನೇ ಪ್ರಕರಣದ ಅಡಿಯಲ್ಲಿ ರಾಜ್ಯ ಪ್ರತಿನಿಧಿಯಾಗಿರಲು ನೇಮಕಗೊಂಡ ಯಾವೊಬ್ಬ ವ್ಯಕ್ತಿ ಮತ್ತು ರಾಜ್ಯ ಪ್ರತಿನಿಧಿಯ ಪ್ರಕಾರ್ಯಗಳನ್ನು ನೆರವೇರಿಸಲು ಆ ಪ್ರಕರಣದ ಮೇರೆಗೆ ಆಯುಕ್ತನು ಅಧಿಕಾರ ನೀಡಿದ ಅಧಿಕಾರಿಯನ್ನು ಒಳಗೊಳ್ಳುತ್ತದೆ.

(31) **'ತೆರಿಗೆಗೆ ಗುರಿಯಾಗತಕ್ಕ ಮಾರಾಟ'** ಎಂದರೆ, ಈ ಅಧಿನಿಯಮದ ಉಪಬಂಧಗಳ ಅಡಿಯಲ್ಲಿ ತೆರಿಗೆಗೆ ಗುರಿಯಾಗತಕ್ಕ ಸರಕುಗಳ ಯಾವುದೇ ಮಾರಾಟ.

(32) **'ತೆರಿಗೆ ಬೆಲೆಪಟ್ಟಿ'** ಎಂದರೆ, ನಿಯಮಿಸಲಾದಂತೆ, ಮಾರಾಟ ಮಾಡಿದ ಸರಕುಗಳ ದರಗಳೊಡನೆ, ಅವುಗಳ ಪ್ರಮಾಣ ಮತ್ತು ಇತರ ಮಾಹಿತಿಯನ್ನು ಒಳಗೊಂಡ, 29ನೇ ಪ್ರಕರಣದ ಅಡಿಯಲ್ಲಿ ನಿರ್ದಿಷ್ಟಪಡಿಸಲಾದ ಒಂದು ದಸ್ತಾವೇಜು.

(33) **'ತೆರಿಗೆ ಅವಧಿ'** ಎಂದರೆ, ನಿಯಮಿಸಬಹುದಾದ ಅಂಥ ಅವಧಿಗಳು.

(34) **'ತೆರಿಗೆಗೆ ಗುರಿಯಾಗತಕ್ಕ ವಹಿವಾಟು'** ಎಂದರೆ, ಯಾವ ವಹಿವಾಟಿನ ಮೇಲೆ ವ್ಯಾಪಾರಿಯು ತನ್ನ ಒಟ್ಟು ವಹಿವಾಟಿನಿಂದ, ನಿಯಮಿಸಬಹುದಾದ ಅಂಥ ರೀತಿಯಲ್ಲಿ ಅಂಥ ಕಡಿತಗಳನ್ನು ಮಾಡಿದ ತರುವಾಯ ನಿರ್ಧರಿಸಿದಂತೆ ತೆರಿಗೆಯನ್ನು ಸಂದಾಯ ಮಾಡಲು ಹೊಣೆಯಾಗಿರುವನೋ ಆ ವಹಿವಾಟು, ಆದರೆ ಅದು ಅಂತರರಾಜ್ಯ ವ್ಯಾಪಾರ ಅಥವಾ ವಾಣಿಜ್ಯದ ಕ್ರಮದಲ್ಲಿ ಅಥವಾ ಭಾರತ ಸರಹದ್ದುಗಳ ಹೊರಗೆ ಸರಕುಗಳನ್ನು ರಫ್ತು ಮಾಡುವ ಕ್ರಮದಲ್ಲಿ ಅಥವಾ ಭಾರತದ ಸರಹದ್ದುಗಳ ಒಳಗೆ ಸರಕುಗಳನ್ನು ಆಮದು ಮಾಡಿಕೊಳ್ಳುವ ಕ್ರಮದಲ್ಲಿ ಖರೀದಿ ಅಥವಾ ಮಾರಾಟದ ವಹಿವಾಟನ್ನು ಮತ್ತು ಮಾರಾಟದ ಕ್ರಮದಲ್ಲಿಯಲ್ಲದೆ ರಾಜ್ಯದ ಹೊರಗೆ ವರ್ಗಾಯಿಸಿದ ಅಥವಾ ವಿಲೆ ಮಾಡಿದ ಸರಕುಗಳ ಮೌಲ್ಯವನ್ನು ಒಳಗೊಳ್ಳತಕ್ಕದ್ದಲ್ಲ.

(35) **'ಒಟ್ಟು ವಹಿವಾಟು'** ಎಂದರೆ, ಅಂತರರಾಜ್ಯ ವ್ಯಾಪಾರ ಅಥವಾ ವಾಣಿಜ್ಯದ ಕ್ರಮದಲ್ಲಿ ಅಥವಾ ಭಾರತದ ಸರಹದ್ದುಗಳ ಹೊರಗೆ ಸರಕುಗಳನ್ನು ರಫ್ತು ಮಾಡುವ ಕ್ರಮದಲ್ಲಿ ಅಥವಾ ಭಾರತದ ಸರಹದ್ದುಗಳೊಳಗೆ ಸರಕುಗಳನ್ನು ಆಮದು ಮಾಡಿಕೊಳ್ಳುವ ಕ್ರಮದಲ್ಲಿ ಮಾಡಿದ ಖರೀದಿ ಅಥವಾ ಮಾರಾಟದ ವಹಿವಾಟು ಮತ್ತು ಮಾರಾಟದ ಕ್ರಮದಲ್ಲಿಯಲ್ಲದೆ ರಾಜ್ಯದ ಹೊರಗೆ ವರ್ಗಾಯಿಸಿದ ಅಥವಾ ವಿಲೇ ಮಾಡಿದ ಸರಕುಗಳ ಮೌಲ್ಯವನ್ನು ಒಳಗೊಂಡಂತೆ ರಾಜ್ಯದಲ್ಲಿನ ಎಲ್ಲ ವ್ಯವಹಾರಗಳ ಸ್ಥಳಗಳಲ್ಲಿ ವ್ಯಾಪಾರಿಯ ಎಲ್ಲ ಸರಕುಗಳಲ್ಲಿನ ಇಡೀ ವಹಿವಾಟು ಅಥವಾ ಅದರ ಯಾವುದೇ ಭಾಗವು, ತೆರಿಗೆಗೆ ಗುರಿಯಾಗಿರಲಿ ಅಥವಾ ಇಲ್ಲದಿರಲಿ, ಅದರ ಒಟ್ಟು ಮೊಬಲಗು.

(36) **''ವಹಿವಾಟು''** ಎಂದರೆ, ಯಾವ ಒಟ್ಟು ಮೊಬಲಗಿಗಾಗಿ ಸರಕುಗಳನ್ನು ವ್ಯಾಪಾರಿಯು ತನ್ನ ಲೆಕ್ಕದಲ್ಲಿ ಆಗಲಿ ಅಥವಾ ಇತರರ ಲೆಕ್ಕದಲ್ಲಿ ಆಗಲಿ, ನಗದಿಗಾಗಿ ಅಥವಾ ಮುಂದೂಡಲಾದ ಸಂದಾಯಕ್ಕಾಗಿ ಅಥವಾ ಇತರ ಬೆಲೆಯುಳ್ಳ ಪ್ರತಿಫಲಕ್ಕಾಗಿ, ನೇರವಾಗಿಯಾಗಲಿ ಅಥವಾ ಮತ್ತೊಬ್ಬನ ಮೂಲಕವಾಗಲೀ ಮಾರಾಟ ಮಾಡುತ್ತಾನೋ ಅಥವಾ ವಿತರಣೆ ಮಾಡುತ್ತಾನೋ ಅಥವಾ ಬಟವಾಡೆ ಮಾಡುತ್ತಾನೋ ಅಥವಾ (29)ನೇ ಖಂಡದಲ್ಲಿ ಉಲ್ಲೇಖಿಸಿದ ಯಾವುದೇ ರೀತಿಯಲ್ಲಿ ಅನ್ಯಥಾ ವಿಲೆ ಮಾಡುತ್ತಾನೋ ಆ ಒಟ್ಟು ಮೊಬಲಗು ಮತ್ತು ಅದು ಅಧಿನಿಯಮದ ಅಡಿಯಲ್ಲಿ ನೋಂದಾಯಿತನಲ್ಲದ ವ್ಯಕ್ತಿಯಿಂದ ಖರೀದಿಸಿದ ಸರಕುಗಳ ಒಟ್ಟು ಮೊಬಲಗನ್ನು ಮತ್ತು ಮಾರಾಟ ಕ್ರಮದಿಂದ ಅಲ್ಲದೆ ರಾಜ್ಯದ ಹೊರಗೆ ವರ್ಗಾಯಿಸಿದ ಅಥವಾ ವಿಲೆ ಮಾಡಿದ ಸರಕುಗಳ ಮೌಲ್ಯವನ್ನು ಒಳಗೊಳ್ಳುತ್ತದೆ ಮತ್ತು ನಿಯಮಿಸಬಹುದಾದ ಅಂಥ ಷರತ್ತುಗಳು ಮತ್ತು ನಿರ್ಬಂಧಗಳಿಗೆ ಒಳಪಟ್ಟು ಯಾವ ಮೊಬಲಗಿಗೆ ಸರಕುಗಳನ್ನು ಮಾರಾಟ ಮಾಡಲಾಗಿದೆಯೋ ಆ ಮೊಬಲಗು, ಸರಕುಗಳ ಬಟವಾಡೆ ಕಾಲದಲ್ಲಿ ಅಥವಾ ಅದಕ್ಕೆ ಮುಂಚೆ ಅವುಗಳಿಗೆ ಸಂಬಂಧಿಸಿದಂತೆ ವ್ಯಾಪಾರಿಯು ಮಾಡಿದ ಯಾವುದೇ ಕಾರ್ಯಕ್ಕಾಗಿ ವಿಧಿಸಿದ ಯಾವುವೇ ಮೊತ್ತಗಳನ್ನು ಒಳಗೊಳ್ಳತಕ್ಕದ್ದು.

**ವಿವರಣೆ:-** ಮಾರಾಟ ಕ್ರಮದಿಂದ ಅಲ್ಲದೆ ರಾಜ್ಯದ ಹೊರಗೆ ವರ್ಗಾಯಿಸಿದ ಅಥವಾ ವಿಲೆ ಮಾಡಿದ ಸರಕುಗಳ ಮೌಲ್ಯವು, ಸರಕುಗಳನ್ನು ವ್ಯಾಪಾರಿಯು ಸಾಮಾನ್ಯವಾಗಿ ಮಾರಾಟ ಮಾಡಿದ ಅಥವಾ ವ್ಯಾಪಾರಿಯು ಸಾಮಾನ್ಯವಾಗಿ ಮಾರಾಟ ಮಾಡದಿರುವಲ್ಲಿ ಚಾಲ್ತಿಯಲ್ಲಿರುವ ಅಂಥ ಸರಕುಗಳ ಮಾರುಕಟ್ಟೆ ಬೆಲೆಯ ಮೊಬಲಾಗಿರತಕ್ಕದ್ದು.

(37) **'ಕಾಮಗಾರಿಗಳ ಕರಾರು'** ಎಂಬುದು ನಗದು, ಮುಂದೂಡಲಾದ ಸಂದಾಯ ಅಥವಾ ಇತರ ಬೆಲೆಯುಳ್ಳ ಪ್ರತಿಫಲಕ್ಕಾಗಿ ಯಾವುದೇ ಚರ ಅಥವಾ ಸ್ಥಿರ ಸ್ವತ್ತನ್ನು, ಕಟ್ಟುವುದು, ರಚಿಸುವುದು, ತಯಾರಿಸುವುದು, ಸಂಸ್ಕರಿಸುವುದು, ನಿರ್ಮಿಸುವುದು, ನಿಲ್ಲಿಸುವುದು, ಸ್ಥಾಪಿಸುವುದು, ಜೋಡಿಸುವುದು, ಮೇಲ್ಪಾಟು ಮಾಡುವುದು, ಮಾರ್ಪಾಟು ಮಾಡುವುದು, ದುರಸ್ತಿ ಮಾಡುವುದು ಅಥವಾ ಚಾಲನೆಗೆ ತರುವುದನ್ನು ಕಾರ್ಯಗತಗೊಳಿಸುವುದಕ್ಕಾಗಿನ ಯಾವುದೇ ಒಪ್ಪಂದವನ್ನು ಒಳಗೊಳ್ಳುತ್ತದೆ.

(38) **'ವರ್ಷ'** ಎಂದರೆ, ಏಪ್ರಿಲ್ ಒಂದನೇ ದಿನಾಂಕದಂದು ಪ್ರಾರಂಭವಾಗುವ ವರ್ಷ.

## ಅಧ್ಯಾಯ – II

### ತೆರಿಗೆ ಭಾರ ವ್ಯಾಪ್ತಿ ಮತ್ತು ತೆರಿಗೆ ವಿಧಿಸುವಿಕೆ

**3. ತೆರಿಗೆಯ ವಿಧಿಸುವಿಕೆ.-** (1) ಈ ಅಧಿನಿಯಮದ ಉಪಬಂಧಗಳಿಗೆ ಅನುಸಾರವಾಗಿ ಒಬ್ಬ ನೋಂದಾಯಿತ ವ್ಯಾಪಾರಿಯು ಅಥವಾ ನೋಂದಾಯಿತನಾಗಲು ಬದ್ಧನಾದ ವ್ಯಾಪಾರಿಯಿಂದ ರಾಜ್ಯದಲ್ಲಿ ಮಾಡಲಾಗುವ ಸರಕಿನ ಪ್ರತಿಯೊಂದು ಮಾರಾಟದ ಮೇಲೆ ತೆರಿಗೆಯನ್ನು ವಿಧಿಸತಕ್ಕದ್ದು.

(2) ಪ್ರತಿಯೊಬ್ಬ ನೋಂದಾಯಿತನಾದ ವ್ಯಾಪಾರಿ ಅಥವಾ ನೋಂದಾಯಿತನಾಗಲು ಬದ್ಧನಾದ ವ್ಯಾಪಾರಿಯು ಈ ಅಧಿನಿಯಮದ ಅಡಿಯಲ್ಲಿ, ನೋಂದಾಯಿತನಲ್ಲದ ಒಬ್ಬ ವ್ಯಕ್ತಿಯು ಅಂಥ ವ್ಯಾಪಾರಿಗೆ ಅವನ ಮಾರಾಟದ ಕ್ರಮದಲ್ಲಿ ಉಪಯೋಗಕ್ಕಾಗಿ ತೆರಿಗೆಗೆ ಗುರಿಯಾಗತಕ್ಕ ಸರಕುಗಳನ್ನು ಮಾರಾಟ ಮಾಡಿದಾಗ ಅದರ ಮೇಲೆಯೂ ತೆರಿಗೆ ವಿಧಿಸತಕ್ಕದ್ದು ಮತ್ತು ಅಂಥ ವ್ಯಾಪಾರಿಯು ಸಂದಾಯ ಮಾಡತಕ್ಕದ್ದು.

**4. ತೆರಿಗೆ ಬದ್ಧತೆ ಮತ್ತು ಅದರ ದರಗಳು.-** (1) 22 ಮತ್ತು 24ನೇ ಪ್ರಕರಣಗಳಲ್ಲಿ ನಿರ್ದಿಷ್ಟಪಡಿಸಿದಂತೆ ನೋಂದಾಯಿತನಾದ ಅಥವಾ ನೋಂದಾಯಿತನಾಗಲು ಅಗತ್ಯಪಡಿಸಲಾದ ಪ್ರತಿಯೊಬ್ಬ ವ್ಯಾಪಾರಿಯು ತನ್ನ ತೆರಿಗೆಗೆ ಗುರಿಯಾಗತಕ್ಕ ವಹಿವಾಟಿನ ಮೇಲೆ,

(ಎ) ಈ ಮುಂದಿನಂತೆ ಎಂದರೆ,-

(i) ಎರಡನೇ ಅನುಸೂಚಿಯಲ್ಲಿ ನಮೂದಿಸಿದ ಸರಕುಗಳ ಸಂಬಂಧದಲ್ಲಿ ಶೇಕಡಾ ಒಂದರ ದರದಲ್ಲಿ,

[1][(ii) ಮೂರನೇ ಅನುಸೂಚಿಯಲ್ಲಿ ನಮೂದಿಸಿದ ಸರಕುಗಳ ಸಂಬಂಧದಲ್ಲಿ [2][ಶೇಕಡಾ ಐದೂವರೆಯ][2] ದರದಲ್ಲಿ, ಮತ್ತು][1];

1. 2011 ರ ಅಧಿನಿಯಮ ಸಂಖ್ಯೆ 12 ರ ಮೂಲಕ ದಿನಾಂಕ: 01.04.2011 ರಿಂದ ಪ್ರತಿಯೋಜಿಸಲಾಗಿದೆ
2. 2012ರ ಅಧಿನಿಯಮ ಸಂಖ್ಯೆ 27ರ ಮೂಲಕ ದಿನಾಂಕ:01.08.2012ರಿಂದ ಪ್ರತಿಯೋಜಿಸಲಾಗಿದೆ

(iii) ನಾಲ್ಕನೇ ಅನುಸೂಚಿಯಲ್ಲಿ ನಮೂದಿಸಿದ ಸರಕುಗಳ ಸಂಬಂಧದಲ್ಲಿ ಶೇಕಡಾ ಇಪ್ಪತ್ತರ ದರದಲ್ಲಿ

[1][(ಬಿ) ಈ ಮುಂದಿನವುಗಳ ಸಂಬಂಧದಲ್ಲಿ, ಎಂದರೆ:–

(i) ಕೇಂದ್ರ ಮಾರಾಟ ತೆರಿಗೆ ಅಧಿನಿಯಮ, 1956ರ (1956ರ ಕೇಂದ್ರ ಅಧಿನಿಯಮ 74) 14ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದಂತೆ ಘೋಷಿಸಲಾದ ಸರಕುಗಳ ಸಂಬಂಧದಲ್ಲಿ ಸದರಿ ಅಧಿನಿಯಮದ 15ನೇ ಪ್ರಕರಣದ ಅಡಿಯಲ್ಲಿ ಅಂಥ ಸರಕುಗಳಿಗೆ ನಿರ್ದಿಷ್ಟಪಡಿಸಿದ ಗರಿಷ್ಠ ದರದಲ್ಲಿ;

(ii) ಸಿಗರೇಟುಗಳು, ಸಿಗಾರ್‌ಗಳು, ಗುಟ್ಕಾ ಮತ್ತು ಇತರ ತಂಬಾಕು ತಯಾರಿಕೆಗಳ ಸಂಬಂಧದಲ್ಲಿ [2][[3][ಶೇಕಡಾ ಇಪ್ಪತ್ತರ][3]][2]ರ ದರದಲ್ಲಿ;

(iii) ಇತರ ಸರಕುಗಳ ಸಂಬಂಧದಲ್ಲಿ ಶೇಕಡಾ ಹದಿನಾಲ್ಕೂವರೆಯ ದರದಲ್ಲಿ,][1]][3]

1. 2011 ರ ಅಧಿನಿಯಮ ಸಂಖ್ಯೆ 12 ರ ಮೂಲಕ ದಿನಾಂಕ: 01.04.2011 ರಿಂದ ಪ್ರತಿಯೋಜಿಸಲಾಗಿದೆ.
2. 2012ರ ಅಧಿನಿಯಮ 17ರ ಮೂಲಕ ದಿನಾಂಕ: 1.4.2012ರಿಂದ ಪ್ರತಿಯೋಜಿಸಲಾಗಿದೆ.
3. 2015ರ ಅಧಿನಿಯಮ ಸಂಖ್ಯೆ 15ರ ಮೂಲಕ ದಿನಾಂಕ: 01.04.2015ರಿಂದ ಪ್ರತಿಯೋಜಿಸಲಾಗಿದೆ.

[1][(ಸಿ)ಆರನೇ ಅನುಸೂಚಿಯ (2)ನೇ ಅಂಕಣದಲ್ಲಿ ನಿರ್ದಿಷ್ಟಪಡಿಸಿದ ಕಾಮಗಾರಿಗಳನ್ನು ಕಾರ್ಯಗತಗೊಳಿಸುವಾಗ ಒಳಗೊಂಡ, ಸರಕುಗಳ ಸ್ವತ್ತು ವರ್ಗಾವಣೆಯ ಸಂಬಂಧದಲ್ಲಿ (ಸರಕುಗಳ ರೂಪದಲ್ಲಿ ಅಥವಾ ಇನ್ನಾವುದೇ ರೂಪದಲ್ಲಿ), ಕೇಂದ್ರ ಮಾರಾಟ ತೆರಿಗೆ ಅಧಿನಿಯಮ, 1956ರ (1956ರ ಕೇಂದ್ರ ಅಧಿನಿಯಮ, 74) 14

ಮತ್ತು 15ನೇ ಪ್ರಕರಣಗಳಿಗೆ ಒಳಪಟ್ಟು, ಸದರಿ ಅನುಸೂಚಿಯ (3)ನೇ ಅಂಕಣದಲ್ಲಿಯ ಸಂವಾದಿ ನಮೂದುಗಳಲ್ಲಿ ನಿರ್ದಿಷ್ಟಪಡಿಸಿದ ದರದಲ್ಲಿ.][1]

1. 2006ರ ಅಧಿನಿಯಮ 4 ರ ಮೂಲಕ ದಿನಾಂಕ: 1.4.2006 ರಿಂದ ಸೇರಿಸಲಾಗಿದೆ.

[1][ಪರಂತು, ಕೇಂದ್ರ ಮಾರಾಟ ತೆರಿಗೆ ಅಧಿನಿಯಮ, 1956ರ (1956ರ ಕೇಂದ್ರ ಅಧಿನಿಯಮ 74) 14ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಲಾದಂತೆ ಘೋಷಿಸಲಾದ ಸರಕುಗಳ ಸಂಬಂಧದಲ್ಲಿ ತೆರಿಗೆಯ ದರವು 2011ರ ಏಪ್ರಿಲ್ ಎಂಟನೇ ದಿನಾಂಕದಿಂದ 2011ರ ಏಪ್ರಿಲ್ ಹನ್ನೊಂದನೇ ದಿನಾಂಕದವರೆಗೆ ಶೇಕಡಾ ನಾಲ್ಕರಷ್ಟು ಇರತಕ್ಕದ್ದು.][1]

1. 2012ರ ಅಧಿನಿಯಮ 17ರ ಮೂಲಕ ದಿನಾಂಕ: 1.4.2012ರಿಂದ ಸೇರಿಸಲಾಗಿದೆ.

(2) ಮಾರಾಟ ಮಾಡಲಾದ ಅಥವಾ ಖರೀದಿಸಲಾದ ಸರಕುಗಳು, ಈ ಅಧಿನಿಯಮದ ಅಡಿಯಲ್ಲಿ ತೆರಿಗೆಗೆ ಬದ್ಧವಾದ ಕಂಟೇನರ್‌ಗಳಲ್ಲಿ ಒಳಗೊಂಡಿದ್ದಲ್ಲಿ ಅಥವಾ ಪ್ಯಾಕಿಂಗ್ ಸಾಮಗ್ರಿಗಳಲ್ಲಿ ಪ್ಯಾಕ್ ಮಾಡಲಾಗಿದ್ದಲ್ಲಿ, ಅಂಥ ಕಂಟೇನರ್‌ಗಳ ಅಥವಾ ಪ್ಯಾಕಿಂಗ್ ಸಾಮಗ್ರಿಗಳ ಸಂಬಂಧದಲ್ಲಿ ತೆರಿಗೆಗೆ ಗುರಿಯಾಗತಕ್ಕ ವಹಿವಾಟಿಗೆ ಅನ್ವಯವಾಗುವ ತೆರಿಗೆಯ ದರವು, ಕಂಟೇನರ್‌ಗಳಿಗೆ ಅಥವಾ ಪ್ಯಾಕಿಂಗ್ ಸಾಮಗ್ರಿಗಳಿಗೆ ಬೆಲೆಯನ್ನು ಪ್ರತ್ಯೇಕವಾಗಿ ವಿಧಿಸಿರಲಿ ಅಥವಾ ವಿಧಿಸಿರದಿರಲಿ, ಹಾಗೆ ಒಳಗೊಂಡ ಅಥವಾ ಪ್ಯಾಕ್ ಮಾಡಲಾದ ಅಂಥ ಸರಕುಗಳಿಗೆ ಅನ್ವಯವಾಗುವ ತೆರಿಗೆಯ ದರಕ್ಕೆ ಸಮನಾಗಿರತಕ್ಕದ್ದು, ಮತ್ತು ಮಾರಾಟ ಮಾಡಿದ ಅಥವಾ ಖರೀದಿಸಿದ ಈ ಅಂಥ ಸರಕುಗಳು ಅಧಿನಿಯಮದ ಅಡಿಯಲ್ಲಿ ತೆರಿಗೆಯಿಂದ ವಿನಾಯಿತಿಸಲ್ಪಟ್ಟಿದ್ದರೆ, ಕಂಟೇನರ್ ಅಥವಾ ಪ್ಯಾಕಿಂಗ್ ಸಾಮಗ್ರಿಗಳು ಸಹ ವಿನಾಯಿತಿಸಲ್ಪಡತಕ್ಕದ್ದು.

(3) ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ, [1][ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ನಿರ್ಬಂಧಗಳು ಮತ್ತು ಷರತ್ತುಗಳಿಗೆ ಒಳಪಟ್ಟು][1] ಯಾವುವೇ ಸರಕುಗಳ ಸಂಬಂಧದಲ್ಲಿ (1)ನೇ ಉಪ ಪ್ರಕರಣದ ಅಡಿಯಲ್ಲಿ ಸಂದಾಯ ಮಾಡಬೇಕಾದ ತೆರಿಗೆಯನ್ನು ಕಡಿಮೆ ಮಾಡಬಹುದು.

1. 2006ರ ಅಧಿನಿಯಮ 4 ರ ಮೂಲಕ ದಿನಾಂಕ: 1.4.2006 ರಿಂದ ಸೇರಿಸಲಾಗಿದೆ.

[1][(3-ಎ) (3)ನೇ ಉಪ-ಪ್ರಕರಣದ ಅಡಿಯಲ್ಲಿ ಹೊರಡಿಸಿದ ಯಾವುದೇ ಅಧಿಸೂಚನೆಯು, ಈ ಅಧಿನಿಯಮಕ್ಕೆ ತಿದ್ದುಪಡಿಯನ್ನು ಮಾಡುವ ಮೂಲಕ ನಿರ್ದಿಷ್ಟಪಡಿಸಿದ ಯಾವುವೇ ಸರಕುಗಳ ಸಂಬಂಧದಲ್ಲಿ ಸಂದಾಯ ಮಾಡತಕ್ಕ ತೆರಿಗೆಯನ್ನು ಮಾರ್ಪಾಡು ಮಾಡಿದಾಗ್ಯೂ, ಅದನ್ನು ರದ್ದುಗೊಳಿಸುವವರೆಗೆ ಅಥವಾ ಮಾರ್ಪಾಡುಗೊಳಿಸುವವರೆಗೆ ಸಿಂಧುವಾಗಿರತಕ್ಕದ್ದು.] [1]

1. 2010ರ ಅಧಿನಿಯಮ ಸಂಖ್ಯೆ 4 ರ ಮೂಲಕ ದಿನಾಂಕ: 01.04.2010 ರಿಂದ ಪ್ರತಿಯೋಜಿಸಲಾಗಿದೆ

[1][(4) (1)ನೇ ಉಪಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ನಿಯಮಿಸಬಹುದಾದಂಥ ಷರತ್ತುಗಳಿಗೆ ಒಳಪಟ್ಟು, ಪ್ರತಿಯೊಬ್ಬ ವ್ಯಾಪಾರಿಯು, [3][ಯಾವುದೇ ಸರಕುಗಳ ಅಥವಾ][3] ಮೂರನೇ ಅನುಸೂಚಿಯ 60ನೇ ಕ್ರಮ ಸಂಖ್ಯೆಯಲ್ಲಿ ನಿರ್ದಿಷ್ಟಪಡಿಸಿದ ಸರಕುಗಳ ಮೇಲಿನ ತೆರಿಗೆಯನ್ನು, ಕಂಟೇನರ್‌ನ ಅಥವಾ ಅದರ ಪ್ಯಾಕಿನ ಲೇಬಲ್ ಮೇಲೆ ಸೂಚಿಸಲಾದ ಗರಿಷ್ಠ ಚಿಲ್ಲರೆ ಬೆಲೆಯ ಮೇಲೆ [2][ಅಥವಾ ಸಂದಾಯವಾಗತಕ್ಕ ತೆರಿಗೆಗೆ ಸಮನಾದ ಮೊಬಲಗನ್ನು ಕಡಿತಗೊಳಿಸಿದಂಥ ಗರಿಷ್ಠ ಚಿಲ್ಲರೆ ಬೆಲೆಯ ಮೇಲೆ] [2] ಸಂದಾಯ ಮಾಡಲು ಆಯ್ಕೆ ಮಾಡಿಕೊಂಡರೆ, ಹಾಗೆ ಸಂದಾಯ ಮಾಡಬಹುದು.][1]

1. 2005ರ ಅಧಿನಿಯಮ ಸಂಖ್ಯೆ 27 ರ ಮೂಲಕ ದಿನಾಂಕ: 1.4.2005 ರಿಂದ ಸೇರಿಸಲಾಗಿದೆ.
2. 2007ರ ಅಧಿನಿಯಮ 6 ರ ಮೂಲಕ ದಿನಾಂಕ: 1.4.2007 ರಿಂದ ಸೇರಿಸಲಾಗಿದೆ.
3. 2010 ರ ಅಧಿನಿಯಮ ಸಂಖ್ಯೆ 4 ರ ಮೂಲಕ ದಿನಾಂಕ: 01.04.2010 ರಿಂದ ಪ್ರತಿಯೋಜಿಸಲಾಗಿದೆ.

[1][(5) (1)ನೇ ಉಪ-ಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ಒಬ್ಬ ನೋಂದಾಯಿತ ವ್ಯಾಪಾರಿಯು ಸಿಗರೇಟುಗಳು, ಸಿಗಾರಗಳು, ಗುಟ್ಕಾ ಮತ್ತು ಇತರ ತಂಬಾಕು ತಯಾರಿಕೆಗಳ ಮಾರಾಟದ ಮೇಲೆ, ಅವುಗಳ ಧಾರಕ ಅಥವಾ ಅವುಗಳ ಪ್ಯಾಕ್‌ಗಳ ಮೇಲಿರುವ ಲೇಬಲಿನಲ್ಲಿ ನಮೂದಿಸಿದ ಗರಿಷ್ಠ ಚಿಲ್ಲರೆ ಬೆಲೆಯ ಮೇಲೆ, ಅಂಥ ಗರಿಷ್ಠ ಚಿಲ್ಲರೆ ಬೆಲೆಯಲ್ಲಿ ಸಂದಾಯ ಮಾಡತಕ್ಕ ತೆರಿಗೆಗೆ ಸಮನಾದ ಮೊತ್ತವನ್ನು ಕಡಿತಗೊಳಿಸಿದ ತರುವಾಯ, ಅಂಥ ಸರಕುಗಳ ಮಾರಾಟಕ್ಕಾಗಿನ ಪ್ರತಿಫಲವಾಗಿ ವ್ಯಾಪಾರಿಗೆ ಸಂದಾಯ ಮಾಡತಕ್ಕ ಒಟ್ಟು ಮೊಬಲಗು ಐದು ನೂರು ರೂಪಾಯಿಗಳು ಅಥವಾ ಆಯುಕ್ತರು ಅಧಿಸೂಚಿಸಬಹುದಾದಂತೆ ಯಾವುದೇ ಹೆಚ್ಚಿನ ಮೊಬಲಗನ್ನು ಮೀರಿದ್ದಲ್ಲಿ, ತೆರಿಗೆಯನ್ನು ಸಂದಾಯ ಮಾಡಲು ಬದ್ಧನಾಗಿರತಕ್ಕದ್ದು.

(6) ಆತನು ಖರೀದಿಸಿದ ಸರಕುಗಳ ಸಂಬಂಧದಲ್ಲಿ (5)ನೇ ಉಪ-ಪ್ರಕರಣದ ಅನುಸಾರವಾಗಿ ತೆರಿಗೆಯನ್ನು ಸಂಗ್ರಹಿಸಿದ್ದಲ್ಲಿ,-

(ಎ) ಯಾವ ನೋಂದಾಯಿತ ವ್ಯಾಪಾರಿಯ ಅಂಥ ಸರಕುಗಳ ಮಾರಾಟವು (5)ನೇ ಉಪ-ಪ್ರಕರಣದ ಅಡಿಯಲ್ಲಿ ತೆರಿಗೆಗೆ ಬದ್ಧವಾಗಿಲ್ಲವೋ ಆ ವ್ಯಾಪಾರಿಯು, ಅಂಥ ಸರಕುಗಳ ಮಾರಾಟಕ್ಕೆ ಸಂಬಂಧಿಸಿದಂತೆ, ಆತನ ವಹಿವಾಟಿನ ಮೇಲೆ ಸಂದಾಯ ಮಾಡಬೇಕಾದ ತೆರಿಗೆಗಿಂತ ಹೆಚ್ಚಾಗಿ, ಆತನ ಖರೀದಿಯ ಮೇಲೆ ಸಂಗ್ರಹಿಸಿದ ತೆರಿಗೆಯ ಯಾವುದೇ ಮೊಬಲಗಿನ ಮರುಪಾವತಿಗಾಗಿ ಅಥವಾ ಹೊಂದಾಣಿಕೆಗಾಗಿ ಅರ್ಹನಾಗಿರತಕ್ಕದ್ದು ಮತ್ತು ಸದರಿ ಉಪ-ಪ್ರಕರಣದ ಅನುಸಾರವಾಗಿ ತೆರಿಗೆಯನ್ನು ಸಂಗ್ರಹಿಸಲಾಗಿದೆ ಎಂದು ಮತ್ತು ಸಂದಾಯ ಮಾಡಲಾಗಿದೆ ಎಂದು ರುಜುವಾತು ಪಡಿಸುವ ಭಾರವು ಅಂಥ ವ್ಯಾಪಾರಿಯ ಮೇಲೆ ಇರತಕ್ಕದ್ದು;

(ಬಿ) ಅಧಿನಿಯಮದಡಿಯಲ್ಲಿ ನೋಂದಾಯಿತನಾಗಲು ಬದ್ಧನಾದ ವ್ಯಾಪಾರಿಯಲ್ಲದ ಒಬ್ಬ ವ್ಯಕ್ತಿಯು, ನಿಯಮಿಸಬಹುದಾದಂಥ ವಿಧಾನದಲ್ಲಿ ಮತ್ತು ಅಂಥ ಷರತ್ತುಗಳಿಗೊಳಪಟ್ಟು, ಅಂಥ ಮಾರಾಟ ಮಾಡುವ ವ್ಯಾಪಾರಿಗೆ ತಾನು ಸಂದಾಯ ಮಾಡಿದ ಪ್ರತಿಫಲದ ಮೇಲೆ ಸಂದಾಯ ಮಾಡಬೇಕಾದ ತೆರಿಗೆಗಿಂತ ಹೆಚ್ಚಿಗೆಯಾಗಿ ಅಂಥ ವ್ಯಾಪಾರಿಯು ಸಂದಾಯ ಮಾಡಿದ ಯಾವುದೇ ಮೊಬಲಗಿನ ಮರುಪಾವತಿಗಾಗಿ ಕ್ಲೇಮು ಮಾಡಬಹುದು.][1]

1. 2010 ರ ಅಧಿನಿಯಮ ಸಂಖ್ಯೆ 4 ರ ಮೂಲಕ ದಿನಾಂಕ: 01.04.2010 ರಿಂದ ಸೇರಿಸಲಾಗಿದೆ.

**5. ತೆರಿಗೆ ವಿನಾಯಿತಿ.-** [1][(1)][1] ಒಂದನೇ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಸರಕುಗಳನ್ನು ಅಥವಾ ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದ ಯಾವುವೇ ಇತರ ಸರಕುಗಳನ್ನು, [2][ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ನಿರ್ಬಂಧಗಳು ಮತ್ತು ಷರತ್ತುಗಳಿಗೆ ಒಳಪಟ್ಟು][2] ಈ ಅಧಿನಿಯಮದ ಅಡಿಯಲ್ಲಿ ಸಂದಾಯ ಮಾಡಬೇಕಾದ ತೆರಿಗೆಯಿಂದ ವಿನಾಯಿತಿಗೊಳಿಸತಕ್ಕದ್ದು.

1. 2005 ರ ಅಧಿನಿಯಮ ಸಂಖ್ಯೆ 11 ರ ಮೂಲಕ ದಿನಾಂಕ: 1.4.2005 ರಿಂದ ಮರು ಸಂಖ್ಯೆ ನೀಡಿದೆ.
2. 2006ರ ಅಧಿನಿಯಮ 4 ರ ಮೂಲಕ ದಿನಾಂಕ: 11.3.2005 ರಿಂದ ಸೇರಿಸಲಾಗಿದೆ.

[1][(1-ಎ) (1)ನೇ ಉಪ-ಪ್ರಕರಣದ ಅಡಿಯಲ್ಲಿ ಹೊರಡಿಸಿದ ಯಾವುದೇ ಅಧಿಸೂಚನೆಯು, ಈ ಅಧಿನಿಯಮಕ್ಕೆ ತಿದ್ದುಪಡಿಯನ್ನು ಮಾಡುವ ಮೂಲಕ ನಿರ್ದಿಷ್ಟಪಡಿಸಿದ ಯಾವುವೇ ಸರಕುಗಳ ಸಂಬಂಧದಲ್ಲಿ ಸಂದಾಯ ಮಾಡತಕ್ಕ ತೆರಿಗೆಯನ್ನು ಮಾರ್ಪಾಡು ಮಾಡಿದಾಗ್ಯೂ, ಅದನ್ನು ರದ್ದುಗೊಳಿಸುವವರೆಗೆ ಅಥವಾ ಮಾರ್ಪಾಡುಗೊಳಿಸುವವರೆಗೆ ಸಿಂಧುವಾಗಿರತಕ್ಕದ್ದು.][1]

1. 2010 ರ ಅಧಿನಿಯಮ ಸಂಖ್ಯೆ 4 ರ ಮೂಲಕ ದಿನಾಂಕ: 01.04.2010 ರಿಂದ ಸೇರಿಸಲಾಗಿದೆ.

[1][(2)ಈ ಅಧಿನಿಯಮದಲ್ಲಿ ಏನೇ ಇದ್ದರೂ, ಸರ್ಕಾರವು, ನಿರ್ದಿಷ್ಟಪಡಿಸಬಹುದಾದಂಥ ಸನ್ನಿವೇಶಗಳು ಹಾಗೂ ಅಂಥ ಷರತ್ತುಗಳಿಗೆ ಒಳಪಟ್ಟು, ಅಧಿಸೂಚನೆಯ ಮೂಲಕ, ಮತ್ತು ನಿಯಮಿಸಬಹುದಾದಂಥ ನಿಯಮಗಳಿಗೊಳಪಟ್ಟು, ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮ, 1957ರ (1957ರ ಕರ್ನಾಟಕ ಅಧಿನಿಯಮ 25) ಉಪಬಂಧಗಳ ಅಡಿಯಲ್ಲಿ ಸರ್ಕಾರವು ಈಗಾಗಲೇ ತೆರಿಗೆ ವಿನಾಯಿತಿಯನ್ನು ಅಧಿಸೂಚಿಸಿರುವ ಸಂಬಂಧದಲ್ಲಿ ಹೊಸ ಕೈಗಾರಿಕಾ ಘಟಕಗಳಿಗೆ ಅಥವಾ ಘಟಕಗಳ ಮೂಲಕ ಮಾರಾಟ ಮಾಡಿದ ಸರಕುಗಳ ಮೇಲೆ ಯಾವುದೇ ಅವಧಿಗಾಗಿ ಸಂದಾಯ ಮಾಡಬೇಕಾದ ತೆರಿಗೆಯನ್ನು ಪೂರ್ಣವಾಗಿ ಅಥವಾ ಅದರ ಯಾವುದೇ ಭಾಗವನ್ನು ವಿನಾಯಿತಿಗೊಳಿಸಬಹುದು ಮತ್ತು ಖರೀದಿ ಅಥವಾ ಮಾರಾಟದ ಮೇಲಿನ ಅಂಥ ವಿನಾಯಿತಿಯು ಅಂಥ ಕೈಗಾರಿಕಾ ಘಟಕವು ಮಾಡಿದ ಖರೀದಿ ಅಥವಾ ಮಾರಾಟದ ಮೇಲೆ ಸಂಗ್ರಹಿಸಿದ ತೆರಿಗೆಯನ್ನು ಹಿಂದಿರುಗಿಸುವ ಮೂಲಕವಾಗಿರತಕ್ಕದ್ದು.][1]

1. 2005 ರ ಅಧಿನಿಯಮ ಸಂಖ್ಯೆ 11 ರ ಮೂಲಕ ದಿನಾಂಕ: 1.4.2005 ರಿಂದ ಸೇರಿಸಲಾಗಿದೆ.

**6.ಸರಕುಗಳ ಮಾರಾಟದ ಸ್ಥಳ.-** (1) ಅಂತರ ರಾಜ್ಯ ವ್ಯಾಪಾರ ಅಥವಾ ವಾಣಿಜ್ಯ ಕ್ರಮದಲ್ಲಿ ಅಥವಾ ಆಮದು ಅಥವಾ ರಫ್ತಿನ ಕ್ರಮದಲ್ಲಿ ಹೊರತುಪಡಿಸಿ, ಸರಕುಗಳ ಮಾರಾಟ ಅಥವಾ ಖರೀದಿಯನ್ನು, ಮಾರಾಟ ಅಥವಾ ಖರೀದಿ ಕರಾರು ಮಾಡಿಕೊಂಡ ಸ್ಥಳ ಯಾವುದೇ ಇದ್ದರೂ,

(ಎ) ಮಾರಾಟ ಅಥವಾ ಖರೀದಿಯ ಕರಾರಿನ ಸಮಯದಲ್ಲಿ ನಿರ್ದಿಷ್ಟ ಅಥವಾ ನಿಶ್ಚಿತ ಸರಕುಗಳ ಸಂದರ್ಭದಲ್ಲಿ, ಮತ್ತು

(ಬಿ) ಮಾರಾಟಗಾರನಿಂದ ಅಥವಾ ಖರೀದಿದಾರನಿಂದ ಮಾರಾಟ ಅಥವಾ ಖರೀದಿ ಕರಾರಿನ ವಿನಿಯೋಗದ ಸಮಯದಲ್ಲಿ, ಅನ್ಯ ಪಕ್ಷಕಾರನ ಒಪ್ಪಿಗೆಯನ್ನು ನಿಶ್ಚತವಲ್ಲದ ಅಥವಾ ಮುಂಬರುವ ಸರಕುಗಳ ಸಂದರ್ಭದಲ್ಲಿ, ಅಂಥ ವಿನಿಯೋಗದ ಪೂರ್ವದಲ್ಲಿ ಅಥವಾ ತದನಂತರದಲ್ಲಿ ನೀಡಿರಲಿ

– ಈ ಅಧಿನಿಯಮದ ಉದ್ದೇಶಗಳಿಗಾಗಿ, ಸರಕುಗಳು ರಾಜ್ಯದ ಒಳಗಡೆ ಇದ್ದಲ್ಲಿ ರಾಜ್ಯದಲ್ಲಿ ಮಾಡಿದ ಮಾರಾಟ ಅಥವಾ ಖರೀದಿ ಎಂದು ಭಾವಿಸತಕ್ಕದ್ದು.

(2) ಒಂದಕ್ಕಿಂತ ಹೆಚ್ಚು ಸ್ಥಳಗಳಲ್ಲಿ ಇರುವ ಸರಕುಗಳ ಮಾರಾಟ ಅಥವಾ ಖರೀದಿ ಕರಾರು ಒಂದೇ ಆಗಿದ್ದಲ್ಲಿ, (ಎ) ಖಂಡದ ಉಪಬಂಧಗಳನ್ನು ಅಂಥ ಪ್ರತಿಯೊಂದು ಸ್ಥಳಗಳಲ್ಲಿಯ ಸರಕುಗಳ ಸಂಬಂಧದಲ್ಲಿ ಪ್ರತ್ಯೇಕ ಕರಾರುಗಳು ಇದ್ದರೆ ಹೇಗೋ ಹಾಗೆ ಅನ್ವಯಿಸತಕ್ಕದ್ದು.

(3) ಸರಕುಗಳ ಮಾರಾಟ ಅಧಿನಿಯಮ, 1930 ರಲ್ಲಿ (1930ರ ಕೇಂದ್ರ ಅಧಿನಿಯಮ 3) ಏನೇ ಒಳಗೊಂಡಿದ್ದಾಗ್ಯೂ, ಈ ಅಧಿನಿಯಮದ ಉದ್ದೇಶಕ್ಕಾಗಿ, ಕಾಮಗಾರಿಗಳ ಕರಾರನ್ನು ಜಾರಿಗೊಳಿಸುವಲ್ಲಿ ಒಳಗೊಂಡ ಸರಕುಗಳ ಸ್ವತ್ತಿನ ವರ್ಗಾವಣೆಯನ್ನು (ಸರಕುಗಳಂತೆಯೇ ಆಗಲಿ ಅಥವಾ ಇತರ ರೂಪದಲ್ಲಿಯೇ ಆಗಲಿ), ಅಂಥ ವರ್ಗಾವಣೆಯ ಸಮಯದಲ್ಲಿ ಸರಕುಗಳು ರಾಜ್ಯದ ಒಳಗೆ ಇದ್ದಲ್ಲಿ, ಕಾಮಗಾರಿಗಳ ಕರಾರಿನ ಒಪ್ಪಂದವನ್ನು ಮಾಡಿಕೊಂಡ ಸ್ಥಳ ಯಾವುದಾಗಿದ್ದರೂ, ಇನ್ನೊಬ್ಬ ಪಕ್ಷಕಾರನ ಒಪ್ಪಿಗೆಯನ್ನು ಅಂಥ ವರ್ಗಾವಣೆಯ ಮೊದಲು ಅಥವಾ ತದನಂತರ ನೀಡಲಾಗಿದ್ದರೂ ರಾಜ್ಯದಲ್ಲಿ ಕೈಗೊಳ್ಳಲಾಗಿದೆ ಎಂದು ಭಾವಿಸತಕ್ಕದ್ದು.

(4) ಸರಕುಗಳ ಮಾರಾಟ ಅಧಿನಿಯಮ, 1930 ರಲ್ಲಿ (1930ರ ಕೇಂದ್ರ ಅಧಿನಿಯಮ 3) ಏನೇ ಒಳಗೊಂಡಿದ್ದಾಗ್ಯೂ, ಈ ಅಧಿನಿಯಮದ ಉದ್ದೇಶಕ್ಕಾಗಿ, ಯಾವುದೇ ಉದ್ದೇಶಕ್ಕಾಗಿ ಯಾವುವೇ ಸರಕುಗಳನ್ನು ಉಪಯೋಗಿಸುವ ಹಕ್ಕಿನ ವರ್ಗಾವಣೆಯನ್ನು (ನಿರ್ದಿಷ್ಟಪಡಿಸಿದ ಅವಧಿಗಾಗಿರಲಿ ಅಥವಾ ಇಲ್ಲದಿರಲಿ) ಸರಕುಗಳ ಉಪಯೋಗದ ಹಕ್ಕಿನ ವರ್ಗಾವಣೆಯ ಕರಾರು ಮಾಡಿಕೊಂಡ ಸ್ಥಳ ಯಾವುದಾಗಿದ್ದರೂ, ಅಂಥ ಸರಕುಗಳು ರಾಜ್ಯದ ಒಳಗೆ ಉಪಯೋಗಕ್ಕಾಗಿ ಇದ್ದರೆ, ರಾಜ್ಯದಲ್ಲಿ ಕೈಗೊಳ್ಳಲಾಗಿದೆ ಎಂದು ಭಾವಿಸತಕ್ಕದ್ದು.

**7. ಸರಕುಗಳ ಮಾರಾಟದ ಸಮಯ.**– (1) ಸರಕುಗಳ ಮಾರಾಟ ಅಧಿನಿಯಮ, 1930 ರಲ್ಲಿ (1930ರ ಕೇಂದ್ರ ಅಧಿನಿಯಮ 3) ಏನೇ ಒಳಗೊಂಡಿದ್ದಾಗ್ಯೂ, ಈ ಅಧಿನಿಯಮದ ಉದ್ದೇಶಕ್ಕಾಗಿ, ಮತ್ತು (2)ನೇ ಉಪ ಪ್ರಕರಣಕ್ಕೊಳಪಟ್ಟು, ಯಾವುದೇ ಕಾಮಗಾರಿಯ ಕರಾರನ್ನು ಜಾರಿಗೊಳಿಸುವ ಕ್ರಮದಲ್ಲಿ ಸಂದಾಯವನ್ನು ಸ್ವೀಕರಿಸಿರಲಿ ಅಥವಾ ಇಲ್ಲದಿರಲಿ, ಸರಕುಗಳ ಮಾರಾಟವು ಸರಕುಗಳ ಸ್ವಾಮ್ಯದ ಅಥವಾ ಸ್ವಾಧೀನತೆಯ ವರ್ಗಾವಣೆಯ ಅಥವಾ ಸೇರ್ಪಡೆಯ ಸಮಯದಲ್ಲಿ ಕೈಗೊಳ್ಳಲಾಗಿದೆ ಎಂದು ಭಾವಿಸತಕ್ಕದ್ದು:

ಪರಂತು, ಅಂಥ ಮಾರಾಟದ ಸಂಬಂಧದಲ್ಲಿ ವ್ಯಾಪಾರಿಯು ಮಾರಾಟದ ದಿನಾಂಕದಿಂದ ಹದಿನಾಲ್ಕು ದಿನಗಳೊಳಗೆ ತೆರಿಗೆ ಬೆಲೆ ಪಟ್ಟಿಯನ್ನು ನೀಡಿದಾಗ, ಬೆಲೆಪಟ್ಟಿಯನ್ನು ನೀಡಿದ ಸಮಯದಲ್ಲಿ ಮಾರಾಟವಾಗಿದೆಯೆಂದು ಭಾವಿಸತಕ್ಕದ್ದು.

(2) ಮೇಲಿನ (1)ನೇ ಉಪ ಪ್ರಕರಣದಲ್ಲಿ, ಅನ್ವಯವಾಗುವ ಸಮಯಕ್ಕೆ ಮೊದಲು ಸರಕುಗಳನ್ನು ಮಾರಾಟ ಮಾಡುವ ವ್ಯಾಪಾರಿಯು ಅಂಥ ಮಾರಾಟಕ್ಕೆ ಸಂಬಂಧಪಟ್ಟಂತೆ ತೆರಿಗೆ ಬೆಲೆಪಟ್ಟಿಯನ್ನು ನೀಡಿದಲ್ಲಿ ಅಥವಾ ಅಂಥ ಮಾರಾಟದ ಸಂಬಂಧದಲ್ಲಿ ಸಂದಾಯವನ್ನು ಸ್ವೀಕರಿಸಿದಲ್ಲಿ, ಮಾರಾಟವು ಬೆಲೆಪಟ್ಟಿಗೆ ಅಥವಾ ಸಂದಾಯಕ್ಕೆ ಒಳಪಟ್ಟಿರುವಷ್ಟರ ಮಟ್ಟಿಗೆ ಬೆಲೆಪಟ್ಟಿಯನ್ನು ನೀಡಿದ ಸಮಯದಲ್ಲಿ ಅಥವಾ ಸಂದಾಯವನ್ನು ಸ್ವೀಕರಿಸಿದ ಸಮಯದಲ್ಲಿ ನಡೆದಿದೆಯೆಂದು ಭಾವಿಸತಕ್ಕದ್ದು.

(3) ಆಯುಕ್ತನು, ಯಾವೊಬ್ಬ ವ್ಯಾಪಾರಿಯು ಅರ್ಜಿಯನ್ನು ಸಲ್ಲಿಸಿದಾಗ ನಿರ್ದಿಷ್ಟಪಡಿಸಬಹುದಾದ ಷರತ್ತುಗಳಿಗೆ ಒಳಪಟ್ಟು, (1)ನೇ ಉಪ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಸಮಯದಿಂದ ಅಂಥ ವ್ಯಾಪಾರಿಯನ್ನು ವಿನಾಯಿತಿಗೊಳಿಸಬಹುದು.

**8. ತೆರಿಗೆಯನ್ನು ಸಂದಾಯ ಮಾಡಲು ಬದ್ಧರಾಗಿರುವ ಏಜೆಂಟರು.**– (1) ಈ ಅಧಿನಿಯಮವು ಒಳಗೊಂಡಂತೆ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ಏನೇ ಒಳಗೊಂಡಿದ್ದಾಗ್ಯೂ, ಒಪ್ಪಿಕೊಂಡ ಕಮಿಷನ್ ಅಥವಾ ದಳ್ಳಾಳಿಗಾಗಿ, ರಾಜ್ಯದ ನಿವಾಸಿಯಾದ ಯಾವೊಬ್ಬ ಪ್ರಧಾನಕರ್ತನ ಪರವಾಗಿ ಖರೀದಿಸುವ ಅಥವಾ ಮಾರಾಟ ಮಾಡುವ ಪ್ರತಿಯೊಬ್ಬ ವ್ಯಕ್ತಿಯು, ಪ್ರಧಾನಕರ್ತನು ವ್ಯಾಪಾರಿಯಲ್ಲದಿದ್ದಾಗ್ಯೂ ಅಥವಾ ಅಂಥ ಪ್ರಧಾನಕರ್ತನಿಗೆ ಸಂಬಂಧಪಟ್ಟ

ಮಾರಾಟ ಅಥವಾ ಖರೀದಿಯ ವಹಿವಾಟು 22ನೇ ಪ್ರಕರಣದ (1), (2) ಮತ್ತು (3)ನೇ ಉಪ ಪ್ರಕರಣಗಳಲ್ಲಿ ನಿರ್ದಿಷ್ಟಪಡಿಸಿದ ಕನಿಷ್ಟಕ್ಕಿಂತ ಕಡಿಮೆ ಇದ್ದಾಗ್ಯೂ, ಅಂಥ ಖರೀದಿ ಅಥವಾ ಮಾರಾಟಕ್ಕೆ ಸಂಬಂಧಿಸಿದಂತೆ ಈ ಅಧಿನಿಯಮದ ಅಡಿಯಲ್ಲಿ ವಿಧಿಸಬಹುದಾದ ದರ ಅಥವಾ ದರಗಳಲ್ಲಿ ಅದರ ಮೇರೆಗೆ ತೆರಿಗೆಗೆ ಬದ್ಧನಾಗಿರತಕ್ಕದ್ದು.

(2) (1)ನೇ ಉಪಪ್ರಕರಣದ ಅಡಿಯಲ್ಲಿ ಏಜೆಂಟನು ತೆರಿಗೆಗೆ ಬದ್ಧನಾಗಿದ್ದರೆ ಪ್ರಧಾನಕರ್ತನು ತನ್ನ ವಹಿವಾಟಿನ ಮೇಲೆ ತೆರಿಗೆಗೆ ಬದ್ಧನಾಗಿರತಕ್ಕದ್ದಲ್ಲ ಮತ್ತು ವಹಿವಾಟನ್ನು ಸದರಿ ಉಪ ಪ್ರಕರಣದ ಅಡಿಯಲ್ಲಿ ತೆರಿಗೆಗೆ ಬದ್ಧನಾದ ಏಜೆಂಟನ ಮೂಲಕ ಮಾಡಲಾಗಿದೆ ಎಂದು ರುಜುವಾತು ಮಾಡುವ ಹೊಣೆಯು ಅಂಥ ಪ್ರಧಾನಕರ್ತನ ಮೇಲೆ ಇರತಕ್ಕದ್ದು.

**9. ನೋಂದಾಯಿತ ವ್ಯಾಪಾರಿಗಳಿಂದ, ಸರ್ಕಾರಗಳಿಂದ ಮತ್ತು ಶಾಸನಬದ್ಧ ಪ್ರಾಧಿಕಾರಗಳಿಂದ ತೆರಿಗೆಯ ಸಂಗ್ರಹ.–** (1) ಈ ಅಧಿನಿಯಮದ ಅಡಿಯಲ್ಲಿ ತೆರಿಗೆಯ ಸಂದಾಯಕ್ಕೆ ಬದ್ಧನಾದ ಪ್ರತಿಯೊಬ್ಬ ನೋಂದಾಯಿತ ವ್ಯಾಪಾರಿಯು, ತಾನು ಸಂದಾಯ ಮಾಡಲು ಬದ್ಧನಾದ ತೆರಿಗೆ ದರದಲ್ಲಿ ಅಥವಾ ದರಗಳಲ್ಲಿ ಅಂಥ ತೆರಿಗೆಯನ್ನು ಸಂಗ್ರಹಿಸತಕ್ಕದ್ದು ಮತ್ತು ಸಂಗ್ರಹಿಸಿದ ತೆರಿಗೆಯ ಲೆಕ್ಕವನ್ನು ಈ ಅಧಿನಿಯಮದ ಮತ್ತು ಅದರ ಅಡಿಯಲ್ಲಿ ರಚಿಸಿದ ನಿಯಮಗಳ ಉಪಬಂಧಗಳಿಗನುಸಾರ ಇಡತಕ್ಕದ್ದು.

(2) ಕೇಂದ್ರ ಸರ್ಕಾರವು, ಒಂದು ರಾಜ್ಯ ಸರ್ಕಾರವು, ಶಾಸನಬದ್ಧ ನಿಕಾಯವು ಅಥವಾ ಸ್ಥಳೀಯ ಪ್ರಾಧಿಕಾರವು, ಅವು ಮಾಡಿದ ತೆರಿಗೆಗೆ ಬದ್ಧವಾದ ಯಾವುವೇ ಸರಕುಗಳ ಮಾರಾಟದ ಸಂಬಂಧದಲ್ಲಿ, ಅಂಥ ಮಾರಾಟವನ್ನು ನೋಂದಾಯಿತ ವ್ಯಾಪಾರಿಯು ನಡೆಸಿದಾಗ ಈ ಅಧಿನಿಯಮದ ಅಡಿಯಲ್ಲಿ ಯಾವ ಮೊಬಲಗನ್ನು ತೆರಿಗೆಯ ರೂಪದಲ್ಲಿ ಸಂಗ್ರಹಿಸುತ್ತಿದ್ದನೋ ಆ ಯಾವುದೇ ಮೊಬಲಗನ್ನು, ತೆರಿಗೆಯ ರೂಪದಲ್ಲಿ ಸಂಗ್ರಹಿಸತಕ್ಕದ್ದು, ತೆರಿಗೆ ಬೆಲೆ ಪಟ್ಟಿಯನ್ನು ನೀಡತಕ್ಕದ್ದು, ಹಾಗೆ ಸಂಗ್ರಹಿಸಿದ ತೆರಿಗೆಯನ್ನು ಸರ್ಕಾರಿ ಖಜಾನೆಗೆ ಅಥವಾ ಯಾವುದೇ ಹೆಸರಿಸಲಾದ ಬ್ಯಾಂಕಿಗೆ ಸಂದಾಯ ಮಾಡತಕ್ಕದ್ದು ಮತ್ತು 35ನೇ ಪ್ರಕರಣದ ಅಡಿಯಲ್ಲಿ ನಿರ್ದಿಷ್ಟಪಡಿಸಲಾದಂತೆ ಮಾಸಿಕ ವಿವರ ಪಟ್ಟಿಯನ್ನು ನಿಯಮಿಸಲಾದ ಪ್ರಾಧಿಕಾರಕ್ಕೆ ಸಲ್ಲಿಸತಕ್ಕದ್ದು.

**9–ಎ. ಮೂಲದಲ್ಲೇ ತೆರಿಗೆಯ ಮುರುಗಡೆ (ಕಾಮಗಾರಿ ಕರಾರಿನ ಸಂದರ್ಭದಲ್ಲಿ).–** (1) ಈ ಅಧಿನಿಯಮದಲ್ಲಿ ಏನೇ ಇದ್ದರೂ, ಕೇಂದ್ರ ಸರ್ಕಾರವು ಅಥವಾ ಯಾವುದೇ ರಾಜ್ಯ ಸರ್ಕಾರವು ಅಥವಾ ಕೇಂದ್ರ ಸರ್ಕಾರದ ಅಥವಾ ಯಾವುದೇ ರಾಜ್ಯದ ಒಂದು ಕೈಗಾರಿಕಾ, ವಾಣಿಜ್ಯ ಅಥವಾ ಒಂದು ವ್ಯಾಪಾರ ಉದ್ಯಮವು ಅಥವಾ ಜಂಟಿ ವಲಯದಲ್ಲಿನ ಯಾವುದೇ ಉದ್ಯಮವು, ಆಯುಕ್ತರು ಕಾಲಕಾಲಕ್ಕೆ ಅಧಿಸೂಚಿಸಬಹುದಾದಂಥ ಯಾವುದೇ ಇತರ ಕೈಗಾರಿಕಾ, ವಾಣಿಜ್ಯ ಅಥವಾ ವ್ಯಾಪಾರ ಉದ್ಯಮ ಅಥವಾ ಯಾವೊಬ್ಬ ಇತರ ವ್ಯಕ್ತಿ ಅಥವಾ ನಿಕಾಯವು ಅಥವಾ ಸ್ಥಳೀಯ ಪ್ರಾಧಿಕಾರ ಅಥವಾ ಶಾಸನಬದ್ಧ ನಿಕಾಯವು ರಾಜ್ಯದಲ್ಲಿ ಅವರಿಗಾಗಿ ವ್ಯಾಪಾರಿಯು ನಿರ್ವಹಿಸಿದ ಆರನೇ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಸ್ವರೂಪದ ಕಾಮಗಾರಿ ಕರಾರುಗಳ ಸಂಬಂಧದಲ್ಲಿ ತಾವು ಸಂದಾಯ ಮಾಡುವ ಮೊಬಲಗಿನಿಂದ ಅಧಿನಿಯಮದ ಅಡಿಯಲ್ಲಿ ಅಂಥ ವ್ಯಾಪಾರಿಯು ಸಂದಾಯ ಮಾಡಬೇಕಾದ ತೆರಿಗೆಗೆ ಸಮನಾದ ಮೊತ್ತವನ್ನು ಮುರುಗಡೆ ಮಾಡತಕ್ಕದ್ದು.

(2) ಆ ಮೊಬಲಗು, ಅಂತರ ರಾಜ್ಯ ವ್ಯಾಪಾರ ಅಥವಾ ವಾಣಿಜ್ಯ ವ್ಯವಹಾರದ ಸಂದರ್ಭದಲ್ಲಿ, ಅಥವಾ ಭಾರತದ ಗಡಿ ಪ್ರದೇಶಗಳಿಂದ ಹೊರಕ್ಕೆ ರಫ್ತು ಮಾಡುವ, ಅಥವಾ ಭಾರತದ ಗಡಿ ಪ್ರದೇಶದಿಂದ ಒಳಕ್ಕೆ ಆಮದು ಮಾಡಿಕೊಳ್ಳುವ ಸಂದರ್ಭದಲ್ಲಿ ಅಥವಾ ರಾಜ್ಯದ ಹೊರಗೆ ಮಾಡಿದ ಯಾವುವೇ ಸರಕುಗಳ ಮಾರಾಟದ ಸಂಬಂಧದಲ್ಲಿ ಅವನು ಸಂದಾಯ ಮಾಡಬೇಕಾಗಿದ್ದ ಮೊಬಲಗಾಗಿದ್ದರೆ (1)ನೇ ಉಪ ಪ್ರಕರಣದ ಅಡಿಯಲ್ಲಿ ಅಂಥ ಯಾವ ಮುರುಗಡೆಯನ್ನು ಮಾಡತಕ್ಕದ್ದಲ್ಲ.

(3) (1)ನೇ ಉಪಪ್ರಕರಣದ ಅಡಿಯಲ್ಲಿಯ ಮುರುಗಡೆಯನ್ನು, ವ್ಯಾಪಾರಿಯು ಲೆಕ್ಕಹಾಕಿದಂತೆ ಸಂದಾಯ ಮಾಡತಕ್ಕ ತೆರಿಗೆಯ ಆಧಾರದ ಮೇಲೆ ಪ್ರಾಧಿಕಾರಿಯು ಮಾಡತಕ್ಕದ್ದು.

[1][(4) (ಎ) ಯಾವೊಬ್ಬ ವ್ಯಾಪಾರಿಯು, ಲೆಕ್ಕಹಾಕಿದಂತೆ ಸಂದಾಯ ಮಾಡತಕ್ಕ ತೆರಿಗೆಯು ತಾನು ನಿರ್ವಹಿಸಿದ ಕಾಮಗಾರಿ ಕರಾರಿಗೆ ಸಂದಾಯ ಮಾಡತಕ್ಕ ತೆರಿಗೆಗಿಂತ ಶೇಕಡಾ ಹದಿನೈದಕ್ಕೂ ಮೀರಿ ಕಡಿಮೆ ಇದ್ದಲ್ಲಿ, ಆಯುಕ್ತನಿಂದ ಪ್ರಾಧೀಕೃತನಾದ ಅಧಿಕಾರಿಯು ಹಾಗೆ ತಿಳಿದುಬಂದ ಮೇಲೆ (1)ನೇ ಉಪ ಪ್ರಕರಣದ ಅಡಿಯಲ್ಲಿ ತೆರಿಗೆಯನ್ನು ಮುರುಗಡೆ ಮಾಡಲು ಹೊಣೆಗಾರನಾದ ಪ್ರಾಧಿಕಾರಿಗೆ ಹಾಗೆ ತಿಳಿಸತಕ್ಕದ್ದು.

(ಬಿ) ಅಂಥ ಮಾಹಿತಿಯ ಮೇಲೆ ತೆರಿಗೆಯ ಮುರುಗಡೆಗೆ ಹೊಣೆಗಾರನಾದ ಪ್ರಾಧಿಕಾರಿಯು ಅಥವಾ ವ್ಯಾಪಾರಿಯು ಪ್ರಮಾಣ ಪತ್ರವನ್ನು ನೀಡುವುದಕ್ಕಾಗಿ ಅಂಥ ಅಧಿಕಾರಿಗೆ ಒಂದು ಅರ್ಜಿಯನ್ನು ಸಲ್ಲಿಸತಕ್ಕದ್ದು ಮತ್ತು ಆಯುಕ್ತನಿಂದ ಹಾಗೆ ಪ್ರಾಧೀಕೃತನಾದ ಅಧಿಕಾರಿಯು ಅರ್ಜಿಯನ್ನು ಸ್ವೀಕರಿಸಿದ ದಿನಾಂಕದಿಂದ ಹತ್ತು ದಿನಗಳೊಳಗೆ ಒಂದು ಪ್ರಮಾಣ ಪತ್ರವನ್ನು ನೀಡತಕ್ಕದ್ದು, ಅದಕ್ಕೆ ತಪ್ಪಿದಲ್ಲಿ ತೆರಿಗೆಯ ಮುರುಗಡೆಗೆ ಹೊಣೆಗಾರನಾದ ಪ್ರಾಧಿಕಾರಿಯು ಪ್ರಮಾಣ ಪತ್ರವನ್ನು ನೀಡುವವರೆಗೆ ವ್ಯಾಪಾರಿಯಿಂದ ಲೆಕ್ಕಹಾಕಲಾದಂತೆ ಮುರುಗಡೆ ಮಾಡತಕ್ಕದ್ದು.

(ಸಿ) ಪ್ರಮಾಣ ಪತ್ರವನ್ನು ನೀಡಿದಮೇಲೆ ಅಂಥ ಮುರುಗಡೆಯನ್ನು, ಅಂಥ ಅಧಿಕಾರಿಯು ನೀಡಿದ ಪ್ರಮಾಣ ಪತ್ರದ ಆಧಾರದ ಮೇಲೆ ಅಂಥ ವ್ಯಾಪಾರಿಗೆ ತದನಂತರ ಸಂದಾಯಮಾಡಬಹುದಾದ ಯಾವುದೇ ಮೊಬಲಗುಗಳಿಂದ ಮಾಡತಕ್ಕದ್ದು.][1]

1.2006 ರ ಅಧಿನಿಯಮ ಸಂಖ್ಯೆ 4 ರ ಮೂಲಕ ದಿನಾಂಕ: 1.4.2006 ರಿಂದ ಪ್ರತಿಯೋಜಿಸಲಾಗಿದೆ.

(5) (1)ನೇ ಉಪಪ್ರಕರಣದ ಅಡಿಯಲ್ಲಿ ಮುರುಗಡೆ ಮಾಡುವ ಪ್ರಾಧಿಕಾರಿಯು, ನಿಯಮಿಸಲಾದ ಪ್ರಾಧಿಕಾರಕ್ಕೆ ನಿಯಮಿಸಲಾದ ನಮೂನೆಯಲ್ಲಿ ಹಿಂದಿನ ತಿಂಗಳಿನ ಅವಧಿಯಲ್ಲಿ ಕಡಿತಗೊಳಿಸಿದ ತೆರಿಗೆಯ ವಿವರಗಳನ್ನು ಒಳಗೊಂಡಂತೆ ವಿವರಪಟ್ಟಿಯನ್ನು ಪ್ರತಿ ತಿಂಗಳೂ ಕಳುಹಿಸತಕ್ಕದ್ದು ಹಾಗೂ ಹಾಗೆ ಕಡಿತಗೊಳಿಸಿದ ತೆರಿಗೆಯ ಪೂರ್ಣ ಮೊಬಲಗನ್ನು ಅಂಥ ಮುರುಗಡೆಯನ್ನು ಮಾಡಿದ ಹಿಂದಿನ ತಿಂಗಳು ಮುಕ್ತಾಯವಾದ ಇಪ್ಪತ್ತು ದಿನಗಳೊಳಗೆ ಸಂದಾಯ ಮಾಡತಕ್ಕದ್ದು ಮತ್ತು ಹಾಗೆ ಸಂದಾಯ ಮಾಡುವ ಮೊಬಲಗನ್ನು 42ನೇ ಪ್ರಕರಣದ ಉದ್ದೇಶಕ್ಕಾಗಿ ಈ ಅಧಿನಿಯಮದ ಅಡಿಯಲ್ಲಿ ಬಾಕಿ ಇದ್ದ ಮೊಬಲಗು ಎಂದು ಭಾವಿಸತಕ್ಕದ್ದು:

[1][ಪರಂತು, (1)ನೇ ಉಪಪ್ರಕರಣದ ಅಡಿಯಲ್ಲಿ ಮುರುಗಡೆ ಮಾಡುವ ಪ್ರಾಧಿಕಾರಗಳ ಪೈಕಿ, ಆಯುಕ್ತರು ಅಧಿಸೂಚಿಸಬಹುದಾದಂತೆ, ಪ್ರಾಧಿಕಾರಗಳ ನಿರ್ದಿಷ್ಟಪಡಿಸಿದ ವರ್ಗವು, ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಲಾದ ವಿಧಾನದಲ್ಲಿ, ಅಂತರ್ಜಾಲದ ಮೂಲಕ, ನಿಯಮಿಸಲಾದ ಪ್ರಾಧಿಕಾರಕ್ಕೆ, ವಿದ್ಯುನ್ಮಾನದ ಮೂಲಕ ನಿಯಮಿಸಲಾದ ನಮೂನೆಯಲ್ಲಿ ವಿವರಪಟ್ಟಿಯನ್ನು ಸಲ್ಲಿಸತಕ್ಕದ್ದು ಮತ್ತು ವಿದ್ಯುನ್ಮಾನದ ಮೂಲಕ ಸಂದಾಯ ಮಾಡತಕ್ಕದ್ದು.][1]

1.2006 ರ ಅಧಿನಿಯಮ ಸಂಖ್ಯೆ 4 ರ ಮೂಲಕ ದಿನಾಂಕ: 1.4.2006 ರಿಂದ ಪ್ರತಿಯೋಜಿಸಲಾಗಿದೆ.

1.2015 ರ ಅಧಿನಿಯಮ ಸಂಖ್ಯೆ 15 ರ ಮೂಲಕ ದಿನಾಂಕ: 1.4.2015ರಿಂದ ಪ್ರತಿಯೋಜಿಸಲಾಗಿದೆ.

(6) (5)ನೇ ಉಪ ಪ್ರಕರಣದ ಉಪಬಂಧಗಳನ್ನು ಪಾಲಿಸಲು ತಪ್ಪಿದಾಗ, ನಿಯಮಿಸಲಾದ ಪ್ರಾಧಿಕಾರವು, ತಾನು ಸೂಕ್ತವೆಂದು ಭಾವಿಸಬಹುದಾದಂಥ ವಿಚಾರಣೆ ನಡೆಸಿದ ತರುವಾಯ ಮತ್ತು ಸಂಬಂಧಿಸಿದ ಪ್ರಾಧಿಕಾರಿಗೆ ಅಹವಾಲನ್ನು ಹೇಳಿಕೊಳ್ಳಲು ಸೂಕ್ತ ಅವಕಾಶ ನೀಡಿದ ತರುವಾಯ, ತನ್ನ ಅತ್ಯುತ್ತಮ ವಿವೇಚನೆಯ ಪ್ರಕಾರ ಅಂಥ ಪ್ರಾಧಿಕಾರಿಯು ಈ ಉಪಪ್ರಕರಣದ ಅಡಿಯಲ್ಲಿ ಸಂದಾಯ ಮಾಡಬೇಕಾದ ತೆರಿಗೆ ಮೊಬಲಗನ್ನು ತೀರ್ಮಾನಿಸತಕ್ಕದ್ದು ಹಾಗೂ ಹಾಗೆ ತೀರ್ಮಾನಿಸಿದ ಮೊಬಲಗನ್ನು 42ನೇ ಪ್ರಕರಣದ ಉದ್ದೇಶಕ್ಕಾಗಿ ಈ ಅಧಿನಿಯಮದ ಅಡಿಯಲ್ಲಿ ಬಾಕಿ ಇರುವ ತೆರಿಗೆ ಎಂದು ಭಾವಿಸತಕ್ಕದ್ದು.

(7) (5)ನೇ ಉಪಪ್ರಕರಣದ ಅಡಿಯಲ್ಲಿ ನಿರ್ದಿಷ್ಟಪಡಿಸಿದ ಅವಧಿಯ ಮುಕ್ತಾಯದ ತರುವಾಯ ಮುರುಗಡೆ ಮಾಡಿದ ತೆರಿಗೆಯನ್ನು ಸಂದಾಯ ಮಾಡುವಲ್ಲಿ ಹತ್ತು ದಿನಗಳನ್ನು ಮೀರಿ ತಪ್ಪಿದಲ್ಲಿ, (1)ನೇ ಉಪಪ್ರಕರಣದ ಅಡಿಯಲ್ಲಿ ಮುರುಗಡೆ ಮಾಡುವ ಪ್ರಾಧಿಕಾರಿಯು, ಅಂಥ ತಪ್ಪುವಿಕೆಯು ಮುಂದುವರೆದ ಅವಧಿಯಲ್ಲಿ 37ನೇ ಪ್ರಕರಣದ (1)ನೇ ಉಪಪ್ರಕರಣದ ಅಡಿಯಲ್ಲಿ ನಿರ್ದಿಷ್ಟಪಡಿಸಿದ ಬಡ್ಡಿಗೆ ಸಮನಾದ ಮೊತ್ತವನ್ನು ದಂಡದ ರೂಪದಲ್ಲಿ ಸಂದಾಯ ಮಾಡತಕ್ಕದ್ದು.

(8) (1)ನೇ ಉಪಪ್ರಕರಣದ ಅಡಿಯಲ್ಲಿ ಮುರುಗಡೆ ಮಾಡುವ ಪ್ರಾಧಿಕಾರಿಯು ಯಾರಿಂದ ಹಾಗೆ ಮುರುಗಡೆ ಮಾಡಲಾಗಿದೆಯೋ ಆ ವ್ಯಾಪಾರಿಗೆ, ನಿಯಮಿಸಲಾದ ಪ್ರಾಧಿಕಾರದಿಂದ ಪಡೆದ ನಿಯಮಿಸಬಹುದಾದಂಥ ವಿವರಗಳನ್ನು ಒಳಗೊಂಡ ಒಂದು ಪ್ರಮಾಣ ಪತ್ರವನ್ನು ನೀಡತಕ್ಕದ್ದು.

(9) (5)ನೇ ಉಪಪ್ರಕರಣಕ್ಕೆ ಅನುಸಾರವಾಗಿ ಮುರುಗಡೆ ಮೂಲಕ ಮಾಡಿದ ತೆರಿಗೆ ಸಂದಾಯವು ಕಾಮಗಾರಿ ಕರಾರನ್ನು ಜಾರಿಗೊಳಿಸುವ ವ್ಯಾಪಾರಿಯಿಂದ ಈ ಅಧಿನಿಯಮದ ಅಡಿಯಲ್ಲಿ ಬಾಕಿ ಇರುವ ತೆರಿಗೆಯನ್ನು ಇತರ ಯಾವುದೇ ರೀತಿಯ ವಸೂಲು ಮಾಡುವುದಕ್ಕೆ ಬಾಧಕವಾಗತಕ್ಕದ್ದಲ್ಲ.

(10) (5)ನೇ ಉಪಪ್ರಕರಣದ ಅಡಿಯಲ್ಲಿ ಕಾಮಗಾರಿ ಕರಾರಿನ ಸಂಬಂಧದಲ್ಲಿಯ ತೆರಿಗೆಯನ್ನು ಜಮಾ ಮಾಡಿದ್ದರೆ, ವ್ಯಾಪಾರಿಯು [1][xxx][1] ಯಾವುದೇ ಅವಧಿಗಾಗಿ ಸಂದಾಯ ಮಾಡಬೇಕಾದ ತೆರಿಗೆಯನ್ನು ಸದರಿ ಉಪಪ್ರಕರಣದ ಅಡಿಯಲ್ಲಿ ಈಗಾಗಲೇ ಜಮಾ ಮಾಡಿದ ಮೊಬಲಗಿನಷ್ಟು ಕಡಿಮೆ ಮಾಡತಕ್ಕದ್ದು.

1. 2006 ರ ಅಧಿನಿಯಮ ಸಂಖ್ಯೆ 4 ರ ಮೂಲಕ ದಿನಾಂಕ: 1.4.2006 ರಿಂದ ಬಿಟ್ಟುಬಿಡಲಾಗಿದೆ.

(11) ಅಂಥ ಕಾಮಗಾರಿ ಕರಾರಿನ ಮೇಲಿನ ತೆರಿಗೆಯನ್ನು ಈಗಾಗಲೇ ಸಲ್ಲಿಸಲಾಗಿದೆಯೆಂಬುದನ್ನು ಮತ್ತು ಆ ರೀತಿಯಾಗಿ ಸಲ್ಲಿಸಲಾದ ತೆರಿಗೆಯ ನಿಖರವಾದ ಮೊಬಲಗನ್ನು ರುಜುವಾತುಪಡಿಸುವ ಭಾರವು, (10)ನೇ ಉಪ ಪ್ರಕರಣದ ಅಡಿಯಲ್ಲಿ ತೆರಿಗೆ ಕಡಿಮೆ ಮಾಡಬೇಕೆಂದು ಕ್ಲೇಮು ಮಾಡುವ ವ್ಯಾಪಾರಿಯ ಮೇಲೆ ಇರತಕ್ಕದ್ದು.]

1. 2005ರ ಅಧಿನಿಯಮ ಸಂಖ್ಯೆ 6ರ ಮೂಲಕ ದಿನಾಂಕ: 19.3.2005 ರಿಂದ ಸೇರಿಸಲಾಗಿದೆ.

[1][**9-ಬಿ. ಮೂಲದಲ್ಲೇ ತೆರಿಗೆಯ ಮುರುಗಡೆ (ಸರ್ಕಾರಿ ಇಲಾಖೆಗಳು ಮತ್ತು ಇತರರು ಮಾಡಿದ ಖರೀದಿಗಳ ಸಂದರ್ಭದಲ್ಲಿ).**- (1) ಈ ಅಧಿನಿಯಮದಲ್ಲಿ ಏನೇ ಇದ್ದರೂ, ಅಧಿನಿಯಮದ ಅಡಿಯಲ್ಲಿ ವ್ಯಾಪಾರಿಯೆಂದು ನೋಂದಣಿಯಾಗಿಲ್ಲದ, ಕೇಂದ್ರ ಸರ್ಕಾರ ಅಥವಾ ಯಾವುದೇ ರಾಜ್ಯ ಸರ್ಕಾರ, ಕೇಂದ್ರ ಸರ್ಕಾರದ ಅಥವಾ ಯಾವುದೇ ರಾಜ್ಯ ಸರ್ಕಾರದ ಕೈಗಾರಿಕಾ, ವಾಣಿಜ್ಯ ಅಥವಾ ವ್ಯಾಪಾರಿ ಉದ್ಯಮ ಅಥವಾ ಜಂಟಿ ವಲಯದ ಯಾವುದೇ ಅಂಥ ಉದ್ಯಮ ಅಥವಾ ಸ್ಥಳೀಯ ಪ್ರಾಧಿಕಾರ ಅಥವಾ ಶಾಸನಬದ್ಧ ನಿಕಾಯ ಅಥವಾ ಆಯುಕ್ತನು ಕಾಲಕಾಲಕ್ಕೆ ಅಧಿಸೂಚಿಸಬಹುದಾದ ಯಾವೊಬ್ಬ ಇತರ ವ್ಯಕ್ತಿ ಅಥವಾ ನಿಕಾಯವು, ಆಯುಕ್ತನು ಅಧಿಸೂಚಿಸಬಹುದಾದ ಅಂಥ ದಿನಾಂಕದಿಂದ ಜಾರಿಗೆ ಬರುವಂತೆ ರಾಜ್ಯದಲ್ಲಿ ಅವರು ನಿರ್ವಹಿಸಿದ ಸರಕುಗಳನ್ನು ಖರೀದಿಸಿದ ಸಂಬಂಧದಲ್ಲಿ, ಅನ್ವಯವಾಗುವ ದರದಲ್ಲಿ, ವ್ಯಾಪಾರಿಗೆ ಅವರು ಪಾವತಿಸಬೇಕಾದ ಮೊಬಲಗುಗಳಿಂದ ತೆರಿಗೆ ಮೊತ್ತವನ್ನು ಮುರುಗಡೆ ಮಾಡತಕ್ಕದ್ದು.

(2) (1)ನೇ ಉಪಪ್ರಕರಣದ ಅಡಿಯಲ್ಲಿ ಮುರುಗಡೆ ಮಾಡುವ ಪ್ರಾಧಿಕಾರಿಯು, ನಿಯಮಿಸಲಾದ ಪ್ರಾಧಿಕಾರಕ್ಕೆ ನಿಯಮಿಸಲಾದ ನಮೂನೆಯಲ್ಲಿ ಹಿಂದಿನ ತಿಂಗಳಿನ ಅವಧಿಯಲ್ಲಿ ಮುರುಗಡೆಗೊಳಿಸಿದ ತೆರಿಗೆಯ ವಿವರಗಳನ್ನು ಒಳಗೊಂಡಂತೆ ವಿವರಪಟ್ಟಿಯನ್ನು ಪ್ರತಿ ತಿಂಗಳೂ ಕಳುಹಿಸತಕ್ಕದ್ದು ಹಾಗೂ ಹಾಗೆ ಕಡಿತಗೊಳಿಸಿದ ತೆರಿಗೆಯ ಪೂರ್ಣ ಮೊಬಲಗನ್ನು ಅಂಥ ಮುರುಗಡೆಯನ್ನು ಮಾಡಿದ ಹಿಂದಿನ ತಿಂಗಳು ಮುಕ್ತಾಯವಾದ ಇಪ್ಪತ್ತು ದಿನಗಳೊಳಗೆ ಸಂದಾಯ ಮಾಡತಕ್ಕದ್ದು ಮತ್ತು ಹಾಗೆ ಸಂದಾಯ ಮಾಡುವ ಮೊಬಲಗುಗಳನ್ನು 42ನೇ ಪ್ರಕರಣದ ಉದ್ದೇಶಕ್ಕಾಗಿ ಈ ಅಧಿನಿಯಮದ ಅಡಿಯಲ್ಲಿ ಬಾಕಿ ಇದ್ದ ಮೊಬಲಗು ಎಂದು ಭಾವಿಸತಕ್ಕದ್ದು:

ಪರಂತು, ಆಯುಕ್ತರಿಂದ ಅಧಿಸೂಚಿಸಬಹುದಾದ ನಿರ್ದಿಷ್ಟಪಡಿಸಿದ ವರ್ಗದ ಪ್ರಾಧಿಕಾರಿಗಳು ನಿಯಮಿಸಲಾದ ನಮೂನೆಯಲ್ಲಿ ವಿವರಪಟ್ಟಿಯನ್ನು ವಿದ್ಯುನ್ಮಾನದಲ್ಲಿ ಸಲ್ಲಿಸತಕ್ಕದ್ದು ಮತ್ತು ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಿದ ವಿಧಾನದಲ್ಲಿ ನಿಯಮಿಸಲಾದ ಪ್ರಾಧಿಕಾರಕ್ಕೆ ಅಂತರ್ಜಾಲದ ಮೂಲಕ ವಿದ್ಯುನ್ಮಾನದಲ್ಲಿ ಸಂದಾಯ ಮಾಡತಕ್ಕದ್ದು.

(3) (2)ನೇ ಉಪ ಪ್ರಕರಣದ ಉಪಬಂಧಗಳನ್ನು ಪಾಲಿಸಲು ತಪ್ಪಿದಾಗ, ನಿಯಮಿಸಲಾದ ಪ್ರಾಧಿಕಾರವು, ತಾನು ಸೂಕ್ತವೆಂದು ಭಾವಿಸಬಹುದಾದಂಥ ವಿಚಾರಣೆ ನಡೆಸಿದ ತರುವಾಯ ಮತ್ತು ಸಂಬಂಧಿಸಿದ ಪ್ರಾಧಿಕಾರಿಗೆ ಅಹವಾಲನ್ನು ಹೇಳಿಕೊಳ್ಳಲು ಸೂಕ್ತ ಅವಕಾಶ ನೀಡಿದ ತರುವಾಯ, ತನ್ನ ಅತ್ಯುತ್ತಮ ವಿವೇಚನೆಯ ಪ್ರಕಾರ ಅಂಥ ಪ್ರಾಧಿಕಾರಿಯು (2)ನೇ ಉಪಪ್ರಕರಣದ ಅಡಿಯಲ್ಲಿ ಸಂದಾಯ ಮಾಡಬೇಕಾದ ತೆರಿಗೆ ಮೊಬಲಗನ್ನು ತೀರ್ಮಾನಿಸತಕ್ಕದ್ದು ಹಾಗೂ ಹಾಗೆ ತೀರ್ಮಾನಿಸಿದ ಮೊಬಲಗನ್ನು 42ನೇ ಪ್ರಕರಣದ ಉದ್ದೇಶಕ್ಕಾಗಿ ಈ ಅಧಿನಿಯಮದ ಅಡಿಯಲ್ಲಿ ಬಾಕಿ ಇರುವ ತೆರಿಗೆ ಎಂದು ಭಾವಿಸತಕ್ಕದ್ದು.

(4) (2)ನೇ ಉಪಪ್ರಕರಣದ ಅಡಿಯಲ್ಲಿ ನಿರ್ದಿಷ್ಟಪಡಿಸಿದ ಅವಧಿಯ ಮುಕ್ತಾಯದ ತರುವಾಯ ಮುರುಗಡೆ ಮಾಡಿದ ತೆರಿಗೆಯನ್ನು ಸಂದಾಯ ಮಾಡುವಲ್ಲಿ ಹತ್ತು ದಿನಗಳನ್ನು ಮೀರಿ ತಪ್ಪಿದಲ್ಲಿ, (1)ನೇ ಉಪಪ್ರಕರಣದ ಅಡಿಯಲ್ಲಿ ಮುರುಗಡೆ ಮಾಡುವ ಪ್ರಾಧಿಕಾರಿಯು, ಅಂಥ ತಪ್ಪುವಿಕೆಯು ಮುಂದುವರೆದ ಅವಧಿಯಲ್ಲಿ 37ನೇ ಪ್ರಕರಣದ (1)ನೇ ಉಪಪ್ರಕರಣದ ಅಡಿಯಲ್ಲಿ ನಿರ್ದಿಷ್ಟಪಡಿಸಿದ ಬಡ್ಡಿಗೆ ಸಮನಾದ ಮೊತ್ತವನ್ನು ದಂಡದ ರೂಪದಲ್ಲಿ ಸಂದಾಯ ಮಾಡತಕ್ಕದ್ದು.

(5) (1)ನೇ ಉಪಪ್ರಕರಣದ ಅಡಿಯಲ್ಲಿ ಮುರುಗಡೆ ಮಾಡುವ ಪ್ರಾಧಿಕಾರಿಯು ಯಾರಿಂದ ಹಾಗೆ ಮುರುಗಡೆ ಮಾಡಲಾಗಿದೆಯೋ ಆ ವ್ಯಾಪಾರಿಗೆ, ನಿಯಮಿಸಲಾದ ಪ್ರಾಧಿಕಾರದಿಂದ ಪಡೆದ ನಿಯಮಿಸಬಹುದಾದಂಥ ವಿವರಗಳನ್ನು ಒಳಗೊಂಡ ಒಂದು ಪ್ರಮಾಣ ಪತ್ರವನ್ನು ನೀಡತಕ್ಕದ್ದು.

(6) (2)ನೇ ಉಪಪ್ರಕರಣಕ್ಕೆ ಅನುಸಾರವಾಗಿ ಮುರುಗಡೆ ಮೂಲಕ ಮಾಡಿದ ತೆರಿಗೆ ಸಂದಾಯವು ಸರಕುಗಳ ಖರೀದಿಯನ್ನು ಜಾರಿಗೊಳಿಸುವ ವ್ಯಾಪಾರಿಯಿಂದ ಈ ಅಧಿನಿಯಮದ ಅಡಿಯಲ್ಲಿ ಬಾಕಿ ಇರುವ ತೆರಿಗೆಯನ್ನು ಇತರ ಯಾವುದೇ ರೀತಿಯಲ್ಲಿ ವಸೂಲು ಮಾಡುವುದಕ್ಕೆ ಬಾಧಕವಾಗತಕ್ಕದ್ದಲ್ಲ.

(7) ಅಂಥ ಮಾರಾಟದ ಮೇಲಿನ ತೆರಿಗೆಯನ್ನು ಈಗಾಗಲೇ ಸಲ್ಲಿಸಲಾಗಿದೆಯೆಂಬುದನ್ನು ಮತ್ತು ಆ ರೀತಿಯಾಗಿ ಸಲ್ಲಿಸಲಾದ ತೆರಿಗೆಯ ನಿಖರವಾದ ಮೊಬಲಗನ್ನು ರುಜುವಾತುಪಡಿಸುವ ಭಾರವು, ವ್ಯಾಪಾರಿಯ ಮೇಲೆ ಇರತಕ್ಕದ್ದು.][1]

1. 2015ರ ಅಧಿನಿಯಮ ಸಂಖ್ಯೆ 15ರ ಮೂಲಕ ದಿನಾಂಕ: 01.04.2015 ರಿಂದ ಸೇರಿಸಲಾಗಿದೆ.

**10. ಹುಟ್ಟುವಳಿ ತೆರಿಗೆ, ಹೂಡುವಳಿ ತೆರಿಗೆ ಮತ್ತು ನಿವ್ವಳ ತೆರಿಗೆ.–** (1) ಯಾವೊಬ್ಬ ನೋಂದಾಯಿತ ವ್ಯಾಪಾರಿಯ ಸಂಬಂಧದಲ್ಲಿ ಹುಟ್ಟುವಳಿ ತೆರಿಗೆ ಎಂದರೆ, ಆ ವ್ಯಾಪಾರಿಯು, ತನ್ನ ವ್ಯಾಪಾರದ ಕ್ರಮದಲ್ಲಿ ತೆರಿಗೆಗೆ ಗುರಿಯಾಗತಕ್ಕ ಯಾವುವೇ ಸರಕುಗಳ ಮಾರಾಟದ ಸಂಬಂಧದಲ್ಲಿ ಈ ಅಧಿನಿಯಮದ ಅಡಿಯಲ್ಲಿ ಸಂದಾಯ ಮಾಡಬೇಕಾದ ತೆರಿಗೆ ಮತ್ತು ಇದು ಅಂಥ ವ್ಯಾಪಾರಿಯ ಪರವಾಗಿ ಒಬ್ಬ ಕಮಿಷನ್ ಏಜೆಂಟನು, ತೆರಿಗೆಗೆ ಗುರಿಯಾಗತಕ್ಕ ಯಾವುವೇ ಸರಕುಗಳ ಮಾರಾಟದ ಸಂಬಂಧದಲ್ಲಿ ನಿಯಮಿಸಲಾದ ಘೋಷಣೆಯನ್ನು ನೀಡುವ ಷರತ್ತಿಗೆ ಒಳಪಟ್ಟು, ಅಂಥ ಏಜೆಂಟನು ಸಂದಾಯ ಮಾಡುವ ತೆರಿಗೆಯನ್ನು ಒಳಗೊಳ್ಳುತ್ತದೆ.

(2) 11, 12, 14, [1][17 ಮತ್ತು 18][1]ನೇ ಪ್ರಕರಣಗಳಲ್ಲಿ ನಿರ್ದಿಷ್ಟಪಡಿಸಲಾದ ಹೂಡುವಳಿ ತೆರಿಗೆಯ ನಿರ್ಬಂಧಗಳಿಗೆ ಒಳಪಟ್ಟು, ಯಾವೊಬ್ಬ ನೋಂದಾಯಿತ ವ್ಯಾಪಾರಿಯ ಸಂಬಂಧದಲ್ಲಿ ಹೂಡುವಳಿ ತೆರಿಗೆ ಎಂದರೆ, ತನ್ನ ವ್ಯಾಪಾರದ ಕ್ರಮದಲ್ಲಿ ಉಪಯೋಗಕ್ಕಾಗಿ ಯಾವುವೇ ಸರಕುಗಳನ್ನು ತನಗೆ ಮಾರಾಟ ಮಾಡಿದಾಗ ಈ ಅಧಿನಿಯಮದ ಅಡಿಯಲ್ಲಿ ಸಂಗ್ರಹಿಸಲಾದ ಅಥವಾ ಸಂದಾಯಮಾಡತಕ್ಕ ತೆರಿಗೆ ಮತ್ತು ಇದು, ಅಂಥ ಪ್ರಕರಣಗಳಲ್ಲಿ ಹೂಡುವಳಿ ತೆರಿಗೆಯನ್ನು ಕ್ಲೇಮು ಮಾಡಲು ನಿಯಮಿಸಬಹುದಾದ ವಿಧಾನಕ್ಕೆ ಒಳಪಟ್ಟು ತನ್ನ ಪರವಾಗಿ ಅಂಥ ಸರಕುಗಳನ್ನು ಖರೀದಿಸುವ ತನ್ನ ಏಜೆಂಟನಿಗೆ ಮಾಡಿದ ಸರಕುಗಳ ಮಾರಾಟದ ಮೇಲಿನ ತೆರಿಗೆಯನ್ನು ಒಳಗೊಳ್ಳುತ್ತದೆ.

1. 2005ರ ಅಧಿನಿಯಮ ಸಂಖ್ಯೆ 6ರ ಮೂಲಕ ದಿನಾಂಕ: 19.3.2005 ರಿಂದ ಪ್ರತಿಯೋಜಿಸಲಾಗಿದೆ.

[1][(3) 11, 12, 14, 17, 18 ಮತ್ತು 19ನೇ ಪ್ರಕರಣಗಳಲ್ಲಿ ನಿರ್ದಿಷ್ಟಪಡಿಸಲಾದ ಹೂಡುವಳಿ ತೆರಿಗೆಯ ನಿರ್ಬಂಧಗಳಿಗೆ ಒಳಪಟ್ಟು, ಪ್ರತಿಯೊಂದು ತೆರಿಗೆ ಅವಧಿಯ ಸಂಬಂಧದಲ್ಲಿ ನೋಂದಾಯಿತ ವ್ಯಾಪಾರಿಯು ಸಂದಾಯ ಮಾಡಬೇಕಾದ ನಿವ್ವಳ ತೆರಿಗೆಯು, ನಿಯಮಿಸಬಹುದಾದಂತೆ ಆ ಅವಧಿಯಲ್ಲಿ ಆತನು ಸಂದಾಯ ಮಾಡಬೇಕಾದ ಹುಟ್ಟುವಳಿ ತೆರಿಗೆಯಿಂದ, ಆ ಅವಧಿಯಲ್ಲಿ ಆತನು ವಜಾ ಮಾಡತಕ್ಕ ಹೂಡುವಳಿ ತೆರಿಗೆಯನ್ನು ಕಳೆದು ಆ ಅವಧಿಯಲ್ಲಿ ಆತನು ಸಂದಾಯ ಮಾಡಬೇಕಾದ ಹುಟ್ಟುವಳಿ ತೆರಿಗೆಯ ಒಟ್ಟು ಮೊತ್ತವಾಗಿರತಕ್ಕದ್ದು, ಮತ್ತು [2][XXX][2] ಆ ಬಗ್ಗೆ ಈ ಅಧಿನಿಯಮದ ಉಪಬಂಧಗಳಿಗೆ ಅನುಸಾರವಾಗಿ ಲೆಕ್ಕ ಇಡತಕ್ಕದ್ದು.][1]

[3][ಪರಂತು, ನೋಂದಾಯಿತ ವ್ಯಾಪಾರಿಯು, 2015ರ ಏಪ್ರಿಲ್ ಒಂದನೇ ದಿನಾಂಕದಂದು ಅಥವಾ ತರುವಾಯದಲ್ಲಿ ಸಂದಾಯ ಮಾಡಬೇಕಾದ ನಿವ್ವಳ ತೆರಿಗೆಯನ್ನು ಲೆಕ್ಕಹಾಕುವಾಗ, ಅಂಥ ತೆರಿಗೆ ಅವಧಿಯ ತಕ್ಷಣದ ಹಿಂದಿನ ಐದು ತೆರಿಗೆ ಅವಧಿಗಳಲ್ಲಿ ಖರೀದಿಸಿದ ಸರಕುಗಳಿಗೆ ಸಂಬಂಧಿಸಿದಂತೆ, ಅಂಥ ಸರಕುಗಳ ಹೂಡುವಳಿ ತೆರಿಗೆಯನ್ನು ಅಂಥ ಯಾವುದೇ ಐದು ಹಿಂದಿನ ತೆರಿಗೆ ಅವಧಿಗಳಲ್ಲಿ ಕ್ಲೇಮು ಮಾಡದಿದ್ದಲ್ಲಿ ತೆರಿಗೆ ಅವಧಿಯ ಹೂಡುವಳಿ ತೆರಿಗೆಯನ್ನು ಕ್ಲೇಮು ಮಾಡಬಹುದು. ][3]

1. 2015ರ ಅಧಿನಿಯಮ ಸಂಖ್ಯೆ 15ರ ಮೂಲಕ ದಿನಾಂಕ: 01.04.2015ರಿಂದ ಪ್ರತಿಯೋಜಿಸಲಾಗಿದೆ ಎಂದು ಭಾವಿಸತಕ್ಕದ್ದು.
2. 2016ರ ಅಧಿನಿಯಮ ಸಂಖ್ಯೆ 06ರ ಮೂಲಕ ದಿನಾಂಕ: 01.04.2015ರಿಂದ ಬಿಟ್ಟುಬಿಡಲಾಗಿದೆ.
3. 2016ರ ಅಧಿನಿಯಮ ಸಂಖ್ಯೆ 06ರ ಮೂಲಕ ದಿನಾಂಕ: 01.04.2015 ರಿಂದ ಸೇರಿಸಲಾಗಿದೆ.

(4) ಸಂದಾಯ ಮಾಡಬೇಕಾದ ಅಥವಾ ಮರುಸಂದಾಯ ಮಾಡಬೇಕಾದ ನಿವ್ವಳ ತೆರಿಗೆಯ ಮೊತ್ತವನ್ನು ಲೆಕ್ಕಹಾಕುವ ಉದ್ದೇಶಕ್ಕಾಗಿ, [1][29ನೇ ಪ್ರಕರಣಕ್ಕೆ][1] ಅನುಸಾರವಾಗಿ ಮಾರಾಟಕ್ಕೆ ಸಂಬಂಧಿಸಿದಂತೆ ತೆರಿಗೆ ಬೆಲೆಪಟ್ಟಿ, ಖರ್ಚು ಚೀಟಿ ಅಥವಾ ಜಮಾಚೀಟಿಗಳನ್ನು ನೀಡಿದ್ದ ಹೊರತಾಗಿ ಮತ್ತು 3ನೇ ಪ್ರಕರಣದ (2)ನೇ ಉಪಪ್ರಕರಣದ ಅಡಿಯಲ್ಲಿ ಸಂದಾಯ ಮಾಡಿದ ಅಂಥ ತೆರಿಗೆಯ ಹೊರತು ಮಾರಾಟದ ಸಂಬಂಧದಲ್ಲಿ ವಜಾವನ್ನು ತೆಗೆದುಕೊಳ್ಳುವ ಕಾಲದಲ್ಲಿ

ಸಲ್ಲಿಸಿದ್ದ ಯಾವುದೇ ವಿವರ ಪಟ್ಟಿಯು ನೋಂದಾಯಿತ ವ್ಯಾಪಾರಿಯೊಡನೆ ಇದ್ದ ಹೊರತು, ಹೂಡುವಳಿ ತೆರಿಗೆಯನ್ನು ಕಡಿತ ಮಾಡತಕ್ಕದ್ದಲ್ಲ.

(5) 11,12, 14, 17, 18 ಮತ್ತು 19ನೇ ಪ್ರಕರಣಗಳಲ್ಲಿ ನಿರ್ದಿಷ್ಟಪಡಿಸಿದ ಹೂಡುವಳಿ ತೆರಿಗೆ ನಿರ್ಬಂಧಗಳಿಗೆ ಒಳಪಟ್ಟು, ವ್ಯಾಪಾರಿಯು ತಾನು ಸಂದಾಯ ಮಾಡಬೇಕಾದ ಹೂಡುವಳಿ ತೆರಿಗೆಯು (3)ನೇ ಉಪಪ್ರಕರಣದ ಅಡಿಯಲ್ಲಿ ಆತನು ಸಂದಾಯ ಮಾಡತಕ್ಕ ಹುಟ್ಟುವಳಿ ತೆರಿಗೆಗಿಂತ ಹೆಚ್ಚಾಗಿದ್ದಲ್ಲಿ ಹೆಚ್ಚುವರಿ ಮೊತ್ತವನ್ನು ನಿಯಮಿಸಬಹುದಾದಂತೆ ಸರಿದೂಗಿಸತಕ್ಕದ್ದು ಅಥವಾ ಬಡ್ಡಿ ಸಹಿತವಾಗಿ ಮರುಪಾವತಿಸತಕ್ಕದ್ದು.

1. 2013ರ ಅಧಿನಿಯಮ ಸಂಖ್ಯೆ 32ರ ಮೂಲಕ ದಿನಾಂಕ: 1.4.2013 ರಿಂದ ಪ್ರತಿಯೋಜಿಸಲಾಗಿದೆ.

[1][(6)ಈ ಅಧಿನಿಯಮದಲ್ಲಿ ಏನೇ ಇದ್ದರೂ, ನಿವ್ವಳ ತೆರಿಗೆಯನ್ನು ಲೆಕ್ಕಹಾಕಲು ನೋಂದಾಯಿತ ವ್ಯಾಪಾರಿಯು ಕಡಿತಗೊಳಿಸಿದ ಹೂಡುವಳಿ ತೆರಿಗೆಯು, 35ನೇ ಪ್ರಕರಣದ ಮೊದಲನೇ ಪರಂತುಕದ ಅಡಿಯಲ್ಲಿ ಆಯುಕ್ತನು ಹೊರಡಿಸಿದ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಿದ ವಿಧಾನದಲ್ಲಿ ಅಂತರ್ಜಾಲ ಮುಖಾಂತರ ವಿದ್ಯುನ್ಮಾನೀಯವಾಗಿ ನಿಯಮಿಸಲಾದ ನಮೂನೆಯಲ್ಲಿ ವಿವರಪಟ್ಟಿಗಳನ್ನು ಸಿದ್ಧಪಡಿಸಲು ಬೇಕಾದ ವಿವರಗಳನ್ನು ಒದಗಿಸಲು ವಿಫಲವಾಗುವ ಅಥವಾ ತಪ್ಪಾದ ಮತ್ತು ಅಪೂರ್ಣ ವಿವರಗಳನ್ನು ಒದಗಿಸುವ ವ್ಯಾಪಾರಿಗೆ ತಾತ್ಕಾಲಿಕವಾದುದಾಗಿದೆ ಹಾಗೂ ಅಧಿಕಾರವ್ಯಾಪ್ತಿಯುಳ್ಳ ಸ್ಥಳೀಯ ಮೌಲ್ಯವರ್ಧಿತ ತೆರಿಗೆ ಅಧಿಕಾರಿ ಅಥವಾ ಉಪ ಮೌಲ್ಯವರ್ಧಿತ ತೆರಿಗೆ ಅಧಿಕಾರಿಯು, ಅಂಥ ವ್ಯಾಪಾರಿಯನ್ನು ಆತನು ಕ್ಲೇಮು ಮಾಡಿದ ಹೂಡುವಳಿ ತೆರಿಗೆಯನ್ನು ನಿರ್ಬಂಧಗೊಳಿಸುವ ಮೂಲಕ ಅಂಥ ತೆರಿಗೆ ಅವಧಿಗಾಗಿ ತೆರಿಗೆ ನಿರ್ಧರಣೆ ಮೂಲಕ ತೆರಿಗೆಯನ್ನು ನಿರ್ಧರಿಸತಕ್ಕದ್ದು ಮತ್ತು ತಗಾದೆ ನೋಟೀಸನ್ನು ಜಾರಿ ಮಾಡತಕ್ಕದ್ದು:

ಪರಂತು, ಈ ಉಪಪ್ರಕರಣದ ಅಡಿಯಲ್ಲಿ ತೆರಿಗೆ ನಿರ್ಧರಣೆಯನ್ನು ಮಾಡಲಾಗಿರುವಲ್ಲಿ ಮತ್ತು ತರುವಾಯದಲ್ಲಿ ವ್ಯಾಪಾರಿಯು ಯಾವ ತೆರಿಗೆ ಅವಧಿಗೆ ತೆರಿಗೆ ನಿರ್ಧರಣೆಯು ಸಂಬಂಧಿಸಿರುವುದೋ ಆ ಅವಧಿಗೆ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಿದ ವಿಧಾನದಲ್ಲಿ ಅಂತರ್ಜಾಲದ ಮುಖಾಂತರ ವಿದ್ಯುನ್ಮಾನೀಯವಾಗಿ ವಿವರಗಳನ್ನು ಒದಗಿಸಿದಲ್ಲಿ ಅಥವಾ ಸರಿಯಾದ ಮತ್ತು ಸಂಪೂರ್ಣ ವಿವರಗಳನ್ನು ನಿಯಮಿಸಲಾದ ನಮೂನೆಯಲ್ಲಿ ವಿವರಪಟ್ಟಿಗಳನ್ನು ಸಿದ್ಧಪಡಿಸಲುಬೇಕಾದ ವಿವರಗಳನ್ನು ಒದಗಿಸಿದಲ್ಲಿ, ಅಧಿಕಾರವ್ಯಾಪ್ತಿಯುಳ್ಳ ಸ್ಥಳೀಯ ಮೌಲ್ಯವರ್ಧಿತ ತೆರಿಗೆ ಅಧಿಕಾರಿ ಅಥವಾ ಮೌಲ್ಯವರ್ಧಿತ ತೆರಿಗೆ ಉಪ ಅಧಿಕಾರಿಯು ತೆರಿಗೆ ನಿರ್ಧರಣೆಯನ್ನು ಹಿಂತೆಗೆದುಕೊಳ್ಳತಕ್ಕದ್ದು, ಆದರೆ, ವ್ಯಾಪಾರಿಯು, 72ನೇ ಪ್ರಕರಣದ (3–ಎ) ಉಪಪ್ರಕರಣದ ಅಡಿಯಲ್ಲಿ ಅನ್ವಯವಾಗುವಂತೆ ದಂಡಕ್ಕೆ ಗುರಿಯಾಗತಕ್ಕದ್ದು][1]

1. 2016ರ ಅಧಿನಿಯಮ ಸಂಖ್ಯೆ 06ರ ಮೂಲಕ ದಿನಾಂಕ: 01.4.2016 ರಿಂದ ಸೇರಿಸಲಾಗಿದೆ.

**11. ಹೂಡುವಳಿ ತೆರಿಗೆಯ ನಿರ್ಬಂಧಗಳು.–** (ಎ) ಈ ಮುಂದಿನವುಗಳ ಸಂಬಂಧದಲ್ಲಿ ಸಂದಾಯ ಮಾಡಬೇಕಾದ ನಿವ್ವಳ ತೆರಿಗೆಯನ್ನು ಲೆಕ್ಕಹಾಕುವಾಗ ಹೂಡುವಳಿ ತೆರಿಗೆಯನ್ನು ಕಡಿತಗೊಳಿಸತಕ್ಕದ್ದಲ್ಲ,–

(1) ಭಾರತದ ಸರಹದ್ದಿನ ಹೊರಗೆ ರಫ್ತು ಕ್ರಮದಲ್ಲಿ ಸರಕುಗಳನ್ನು ಮಾರಾಟ ಮಾಡಿದುದರ ಹೊರತಾಗಿ 5ನೇ ಪ್ರಕರಣದ ಅಡಿಯಲ್ಲಿ ವಿನಾಯಿತಿಸಲ್ಪಟ್ಟ ಅಂಥ ಸರಕುಗಳ ಮಾರಾಟಕ್ಕಾಗಿ [1][ಅಥವಾ ತಯಾರಿಕೆಗಾಗಿ ಅಥವಾ ಸಂಸ್ಕರಣೆಗಾಗಿ ಅಥವಾ ಪ್ಯಾಕು ಮಾಡುವುದಕ್ಕಾಗಿ ಅಥವಾ ದಾಸ್ತಾನು ಮಾಡುವುದಕ್ಕಾಗಿ][1] ಮಾಡಿದುದೆಂದು ಹೇಳಲಾದ ಖರೀದಿಯ ಮೇಲೆ ಸಂದಾಯ ಮಾಡಿದ ತೆರಿಗೆ;

1. 2008ರ ಅಧಿನಿಯಮ ಸಂಖ್ಯೆ 5ರ ಮೂಲಕ ದಿನಾಂಕ: 11.3.2005 ರಿಂದ ಸೇರಿಸಲಾಗಿದೆ ಎಂದು ಭಾವಿಸತಕ್ಕದ್ದು

[2][(2) ನಿರ್ದಿಷ್ಟಪಡಿಸಬಹುದಾದಂಥ ಷರತ್ತುಗಳಿಗೆ ಒಳಪಟ್ಟು ಖರೀದಿಸಿದ ಮತ್ತು,–

(i) ಪುನರ್ ಮಾರಾಟಕ್ಕಾಗಿ; ಅಥವಾ

(ii) ಮಾರಾಟಕ್ಕಾಗಿ ಇತರ ಸರಕುಗಳ ತಯಾರಿಕೆ ಅಥವಾ ಯಾವುದೇ ಇತರ ಪ್ರಕ್ರಿಯೆಗಾಗಿ,

– ಅಲ್ಲದೆ ಇತರ ಉದ್ದೇಶಗಳಿಗಾಗಿ ಬಳಸಿಕೊಂಡ ಐದನೇ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದಂತೆ ಸರಕುಗಳ ಮೇಲೆ ಸಂದಾಯಮಾಡಿದ ತೆರಿಗೆ;

(3) ಸರ್ಕಾರವು ಅಥವಾ ಆಯುಕ್ತನು ಅಧಿಸೂಚಿಸಬಹುದಾದ, ನಿರ್ದಿಷ್ಟಪಡಿಸ ಬಹುದಾದಂಥ ಷರತ್ತುಗಳಿಗೆ ಒಳಪಟ್ಟು ಖರೀದಿಸಿದ ಸರಕುಗಳ ಮೇಲೆ ಸಂದಾಯಮಾಡಿದ ತೆರಿಗೆ;

(4) 12ನೇ ಪ್ರಕರಣದಲ್ಲಿ ಉಪಬಂಧಿಸಿದಂತೆ ಹೊರತುಪಡಿಸಿ (2) ಅಥವಾ (3)ನೇ ಖಂಡಗಳ ಅಡಿಯಲ್ಲಿ ಬರುವವುಗಳ ಹೊರತಾಗಿ, ಬಂಡವಾಳ ಸರಕುಗಳ ಖರೀದಿಯ ಮೇಲೆ ಸಂದಾಯಮಾಡಿದ ತೆರಿಗೆ;

(5) 14ನೇ ಪ್ರಕರಣದಿಂದ ಉಪ ಬಂಧಿಸಿದಂತೆ ಅಂತರರಾಜ್ಯ ವ್ಯಾಪಾರ ಅಥವಾ ವಾಣಿಜ್ಯ ಕ್ರಮದಲ್ಲಿ ಮಾರಾಟ ಅಥವಾ ಖರೀದಿಯ ನೇರ ಪರಿಣಾಮವಾಗಿಲ್ಲದ ಹೊರತು ರಾಜ್ಯದ ಹೊರಗಿನ ಸ್ಥಳಗಳಿಗೆ ರವಾನಿಸಲಾದ, ತೆರಿಗೆಗೆ ಗುರಿಯಾಗತಕ್ಕ ರಾಜ್ಯದ ಹೊರಗೆ ರವಾನಿಸಿದ ಅಥವಾ ಇತರ ಸರಕುಗಳ ತಯಾರಿಕೆ, ಸಂಸ್ಕರಣೆ ಅಥವಾ ಪ್ಯಾಕಿಂಗ್‌ನಲ್ಲಿ ಹೂಡುವಳಿಗಳಾಗಿ ಉಪಯೋಗಿಸುವ ಸರಕುಗಳ ಖರೀದಿಯ ಮೇಲೆ ಸಂದಯ ಮಾಡಿದ ತೆರಿಗೆ][2]

1. 2006ರ ಅಧಿನಿಯಮ ಸಂಖ್ಯೆ 4ರ ಮೂಲಕ ದಿನಾಂಕ: 1.4.2006 ರಿಂದ ಪ್ರತಿಯೋಜಿಸಲಾಗಿದೆ.

(6)ಭಾರತ ಸರಹದ್ದಿನ ಹೊರಗೆ ರಫ್ತು ಕ್ರಮದಲ್ಲಿ ಮಾರಾಟಕ್ಕಾಗಿ ಯಾವುವೇ ಸರಕುಗಳ ಅಥವಾ ತೆರಿಗೆ ಸಂದಾಯ ಮಾಡಬೇಕಾದ ಸರಕುಗಳ ಅಥವಾ ಸ್ವಂತ ಉಪಯೋಗ ವಿದ್ಯುಚ್ಛಕ್ತಿಯ ಉತ್ಪಾದನೆಗಳಲ್ಲಿ ಇಂಧನವಾಗಿ ಉಪಯೋಗಿಸಿದಾಗ ಹೂಡುವಳಿ ತೆರಿಗೆಯನ್ನು 14ನೇ ಪ್ರಕರಣದಲ್ಲಿ ಉಪಬಂಧಿಸಲಾದಂತೆ ಕಡಿತ ಮಾಡತಕ್ಕದಂಥವುಗಳನ್ನು ಹೊರತುಪಡಿಸಿ, ನ್ಯಾಫ್ತಾ, ದ್ರವೀಕೃತ ಪೆಟ್ರೋಲಿಯಂ ಅನಿಲ, ಕುಲುಮೆ ಎಣ್ಣೆ, [1][XXX][1] ಸುಪೀರಿಯರ್ ಸೀಮೆ ಎಣ್ಣೆ, ಸೀಮೆ ಎಣ್ಣೆ ಮತ್ತು ಇತರ ಯಾವುದೇ ಪೆಟ್ರೋಲಿಯಂ ಉತ್ಪನ್ನಗಳನ್ನು, ಮೋಟಾರು ವಾಹನಗಳಲ್ಲಿ ಇಂಧನವಾಗಿ ಉಪಯೋಗಿಸಿದಾಗ ಅವುಗಳ ಖರೀದಿಗಳ ಮೇಲೆ ಸಂದಾಯ ಮಾಡಿದ ತೆರಿಗೆ;

1. 2007ರ ಅಧಿನಿಯಮ ಸಂಖ್ಯೆ 6ರ ಮೂಲಕ ದಿನಾಂಕ: 11.3.2005ರಿಂದ ಬಿಟ್ಟುಬಿಡಲಾಗಿದೆ.

(7) 3ನೇ ಪ್ರಕರಣದ (2)ನೇ ಉಪಪ್ರಕರಣದ ಅಡಿಯಲ್ಲಿ ಇಂಧನದ ಖರೀದಿಯ ಮೇಲೆ ಸಂದಾಯ ಮಾಡಿದ ತೆರಿಗೆ;

(8) ಇಂಧನವನ್ನು ಹೊರತುಪಡಿಸಿ ಸರಕುಗಳ ಖರೀದಿಯ ಮೇಲೆ, ಅಂಥ ಸರಕುಗಳ ಮೇಲೆ ಅಥವಾ ಭಾರತದ ಸರಹದ್ದುಗಳ ಹೊರಗೆ ಅಂಥ ಸರಕುಗಳನ್ನು ರಫ್ತು ಮಾಡಿದಾಗ ಹೊರತುಪಡಿಸಿ ಅಂಥ ಸರಕುಗಳನ್ನು ಉಪಯೋಗದಲ್ಲಿ ತೊಡಗಿಸಿದ ಇತರ ಸರಕುಗಳ ಮೇಲೆ ಹುಟ್ಟುವಳಿ ತೆರಿಗೆಯನ್ನು ಸಂದಾಯ ಮಾಡುವವರೆಗೆ, 3ನೇ ಪ್ರಕರಣದ (2)ನೇ ಉಪ ಪ್ರಕರಣದ ಅಡಿಯಲ್ಲಿ ಸಂದಾಯ ಮಾಡಿದ ತೆರಿಗೆ;

(9) ಈ ಅಧಿನಿಯಮದ ಅಡಿಯಲ್ಲಿ ನೋಂದಾಯಿತನಾಗಲು ಅಗತ್ಯಪಡಿಸಲಾದ ಆದರೆ ನೋಂದಾಯಿತನಾಗಲು ತಪ್ಪಿದ ವ್ಯಾಪಾರಿಯಿಂದ ಖರೀದಿಸಿದ ಸರಕುಗಳ ಮೇಲೆ ಸಂದಾಯ ಮಾಡಿದ ತೆರಿಗೆ.

(ಬಿ) ಅನಿವಾಸಿ ಪ್ರಧಾನಕರ್ತನ ಹೊರತಾಗಿ ಯಾವೊಬ್ಬ ಇತರ ವ್ಯಕ್ತಿಯ ಪರವಾಗಿ ಸರಕುಗಳನ್ನು ಖರೀದಿಸುವ ಅಥವಾ ಮಾರಾಟ ಮಾಡುವ ಒಬ್ಬ ಏಜೆಂಟನು ಹೂಡುವಳಿ ತೆರಿಗೆಯನ್ನು ಕಡಿತಗೊಳಿಸತಕ್ಕದ್ದಲ್ಲ.

[1][(ಸಿ)ಕಾಮಗಾರಿಗಳ ಕರಾರನ್ನು ನಿರ್ವಹಿಸುವ ಯಾವೊಬ್ಬ ವ್ಯಾಪಾರಿಯು,-

(i) ಭಾಗಶಃ ಅಥವಾ ಪೂರ್ಣವಾಗಿ ಕಾಮಗಾರಿಗಳ ಕರಾರುಗಳನ್ನು ತನಗಾಗಿ ನಿರ್ವಹಿಸಿದ್ದಕ್ಕೆ ಪ್ರತಿಫಲವಾಗಿ, ಯಾವೊಬ್ಬ ಉಪ ಕರಾರುದಾರನಿಗೆ ಸಂದಾಯ ಮಾಡಿದ ಅಥವಾ ಸಂದಾಯ ಮಾಡತಕ್ಕ ಯಾವುದೇ ಮೊಬಲಗಿನ ಮೇಲೆ, ಕಡಿತವನ್ನು ಕ್ಲೇಮು ಮಾಡಿದಲ್ಲಿ; ಮತ್ತು

(ii) ಕಾಮಗಾರಿ ಕರಾರನ್ನು ನಿರ್ವಹಿಸುವ ಸಂಬಂಧದಲ್ಲಿ, ಯಾವುದೇ ವರ್ಗಾವಣೆಯ ಸ್ವತ್ತಿನ ಸರಕಿನಲ್ಲಿ ಒಳಗೊಂಡಿರದ ಮಜೂರಿ ಅಥವಾ ಇತರ ಅಂತಹ ಚಾರ್ಜುಗಳ ಸಂಬಂಧದಲ್ಲಿ ವಾಸ್ತವವಾಗಿ ವೆಚ್ಚ ಮಾಡಿದ ಮೊಬಲಗಿನ ಸಂಬಂಧದಲ್ಲಿ, ಅದನ್ನು ಕಡಿತವೆಂದು ಕ್ಲೇಮು ಮಾಡಿದಲ್ಲಿ,

– ಹೂಡುವಳಿ ತೆರಿಗೆಯನ್ನು ಕಡಿತಗೊಳಿಸತಕ್ಕದ್ದಲ್ಲ..][1]

1. 2012ರ ಅಧಿನಿಯಮ ಸಂಖ್ಯೆ 17ರ ಮೂಲಕ ದಿನಾಂಕ: 1.4.2012 ರಿಂದ ಪ್ರತಿಯೋಜಿಸಲಾಗಿದೆ.

[1][(ಡಿ) ಈ ಅಧಿನಿಯಮದಲ್ಲಿ ಏನೇ ಇದ್ದರೂ, ಯಾವುದೇ ವ್ಯಾಪಾರಿಯು ಸರಕುಗಳನ್ನು ಆತನು ಖರೀದಿಸಿದ ಅಂಥ ಸರಕುಗಳ ಬೆಲೆಗಿಂತ ಕಡಿಮೆ ಬೆಲೆಗೆ ಮಾರಿದರೆ, ಅಂಥ ಸರಕುಗಳ ಹೂಡುವಳಿ ತೆರಿಗೆ ಜಮಾ ಮೊತ್ತವನ್ನು ಅಂಥ ಸರಕುಗಳ ಹುಟ್ಟುವಳಿ ತೆರಿಗೆ ಮೊತ್ತಕ್ಕೆ ಮಿತಿಗೊಳಿಸತಕ್ಕದ್ದು.][1]

1. 2015ರ ಅಧಿನಿಯಮ ಸಂಖ್ಯೆ 15ರ ಮೂಲಕ ದಿನಾಂಕ: 01.04.2015 ರಿಂದ ಸೇರಿಸಲಾಗಿದೆ.

**12. ಬಂಡವಾಳ ಸರಕುಗಳ ಸಂಬಂಧದಲ್ಲಿ ಹೂಡುವಳಿ ತೆರಿಗೆಯನ್ನು ಕಡಿತಗೊಳಿಸುವುದು.-** (1) ಭಾರತ ಸರಹದ್ದಿನ ಹೊರಗೆ ರಫ್ತಿನ ಕ್ರಮದಲ್ಲಿ ಯಾವುವೇ ಸರಕುಗಳ ಮಾರಾಟದ ವ್ಯವಹಾರದಲ್ಲಿ [1][ಈ ಅಧಿನಿಯಮದ ಪ್ರಾರಂಭದಂದು ಅಥವಾ ತರುವಾಯ] ಬಳಸಲು ಮಾಡಿದ ಬಂಡವಾಳ ಸರಕುಗಳ ಖರೀದಿಯ ಸಂಬಂಧದಲ್ಲಿ ನೋಂದಾಯಿತ ವ್ಯಾಪಾರಿಗೆ ಮತ್ತು ತೆರಿಗೆಗೆ ಗುರಿಯಾಗತಕ್ಕ ಸರಕುಗಳ ವ್ಯವಹಾರದಲ್ಲಿ ಪೂರ್ಣವಾಗಿ ಅಥವಾ ಭಾಗಶಃ ಬಳಸಲು ಮಾಡಿದ ಬಂಡವಾಳ ಸರಕುಗಳ ಖರೀದಿಯ ಸಂಬಂಧದಲ್ಲಿ ಇತರ ನೋಂದಾಯಿತ ವ್ಯಾಪಾರಿಗೆ ಹೂಡುವಳಿ ತೆರಿಗೆಯ ಕಡಿತವನ್ನು ಅನುಮತಿಸತಕ್ಕದ್ದು.

1. 2005ರ ಅಧಿನಿಯಮ ಸಂಖ್ಯೆ 6ರ ಮೂಲಕ ದಿನಾಂಕ: 19.3.2005 ರಿಂದ ಸೇರಿಸಲಾಗಿದೆ.

(2) ಈ ಪ್ರಕರಣದ ಅಡಿಯಲ್ಲಿ ಹೂಡುವಳಿ ತೆರಿಗೆಯ ಕಡಿತವನ್ನು, ನೋಂದಾಯಿತ ವ್ಯಾಪಾರಿಯಿಂದ ವಾಣಿಜ್ಯ ಉತ್ಪನ್ನಗಳನ್ನು ಪ್ರಾರಂಭಿಸಲಾದ ಅಥವಾ ತೆರಿಗೆಗೆ ಗುರಿಯಾಗತಕ್ಕ ಸರಕುಗಳ ಮಾರಾಟದ ಅಥವಾ ಭಾರತದ ಸರಹದ್ದುಗಳ ಹೊರಗೆ ರಫ್ತಿನ ಕ್ರಮದಲ್ಲಿ ಯಾವುವೇ ಸರಕುಗಳ ಮಾರಾಟವನ್ನು ಮಾಡಿದ ನಂತರ ಮಾತ್ರವೇ ಅನುಮತಿಸತಕ್ಕದ್ದು [1][xxx][1].

1. 2006ರ ಅಧಿನಿಯಮ ಸಂಖ್ಯೆ 4ರ ಮೂಲಕ ದಿನಾಂಕ: 1.4.2006 ರಿಂದ ಬಿಟ್ಟುಬಿಡಲಾಗಿದೆ.

**13. ನೋಂದಣಿ ಪೂರ್ವ ಖರೀದಿಗಳು.-** ನೋಂದಾಯಿತ ವ್ಯಾಪಾರಿಗೆ ಆತನ ನೋಂದಣಿಯ ದಿನಾಂಕಕ್ಕೆ ಪೂರ್ವದ ಮೂರು ತಿಂಗಳೊಳಗಾಗಿ ವ್ಯಾಪಾರದ ಉದ್ದೇಶಕ್ಕಾಗಿ ಮಾರಾಟಗಾರನು ತೆರಿಗೆಗೆ ಗುರಿಯಾಗತಕ್ಕ ಮಾರಾಟದ ಸರಕುಗಳನ್ನು ಆತನಿಗೆ ಮಾರಾಟ ಮಾಡಿದಾಗ ಆತನಿಂದ ವಸೂಲಿ ಮಾಡಿದ ತೆರಿಗೆಯ ಸಂಬಂಧದಲ್ಲಿ 11ನೇ ಪ್ರಕರಣದ ನಿರ್ಬಂಧಗಳಿಗೊಳಪಟ್ಟು ಹೂಡುವಳಿ ತೆರಿಗೆಯ ಕಡಿತವನ್ನು ಅನುಮತಿಸಬಹುದು, ಪರಂತು ನೋಂದಣಿಯ ದಿನಾಂಕಕ್ಕೆ ಪೂರ್ವದಲ್ಲಿ ಮಾರಾಟ ಮಾಡಿದ ಅಥವಾ ಅನ್ಯಥಾ ವಿಲೆ ಮಾಡಿದ ಸರಕುಗಳ ಸಂಬಂಧದಲ್ಲಿ ಹೂಡುವಳಿ ತೆರಿಗೆಯ ಕಡಿತವನ್ನು ಅನುಮತಿಸತಕ್ಕದ್ದಲ್ಲ.

[1][**14. ವಿಶೇಷ ರಿಯಾಯಿತಿ ಯೋಜನೆ.-** ಹೂಡುವಳಿ ತೆರಿಗೆಯ ಮುರುಗಡೆಯನ್ನು 11ನೇ ಪ್ರಕರಣದ (ಎ) ಉಪ ಪ್ರಕರಣದ (5) ಮತ್ತು (6)ನೇ ಖಂಡಗಳಲ್ಲಿ ನಿರ್ದಿಷ್ಟಪಡಿಸಿದ ಸರಕುಗಳ ಖರೀದಿಯ ಮೇಲೆ, ಶೇಕಡಾ ನಾಲ್ಕರ ಅಥವಾ ಸರ್ಕಾರವು ಅಧಿಸೂಚಿಸಬಹುದಾದಂತೆ ಅದಕ್ಕಿಂತ ಕಡಿಮೆಯಾದ ದರಕ್ಕಿಂತ ಹೆಚ್ಚಿನ ದರದಲ್ಲಿ ವಿಧಿಸಿದ ಹೂಡುವಳಿ ತೆರಿಗೆಯಷ್ಟರವರೆಗೆ ಅನುಮತಿಸತಕ್ಕದ್ದು.][1]

1. 2006ರ ಅಧಿನಿಯಮ ಸಂಖ್ಯೆ 4ರ ಮೂಲಕ ದಿನಾಂಕ: 1.4.2006 ರಿಂದ ಪ್ರತಿಯೋಜಿಸಲಾಗಿದೆ.

**15. ತೆರಿಗೆಯ ಬಗ್ಗೆ ರಾಜಿ.-** (1) ನಿಯಮಿಸಬಹುದಾದ ಅಂಥ ಷರತ್ತುಗಳಿಗೆ ಒಳಪಟ್ಟು ಮತ್ತು ಅಂಥ ಸಂದರ್ಭಗಳಲ್ಲಿ, 4ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದಂತೆ ರಾಜ್ಯದ ಹೊರಗಿನಿಂದ ಅಥವಾ ಭಾರತದ ಸರಹದ್ದುಗಳ ಹೊರಗಿನಿಂದ ಸರಕುಗಳನ್ನು ಖರೀದಿಸುವ ಅಥವಾ ಪಡೆಯುವ ವ್ಯಾಪಾರಿಯ ಹೊರತಾಗಿ

[1][(ಎ) ಯಾರ ಒಟ್ಟು ವಹಿವಾಟು [2][ಒಂದು ವರ್ಷದಲ್ಲಿ][2] ಐವತ್ತು ಲಕ್ಷ ರೂಪಾಯಿಗಳನ್ನು ಮೀರದಂತೆ ರಾಜ್ಯ ಸರ್ಕಾರವು ಅಧಿಸೂಚಿಸಬಹುದಾದಂಥ ಮೊಬಲಗನ್ನು ಮೀರುವುದಿಲ್ಲವೋ ಮತ್ತು ಯಾರು ಈ ಮುಂದಿನ (ಬಿ) ಅಥವಾ (ಸಿ) ಅಥವಾ (ಡಿ) ಖಂಡದ ಅಡಿಯಲ್ಲಿ ಬರುವುದಿಲ್ಲವೋ ಅಂಥ ವ್ಯಾಪಾರಿಯು;][1]

1. 2006 ರ ಅಧಿನಿಯಮ ಸಂಖ್ಯೆ 4 ರ ಮೂಲಕ ದಿನಾಂಕ: 1.4.2006 ರಿಂದ ಪ್ರತಿಯೋಜಿಸಲಾಗಿದೆ.
2. 2007 ರ ಅಧಿನಿಯಮ ಸಂಖ್ಯೆ 6 ರ ಮೂಲಕ ದಿನಾಂಕ: 1.4.2007 ರಿಂದ ಪ್ರತಿಯೋಜಿಸಲಾಗಿದೆ.

(ಬಿ) ಕಾಮಗಾರಿ ಕರಾರುಗಳನ್ನು ನಿರ್ವಹಿಸುವ ವ್ಯಾಪಾರಿಯು; ಅಥವಾ

(ಸಿ) ಒಬ್ಬ ಹೊಟೆಲ್ ನಡೆಸುವ, ರೆಸ್ಟೋರೆಂಟ್ ನಡೆಸುವ ಕೇಟರರ್ ಆಗಿರುವ ವ್ಯಾಪಾರಿಯು; [1][ಅಥವಾ ಸಿಹಿ ತಿಂಡಿಗಳ ಸ್ಟಾಲನ್ನು ಅಥವಾ [2][ಐಸ್ ಕ್ರೀಮ್ ಪಾರಲರ್ ಅನ್ನು, ಅಥವಾ ಬೇಕರಿಯನ್ನು ನಡೆಸುವ ವ್ಯಾಪಾರಿಯು ಅಥವಾ ಸರ್ಕಾರವು ಅಧಿಸೂಚಿಸ ಬಹುದಾದಂಥ ಯಾವುದೇ ಇತರ ವರ್ಗದ ವ್ಯಾಪಾರಿಯು][2]][1]

1. 2005 ರ ಅಧಿನಿಯಮ ಸಂಖ್ಯೆ 27 ರ ಮೂಲಕ ದಿನಾಂಕ: 7.6.2005 ರಿಂದ ಸೇರಿಸಲಾಗಿದೆ.
2. 2006 ರ ಅಧಿನಿಯಮ ಸಂಖ್ಯೆ 4 ರ ಮೂಲಕ ದಿನಾಂಕ: 1.4.2006 ರಿಂದ ಪ್ರತಿಯೋಜಿಸಲಾಗಿದೆ.

(ಡಿ) [1][ಗ್ರಾನೈಟ್ ಅಥವಾ ಇತರ ಯಾವುದೇ ಜಲ್ಲಿ ಕಲ್ಲುಗಳನ್ನು][1] ಉತ್ಪಾದಿಸುವ ಯಾಂತ್ರೀಕೃತ ಕ್ರಷಿಂಗ್ ಘಟಕವನ್ನು ಹೊಂದಿರುವ ಯಾವೊಬ್ಬ ವ್ಯಾಪಾರಿಯು,

1. 2006 ರ ಅಧಿನಿಯಮ ಸಂಖ್ಯೆ 4 ರ ಮೂಲಕ ದಿನಾಂಕ: 1.4.2006 ರಿಂದ ಪ್ರತಿಯೋಜಿಸಲಾಗಿದೆ.

– ಈ ಅಧಿನಿಯಮದ ಅಡಿಯಲ್ಲಿ ತಾನು ಸಂದಾಯ ಮಾಡಬೇಕಾದ ತೆರಿಗೆಯ ನಿವ್ವಳ ಮೊತ್ತಕ್ಕೆ ಬದಲು, ರಾಜಿಯ ರೂಪದಲ್ಲಿ ತನ್ನ ವಹಿವಾಟಿನ ಮೇಲೆ ಅಥವಾ ಕಾಮಗಾರಿಗಳ ಕರಾರುಗಳನ್ನು ಕೈಗೊಂಡಿದ್ದಾಗಿನ ಒಟ್ಟು ಪ್ರತಿಫಲದ ಮೇಲೆ ನಿಯಮಿಸಬಹುದಾದಂತೆ ಶೇಕಡಾ ಐದರಷ್ಟನ್ನು ಮೀರದ ಅಥವಾ ಪ್ರತಿ ಕ್ರಷಿಂಗ್ ಯಂತ್ರಕ್ಕೆ [1][ಸರ್ಕಾರವು ಅಧಿಸೂಚಿಸಬಹುದಾದಂತೆ ವರ್ಷಕ್ಕೆ][1] ಎರಡು ಲಕ್ಷ ರೂಪಾಯಿಗಳಿಗೆ ಮೀರದ ಅಂಥ ದರದಲ್ಲಿ ಮೊತ್ತವನ್ನು ಸಂದಾಯ ಮಾಡಲು ಆಯ್ಕೆ ಮಾಡಿಕೊಳ್ಳಬಹುದು.

1. 2005 ರ ಅಧಿನಿಯಮ ಸಂಖ್ಯೆ 11 ರ ಮೂಲಕ ದಿನಾಂಕ: 1.4.2005 ರಿಂದ ಪ್ರತಿಯೋಜಿಸಲಾಗಿದೆ.

[1][(2)(1)ನೇ ಉಪ ಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, (1)ನೇ ಉಪ ಪ್ರಕರಣದ ಒಂದಕ್ಕಿಂತ ಹೆಚ್ಚು ಖಂಡಗಳ ಅಡಿಯಲ್ಲಿ ಬರುವ ತರಹದ ವ್ಯವಹಾರದ ಸ್ವರೂಪವನ್ನು ಹೊಂದಿರುವ ವ್ಯಾಪಾರಿಯು, ಈ ಮುಂದಿನ ಷರತ್ತುಗಳಿಗೆ ಒಳಪಟ್ಟು ಅಂಥ ಯಾವುದೇ ಒಂದು ತರಹದ ಅಥವಾ ಎಲ್ಲ ತರಹದ ವ್ಯವಹಾರ ಸ್ವರೂಪಗಳಿಗೆ ಸಂಬಂಧಪಟ್ಟಂತೆ ತನ್ನ ವಹಿವಾಟಿನ ಮೇಲೆ ಸಂದಾಯ ಮಾಡಬೇಕಾದ ತೆರಿಗೆಯ ಸಂಬಂಧದಲ್ಲಿ ಸದರಿ ಉಪಪ್ರಕರಣದ ಅಡಿಯಲ್ಲಿ ರಾಜಿಗಾಗಿ ಆಯ್ಕೆ ಮಾಡಿಕೊಳ್ಳಲು ಅರ್ಹನಾಗಿರತಕ್ಕದ್ದು, ಎಂದರೆ:–

(ಎ) ಆ ವ್ಯಾಪಾರಿಯು ಪ್ರತಿಯೊಂದು ತರಹದ ತನ್ನ ವ್ಯವಹಾರಕ್ಕೆ ಪ್ರತ್ಯೇಕ ಲೆಕ್ಕಪತ್ರಗಳನ್ನು ನಿರ್ವಹಿಸಿಕೊಂಡು ಬಂದಿರಬೇಕು;

(ಬಿ) (1)ನೇ ಉಪ ಪ್ರಕರಣದ (ಎ) ಖಂಡದ ಅಡಿಯಲ್ಲಿ ಬರುವ ಅಂಥ ವ್ಯಾಪಾರಿಯ ಎಲ್ಲ ತರಹದ ವ್ಯವಹಾರಗಳ ಸಂಬಂಧದಲ್ಲಿ ಒಂದು ವರ್ಷದಲ್ಲಿಯ ಒಟ್ಟು ವಹಿವಾಟು ಸದರಿ ಖಂಡದ ಅಡಿಯಲ್ಲಿ ಅಧಿಸೂಚಿಸಬಹುದಾದ ಮೊಬಲಗನ್ನು ಮೀರಿರಬಾರದು;

(ಸಿ) ಅಂಥ ವ್ಯವಹಾರದ ಪ್ರತಿಯೊಂದು ತರಹದ ಸಂಬಂಧದಲ್ಲಿ ತನ್ನ ಒಟ್ಟು ವಹಿವಾಟಿನ ಅಥವಾ ಒಟ್ಟು ಪ್ರತಿಫಲದ ಮೇಲೆ ಅಂಥ ವ್ಯಾಪಾರಿಯು ರಾಜಿಯ ರೂಪದಲ್ಲಿ ಸಂದಾಯ ಮಾಡಬೇಕಾದ ಮೊಬಲಗು (1)ನೇ ಉಪ ಪ್ರಕರಣದ ಅಡಿಯಲ್ಲಿ ಆ ತರಹದ ವ್ಯವಹಾರಕ್ಕಾಗಿ ಅಧಿಸೂಚಿತಬಹುದಾದಂತೆ ಇರತಕ್ಕದ್ದು;

(ಡಿ) (1)ನೇ ಉಪಪ್ರಕರಣದ ಅಡಿಯಲ್ಲಿ ಒಂದು ತರಹದ ವ್ಯವಹಾರಕ್ಕಾಗಿ ರಾಜಿ ವಿಧಾನದಲ್ಲಿ ಸಂದಾಯಮಾಡತಕ್ಕ ಮೊಬಲಗನ್ನು ಲೆಕ್ಕಹಾಕುವುದಕ್ಕಾಗಿ ಅಂಥ ಪ್ರತಿಯೊಂದು ತರಹದ ಸಂಬಂಧದಲ್ಲಿ ಒಟ್ಟು ವಹಿವಾಟು ಅಥವಾ ಒಟ್ಟು ಪ್ರತಿಫಲವನ್ನು ಆ ವ್ಯಾಪಾರಿಯು ತನ್ನ ಎಲ್ಲಾ ತರಹದ ವ್ಯವಹಾರಗಳಿಂದ ಪಡೆಯುವ ಒಟ್ಟು ವಹಿವಾಟಿನಿಂದ ಕಳೆಯತಕ್ಕದ್ದು;

(ಇ) (1)ನೇ ಉಪಪ್ರಕರಣದ ಅಡಿಯಲ್ಲಿ ರಾಜಿಗಾಗಿ ತನ್ನ ಆಯ್ಕೆಯನ್ನು ಚಲಾಯಿಸದ ಅಥವಾ ರಾಜಿಗೆ ಅರ್ಹವಾಗದಂಥ ತರಹದ ವ್ಯವಹಾರದ ಸಂಬಂಧದಲ್ಲಿ, (ಡಿ) ಖಂಡದಲ್ಲಿ ನಿರ್ದಿಷ್ಟಪಡಿಸಿದಂತೆ ಕಳೆದ ತರುವಾಯ ಬಾಕಿ ಉಳಿದ ಒಟ್ಟು ವಹಿವಾಟಿನಿಂದ ನಿರ್ಧರಿಸಲಾದ ತೆರಿಗೆದಾಯಕನ ವಹಿವಾಟಿನ ಮೇಲೆ ಆತನು 4ನೇ ಪ್ರಕರಣದ ಅಡಿಯಲ್ಲಿ ನಿರ್ದಿಷ್ಟಪಡಿಸಿದಂತೆ ತೆರಿಗೆ ಸಂದಾಯಮಾಡಲು ಗುರಿಯಾಗ ತಕ್ಕದ್ದು.][1]

1. 2007 ರ ಅಧಿನಿಯಮ ಸಂಖ್ಯೆ 6ರ ಮೂಲಕ ದಿನಾಂಕ: 1.4.2007ರಿಂದ ಪ್ರತಿಯೋಜಿಸಲಾಗಿದೆ.

(3) ಮೇಲಿನ (1)ನೇ ಉಪ ಪ್ರಕರಣದ ಅಡಿಯಲ್ಲಿ ತೆರಿಗೆಯ ಬಗ್ಗೆ ರಾಜಿಗೆ ಅರ್ಹನಾದ ಯಾವೊಬ್ಬ ವ್ಯಾಪಾರಿಯು, ನಿಯಮಿಸಲಾದ ಪ್ರಾಧಿಕಾರಕ್ಕೆ ತನ್ನ ಆಯ್ಕೆಯನ್ನು ಚಲಾಯಿಸುವ ಬಗ್ಗೆ ತಿಳಿಸಬಹುದು ಮತ್ತು ಅವನು ಅಂಥ ಸಂದಾಯ ಮಾಡಬೇಕಾದ ಮೊಬಲಗನ್ನು ಸಂದಾಯ ಮಾಡತಕ್ಕದ್ದು ಹಾಗೂ ನಿಯಮಿಸಬಹುದಾದ ಅಂಥ ನಮೂನೆಯಲ್ಲಿ ವಿವರ ಪಟ್ಟಿಯನ್ನು ಸಲ್ಲಿಸತಕ್ಕದ್ದು.

(4) [1][ಈ ಪ್ರಕರಣದಡಿಯಲ್ಲಿ][1] ತೆರಿಗೆಯ ಬಗ್ಗೆ ರಾಜಿಗೆ ಆಯ್ಕೆ ಮಾಡಿಕೊಳ್ಳುವ ಯಾವೊಬ್ಬ ವ್ಯಾಪಾರಿಗೆ ಆತನು ಮಾಡಿದ ಯಾವುವೇ ಖರೀದಿಗಳ ಮೇಲೆ ಯಾವುದೇ ಹೂಡುವಳಿ ತೆರಿಗೆಯನ್ನು ಕ್ಲೇಮು ಮಾಡಲು ಅನುಮತಿಸತಕ್ಕದ್ದಲ್ಲ.

1. 2008ರ ಅಧಿನಿಯಮ ಸಂಖ್ಯೆ 5ರ ಮೂಲಕ ದಿನಾಂಕ: 1.4.2006 ರಿಂದ ಪ್ರತಿಯೋಜಿಸಲಾಗಿದೆ ಎಂದು ಭಾವಿಸತಕ್ಕದ್ದು.

(5) [1][(1) ನೇ ಉಪಪ್ರಕರಣದಲ್ಲಿ][1] ಏನೇ ಒಳಗೊಂಡಿದ್ದಾಗ್ಯೂ,-

1. 2008ರ ಅಧಿನಿಯಮ ಸಂಖ್ಯೆ 5ರ ಮೂಲಕ ದಿನಾಂಕ: 1.4.2006 ರಿಂದ ಪ್ರತಿಯೋಜಿಸಲಾಗಿದೆ ಎಂದು ಭಾವಿಸತಕ್ಕದ್ದು.

(ಎ) ರಾಜ್ಯದ ಹೊರಗಿನಿಂದ ಅಥವಾ ಭಾರತದ ಗಡಿಯ ಹೊರಗಿನಿಂದ ಸರಕುಗಳನ್ನು ಖರೀದಿಸುವ ಅಥವಾ ಪಡೆದುಕೊಳ್ಳುವ ಕಾಮಗಾರಿಕರಾರುಗಳನ್ನು ನಿರ್ವಹಿಸುವ ಒಬ್ಬ ವ್ಯಾಪಾರಿಯು, (1) ಉಪ ಪ್ರಕರಣದ ಅಡಿಯಲ್ಲಿ ರಾಜಿಮಾಡಿಕೊಳ್ಳುವುದಕ್ಕಾಗಿ ಅರ್ಹನಾಗಿರತಕ್ಕದ್ದು ಮತ್ತು (ಸರಕುಗಳಾಗಿಯಾಗಲಿ ಅಥವಾ ಇನ್ನಾವುದೇ ರೂಪದಲ್ಲಾಗಲಿ) ಅಂಥ ಸರಕುಗಳ ಸ್ವತ್ತು ಅವನು ನಿರ್ವಹಿಸಿದ ಯಾವುದೇ ಕಾಮಗಾರಿಗಳ ಕರಾರುಗಳಲ್ಲಿ ವರ್ಗಾವಣೆಯಾದರೆ, ವ್ಯಾಪಾರಿಯು, ಅಂಥ ಸರಕುಗಳ ಮೌಲ್ಯದ ಮೇಲೆ 4ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ದರದಲ್ಲಿ ತೆರಿಗೆ ಸಂದಾಯಕ್ಕೆ ಗುರಿಯಾಗತಕ್ಕದ್ದು ಮತ್ತು ಅಂಥ ಮೌಲ್ಯವನ್ನು ಈ ಅಧಿನಿಯಮದ ಅಡಿಯಲ್ಲಿ ಸಂದಾಯಮಾಡತಕ್ಕ ತೆರಿಗೆಗೆ ಬದಲಾಗಿ ಅಧಿಸೂಚಿಸಲಾದಂತೆ ರಾಜಿಯ ಮೂಲಕ (1)ನೇ ಉಪ ಪ್ರಕರಣದ ಅಡಿಯಲ್ಲಿ, ಸಂದಾಯಮಾಡತಕ್ಕ ಮೊಬಲಗು ಪಾವತಿಸಬೇಕಾದಂಥ ನಿರ್ವಹಿಸಲಾದ ಕಾಮಗಾರಿಗಳ ಕರಾರಿನ ಒಟ್ಟು ಪ್ರತಿಫಲದಿಂದ ಮುರಿದುಕೊಳ್ಳತಕ್ಕದ್ದು.

(ಬಿ) ಕಾಮಗಾರಿಗಳ ಕರಾರನ್ನು ನಿರ್ವಹಿಸುತ್ತಿರುವ ಮತ್ತು (1)ನೇ ಉಪ ಪ್ರಕರಣದ ಅಡಿಯಲ್ಲಿ ತೆರಿಗೆ-ರಾಜಿಗಾಗಿ ಆಯ್ಕೆಮಾಡಿಕೊಂಡ ಒಬ್ಬ ವ್ಯಾಪಾರಿಯ ಸಂದರ್ಭದಲ್ಲಿ, ಪೂರ್ಣವಾಗಿ ಅಥವಾ ಭಾಗಶಃ ಕಾಮಗಾರಿಗಳ ಕರಾರರನ್ನು ನಿರ್ವಹಿಸುವುದಕ್ಕಾಗಿ ಪ್ರತಿಫಲವಾಗಿ-ಒಳ-ಕರಾರುದಾರನಿಗೆ ಸಂದಾಯಮಾಡಿದ ಮೊಬಲಗಿನ ಮೇಲೆ, ರಾಜಿಯ ರೂಪದಲ್ಲಿ ಯಾವುದೇ ತೆರಿಗೆಯನ್ನು ಸಂದಾಯಮಾಡತಕ್ಕದ್ದಲ್ಲ ಮತ್ತು ಈ ಅಧಿನಿಯಮದ ಅಡಿಯಲ್ಲಿ ಸಂದಾಯಮಾಡತಕ್ಕ ತೆರಿಗೆಗೆ ಬದಲಾಗಿ ರಾಜಿಯ ಮೂಲಕ (1)ನೇ ಉಪ ಪ್ರಕರಣ ಅಡಿಯಲ್ಲಿ ಅಧಿಸೂಚಿಸಲಾದಂತೆ [1][ಸಂದಾಯಮಾಡಬೇಕಾದ ಅಥವಾ ಮಾಡಿದ ಮೊಬಲಗಿನ ಮೇಲೆ][1] ನಿರ್ವಹಿಸಲಾದ ಕಾಮಗಾರಿಗಳ ಕರಾರಿನ ಒಟ್ಟು ಪ್ರತಿಫಲದಿಂದ, ಅಂಥ ಒಳ-ಕರಾರುದಾರನು, ಈ ಅಧಿನಿಯಮದ ಅಡಿಯಲ್ಲಿ ತೆರಿಗೆ ಸಂದಾಯಮಾಡಲು ಬದ್ಧನಾದ ನೋಂದಾಯಿತ ವ್ಯಾಪಾರಿಯಾಗಿರುವನೆಂದು ಮತ್ತು ಅಂಥ ಮೊಬಲಗು ಅಂಥ ಒಳ ಕರಾರುದಾರನು ದಾಖಲ್ಮಾಡಿದ ವಿವರಣ ಪತ್ರಗಳಲ್ಲಿ ಒಳಗೊಂಡಿದೆ ಎಂಬ ಬಗ್ಗೆ ರುಜುವಾತನ್ನು ಹಾಜರುಪಡಿಸುವುದಕ್ಕೆ ಒಳಪಟ್ಟು, ಮುರುಗಡೆಮಾಡತಕ್ಕದ್ದು.

1. 2007 ರ ಅಧಿನಿಯಮ ಸಂಖ್ಯೆ 6 ರ ಮೂಲಕ ದಿನಾಂಕ: 1.4.2007ರಿಂದ ಪ್ರತಿಯೋಜಿಸಲಾಗಿದೆ.

(ಸಿ) (1)ನೇ ಉಪ-ಪ್ರಕರಣದ ಅಡಿಯಲ್ಲಿ ತೆರಿಗೆ-ರಾಜಿಗಾಗಿ ಆಯ್ಕೆಮಾಡಿಕೊಂಡ ತರುವಾಯ, ಕಾಮಗಾರಿಗಳ ಕರಾರನ್ನು ನಿರ್ವಹಿಸುತ್ತಿರುವ ಒಬ್ಬ ವ್ಯಾಪಾರಿಯ ಸಂದರ್ಭದಲ್ಲಿ, [1][ಆತನು][1] ಈ ಅಧಿನಿಯಮದ ಅಡಿಯಲ್ಲಿ ತೆರಿಗೆಗೆ ಬದ್ಧವಾದ ಯಾವುವೇ ಸರಕುಗಳನ್ನು ತಾನು ನಿರ್ವಹಿಸಿದ್ದ ಯಾವುದೇ ಕಾಮಗಾರಿ ಕರಾರಿನಲ್ಲಿ ಅಂಥ ಸರಕುಗಳ ಸ್ವತ್ತನ್ನು (ಸರಕುಗಳಾಗಿಯಗಲಿ ಅಥವಾ ಯಾವುದಾದರೂ ಇತರ ರೂಪದಲ್ಲಾಗಲಿ) ವರ್ಗಾವಣೆ ಮಾಡುವ ರೀತಿಯಲ್ಲಲ್ಲದೆ, ಮಾರಾಟಮಾಡಿದರೆ, ಅಂಥ ಸರಕುಗಳ ಮೌಲ್ಯದ ಮೇಲೆ, ತಾನು ಮಾಡಿದ ಅಂಥ ಸರಕುಗಳ ಖರೀದಿಯ ಮೇಲೆ ಹೂಡುವಳಿ ತೆರಿಗೆಗಾಗಿ ಯಾವುದೇ ಮುರುಗಡೆ ಮಾಡದೇ 4ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ದರದಲ್ಲಿ ತೆರಿಗೆ ಸಂದಾಯಮಾಡಲು ಬದ್ಧನಾಗಿರತಕ್ಕದ್ದು.

1. 2007 ರ ಅಧಿನಿಯಮ ಸಂಖ್ಯೆ 6ರ ಮೂಲಕ ದಿನಾಂಕ: 11.3.2005ರಿಂದ ಸೇರಿಸಲಾಗಿದೆ.

(ಡಿ) (1)ನೇ ಉಪ ಪ್ರಕರಣದ (ಎ) ಅಥವಾ (ಸಿ) ಖಂಡದ ಅಡಿಯಲ್ಲಿ ತೆರಿಗೆ ರಾಜಿಗಾಗಿ ಆಯ್ಕೆ ಮಾಡಿಕೊಳ್ಳುವ ಒಬ್ಬ ವ್ಯಾಪಾರಿಯ ಸಂದರ್ಭದಲ್ಲಿ, 3ನೇ ಪ್ರಕರಣದ (2)ನೇ ಉಪ ಪ್ರಕರಣದ ಅಡಿಯಲ್ಲಿ ತೆರಿಗೆಗೆ ವಿಧಿಸುವುದಕ್ಕೆ ಬದ್ಧವಾದ ವಹಿವಾಟನ್ನು, ಅಧಿನಿಯಮದ ಅಡಿಯಲ್ಲಿ ಸಂದಾಯಮಾಡತಕ್ಕ ತೆರಿಗೆ ಬದಲಾಗಿ ರಾಜಿಯ ರೂಪದಲ್ಲಿ ಯಾವ ವಹಿವಾಟಿನ ಮೇಲೆ (1)ನೇ ಉಪ

ಪ್ರಕರಣದ ಅಡಿಯಲ್ಲಿ ಮೊಬಲಗನ್ನು ಸಂದಾಯಮಾಡತಕ್ಕದೆಂದು ಅಧಿಸೂಚಿಸಲಾಗಿದೆಯೋ, ಆ ವಹಿವಾಟಿನಿಂದ [1][ಮುರುಗಡೆ ಮಾಡತಕ್ಕದ್ದು;][1]

1. 2007 ರ ಅಧಿನಿಯಮ ಸಂಖ್ಯೆ 6ರ ಮೂಲಕ ದಿನಾಂಕ: 1.4.2007ರಿಂದ ಪ್ರತಿಯೋಜಿಸಲಾಗಿದೆ.

[1][(ಇ) ಕಾಮಗಾರಿಗಳ ಕರಾರನ್ನು ನಿರ್ವಹಿಸುತ್ತಿರುವ ಮತ್ತು (1)ನೇ ಉಪ ಪ್ರಕರಣದ ಅಡಿಯಲ್ಲಿ ತೆರಿಗೆ ರಾಜಿಗೆ ಆಯ್ಕೆ ಮಾಡಿಕೊಂಡ ಒಬ್ಬ ವ್ಯಾಪಾರಿಯು ಆತನು ನೆರವೇರಿಸಿದ ಕಾಮಗಾರಿ ಕರಾರಿನ ಒಟ್ಟು ಪ್ರತಿಫಲದ ಮೇಲೆ ರಾಜಿಯ ರೂಪದಲ್ಲಿ ಸಂದಾಯಮಾಡುವ ತೆರಿಗೆಗೆ ಹೆಚ್ಚುವರಿಯಾಗಿ, 3ನೇ ಪ್ರಕರಣದ (2)ನೇ ಉಪ ಪ್ರಕರಣದ ಅಡಿಯಲ್ಲಿ, ಸಂದಾಯಮಾಡತಕ್ಕ ತೆರಿಗೆ ಯಾವುದಾದರೂ ಇದ್ದರೆ ಅದನ್ನು ಸಂದಾಯ ಮಾಡುವುದಕ್ಕೆ ಬದ್ಧನಾಗಿರತಕ್ಕದ್ದು.][1]

1. 2007 ರ ಅಧಿನಿಯಮ ಸಂಖ್ಯೆ 6ರ ಮೂಲಕ ದಿನಾಂಕ: 1.4.2006ರಿಂದ ಸೇರಿಸಲಾಗಿದೆ.

**16. ವಿಶೇಷ ತೆರಿಗೆ ಪಾವತಿ ಯೋಜನೆ.**- 4ನೇ ಪ್ರಕರಣದ ಅಡಿಯಲ್ಲಿ ತೆರಿಗೆಯ ಸಂದಾಯಕ್ಕೆ ಹೊಣೆಯಾಗತಕ್ಕ ಯಾವೊಬ್ಬ ವ್ಯಾಪಾರಿಯು ಪ್ರತಿಯೊಂದು ಪ್ರತ್ಯೇಕ ಮಾರಾಟ, ಅದರ ಮೌಲ್ಯ ಅಥವಾ ತೆರಿಗೆಯ ದರವನ್ನು ಗುರುತಿಸಲು ಅಸಮರ್ಥನಾದರೆ, [1][ಅಥವಾ ಪ್ರತಿಯೊಂದು ಮಾರಾಟಕ್ಕಾಗಿ 29ನೇ ಪ್ರಕರಣದ ಅಡಿಯಲ್ಲಿ ನಿರ್ದಿಷ್ಟಪಡಿಸಿದಂತೆ ತೆರಿಗೆ ದರ ಪಟ್ಟಿಯನ್ನು ಇನ್‌ವಾಯ್ಸ್ ನೀಡಲು ಅಸಮರ್ಥನಾದರೆ][1] ಆತನು 10ನೇ ಪ್ರಕರಣದ ಅಡಿಯಲ್ಲಿ ನಿವ್ವಳ ತೆರಿಗೆಯನ್ನು ಸಂದಾಯ ಮಾಡಲು ಅರ್ಜಿಯನ್ನು, ನಿಯಮಿಸಲಾದ ಪ್ರಾಧಿಕಾರಕ್ಕೆ, ಅಂಥ ಪ್ರಾಧಿಕಾರವು ಪರಸ್ಪರ ಒಪ್ಪಬಹುದಾದಂತೆ, ನಿಯಮಿಸಬಹುದಾದ ಅಂಥ ರೀತಿಯಲ್ಲಿ ಒಂದು ವಿಶೇಷ ವಿಧಾನದ ಅಡಿಯಲ್ಲಿ ಸಲ್ಲಿಸಬಹುದು.

1. 2005 ರ ಅಧಿನಿಯಮ ಸಂಖ್ಯೆ 27 ರ ಮೂಲಕ ದಿನಾಂಕ: 7.6.2005 ರಿಂದ ಸೇರಿಸಲಾಗಿದೆ.

**17. ಭಾಗಶಃ ರಿಯಾಯಿತಿ.**- ಹೂಡುವಳಿ ತೆರಿಗೆಯನ್ನು ಕಡಿತಗೊಳಿಸುವ ಒಬ್ಬ ನೋಂದಾಯಿತ ವ್ಯಾಪಾರಿಯು,-

(1) ತೆರಿಗೆಗೆ ಗುರಿಯಾಗತಕ್ಕ ಸರಕುಗಳನ್ನು ಮತ್ತು 5ನೇ ಪ್ರಕರಣದ ಅಡಿಯಲ್ಲಿ ವಿನಾಯಿತಿಗೊಳಿಸಿದ ಸರಕುಗಳನ್ನು ಮಾರಾಟ ಮಾಡಿದರೆ, ಅಥವಾ

(2) [1][ತೆರಿಗೆಗೆ ಗುರಿಯಾಗತಕ್ಕ ಸರಕುಗಳ ಮಾರಾಟಗಳಿಗೆ ಅಥವಾ][1] ಮೇಲಿನ (1)ನೇ ಖಂಡದಲ್ಲಿ ಉಲ್ಲೇಖಿಸಿದ ಮಾರಾಟಗಳಿಗೆ ಹೆಚ್ಚುವರಿಯಾಗಿ, ತೆರಿಗೆಗೆ ಗುರಿಯಾಗತಕ್ಕ ಸರಕುಗಳನ್ನು ಅಥವಾ 5ನೇ ಪ್ರಕರಣದ ಅಡಿಯಲ್ಲಿ ವಿನಾಯಿತಿ ಪಡೆದ ಸರಕುಗಳನ್ನು ಅಂತರ ರಾಜ್ಯ ವ್ಯಾಪಾರ ಕ್ರಮದಲ್ಲಿ ಮಾರಾಟ ಅಥವಾ ಖರೀದಿಯ ನೇರ ಪರಿಣಾಮವಾಗಿರದಂತೆ ರಾಜ್ಯದ ಹೊರಗೆ ರವಾನೆ ಮಾಡಿದರೆ, ಅಥವಾ

1. 2007 ರ ಅಧಿನಿಯಮ ಸಂಖ್ಯೆ 6 ರ ಮೂಲಕ ದಿನಾಂಕ: 11.3.2005 ರಿಂದ ಸೇರಿಸಲಾಗಿದೆ ಎಂದು ಭಾವಿಸತಕ್ಕದ್ದು..

(3) ಯಾವುದೇ ಇತರ ಉದ್ದೇಶಕ್ಕಾಗಿನ ಖರೀದಿ ಮಾಡಿದ ಹೂಡುವಳಿಗಳನ್ನು, (ಸರಕುಗಳ ಮಾರಾಟ, ತಯಾರಿಕೆ, ಸಂಸ್ಕರಣೆ, ಪ್ಯಾಕಿಂಗ್ ಅಥವಾ ದಾಸ್ತಾನು ಮಾಡುವುದನ್ನು ಹೊರತುಪಡಿಸಿ) ತನ್ನ ವ್ಯಾಪಾರ ಕ್ರಮದಲ್ಲಿ ಬಳಸುವುದಕ್ಕೆ ಹೆಚ್ಚಿಗೆಯಾಗಿ ಬಳಸಿದರೆ, [1][ಅಥವಾ][1]

1. 2007 ರ ಅಧಿನಿಯಮ ಸಂಖ್ಯೆ 6 ರ ಮೂಲಕ ದಿನಾಂಕ: 11.3.2005 ರಿಂದ ಸೇರಿಸಲಾಗಿದೆ ಎಂದು ಭಾವಿಸತಕ್ಕದ್ದು..

[1][(4) ಮೇಲಿನ ಯಾವುವೇ ಖಂಡಗಳಡಿಯಲ್ಲಿ ಬಂದರೆ ಮತ್ತು ಯಾವುವೇ ಸರಕುಗಳ ಅಥವಾ ಬಂಧಿತ ವಿದ್ಯುತ್ ಉತ್ಪಾದನೆಯಲ್ಲಿ ಇಂಧನವಾಗಿ ಉಪಯೋಗಿಸುವುದಕ್ಕಾಗಿ ಯಾವುದೇ ಪೆಟ್ರೋಲಿಯಂ ಉತ್ಪನ್ನವನ್ನು ಖರೀದಿಸಿದರೆ,][1]

1. 2007 ರ ಅಧಿನಿಯಮ ಸಂಖ್ಯೆ 6 ರ ಮೂಲಕ ದಿನಾಂಕ: 11.3.2005 ರಿಂದ ಸೇರಿಸಲಾಗಿದೆ ಎಂದು ಭಾವಿಸತಕ್ಕದ್ದು..

- ಸರಕುಗಳ ಅಂಥ ಮಾರಾಟಗಳು ಮತ್ತು ರವಾನೆಗಳು ಅಥವಾ ಅಂಥ ಉದ್ದೇಶದ ನಡುವೆ ಕಡಿತಮಾಡಬಹುದಾದ ಹೂಡುವಳಿ ತೆರಿಗೆಯ ಹಂಚಿಕೆಗಳನ್ನು ಮತ್ತು ವರ್ಗೀಕರಣ (ಅಟ್ರಿಬ್ಯೂಷನ್) ಗಳನ್ನು ನಿಯಮಗಳಿಗೆ ಅಥವಾ ಆಯುಕ್ತನಿಂದ ಅಥವಾ ಯಾವೊಬ್ಬ ಇತರ ಪ್ರಾಧಿಕೃತ ವ್ಯಕ್ತಿಯು ಅನುಮೋದಿಸುವ ವಿಶೇಷ ವಿಧಾನಗಳಿಗೆ ಅನುಸಾರವಾಗಿ

ಮಾಡತಕ್ಕದ್ದು ಮತ್ತು ಹೆಚ್ಚುವರಿಯಾಗಿ ಕಡಿತಗೊಳಿಸಿದ ಯಾವುದೇ ಹೂಡುವಳಿ ತೆರಿಗೆಯನ್ನು ತಕ್ಷಣವೇ ಮರುಸಂದಾಯ ಮಾಡತಕ್ಕದ್ದು.

[1][**18. ಕ್ಯಾಂಟೀನುಗಳ ಸಂದರ್ಭದಲ್ಲಿ ಮೂಲದಲ್ಲಿ ತೆರಿಗೆಯನ್ನು ಮುರಿದುಕೊಳ್ಳುವುದು.**- (1) ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದರೂ, ಒಂದು ಕಾರ್ಖಾನೆ ಅಥವಾ ಇತರ ಕೈಗಾರಿಕಾ ಉದ್ಯಮವು ಅಥವಾ ಯಾವುದೇ ಇತರ ಉದ್ಯಮ ಸಂಸ್ಥೆಯು, ಒಂದು ಕ್ಯಾಂಟೀನನ್ನು ಅಥವಾ ಕೆಫಿಟೇರಿಯವನ್ನು ಅಥವಾ ರೆಸ್ಟೋರೆಂಟನ್ನು ಅಥವಾ ಇತರ ಅದೇ ಬಗೆಯ ಸೌಲಭ್ಯ, ಒಬ್ಬ ವ್ಯಾಪಾರಿಯ ಮೂಲಕ, ಅಂಥ ಕಾರ್ಖಾನೆಗಳ ಅಥವಾ ಕೈಗಾರಿಕಾ ಉದ್ಯಮಗಳ ಅಥವಾ ಉದ್ಯಮ ಸಂಸ್ಥೆಗಳ ನೌಕರರಿಗೆ ಒಂದು ಸೌಕರ್ಯವಾಗಿ, ನಡೆಸುತ್ತಿದ್ದರೆ, ತಮ್ಮ ನೌಕರರಿಗೆ ಆಹಾರ ಮತ್ತು ಪಾನೀಯ ವಸ್ತುಗಳ ಮಾರಾಟದ ಸಂಬಂಧದಲ್ಲಿ, ಯಾವುದೇ ಹೆಸರಿನಿಂದ ಕರೆಯಲಾಗುವ ಅವರ ಕೊಡುಗೆಯಾಗಿ ಅಂಥ ವ್ಯಾಪಾರಿಗೆ ಅವರು ಸಂದಾಯಮಾಡತಕ್ಕ ಯಾವುದೇ ಮೊಬಲಗಿನಿಂದ, ನೌಕರರಿಂದ ಅಂಥ ವ್ಯಾಪಾರಿಯು ಸ್ವೀಕರಿಸಿದ ಅಥವಾ ಸ್ವೀಕರಿಸತಕ್ಕ ಒಟ್ಟು ಮಾರಾಟ ಬೆಲೆಯ ಮತ್ತು ಅಂಥ ವ್ಯಾಪಾರಿಗೆ ಅಂಥ ಕಾರ್ಖಾನೆಗಳು ಅಥವಾ ಕೈಗಾರಿಕಾ ಉದ್ಯಮಗಳು ಅಥವಾ ಉದ್ಯಮ ಸಂಸ್ಥೆಗಳು ಸಂದಾಯಮಾಡಿದ ಅಥವಾ ಸಂದಾಯಮಾಡತಕ್ಕ ಕೊಡುಗೆಯ ಶೇಕಡಾ ನಾಲ್ಕರ ದರದಲ್ಲಿ ಮೊಬಲಗನ್ನು ಮುರುಗಡೆಮಾಡತಕ್ಕದ್ದು.

(2) (1)ನೇ ಉಪ ಪ್ರಕರಣದ ಅಡಿಯಲ್ಲಿ, ನೌಕರರಿಗೆ ಆಹಾರ ಮತ್ತು ಪಾನೀಯ ವಸ್ತುಗಳ ಮಾರಾಟದ ಸಂಬಂಧದಲ್ಲಿ ಅಂಥ ವ್ಯಾಪಾರಿಯಿಂದ ಸ್ವೀಕರಿಸಲಾದ ಅಥವಾ ಸ್ವೀಕರಿಸತಕ್ಕ ಒಟ್ಟು ಮಾರಾಟ ಬೆಲೆಯು ಅಥವಾ ಅವನಿಗೆ ಸಂದಾಯಮಾಡಿದ ಅಥವಾ ಸಂದಾಯಮಾಡತಕ್ಕ ಕೊಡುಗೆಯು, ಒಂದು ವರ್ಷದಲ್ಲಿ [1][ಐದು ಲಕ್ಷ ರೂಪಾಯಿಗಳಿಗಿಂತ][1] ಕಡಿಮೆ ಇದ್ದರೆ, ಯಾವುದೇ ಮುರುಗಡೆಯನ್ನು ಮಾಡತಕ್ಕದ್ದಲ್ಲ.

1. 2010 ರ ಅಧಿನಿಯಮ ಸಂಖ್ಯೆ 4 ರ ಮೂಲಕ ದಿನಾಂಕ: 01.04.2010 ರಿಂದ ಪ್ರತಿಯೋಜಿಸಲಾಗಿದೆ.

(3) (1)ನೇ ಉಪ-ಪ್ರಕರಣದ ಅಡಿಯಲ್ಲಿ ಮುರುಗಡೆ ಮಾಡುವ, ಕಾರ್ಖಾನೆ ಅಥವಾ ಇತರ ಕೈಗಾರಿಕಾ ಉದ್ಯಮ ಅಥವಾ ಉದ್ಯಮ ಸಂಸ್ಥೆಯು, ಹಿಂದಿನ ತಿಂಗಳಲ್ಲಿ ಮುರುಗಡೆ ಮಾಡಿಕೊಂಡದ್ದ ತೆರಿಗೆಯ ವಿವರಗಳನ್ನು ಒಳಗೊಳ್ಳುವ ಒಂದು ವಿವರಣ ಪತ್ರವನ್ನು ನಿಯಮಿಸಲಾದ ನಮೂನೆಯಲ್ಲಿ, ನಿಯಮಿಸಲಾದ ಪ್ರಾಧಿಕಾರಿಗೆ ಪ್ರತಿತಿಂಗಳು ಕಳುಹಿಸಿಕೊಡತಕ್ಕದ್ದು ಮತ್ತು ಹಾಗೆ ತಾನು ವಜಾಮಾಡಿಕೊಂಡಿದ್ದ ತೆರಿಗೆಯ ಪೂರ್ಣ ಮೊಬಲಗನ್ನು ಹಿಂದಿನ ತಿಂಗಳು ಮುಕ್ತಾಯವಾದ ನಂತರ ಇಪ್ಪತ್ತು ದಿನಗಳೊಳಗಾಗಿ ಸಂದಾಯಮಾಡತಕ್ಕದ್ದು ಮತ್ತು ಹಾಗೆ ಸಂದಾಯಮಾಡತಕ್ಕ ಮೊಬಲಗು 42ನೇ ಪ್ರಕರಣದ ಉದ್ದೇಶಗಳಿಗಾಗಿ ಈ ಅಧಿನಿಯಮದ ಅಡಿಯಲ್ಲಿ ಬಾಕಿ ಇರುವ ತೆರಿಗೆ ಎಂಬುದಾಗಿ ಭಾವಿಸತಕ್ಕದ್ದು.

(4) (3)ನೇ ಉಪ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಅವಧಿ ಮುಕ್ತಾಯವಾದ ತರುವಾದ, ಹತ್ತು ದಿನಗಳಿಗೆ ಮೀರಿ, ಮುರಿದುಕೊಂಡ ತೆರಿಗೆಯನ್ನು ಸಂದಾಯ ಮಾಡಲು ತಪ್ಪಿದಲ್ಲಿ, (1)ನೇ ಉಪ ಪ್ರಕರಣದ ಅಡಿಯಲ್ಲಿ ಮುರಿದುಕೊಂಡಿರುವ ಕಾರ್ಖಾನೆ ಅಥವಾ ಕೈಗಾರಿಕಾ ಉದ್ಯಮ ಅಥವಾ ಉದ್ಯಮ ಸಂಸ್ಥೆಯು 37ನೇ ಪ್ರಕರಣದ (1)ನೇ ಉಪ ಪ್ರಕರಣದ ಅಡಿಯಲ್ಲಿ ನಿರ್ದಿಷ್ಟಪಡಿಸಿದ ಬಡ್ಡಿಗೆ ಸಮನಾದ ಮೊಬಲಗನ್ನು ಬಡ್ಡಿಯ ರೂಪವಾಗಿ, ಹಾಗೆ ಸಂದಾಯ ಬಾಕಿ ಮುಂದುವರಿದ ಅವಧಿಯಲ್ಲಿ ಸಂದಾಯ ಮಾಡತಕ್ಕದ್ದು.

(5) (1)ನೇ ಉಪ ಪ್ರಕರಣದ ಅಡಿಯಲ್ಲಿ ತೆರಿಗೆಯನ್ನು ಮುರಿದುಕೊಂಡ ಕಾರ್ಖಾನೆ ಅಥವಾ ಕೈಗಾರಿಕಾ ಉದ್ಯಮ ಅಥವಾ ಉದ್ಯಮ ಸಂಸ್ಥೆಯು, ನಿಯಮಿಸಬಹುದಾದಾದಂಥ ವಿವರಗಳನ್ನುಳ್ಳ ಒಂದು ಪ್ರಮಾಣ ಪತ್ರವನ್ನು ನಿಯಮಿಸಲಾದ ಪ್ರಾಧಿಕಾರದಿಂದ ಪಡೆದು ಹಾಗೆ ತೆರಿಗೆಯನ್ನು ಯಾರಿಂದ ಮುರಿದುಕೊಳ್ಳಲಾಯಿತೋ ಆ ವ್ಯಾಪಾರಿಗೆ ಕಳುಹಿಸತಕ್ಕದ್ದು.

(6) (3)ನೇ ಉಪ ಪ್ರಕರಣದ ಅನುಸಾರವಾಗಿ ತೆರಿಗೆಯನ್ನು ಮುರಿದುಕೊಂಡು ಸಂದಾಯ ಮಾಡುವುದು, (1)ನೇ ಉಪ ಪ್ರಕರಣದ ಅಡಿಯಲ್ಲಿ ಉಲ್ಲೇಖಿಸಲಾದಂಥ ವ್ಯಾಪಾರಿಯಿಂದ ಈ ಅಧಿನಿಯಮದ ಅಡಿಯಲ್ಲಿ ಬಾಕಿ ಇರುವ ತೆರಿಗೆಯ ವಸೂಲಿ ಮಾಡಿಕೊಳ್ಳುವ ಯಾವುದೇ ಇತರ ವಿಧಾನಕ್ಕೆ ಪ್ರತಿಕೂಲವಾಗಿರತಕ್ಕದ್ದಲ್ಲ.

(7) (1)ನೇ ಉಪ ಪ್ರಕರಣದಲ್ಲಿ ಉಲ್ಲೇಖಿಸಲಾದ ವ್ಯಾಪಾರಿಯ ಸಂಬಂಧದಲ್ಲಿ ತೆರಿಗೆಯನ್ನು, (3)ನೇ ಉಪ ಪ್ರಕರಣದ ಮೇರೆಗೆ ಜಮಾ ಮಾಡಿದ್ದರೆ ಯಾವುದೇ ಅವಧಿಗಾಗಿ ಆ ವ್ಯಾಪಾರಿಯಿಂದ ಸಂದಾಯವಾಗತಕ್ಕ ತೆರಿಗೆಯಿಂದ, ಸದರಿ ಉಪ ಪ್ರಕರಣದ ಅಡಿಯಲ್ಲಿ ಈಗಾಗಲೇ ಜಮಾಮಾಡಿರುವ ತೆರಿಗೆಯ ಮೊಬಲಗನ್ನು ಕಡಿಮೆಮಾಡತಕ್ಕದ್ದು.

(8) ಆಹಾರ ಮತ್ತು ಪಾನೀಯ ವಸ್ತುಗಳ ಮಾರಾಟಕ್ಕೆ ಸಂಬಂಧಪಡುವ ತನ್ನ ವಹಿವಾಟಿನ ಮೇಲಿನ ತೆರಿಗೆಯನ್ನು ಈಗಾಗಲೇ ಜಮಾಮಾಡಿರುವುದನ್ನು ರುಜುವಾತುಪಡಿಸುವ ಮತ್ತು ಹಾಗೆ ಜಮಾಮಾಡಿದ ತೆರಿಗೆಯ ನಿರ್ದಿಷ್ಟ ಮೊಬಲಗನ್ನು ರುಜುವಾತು ಪಡಿಸುವ ತೆರಿಗೆ ಕಡಿತವನ್ನು ಕ್ಲೇಮುಮಾಡುವ ವ್ಯಾಪಾರಿಯ ಮೇಲಿರತಕ್ಕದ್ದು.][1]

1.2006ರ ಅಧಿನಿಯಮ ಸಂಖ್ಯೆ 4ರ ಮೂಲಕ ದಿನಾಂಕ: 1.4.2006 ರಿಂದ ಪ್ರತಿಯೋಜಿಸಲಾಗಿದೆ.

[1][**18ಎ. xxx**][1]

1. 2012ರ ಅಧಿನಿಯಮ ಸಂಖ್ಯೆ 17ರ ಮೂಲಕ ದಿನಾಂಕ: 1.4.2012 ರಿಂದ ಬಿಟ್ಟುಬಿಡಲಾಗಿದೆ.

**19. ಹೂಡುವಳಿ ತೆರಿಗೆಯನ್ನು ಕಡಿತಗೊಳಿಸಿದ ತರುವಾಯ ಬಳಕೆಯಲ್ಲಿಯ [1][ಅಥವಾ ತೆರಿಗೆ ಸಂದಾಯದ ಯೋಜನೆಯ]**[1] **ವ್ಯತ್ಯಾಸ.-** (1) ಯಾವೊಬ್ಬ ನೋಂದಾಯಿತ ವ್ಯಾಪಾರಿಯು ಯಾವುವೇ ಸರಕುಗಳ ಮೇಲೆ ಹೂಡುವಳಿ ತೆರಿಗೆಗಳನ್ನು ಕಡಿತಗೊಳಿಸಿದ್ದರೆ ಮತ್ತು ಆ ಸರಕುಗಳನ್ನು ತನ್ನ ವ್ಯಾಪಾರ ಕ್ರಮದಲ್ಲಿ ಬಳಸಿರದಿದ್ದರೆ ಅಥವಾ ಅವುಗಳು ಕಳೆದಿದ್ದರೆ ಅಥವಾ ಹಾನಿ ಹೊಂದಿದ್ದರೆ, ಕಡಿತಗೊಳಿಸಿದ ಹೂಡುವಳಿ ತೆರಿಗೆಯು ಆ ಸರಕುಗಳನ್ನು ಅಂಥ ಇತರ ಉಪಯೋಗಕ್ಕಾಗಿ ಬಳಸಿದ ದಿನಾಂಕದಿಂದ ಮುಂದಿನ ಅವಧಿಯಲ್ಲಿ ಮರುಸಂದಾಯ ಯೋಗ್ಯವಾಗುತ್ತದೆ.

(2) ಅಂಥ ಸರಕುಗಳನ್ನು ಬಳಕೆಯ ವ್ಯತ್ಯಾಸಕ್ಕೆ ಪೂರ್ವದಲ್ಲಿ ತೆರಿಗೆಗೆ ಗುರಿಯಾಗುವ ಸರಕುಗಳ ಮಾರಾಟದಲ್ಲಿ ಅಥವಾ ಭಾರತದ ಸರಹದ್ದಿನ ಹೊರಗೆ ರಫ್ತಿನ ಕ್ರಮದಲ್ಲಿ ಯಾವುವೇ ಸರಕುಗಳ ಮಾರಾಟದಲ್ಲಿ ಪೂರ್ಣವಾಗಿಯಾಗಲಿ ಅಥವಾ ಮುಖ್ಯವಾಗಿ ಉಪಯೋಗಿಸಿದ್ದರೆ ಅಥವಾ ಉಪಯೋಗಿಸಲು ಉದ್ದೇಶಿಸಿದ್ದರೆ, ಬಳಕೆಯ ವ್ಯತ್ಯಾಸದ ಸಮಯದಲ್ಲಿ ಅಂಥ ಸರಕುಗಳ ಪ್ರಚಲಿತ ಮಾರುಕಟ್ಟೆ ಮೌಲ್ಯದ ಮೇಲೆ [2][ಮರುಸಂದಾಯ ಮಾಡಬೇಕಾದ ಹೂಡುವಳಿ ತೆರಿಗೆಯನ್ನು ಲೆಕ್ಕಹಾಕತಕ್ಕದ್ದು.][2]

[3][(3) ಯಾವೊಬ್ಬ ನೋಂದಾಯಿತ ವ್ಯಾಪಾರಿಯು ತನ್ನ ವ್ಯಾಪಾರ ಕ್ರಮದಲ್ಲಿ ಬಳಸಿಕೊಂಡ ಯಾವುದೇ ಸರಕುಗಳ ಮೇಲೆ ಹೂಡುವಳಿ ತೆರಿಗೆಯನ್ನು ಕಳೆದ ತರುವಾಯ 15ನೇ ಪ್ರಕರಣದ ಅಡಿಯಲ್ಲಿ ತೆರಿಗೆಯ ಬಗ್ಗೆ ರಾಜಿಯನ್ನು ಆಯ್ಕೆ ಮಾಡಿಕೊಂಡಲ್ಲಿ ವ್ಯಾಪಾರಿಯು ಹಾಗೆ ಆಯ್ಕೆ ಮಾಡಿಕೊಂಡ ದಿನಾಂಕದಂದು ಆತನ ದಾಸ್ತಾನಿನಲ್ಲಿ ಹೊಂದಿರುವ ಸರಕುಗಳ ಮೇಲೆ ಹಾಗೆ ಕಳೆದ ಹೂಡುವಳಿ ತೆರಿಗೆಯು ಅಂಥ ದಿನಾಂಕದ ನಂತರದ ತೆರಿಗೆಯ ಅವಧಿಯಲ್ಲಿ ಅಂಥ ವ್ಯಾಪಾರಿಯಿಂದ ಮರು ಸಂದಾಯ ವಾಗಬಹುದಾಗಿರತಕ್ಕದ್ದು ಮತ್ತು ಹಾಗೆ ಮರು ಸಂದಾಯ ಮಾಡಬೇಕಾದ ಹೂಡುವಳಿ ತೆರಿಗೆಯನ್ನು ಅಂಥ ದಿನಾಂಕದಂದು ಅಂಥ ಸರಕುಗಳ ಮಾರುಕಟ್ಟೆ ಬೆಲೆಯ ಮೇಲೆ ಲೆಕ್ಕಹಾಕತಕ್ಕದ್ದು.][3]

1. 2009ರ ಅಧಿನಿಯಮ ಸಂಖ್ಯೆ 5ರ ಮೂಲಕ ದಿನಾಂಕ: 1.4.2009 ರಿಂದ ಪ್ರತಿಯೋಜಿಸಲಾಗಿದೆ.
2. 2007ರ ಅಧಿನಿಯಮ ಸಂಖ್ಯೆ 6ರ ಮೂಲಕ ದಿನಾಂಕ: 11.3.2005 ರಿಂದ ಪ್ರತಿಯೋಜಿಸಲಾಗಿದೆ ಎಂದು ಭಾವಿಸತಕ್ಕದ್ದು.
3. 2009ರ ಅಧಿನಿಯಮ ಸಂಖ್ಯೆ 5ರ ಮೂಲಕ ದಿನಾಂಕ: 1.4.2009 ರಿಂದ ಸೇರಿಸಲಾಗಿದೆ

**20. ರಫ್ತು ಮತ್ತು ಅಂತರ ರಾಜ್ಯ ಮಾರಾಟಗಳ [1][ಮತ್ತು ವಿಶೇಷ ಆರ್ಥಿಕ ವಲಯ ಘಟಕಗಳ ಹಾಗೂ ಅಭಿವೃದ್ಧಿದಾರರ]**[1] **ಮೇಲೆ ಹೂಡುವಳಿ ತೆರಿಗೆಯ ಕಡಿತ, ಇತ್ಯಾದಿ.-** (1) ಈ ಅಧಿನಿಯಮದ ಅಡಿಯಲ್ಲಿ,-

(ಎ) ಭಾರತದ ಸರಹದ್ದಿನ ಹೊರಗೆ ರಫ್ತು ಕ್ರಮದಲ್ಲಿ ಯಾವುವೇ ಸರಕುಗಳ ಮಾರಾಟದ, ಅಥವಾ

(ಬಿ) ಅಧಿನಿಯಮದ ಅಡಿಯಲ್ಲಿ ತೆರಿಗೆಗೆ ಗುರಿಯಾಗುವ ಯಾವುವೇ ಸರಕುಗಳ ಅಂತರ ರಾಜ್ಯ [2][ವ್ಯಾಪಾರ ಅಥವಾ ವಾಣಿಜ್ಯದ ಕ್ರಮದಲ್ಲಿ ಮಾಡಿದ ಮಾರಾಟದ,][2] ಅಥವಾ

1. 2007ರ ಅಧಿನಿಯಮ ಸಂಖ್ಯೆ 6ರ ಮೂಲಕ ದಿನಾಂಕ: 1.4.2007 ರಿಂದ ಸೇರಿಸಲಾಗಿದೆ.
4. 2006ರ ಅಧಿನಿಯಮ ಸಂಖ್ಯೆ 4ರ ಮೂಲಕ ದಿನಾಂಕ: 11.3.2005 ರಿಂದ ಪ್ರತಿಯೋಜಿಸಲಾಗಿದೆ.

(ಸಿ) [1][xxx]

(ಡಿ) [1][xxx]

1. 2005ರ ಅಧಿನಿಯಮ ಸಂಖ್ಯೆ 6ರ ಮೂಲಕ ದಿನಾಂಕ: 19.3.2005 ರಿಂದ ಬಿಟ್ಟುಬಿಡಲಾಗಿದೆ.

– ಸಂಬಂಧದಲ್ಲಿಯ ಹೂಡುವಳಿಗಳ ಖರೀದಿಯ ಮೇಲೆ ಯಾವೊಬ್ಬ ವ್ಯಾಪಾರಿಯು ಸಂದಾಯ ಮಾಡಿದ ತೆರಿಗೆಯನ್ನು, ಅಂಥ ವ್ಯಾಪಾರಿಯು ಸಂದಾಯ ಮಾಡಬೇಕಾದ ಹುಟ್ಟುವಳಿ ತೆರಿಗೆಯಿಂದ [1][ನಿಯಮಿಸಬಹುದಾದಂಥ ಷರತ್ತುಗಳಿಗೆ ಒಳಪಟ್ಟು] 10ನೇ ಪ್ರಕರಣದಲ್ಲಿಯ ಉಪಬಂಧಗಳಿಗೆ ಅನುಸಾರವಾಗಿ ಕಡಿತಮಾಡತಕ್ಕದ್ದು.

1. 2005ರ ಅಧಿನಿಯಮ ಸಂಖ್ಯೆ 6ರ ಮೂಲಕ ದಿನಾಂಕ: 19.3.2005 ರಿಂದ ಸೇರಿಸಲಾಗಿದೆ.

[1][(2) ಈ ಸಂಬಂಧದಲ್ಲಿ ಕೇಂದ್ರ ಸರ್ಕಾರವು ನಿರ್ದಿಷ್ಟಪಡಿಸಿದ ಪ್ರಾಧಿಕಾರಗಳು ನೀಡಿದ ಪ್ರಾಧಿಕಾರದ ಮೂಲಕ ಸ್ಥಾಪಿಸಲಾದ ಯಾವುದೇ ವಿಶೇಷ ಆರ್ಥಿಕ ವಲಯದ ಅಭಿವೃದ್ಧಿದಾರರಾದ ಅಥವಾ ಯಾವುದೇ ವಿಶೇಷ ಆರ್ಥಿಕ ವಲಯದಲ್ಲಿ ಇರುವಂಥ ಒಂದು ಘಟಕವಾದ ಒಬ್ಬ ನೋಂದಾಯಿತ ವ್ಯಾಪಾರಿಯು ಹೂಡುವಳಿಗಳ ಖರೀದಿಯ ಮೇಲೆ ಈ ಅಧಿನಿಯಮದ ಅಡಿಯಲ್ಲಿ ಸಂದಾಯ ಮಾಡಿದ ತೆರಿಗೆಯನ್ನು, ನಿಯಮಿಸಬಹುದಾದಂಥ ಷರತ್ತುಗಳು ಮತ್ತು ವಿಧಾನಗಳಿಗೊಳಪಟ್ಟು ಮರುಪಾವತಿ ಮಾಡತಕ್ಕದ್ದು ಅಥವಾ ಅಂಥ ವ್ಯಾಪಾರಿಯು ಸಂದಾಯ ಮಾಡತಕ್ಕ ಹುಟ್ಟುವಳಿ ತೆರಿಗೆಯಿಂದ ಕಳೆಯತಕ್ಕದ್ದು.][1]

1. 2007ರ ಅಧಿನಿಯಮ ಸಂಖ್ಯೆ 6ರ ಮೂಲಕ ದಿನಾಂಕ: 1.4.2007 ರಿಂದ ಪ್ರತಿಯೋಜಿಸಲಾಗಿದೆ.

**ವಿವರಣೆ 1:–** ಈ ಪ್ರಕರಣದ ಉದ್ದೇಶಕ್ಕಾಗಿ "ವಿಶೇಷ ಆರ್ಥಿಕ ವಲಯ" ಎಂಬ ಪದಾವಳಿಯು ಕೇಂದ್ರ ಅಬ್ಕಾರಿ ಅಧಿನಿಯಮ, 1944ರ (1944ರ ಕೇಂದ್ರ ಅಧಿನಿಯಮ 1) 3ನೇ ಪ್ರಕರಣದ ಪರಂತುಕದ 2ನೇ ವಿವರಣೆಯ (iii)ನೇ ಖಂಡದಲ್ಲಿ ಅದಕ್ಕೆ ಕೊಡಲಾದ ಅರ್ಥವನ್ನೇ ಹೊಂದಿರತಕ್ಕದ್ದು.

**ವಿವರಣೆ 2:–** [1][xxx]

1. 2005ರ ಅಧಿನಿಯಮ ಸಂಖ್ಯೆ 6ರ ಮೂಲಕ ದಿನಾಂಕ: 19.3.2005 ರಿಂದ ಬಿಟ್ಟುಬಿಡಲಾಗಿದೆ.

[1][**21. ತೆರಿಗೆಯ ಮರುಪಾವತಿ.–** ವಿಶ್ವಸಂಸ್ಥೆಯ ವಿಶೇಷ ಏಜೆನ್ಸಿಗಳು, ವಿಶ್ವಸಂಸ್ಥೆಗಳ (ವಿಶೇಷ ಹಕ್ಕುಗಳು ಮತ್ತು ರಕ್ಷಣೆಗಳು) ಅಧಿನಿಯಮ, 1947ರ (1947ರ ಕೇಂದ್ರ ಅಧಿನಿಯಮ 46) ಅಡಿಯಲ್ಲಿ ಅಧಿಸೂಚಿಸಲ್ಪಟ್ಟ ಬಹುಮುಖ ಆರ್ಥಿಕ ಸಂಘಗಳು ಮತ್ತು ಸಂಸ್ಥೆಗಳು ಹಾಗೂ ಅಧಿಸೂಚಿಸಬಹುದಾದಂಥ ವಾಣಿಜ್ಯದೌತ್ಯ ಕಛೇರಿಗಳು ಅಥವಾ ರಾಯಭಾರಿ ಕಛೇರಿಗಳನ್ನು ಹೊರತುಪಡಿಸಿದಂತೆ ಇತರ ದೇಶಗಳ ವಾಣಿಜ್ಯದೌತ್ಯ ಕಛೇರಿಗಳು ಮತ್ತು ರಾಯಭಾರಿ ಕಛೇರಿಗಳಿಂದ ಮಾಡಿದ, ನಿಯಮಿಸಬಹುದಾದ ವರ್ಗದ ಖರೀದಿಗಳ ಮೇಲೆ, ಈ ಅಧಿನಿಯಮದಡಿಯಲ್ಲಿ ಸಂಗ್ರಹಿಸಿದ ತೆರಿಗೆಯನ್ನು ನಿಯಮಿಸಬಹುದಾದಂಥ ವಿಧಾನ ಮತ್ತು ಷರತ್ತುಗಳಿಗೆ ಒಳಪಟ್ಟು ಮರುಪಾವತಿ ಮಾಡತಕ್ಕದ್ದು.][1]

1. 2011ರ ಅಧಿನಿಯಮ ಸಂಖ್ಯೆ 12ರ ಮೂಲಕ ದಿನಾಂಕ: 1.4.2011 ರಿಂದ ಪ್ರತಿಯೋಜಿಸಲಾಗಿದೆ.

[1][ಪರಂತು, ಅಂಥ ರಾಷ್ಟ್ರಗಳೊಂದಿಗೆ ಕೇಂದ್ರ ಸರ್ಕಾರವು ಮಾಡಿಕೊಂಡ ಪರಸ್ಪರ ಒಪ್ಪಂದಗಳ ಆಧಾರದ ಮೇಲೆ, ರಾಜ್ಯ ಸರ್ಕಾರವು ಅದರಲ್ಲಿ ನಿರ್ದಿಷ್ಟ ಪಡಿಸಬಹುದಾದ ಅಂಥ ಷರತ್ತುಗಳಿಗೆ ಒಳಪಟ್ಟು, ಅಧಿಸೂಚಿತವಾದ ರಾಷ್ಟ್ರಗಳ ರಾಯಭಾರಿ ಕಛೇರಿಗಳ (ಎಂಬಸೀಸ್) ಮತ್ತು ವಾಣಿಜ್ಯ ದೌತ್ಯ ಕಛೇರಿಗಳ (ಕಾನ್ಸುಲೇಟುಗಳ) ರಾಯಭಾರಿಗಳು ಮತ್ತು ವಾಣಿಜ್ಯ ದೌತ್ಯ ಅಧಿಕಾರಿಗಳು ಮಾಡಿದ ವೈಯಕ್ತಿಕ ಖರೀದಿಗಳ ಸಂಬಂಧದಲ್ಲಿಯೂ ಸಹಾ ಈ ಅಧಿನಿಯಮದ ಅಡಿಯಲ್ಲಿ ಸಂಗ್ರಹಿಸಿದ ತೆರಿಗೆಯ ಮರುಪಾವತಿಯು ಲಭ್ಯವಿರತಕ್ಕದ್ದು.][1]

1. 2015ರ ಅಧಿನಿಯಮ ಸಂಖ್ಯೆ 05ರ ಮೂಲಕ ದಿನಾಂಕ: 09.01.2015 ರಿಂದ ಸೇರಿಸಸಲಾಗಿದೆ.

## ಅಧ್ಯಾಯ – III

## ನೋಂದಣಿ

**22. ನೋಂದಣಿಯ ಬದ್ಧತೆ.–** [1][XXX] [1]

1. 2010ರ ಅಧಿನಿಯಮ ಸಂಖ್ಯೆ 4ರ ಮೂಲಕ ದಿನಾಂಕ: 1.4.2010 ರಿಂದ ಬಿಟ್ಟುಬಿಡಲಾಗಿದೆ.

(2) [1][2005][1]ರ ಮಾರ್ಚ್ ಮೂವತ್ತೊಂದನೇ ದಿನದಂದು ಕೊನೆಗೊಳ್ಳುವ ವರ್ಷದ ನಂತರ ಯಾವುದೇ ವರ್ಷದಲ್ಲಿ, ಯಾವುದೇ ಸಮಯದಲ್ಲಿ, ತೆರಿಗೆಗೆ ಗುರಿಯಾಗತಕ್ಕ ತನ್ನ ವಹಿವಾಟು [3][[2][ಏಳೂವರೆ][3] ಲಕ್ಷ ರೂಪಾಯಿಗಳನ್ನು][2] ಮೀರಬಹುದು ಎಂದು ಸಕಾರಣವಾಗಿ ನಂಬಿರುವ ಪ್ರತಿಯೊಬ್ಬ ವ್ಯಾಪಾರಿಯು

ನೋಂದಾಯಿತನಾಗಲು ಬದ್ಧನಾಗಿರತಕ್ಕದ್ದು ಮತ್ತು ಅಂಥ ಬದ್ಧತೆಯನ್ನು ತಕ್ಷಣ ಅಥವಾ ಸರ್ಕಾರವು ಅಧಿಸೂಚಿಸಬಹುದಾದ ಅಂಥ ದಿನಾಂಕದಂದು ವರದಿ ಮಾಡತಕ್ಕದ್ದು.

1. 2005ರ ಅಧಿನಿಯಮ ಸಂಖ್ಯೆ 6ರ ಮೂಲಕ ದಿನಾಂಕ: 19.3.2005 ರಿಂದ ಪ್ರತಿಯೋಜಿಸಲಾಗಿದೆ.
2. 2010ರ ಅಧಿನಿಯಮ ಸಂಖ್ಯೆ 4ರ ಮೂಲಕ ದಿನಾಂಕ: 1.4.2010 ರಿಂದ ಪ್ರತಿಯೋಜಿಸಲಾಗಿದೆ.
3. 2014ರ ಅಧಿನಿಯಮ ಸಂಖ್ಯೆ 15ರ ಮೂಲಕ ದಿನಾಂಕ: 1.3.2014 ರಿಂದ ಪ್ರತಿಯೋಜಿಸಲಾಗಿದೆ.

(3) 3ನೇ ಪ್ರಕರಣದ ಅನುಸಾರವಾಗಿ ತೆರಿಗೆಯನ್ನು ವಿಧಿಸತಕ್ಕ ದಿನಾಂಕದ ತರುವಾಯದ ಯಾವುದೇ ಒಂದು ತಿಂಗಳಿನಲ್ಲಿ ತೆರಿಗೆಗೆ ಗುರಿಯಾಗತಕ್ಕ ವಹಿವಾಟು [3][[2][ಅರವತ್ತೆರಡು ಸಾವಿರದ ಐದುನೂರು][2]][3] ರೂಪಾಯಿಗಳನ್ನು ಮೀರುವ ಪ್ರತಿಯೊಬ್ಬ ವ್ಯಾಪಾರಿಯು [1][xxx][1] ತಕ್ಷಣ ನೋಂದಾಯಿತನಾಗತಕ್ಕದ್ದು.

1. 2005 ರ ಅಧಿನಿಯಮ ಸಂಖ್ಯೆ 11 ರ ಮೂಲಕ ದಿನಾಂಕ: 1.4.2005 ರಿಂದ ಬಿಟ್ಟುಬಿಡಲಾಗಿದೆ.
2. 2010ರ ಅಧಿನಿಯಮ ಸಂಖ್ಯೆ 4ರ ಮೂಲಕ ದಿನಾಂಕ: 1.4.2010 ರಿಂದ ಪ್ರತಿಯೋಜಿಸಲಾಗಿದೆ.
3. 2014ರ ಅಧಿನಿಯಮ ಸಂಖ್ಯೆ 15ರ ಮೂಲಕ ದಿನಾಂಕ: 1.3.2014 ರಿಂದ ಪ್ರತಿಯೋಜಿಸಲಾಗಿದೆ.

(4) ಈ ಅಧಿನಿಯಮದ ಅಡಿಯಲ್ಲಿ ನೋಂದಾಯಿತನಾಗಲು ಬದ್ಧನಾದ ಇತರ ವ್ಯಾಪಾರಿಯಿಂದ ಒಂದು ವ್ಯಾಪಾರ ಅಥವಾ ವ್ಯಾಪಾರದ ಭಾಗವನ್ನು ವರ್ಗಾವಣೆ ಪಡೆದ ಪ್ರತಿಯೊಬ್ಬ ವ್ಯಾಪಾರಿಯು, ತಾನು ಈಗಾಗಲೇ ನೋಂದಾಯಿತನಾಗಿರದಿದ್ದರೆ ಅ ವರ್ಗಾವಣೆಯ ದಿನಾಂಕದಿಂದ ನೋಂದಾಯಿತನಾಗಲು ಅರ್ಜಿ ಸಲ್ಲಿಸತಕ್ಕದ್ದು.

(5) ಮೇಲಿನ (2), (3) ಅಥವಾ (4)ನೇ ಉಪ ಪ್ರಕರಣದ ಅಡಿಯಲ್ಲಿ ನೋಂದಾಯಿತನಾಗಲು ಬದ್ಧನಾದ ಪ್ರತಿಯೊಬ್ಬ ವ್ಯಾಪಾರಿಯು, ಅಂಥ ಬದ್ಧತೆಯು ಉದ್ಭವಿಸುವ ತಿಂಗಳ ಕೊನೆಯಲ್ಲಿ ಅಥವಾ (2)ನೇ ಉಪ ಪ್ರಕರಣದ ಅಡಿಯಲ್ಲಿ ಅಧಿಸೂಚಿಸಬಹುದಾದಂತೆ ಅಂಥ ದಿನಾಂಕದಂದು ನಿಯಮಿಸಲಾದ ನಮೂನೆಯಲ್ಲಿ ನೋಂದಾಯಿತನಾಗಬೇಕಾದ ತನ್ನ ಬದ್ಧತೆಯನ್ನು ವರದಿಮಾಡತಕ್ಕದ್ದು.

(6) ರಾಜ್ಯದ ಹೊರಗಿನಿಂದ ಖರೀದಿಯ ಅಥವಾ ಅನ್ಯಥಾ ಪರಿಣಾಮವಾಗಿ ತೆರಿಗೆಗೆ ಗುರಿಯಾಗತಕ್ಕ ಸರಕುಗಳನ್ನು ಪಡೆಯುವ ಅಥವಾ ತರುವ ಪ್ರತಿಯೊಬ್ಬ ವ್ಯಾಪಾರಿಯು, ಖರೀದಿಸಿದ ಅಥವಾ ಸಂಗ್ರಹಿಸಿದ ಸರಕುಗಳ ಮೌಲ್ಯವು ಏನೇ ಆಗಿದ್ದರೂ ಅಂಥ ಮೊದಲ ಖರೀದಿ ಅಥವಾ ಸಂಗ್ರಹದ ತರುವಾಯ ನೋಂದಾಯಿತನಾಗಲು ಬದ್ಧನಾಗಿರತಕ್ಕದ್ದು ಮತ್ತು ಅಂಥ ಖರೀದಿ ಅಥವಾ ಸಂಗ್ರಹಣೆಯನ್ನು ಮಾಡುವ ತಿಂಗಳ ಕೊನೆಯಲ್ಲಿ ಅಂಥ ಬದ್ಧತೆಯನ್ನು ವರದಿ ಮಾಡತಕ್ಕದ್ದು.

(7) ತೆರಿಗೆಗೆ ಗುರಿಯಾಗತಕ್ಕ ಸರಕುಗಳನ್ನು ರಫ್ತು ಮಾಡುವ ಪ್ರತಿಯೊಬ್ಬ ವ್ಯಾಪಾರಿಯು ಮೊದಲ ರಫ್ತಿನ ತರುವಾಯ ನೋಂದಾಯಿತನಾಗಲು ಬದ್ಧನಾಗಿರತಕ್ಕದ್ದು ಮತ್ತು ಅಂಥ ರಫ್ತು ನಡೆಯುವ ತಿಂಗಳ ಕೊನೆಯಲ್ಲಿ ಅಂಥ ಬದ್ಧತೆಯ ಬಗ್ಗೆ ವರದಿ ಮಾಡತಕ್ಕದ್ದು.

(8) ಅಂತರರಾಜ್ಯ ವ್ಯಾಪಾರ ಅಥವಾ ವಾಣಿಜ್ಯ ಕ್ರಮದಲ್ಲಿ ತೆರಿಗೆಗೆ ಗುರಿಯಾಗತಕ್ಕ ಸರಕುಗಳನ್ನು ಮಾರಾಟ ಮಾಡುವ ಅಥವಾ ರಾಜ್ಯದ ಹೊರ ಭಾಗಗಳಿಗೆ ತೆರಿಗೆಗೆ ಗುರಿಯಾಗತಕ್ಕ ಸರಕುಗಳನ್ನು ರವಾನೆ ಮಾಡುವ ಪ್ರತಿಯೊಬ್ಬ ವ್ಯಾಪಾರಿಯು, ಮೊದಲ ಮಾರಾಟ ಅಥವಾ ರವಾನೆಯ ನಂತರ ನೋಂದಾಯಿತನಾಗಲು ಬದ್ಧನಾಗಿರತಕ್ಕದ್ದು ಮತ್ತು ಅಂಥ ಮಾರಾಟ ಅಥವಾ ರವಾನೆಯು ನಡೆಯುವ ತಿಂಗಳ ಕೊನೆಯಲ್ಲಿ ಅಂಥ ಬದ್ಧತೆಯ ಬಗ್ಗೆ ವರದಿ ಮಾಡತಕ್ಕದ್ದು.

(9) ಪ್ರತಿಯೊಬ್ಬ ಸಾಂದರ್ಭಿಕ ವ್ಯಾಪಾರಿ ಮತ್ತು ಪ್ರತಿಯೊಬ್ಬ ಅನಿವಾಸಿ ವ್ಯಾಪಾರಿ ಅಥವಾ ಆತನ ಏಜೆಂಟನು ಮಾರಾಟ ಮಾಡಿದ ತೆರಿಗೆಗೆ ಗುರಿಯಾಗತಕ್ಕ ಸರಕುಗಳ ಮೌಲ್ಯ ಏನೇ ಇದ್ದರೂ ಸಹ [1][ತನ್ನ ವ್ಯವಹಾರವನ್ನು ಪ್ರಾರಂಭಿಸುವುದಕ್ಕೆ ಮೊದಲು][1] ನೋಂದಾಯಿತನಾಗಲು ಬದ್ಧನಾಗಿರತಕ್ಕದ್ದು ಮತ್ತು ಅಂಥ ಬದ್ಧತೆಯನ್ನು ತಕ್ಷಣ ವರದಿ ಮಾಡತಕ್ಕದ್ದು.

1. 2006ರ ಅಧಿನಿಯಮ ಸಂಖ್ಯೆ 4ರ ಮೂಲಕ ದಿನಾಂಕ: 1.4.2006 ರಿಂದ ಪ್ರತಿಯೋಜಿಸಲಾಗಿದೆ.

[2][[1][(9-ಎ) XXX][1]][2]

1. 2005ರ ಅಧಿನಿಯಮ ಸಂಖ್ಯೆ 6ರ ಮೂಲಕ ದಿನಾಂಕ: 19.3.2005 ರಿಂದ ಸೇರಿಸಲಾಗಿದೆ.

2. 2014ರ ಅಧಿನಿಯಮ ಸಂಖ್ಯೆ 15ರ ಮೂಲಕ ದಿನಾಂಕ: 1.3.2014 ರಿಂದ ಬಿಟ್ಟುಬಿಡಲಾಗಿದೆ.

(10) ಮೇಲಿನ (1), (2) ಅಥವಾ (3)ನೇ ಉಪ ಪ್ರಕರಣಗಳ ಅಡಿಯಲ್ಲಿ ಒಬ್ಬ ವ್ಯಕ್ತಿಯು ನೋಂದಾಯಿತನಾಗಲು ಬದ್ಧನೇ ಎಂಬುದನ್ನು ನಿರ್ಧರಿಸುವಲ್ಲಿ, ನಿಯಮಿಸಲಾದ ಪ್ರಾಧಿಕಾರವು ಒಟ್ಟು ವಹಿವಾಟು ಅಥವಾ ತೆರಿಗೆಗೆ ಗುರಿಯಾಗತಕ್ಕ ವಹಿವಾಟು ಅಥವಾ ಉಭಯ ವ್ಯಕ್ತಿಗಳು ಸಹವರ್ತಿಗಳಾಗಿದ್ದರೆ ಯಾವೊಬ್ಬ ಇತರ ವ್ಯಕ್ತಿಯ ಒಟ್ಟು ಸ್ವೀಕೃತಿಗಳನ್ನು ಗಮನದಲ್ಲಿರಿಸಿಕೊಳ್ಳಬಹುದು ಮತ್ತು ನೋಂದಣಿಯನ್ನು ತಪ್ಪಿಸುವ ಸಲುವಾಗಿ ಯಾವುದೇ ವ್ಯಾಪಾರವನ್ನು ಉದ್ದೇಶ ಪೂರ್ವಕವಾಗಿ ಸಣ್ಣ ವ್ಯಾಪಾರಗಳನ್ನಾಗಿ ವಿಘಟಿಸಲಾಗಿದೆಯೆಂದು ನಿಯಮಿಸಲಾದ ಪ್ರಾಧಿಕಾರವು ಭಾವಿಸಿದರೆ, ಆ ವ್ಯಾಪಾರಗಳನ್ನು ಒಂದೇ ವ್ಯಾಪಾರ ಅಸ್ತಿತ್ವವೆಂಬಂತೆ ನೋಂದಾಯಿಸುವಂತೆ ಅಗತ್ಯಪಡಿಸುವ ನೋಟೀಸನ್ನು ನಿಯಮಿಸಲಾದ ಪ್ರಾಧಿಕಾರವು ನೀಡಬಹುದು.

**23. ಸ್ವಇಚ್ಛೆಯಿಂದ ನೋಂದಣಿ ಮಾಡಿಸುವುದು.–** 22ನೇ ಪ್ರಕರಣದ ಅಡಿಯಲ್ಲಿ ನೋಂದಾಯಿತನಾಗಲು ಬದ್ಧನಲ್ಲದಿದ್ದರೂ ತೆರಿಗೆಗೆ ಗುರಿಯಾಗುವ ಸರಕುಗಳನ್ನು ಮಾರಾಟ ಮಾಡುವ ಯಾವೊಬ್ಬ ವ್ಯಾಪಾರಿಯು ಸ್ವಇಚ್ಛೆಯಿಂದ ನೋಂದಣಿ ಮಾಡಲು ಬಯಸಿದರೆ ನಿಯಮಿಸಬಹುದಾದ ಅಂಥ ನಮೂನೆ ಮತ್ತು ಅಂಥ ವಿಧಾನದಲ್ಲಿ ಸರಿಯಾದ ಹಾಗೂ ಪೂರ್ಣ ವಿವರಗಳನ್ನು ನೀಡಿ ನಿಯಮಿಸಬಹುದಾದ ಪ್ರಾಧಿಕಾರಕ್ಕೆ ಅರ್ಜಿಯನ್ನು ಸಲ್ಲಿಸಬಹುದು [1][ಮತ್ತು ಅಂಥ ವ್ಯಾಪಾರಿಯು 22ನೇ ಪ್ರಕರಣದ ಅಡಿಯಲ್ಲಿ ನೋಂದಣಿ ಮಾಡಿಸಿಕೊಳ್ಳಲು ಹೊಣೆಗಾರನಾದ ಮೇಲೆ ಹಾಗೆ ಅವನು ಹೊಣೆಗಾರನಾದ ದಿನಾಂಕದಂದು 11ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಷರತ್ತುಗಳಿಗೆ ಒಳಪಟ್ಟು 13ನೇ ಪ್ರಕರಣದ ಅಡಿಯಲ್ಲಿ ನಿರ್ದಿಷ್ಟಪಡಿಸಿದ ಹೂಡುವಳಿ ತೆರಿಗೆಯನ್ನು ಕಳೆಯುವುದಕ್ಕೆ ಅರ್ಹನಾಗಿರತಕ್ಕದ್ದು][1].

1. 2009ರ ಅಧಿನಿಯಮ ಸಂಖ್ಯೆ 5ರ ಮೂಲಕ ದಿನಾಂಕ: 1.4.2009 ರಿಂದ ಸೇರಿಸಲಾಗಿದೆ.

**24. ತಾನಾಗಿಯೇ ನೋಂದಣಿ ಮಾಡಿಸುವುದು.–** ನೋಂದಾಯಿತನಾಗಲು ಬದ್ಧನಾಗಿರುವ ಯಾವೊಬ್ಬ ವ್ಯಾಪಾರಿಯು ನೋಂದಾಯಿತನಾಗುವ ಬದ್ಧತೆಯ ಬಗ್ಗೆ ಸಕ್ಷಮ ಪ್ರಾಧಿಕಾರಿಗೆ ತಿಳಿಸಲು ವಿಫಲನಾದರೆ, ಸಕ್ಷಮ ಪ್ರಾಧಿಕಾರಿಯು ನಿಯಮಿಸಬಹುದಾದ ಅಂಥ ಸಮೀಕ್ಷೆ, ತಪಾಸಣೆ ಅಥವಾ ವಿಚಾರಣೆಯನ್ನು ನಡೆಸಿದ ತರುವಾಯ 22ನೇ ಪ್ರಕರಣದ ಅಡಿಯಲ್ಲಿ ಅಂಥ ವ್ಯಕ್ತಿಯನ್ನು ನೋಂದಾಯಿಸಲು ತೊಡಗಬಹುದು.

**25. ನೋಂದಣಿ.–** (1) 22 ಅಥವಾ 23ನೇ ಪ್ರಕರಣದ ಅಡಿಯಲ್ಲಿ ನೋಂದಣಿ ಮಾಡಿಸಲು ಅರ್ಜಿ ನಮೂನೆ, ಅರ್ಜಿಯನ್ನು ಸಲ್ಲಿಸಲು ಸಮಯ ಮತ್ತು ವಿಧಾನವನ್ನು ಹಾಗೂ ಸಂದಾಯ ಮಾಡಬೇಕಾದ ಶುಲ್ಕ ಇವುಗಳು ನಿಯಮಿಸಬಹುದಾದಂತೆ ಇರತಕ್ಕದ್ದು.

[1][ಪರಂತು, ಅರ್ಜಿಯನ್ನು ವಿದ್ಯುನ್ಮಾನದ ಮೂಲಕ ಸಲ್ಲಿಸಬೇಕಾದ ವೆಬ್‌ಸೈಟನ್ನು ಆಯುಕ್ತನು ಅಧಿಸೂಚಿಸಬಹುದು.][1]

1. 2011ರ ಅಧಿನಿಯಮ ಸಂಖ್ಯೆ 12ರ ಮೂಲಕ ದಿನಾಂಕ: 1.4.2011 ರಿಂದ ಸೇರಿಸಲಾಗಿದೆ.

(2) 22 ಅಥವಾ 23ನೇ ಪ್ರಕರಣದ ಅಡಿಯಲ್ಲಿ ನೋಂದಣಿಗಾಗಿ ಅರ್ಜಿಯನ್ನು ಸ್ವೀಕರಿಸಿದ ಮೇಲೆ ನಿಯಮಿಸಲಾದ ಪ್ರಾಧಿಕಾರವು, ಅರ್ಜಿದಾರನು ನಿಜವಾದ ವ್ಯಾಪಾರಿಯೆಂದು ಹಾಗೂ ಆತನು ಈ ಅಧಿನಿಯಮದ ಅಗತ್ಯತೆಗಳನ್ನು ಪೂರ್ಣಗೊಳಿಸುತ್ತಾನೆಂದು ತನಗೆ ಮನವರಿಕೆಯಾದರೆ [1][ಅಂಥ ಅರ್ಜಿಯ ದಿನಾಂಕದಿಂದ ಅಥವಾ ಅಂಥ ವ್ಯಾಪಾರಿಯ ವ್ಯವಹಾರದ ಪ್ರಾರಂಭದ ದಿನಾಂಕದಿಂದ, ಈ ಎರಡರಲ್ಲಿ ಯಾವುದು ನಂತರವೋ ಆ ದಿನಾಂಕದಿಂದ][1] ಜಾರಿಗೆ ಬರುವಂತೆ ಯಾವೊಬ್ಬ ಅಂಥ ವ್ಯಾಪಾರಿಯನ್ನು ನೋಂದಾಯಿಸತಕ್ಕದ್ದು ಮತ್ತು ಆತನಿಗೆ ನೋಂದಣಿಯ ಬಗ್ಗೆ ಒಂದು ಪ್ರಮಾಣ ಪತ್ರವನ್ನು ನೀಡತಕ್ಕದ್ದು.

1. 2007ರ ಅಧಿನಿಯಮ ಸಂಖ್ಯೆ 6ರ ಮೂಲಕ ದಿನಾಂಕ: 1.4.2007 ರಿಂದ ಪ್ರತಿಯೋಜಿಸಲಾಗಿದೆ.

(3) ನಿಯಮಿಸಬಹುದಾದ ಪ್ರಾಧಿಕಾರವು, ಯಾವುವೇ ಉಚಿತ ಹಾಗೂ ಸಾಕಷ್ಟು ಕಾರಣಗಳಿಗಾಗಿ, ಅವುಗಳನ್ನು ಲಿಖಿತದಲ್ಲಿ ನಮೂದಿಸಿ ನೋಂದಣಿ ಪ್ರಮಾಣ ಪತ್ರವನ್ನು ನೀಡಲು ನಿರಾಕರಿಸಿರುವುದರ ವಿರುದ್ಧ ಲಿಖಿತದಲ್ಲಿ ಕಾರಣವನ್ನು ತಿಳಿಸಲು ಅರ್ಜಿದಾರನಿಗೆ ಅವಕಾಶವನ್ನು ನೀಡಿದ ತರುವಾಯ ಹಾಗೆ ನಿರಾಕರಿಸಬಹುದು.

(4) 9ನೇ ಪ್ರಕರಣದ (2)ನೇ ಉಪ ಪ್ರಕರಣದ ಅಡಿಯಲ್ಲಿ ತೆರಿಗೆಯನ್ನು ಸಂಗ್ರಹಿಸಲು ಬದ್ಧವಾಗಿರುವ ಕೇಂದ್ರ ಸರ್ಕಾರದ, ಯಾವುದೇ ರಾಜ್ಯ ಸರ್ಕಾರದ, ಯಾವುದೇ ಶಾಸನಬದ್ಧ ನಿಕಾಯದ ಅಥವಾ ಯಾವುದೇ ಸ್ಥಳೀಯ

ಪ್ರಾಧಿಕಾರದ ಸಂಬಂಧದಲ್ಲಿ, ಅಂಥ ನಿಕಾಯಕ್ಕೆ ನಿಯಮಿಸಬಹುದಾದ ರೀತಿಯಲ್ಲಿ ನೋಂದಣಿ ಪ್ರಮಾಣ ಪತ್ರವನ್ನು ನೀಡಲು ಆಯುಕ್ತನು ಅಧಿಕೃತಗೊಳಿಸಬಹುದು.

**26. ಭದ್ರತೆ.-** (1) ನಿಯಮಿಸಬಹುದಾದ ಪ್ರಾಧಿಕಾರವು, ತೆರಿಗೆಯ ಸೂಕ್ತ ಸಂದಾಯಕ್ಕಾಗಿ ನೋಂದಾಯಿತ ವ್ಯಾಪಾರಿಯಿಂದ ಅಥವಾ ಈ ಅಧಿನಿಯಮದ ಅಡಿಯಲ್ಲಿ ನೋಂದಾಯಿತನಾಗಲು ಅರ್ಜಿ ಸಲ್ಲಿಸಿರುವ ವ್ಯಾಪಾರಿಯಿಂದ ನಿಯಮಿಸಬಹುದಾದ ರೀತಿಯಲ್ಲಿ ನಿಯಮಿಸಬಹುದಾದ ಮೊತ್ತವನ್ನು ಮೀರದಂತೆ ಸಮಂಜಸವಾದ ಭದ್ರತೆಯನ್ನು ನೀಡುವಂತೆ ಕಾಲ ಕಾಲಕ್ಕೆ ಕೋರಬಹುದು.

(2) ನಿಯಮಿಸಬಹುದಾದ ಪ್ರಾಧಿಕಾರವು,

(ಎ) ಒಬ್ಬ ವ್ಯಾಪಾರಿಯು ಸಂದಾಯ ಮಾಡಬೇಕಾದ ತೆರಿಗೆ, ಬಡ್ಡಿ ಅಥವಾ ದಂಡದ ಯಾವುದೇ ಮೊತ್ತದ ಸಂಗ್ರಹಣೆಗಾಗಿ, ಅಥವಾ

(ಬಿ) ಒಬ್ಬ ವ್ಯಾಪಾರಿಯು ಯಾವುದೇ ನಿಯಮಿಸಿದ ಪ್ರಮಾಣ ಪತ್ರ ಅಥವಾ ಘೋಷಣೆಯನ್ನು ದುರುಪಯೋಗಿಸಿದ್ದಾನೆಂದು ಅಥವಾ ನಿಯಮಿಸಿದ ರೀತಿಯಲ್ಲಿ ಅವುಗಳನ್ನು ಇಟ್ಟುಕೊಳ್ಳಲು ಅಥವಾ ಉಳಿಸಿಕೊಳ್ಳಲು ವಿಫಲನಾಗಿದ್ದಾನೆಂದು ಕಂಡುಬಂದಲ್ಲಿ,

- ಆದೇಶದ ಮೂಲಕ, ಅಂಥ ವ್ಯಾಪಾರಿಯು ಒದಗಿಸಿದ ಭದ್ರತೆಯನ್ನು ಪೂರ್ಣವಾಗಿ ಅಥವಾ ಅದರ ಯಾವುದೇ ಭಾಗವನ್ನು ಮುಟ್ಟುಗೋಲುಹಾಕಿಕೊಳ್ಳಬಹುದು.

(3) ಮೇಲಿನ (2)ನೇ ಉಪ ಪ್ರಕರಣದ ಅಡಿಯಲ್ಲಿ, ಅಂಥ ಮುಟ್ಟುಗೋಲಿನ ವಿರುದ್ಧ ಲಿಖಿತದಲ್ಲಿ ಕಾರಣವನ್ನು ಕೇಳುವ ಅವಕಾಶವನ್ನು ವ್ಯಾಪಾರಿಗೆ ನೀಡಿದ ಹೊರತಾಗಿ ಯಾವುದೇ ಆದೇಶವನ್ನು ಹೊರಡಿಸತಕ್ಕದ್ದಲ್ಲ.

**27. ನೋಂದಣಿಯ ರದ್ದಿಯಾತಿ.-** (1) ಈ ಮುಂದಿನ ಯಾವುದೇ ಸಂದರ್ಭದಲ್ಲಿ ಎಂದರೆ,-

(ಎ) ಒಬ್ಬ ನೋಂದಾಯಿತ ವ್ಯಾಪಾರಿಯು ಯಾವುದೇ ವ್ಯಾಪಾರವನ್ನು ಮುಂದುವರೆಸದಿದ್ದಲ್ಲಿ, ಪೂರ್ಣವಾಗಿ ವರ್ಗಾಯಿಸಿದ್ದಲ್ಲಿ ಅಥವಾ ಅನ್ಯಥಾ ವಿಲೆ ಮಾಡಿದ್ದಲ್ಲಿ; ಅಥವಾ

(ಬಿ) ವ್ಯಾಪಾರದ ಮಾಲೀಕತ್ವದ ಸ್ಥಾನಮಾನದಲ್ಲಿ ಯಾವುದೇ ಬದಲಾವಣೆಯಾಗಿದ್ದಲ್ಲಿ; ಅಥವಾ

(ಸಿ) ನೋಂದಾಯಿತ ವ್ಯಾಪಾರಿಯ ಸರಕುಗಳ ಮಾರಾಟದ ತೆರಿಗೆಗೆ ಗುರಿಯಾಗತಕ್ಕ ವಹಿವಾಟು [1][ಹನ್ನೆರಡು ನಿರಂತರ ತಿಂಗಳುಗಳ][1] ಯಾವುದೇ ಅವಧಿಯಲ್ಲಿ [2][[3][[4][ಹತ್ತು][4]][3] ಲಕ್ಷ ರೂಪಾಯಿಗಳನ್ನು][2] ಮೀರದಿದ್ದಲ್ಲಿ; ಅಥವಾ

1. 2006ರ ಅಧಿನಿಯಮ ಸಂಖ್ಯೆ 4ರ ಮೂಲಕ ದಿನಾಂಕ: 1.4.2006 ರಿಂದ ಪ್ರತಿಯೋಜಿಸಲಾಗಿದೆ.
2. 2010ರ ಅಧಿನಿಯಮ ಸಂಖ್ಯೆ 4ರ ಮೂಲಕ ದಿನಾಂಕ:01.04.2010ರಿಂದ ಪ್ರತಿಯೋಜಿಸಲಾಗಿದೆ.
3. 2014ರ ಅಧಿನಿಯಮ ಸಂಖ್ಯೆ 15ರ ಮೂಲಕ ದಿನಾಂಕ:01.03.2014ರಿಂದ ಪ್ರತಿಯೋಜಿಸಲಾಗಿದೆ.
4. 2015ರ ಅಧಿನಿಯಮ ಸಂಖ್ಯೆ 15ರ ಮೂಲಕ ದಿನಾಂಕ:01.04.2015ರಿಂದ ಪ್ರತಿಯೋಜಿಸಲಾಗಿದೆ.

(ಡಿ) ಒಬ್ಬ ವ್ಯಾಪಾರಿಯು ಯಾವುದೇ ತೆರಿಗೆಗೆ ಗುರಿಯಾಗತಕ್ಕ ಮಾರಾಟವನ್ನು ಮಾಡದೆ ತೆರಿಗೆಯ ಬೆಲೆ ಪಟ್ಟಿಗಳನ್ನು ನೀಡಿದಲ್ಲಿ, ಅಥವಾ

(ಇ) ಈ ಅಧಿನಿಯಮದ ಅಡಿಯಲ್ಲಿ ನೋಂದಾಯಿತನಾದ ಒಬ್ಬ ವ್ಯಾಪಾರಿಯು ಮೃತನಾದಲ್ಲಿ,

- ಮತ್ತು ಯಾವುವೇ ಉಚಿತ ಮತ್ತು ಸಾಕಷ್ಟು ಕಾರಣಗಳಿದ್ದರೆ, ನಿಯಮಿಸಲಾದ ಪ್ರಾಧಿಕಾರವು, ತಾನಾಗಿಯೇ ಆಗಲಿ ಅಥವಾ ವ್ಯಾಪಾರಿಯು ನೀಡಿದ ಅರ್ಜಿಯ ಮೇಲಾಗಲಿ ಅಥವಾ ಮರಣದ ಸಂದರ್ಭದಲ್ಲಿ, ನಿಯಮಿಸಲಾದ ವಿಧಾನದಲ್ಲಿ ಕಾನೂನುಬದ್ಧ ವಾರಸುದಾರರ ಅರ್ಜಿಯ ಮೇಲಾಗಲಿ, ಸಂದರ್ಭದ ಪರಿಸ್ಥಿತಿಯನ್ನು ಗಮನದಲ್ಲಿರಿಸಿಕೊಂಡು ಯಾವುದೇ ಪೂರ್ವ ದಿನಾಂಕವನ್ನು ಒಳಗೊಂಡಂತೆ ತಾನು ಸೂಕ್ತವೆಂದು ಭಾವಿಸಬಹುದಾದ ಅಂಥ ದಿನಾಂಕದಿಂದ ನೋಂದಣಿ ಪ್ರಮಾಣ ಪತ್ರವನ್ನು ರದ್ದುಗೊಳಿಸಬಹುದು.

[1][ಪರಂತು ತೀರಿಹೋಗಿರುವ ವ್ಯಕ್ತಿಯ ಸಂದರ್ಭದಲ್ಲಿ ಆತನ ಕಾನೂನುಬದ್ಧ ವಾರಸುದಾರರು ನೋಂದಣಿಯ ವರ್ಗಾವಣೆಗಾಗಿ ಅರ್ಜಿಯನ್ನು ಹಾಕಿಕೊಂಡ ಮೇಲೆ ಮತ್ತು ನಿಯಮಿಸಬಹುದಾದಂಥ ಷರತ್ತುಗಳಿಗೆ ಒಳಪಟ್ಟು, ನಿಯಮಿಸಲಾದ ಪ್ರಾಧಿಕಾರವು ನೋಂದಣಿ ಪ್ರಮಾಣಪತ್ರವನ್ನು ರದ್ದುಗೊಳಿಸುವ ಬದಲು ಅದನ್ನು ಆ ಕಾನೂನುಬದ್ಧ ವಾರಸುದಾರರಿಗೆ ವರ್ಗಾಯಿಸಲು ಅನುಮತಿ ನೀಡಬಹುದು][1].

1. 2009ರ ಅಧಿನಿಯಮ ಸಂಖ್ಯೆ 5ರ ಮೂಲಕ ದಿನಾಂಕ: 1.4.2009 ರಿಂದ ಸೇರಿಸಲಾಗಿದೆ.

(2) ಒಬ್ಬ ವ್ಯಾಪಾರಿಯು ಸಂದಾಯ ಮಾಡಲು ಬದ್ಧನಾಗಿರುವ ಯಾವುದೇ ತೆರಿಗೆ, ದಂಡ ಅಥವಾ ಬಡ್ಡಿಯನ್ನು ನೋಂದಣಿ ಪ್ರಮಾಣ ಪತ್ರ ರದ್ಧಿಯಾತಿ ದಿನಾಂಕಕ್ಕೆ ಮೊದಲು ತೆರಿಗೆ ನಿರ್ಧರಿಸಿರಲಿ ಅಥವಾ ನಿರ್ಧರಿಸಿಲ್ಲದಿರಲಿ ಅದು ಸಂದಾಯವಾಗದೆ ಉಳಿದಿದ್ದರೆ ಅಥವಾ ಆ ತರುವಾಯ ನಿರ್ಧರಿಸಲಾಗಿದ್ದರೆ, ಈ ಪ್ರಕರಣದ ಅಡಿಯಲ್ಲಿನ ನೋಂದಣಿ ಪ್ರಮಾಣ ಪತ್ರದ ರದ್ಧಿಯಾತಿಯು, ರದ್ಧಿಯಾತಿ ದಿನಾಂಕಕ್ಕೆ ಪೂರ್ವದ ಯಾವುದೇ ಅವಧಿಗೆ ಬಾಕಿಯಿರುವ ಅಂಥ ತೆರಿಗೆ, ದಂಡ ಮತ್ತು ಬಡ್ಡಿಯನ್ನು ಸಂದಾಯ ಮಾಡುವಲ್ಲಿಯ ಅವನ ಬದ್ಧತೆಯ ಮೇಲೆ ಪರಿಣಾಮ ಬೀರತಕ್ಕದ್ದಲ್ಲ.

(3) ನೋಂದಣಿಯು ರದ್ದಾದ ಮೇಲೆ, ನಿರ್ದಿಷ್ಟಪಡಿಸಿದಂತೆ ವ್ಯಾಪಾರಗಳನ್ನು ಪೂರ್ಣವಾಗಿ ಇನ್ನೊಬ್ಬ ನೋಂದಾಯಿತ ವ್ಯಾಪಾರಿಗೆ ವರ್ಗಾವಣೆ ಮಾಡಿದ್ದನ್ನು ಹೊರತುಪಡಿಸಿ, ಹೂಡುವಳಿ ತೆರಿಗೆಯ ಕಡಿತದ ಪ್ರಯೋಜನವನ್ನು ಪಡೆದ ವ್ಯಾಪಾರಿಯು [1][ಆತನು ಹೊಂದಿರುವ ತೆರಿಗೆಗೆ ಗುರಿಯಾಗತಕ್ಕ ಯಾವುವೇ ಸರಕುಗಳಿಗೆ ಪ್ರಚಲಿತ ಮಾರುಕಟ್ಟೆ ಬೆಲೆಯ ಮೇಲೆ ಲೆಕ್ಕಹಾಕಲಾದಂಥ ಹೂಡುವಳಿ ತೆರಿಗೆಯನ್ನು ಮರುಸಂದಾಯ ಮಾಡಲು][1] ಬದ್ಧನಾಗಿರತಕ್ಕದ್ದು.

1. 2007ರ ಅಧಿನಿಯಮ ಸಂಖ್ಯೆ 6ರ ಮೂಲಕ ದಿನಾಂಕ: 1.4.2007 ರಿಂದ ಪ್ರತಿಯೋಜಿಸಲಾಗಿದೆ.

(4) ಮೇಲಿನ (3)ನೇ ಉಪಪ್ರಕರಣದ ಅಡಿಯಲ್ಲಿ ತೆರಿಗೆಗೆ ಬದ್ಧನಾಗಿರುವ ಒಬ್ಬ ವ್ಯಾಪಾರಿಯು ನಿಯಮಿಸಬಹುದಾದ ಅಂಥ ಸಮಯದಲ್ಲಿ ಅಂತಿಮ ವಿವರ ಪಟ್ಟಿಯನ್ನು ಸಲ್ಲಿಸತಕ್ಕದ್ದು.

**28. ನೋಂದಣಿಯ ತರುವಾಯ ಆದ ಬದಲಾವಣೆಗಳನ್ನು ತಿಳಿಸುವುದು ನೋಂದಾಯಿತ ವ್ಯಾಪಾರಿಯ ಹೊಣೆಗಾರಿಕೆಯಾಗಿರತಕ್ಕದ್ದು.–**

(1) (ಎ) ಒಬ್ಬ ನೋಂದಾಯಿತ ವ್ಯಾಪಾರಿಯು ತನ್ನ ವ್ಯಾಪಾರವನ್ನು ಅಥವಾ ಅದರ ಯಾವುದೇ ಭಾಗವನ್ನು ಮಾರಾಟ ಮಾಡಿದರೆ ಅಥವಾ ಅನ್ಯಥಾ ವಿಲೆ ಮಾಡಿದರೆ; ಅಥವಾ

(ಬಿ) ವ್ಯಾಪಾರದ ಮಾಲೀಕತ್ವದಲ್ಲಿ, ಅದರ ಸ್ಥಾನಮಾನದಲ್ಲಿನ ಯಾವುದೇ ಬದಲಾವಣೆಯನ್ನು ಒಳಗೊಂಡಂತೆ, ಯಾವುದೇ ಇತರ ಬದಲಾವಣೆಯಾಗಿದ್ದರೆ; ಅಥವಾ

(ಸಿ) ಒಬ್ಬ ನೋಂದಾಯಿತ ವ್ಯಾಪಾರಿಯು ತನ್ನ ವ್ಯಾಪಾರವನ್ನು ಮುಂದುವರೆಸದಿದ್ದರೆ ಅಥವಾ ತನ್ನ ವ್ಯಾಪಾರ ಸ್ಥಳವನ್ನು ಬದಲಾಯಿಸಿದರೆ ಅಥವಾ ಹೊಸ ವ್ಯಾಪಾರ ಸ್ಥಳವನ್ನು ತೆರೆದರೆ; ಅಥವಾ

(ಡಿ) ಒಬ್ಬ ನೋಂದಾಯಿತ ವ್ಯಾಪಾರಿಯು ತನ್ನ ವ್ಯಾಪಾರದ ಹೆಸರನ್ನು ಅಥವಾ ಸ್ವರೂಪವನ್ನು ಬದಲಾಯಿಸಿದರೆ,

– ಅಂಥ ನೋಂದಾಯಿತ ವ್ಯಾಪಾರಿಯು ಅಥವಾ ಆತನ ಮರಣದ ಸಂದರ್ಭದಲ್ಲಿ ಆತನ ಕಾನೂನು ಸಮ್ಮತ ಪ್ರತಿನಿಧಿಯು, ನಿಯಮಿಸಲಾದ ಸಮಯದ ಒಳಗೆ ನಿಯಮಿಸಲಾದ ಪ್ರಾಧಿಕಾರಕ್ಕೆ ಅದರಂತೆ ತಿಳಿಸತಕ್ಕದ್ದು.

(2) (ಎ) ಒಬ್ಬ ನೋಂದಾಯಿತ ವ್ಯಾಪಾರಿಯಿಂದ ಇನ್ನೊಬ್ಬನಿಗೆ ವ್ಯಾಪಾರದ ವರ್ಗಾವಣೆಯಾದಾಗ ವ್ಯಾಪಾರದ ಮಾಲೀಕತ್ವದ ಬದಲಾವಣೆಯಾದರೆ, ವ್ಯಾಪಾರದ ಉತ್ತರಾಧಿಕಾರ ಪಡೆದ ವ್ಯಾಪಾರಿಯು; ಅಥವಾ

(ಬಿ) ವ್ಯಾಪಾರದ ಮಾಲೀಕತ್ವದ ಸ್ಥಾನಮಾನದಲ್ಲಿ ಯಾವುದೇ ಬದಲಾವಣೆಯಾಗಿದ್ದರೆ,

– ಅಂಥ ನೋಂದಾಯಿತ ವ್ಯಾಪಾರಿಯು ವ್ಯಾಪಾರದ ಸಂಬಂಧದಲ್ಲಿ ಈಗಾಗಲೇ ನೀಡಲಾದ ನೋಂದಣಿ ಪ್ರಮಾಣಪತ್ರವನ್ನು ಒಪ್ಪಿಸತಕ್ಕದ್ದು ಮತ್ತು ನಿಯಮಿಸಲಾದ ರೀತಿಯಲ್ಲಿ ಹೊಸದಾಗಿ ನೋಂದಣಿಗೆ ಕೋರತಕ್ಕದ್ದು.

(3) ನೋಂದಣಿ ಪ್ರಮಾಣ ಪತ್ರದಲ್ಲಿ ಯಾವುದೇ ತಿದ್ದುಪಡಿ ಮಾಡಲು ಸಲ್ಲಿಸಿದ ಅರ್ಜಿಯ ಮೇಲೆ ಅಥವಾ ತಾನಾಗಿಯೇ, ನಿಯಮಿಸಲಾದ ಪ್ರಾಧಿಕಾರವು ಅಂಥ ಅರ್ಜಿಯನ್ನು ಸ್ವೀಕರಿಸಿದ ಮೂವತ್ತು ದಿನಗಳೊಳಗೆ, ತಾನು ಸೂಕ್ತವೆಂದು ಭಾವಿಸಬಹುದಾದ ಅಂಥ ವಿಚಾರಣೆಯನ್ನು ನಡೆಸಿದ ತರುವಾಯ ಹಾಗೂ ಅಂಥ ತಿದ್ದುಪಡಿ ಅಥವಾ ತಿರಸ್ಕರಣೆಗೆ ವಿರುದ್ಧವಾಗಿ ಕಾರಣ ತೋರಿಸಲು ಅವಕಾಶವನ್ನು ವ್ಯಾಪಾರಿಗೆ ನೀಡಿದ ತರುವಾಯ, ವ್ಯಾಪಾರಿಯ ನೋಂದಣಿ ಪ್ರಮಾಣ ಪತ್ರವನ್ನು ತಿದ್ದುಪಡಿ ಮಾಡಬಹುದು ಅಥವಾ ಅರ್ಜಿಯನ್ನು ತಿರಸ್ಕರಿಸಬಹುದು.

(4) ಪ್ರಮಾಣ ಪತ್ರದ ಯಾವುದೇ ತಿದ್ದುಪಡಿಯು (1)ನೇ ಉಪ ಪ್ರಕರಣದಲ್ಲಿ ಉಲ್ಲೇಖಿಸಿದ ಘಟನೆಯ ದಿನಾಂಕದಿಂದ ಪರಿಣಾಮಕಾರಿಯಾಗತಕ್ಕದ್ದು ಮತ್ತು ಇತರ ಎಲ್ಲ ಪ್ರಕರಣಗಳಲ್ಲಿನ ತಿದ್ದುಪಡಿಗಳು ಅರ್ಜಿಯ ದಿನಾಂಕದಿಂದ ಪರಿಣಾಮಕಾರಿಯಾಗತಕ್ಕದ್ದು.

(5) ನೋಂದಾಯಿತ ವ್ಯಾಪಾರಿಯ ಮರಣದ ಹೊರತಾಗಿ ನೋಂದಣಿಯಲ್ಲಿಯ ಯಾವುದೇ ಬದಲಾವಣೆಯನ್ನು ನಿಯಮಿಸಲಾದ ಪ್ರಾಧಿಕಾರಕ್ಕೆ, ನಿಯಮಿಸಲಾದ ಅವಧಿಯೊಳಗೆ ವರದಿ ಮಾಡದಿದ್ದಲ್ಲಿ, ಅಂಥ ಯಾವುದೇ ಬದಲಾವಣೆಯು ನಡೆದಿಲ್ಲವೆಂದು ಭಾವಿಸತಕ್ಕದ್ದು ಮತ್ತು ವ್ಯಾಪಾರಿಯು ನೋಂದಣಿಯಾದಂತೆ, ಕೈಗೊಂಡ ಯಾವುದೇ ವ್ಯಾಪಾರದ ಸಂಬಂಧದಲ್ಲಿ ತೆರಿಗೆಯನ್ನು ಸಂದಾಯ ಮಾಡಲು ಬದ್ಧನಾಗಿರತಕ್ಕದ್ದು.

## ಅಧ್ಯಾಯ - IV

## ಲೆಕ್ಕಪತ್ರಗಳು ಮತ್ತು ದಸ್ತಾವೇಜುಗಳು

**29. ತೆರಿಗೆ ಬೆಲೆಪಟ್ಟಿ ಮತ್ತು ಮಾರಾಟ ಬಿಲ್ಲುಗಳು.-** (1) ಒಬ್ಬ ನೋಂದಾಯಿತ ವ್ಯಾಪಾರಿಯು, [1][ನಿಯಮಿಸಲಾದ ಮೌಲ್ಯಕ್ಕಿಂತ ಹೆಚ್ಚುವರಿಯಾಗಿ ತೆರಿಗೆಗೆ ಗುರಿಯಾಗತಕ್ಕ ಸರಕುಗಳ ಮಾರಾಟ ಮಾಡಿದ್ದರೆ ಅಥವಾ ಯಾವುದೇ ತೆರಿಗೆಗೆ ಗುರಿಯಾಗತಕ್ಕ ಸರಕುಗಳೊಂದಿಗೆ ವಿನಾಯಿತಿ ಪಡೆದ ಸರಕುಗಳನ್ನು ಮಾರಾಟ ಮಾಡಿದ್ದರೆ][1] ಅವನು ಮಾರಾಟದ ಸಮಯದಲ್ಲಿ, ನಿಯಮಿಸಬಹುದಾದ ವಿವರಗಳನ್ನು ಒಳಗೊಂಡಂತೆ, ಮಾರಾಟಕ್ಕಾಗಿ ತೆರಿಗೆ ಬೆಲೆ ಪಟ್ಟಿಯ ಮೂಲ ಪ್ರತಿ ಎಂಬುದಾಗಿ ಗುರುತು ಮಾಡಿದ ಪಟ್ಟಿಯೊಂದನ್ನು ಒದಗಿಸತಕ್ಕದ್ದು ಮತ್ತು ಅದರ ಒಂದು ಪ್ರತಿಯನ್ನು ಇಟ್ಟುಕೊಳ್ಳತಕ್ಕದ್ದು.

1. 2007ರ ಅಧಿನಿಯಮ ಸಂಖ್ಯೆ 6ರ ಮೂಲಕ ದಿನಾಂಕ: 1.4.2007 ರಿಂದ ಪ್ರತಿಯೋಜಿಸಲಾಗಿದೆ.

(2) ತೆರಿಗೆ ಬೆಲೆಪಟ್ಟಿಯ ಮೂಲಪ್ರತಿ ಎಂಬುದಾಗಿ ಗುರುತು ಮಾಡಿದ ಪಟ್ಟಿಯನ್ನು (1)ನೇ ಉಪ-ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಸಂದರ್ಭಗಳನ್ನು ಹೊರತುಪಡಿಸಿ ಇತರೆ ಸಂದರ್ಭಗಳಲ್ಲಿ ಯಾವೊಬ್ಬ ನೋಂದಾಯಿತ ವ್ಯಾಪಾರಿಗೆ ನೀಡತಕ್ಕದ್ದಲ್ಲ ಮತ್ತು ಮೂಲ ಪ್ರತಿಯು ಕಳೆದುಹೋದ ಸಂದರ್ಭದಲ್ಲಿ ಅಂಥ ನೋಂದಾಯಿತ ವ್ಯಾಪಾರಿಯು ಹಾಗೆ ಕೋರಿಕೊಂಡಲ್ಲಿ ಅದರ ಒಂದು ಪ್ರತಿಯನ್ನು ನೀಡತಕ್ಕದ್ದು.

[1][(3) (ಎ) ನಿಯಮಿಸಲಾದ ಮೌಲ್ಯವನ್ನುಮೀರಿ ತೆರಿಗೆಗೆ ಗುರಿಯಾಗದಿರುವ ಸರಕುಗಳನ್ನು ಮಾರಾಟ ಮಾಡಿದ ; ಅಥವಾ

(ಬಿ) 15ನೇ ಪ್ರಕರಣದ ಮೇರೆಗೆ ರಾಜಿಯ ಮೂಲಕ ತೆರಿಗೆ ಸಂದಾಯ ಮಾಡಲು ಆಯ್ಕೆ ಮಾಡಿಕೊಂಡ ಮತ್ತು ನಿಯಮಿಸಲಾದ ಮೌಲ್ಯವನ್ನುಮೀರಿ ಯಾವುದೇ ಸರಕುಗಳನ್ನು ಮಾರಾಟ ಮಾಡಿದ ; ಅಥವಾ

(ಸಿ) 16ನೇ ಪ್ರಕರಣದ ಮೇರೆಗೆ ತೆರಿಗೆ ಸಂದಾಯ ಮಾಡಲು ಅನುಮತಿಸಲಾದ ಮತ್ತು ನಿಯಮಿಸಲಾದ ಮೌಲ್ಯವನ್ನುಮೀರಿ ಯಾವುವೇ ಸರಕುಗಳನ್ನು ಮಾರಾಟ ಮಾಡಿದ,

– ಒಬ್ಬ ನೋಂದಾಯಿತ ವ್ಯಾಪಾರಿಯು, ನಿಯಮಿಸಬಹುದಾದಂಥ ವಿವರಗಳನ್ನು ಒಳಗೊಂಡಿರುವ ಮಾರಾಟ ಬಿಲ್ಲನ್ನು ನೀಡತಕ್ಕದ್ದು.][1]

1. 2008ರ ಅಧಿನಿಯಮ ಸಂಖ್ಯೆ 5ರ ಮೂಲಕ ದಿನಾಂಕ: 1.8.2008 ರಿಂದ ಪ್ರತಿಯೋಜಿಸಲಾಗಿದೆ.

[1][(4) (1)ನೇ ಅಥವಾ (3)ನೇ ಉಪ ಪ್ರಕರಣಗಳಲ್ಲಿ ಅಥವಾ 7ನೇ ಪ್ರಕರಣದ (1)ನೇ ಉಪ ಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ಸಿವಿಲ್ ಕಾಮಗಾರಿ ಕರಾರುಗಳನ್ನು ನಿರ್ವಹಿಸುವ ಒಬ್ಬ ನೋಂದಾಯಿತ ವ್ಯಾಪಾರಿಯು ನಿಯಮಿಸಬಹುದಾದಂಥ ಅವಧಿಯಲ್ಲಿ ಮತ್ತು ಅಂಥ ವಿವರಗಳನ್ನು ಒಳಗೊಂಡ ತೆರಿಗೆಯ ಬೆಲೆಪಟ್ಟಿಯನ್ನು ಅಥವಾ ಮಾರಾಟದ ಬಿಲ್ಲನ್ನು ನೀಡತಕ್ಕದ್ದು.][1]

1. 2007ರ ಅಧಿನಿಯಮ ಸಂಖ್ಯೆ 6ರ ಮೂಲಕ ದಿನಾಂಕ: 1.4.2007 ರಿಂದ ಸೇರಿಸಲಾಗಿದೆ.

[1][**30. xxx**][1]

1. 2012ರ ಅಧಿನಿಯಮ ಸಂಖ್ಯೆ 17ರ ಮೂಲಕ ದಿನಾಂಕ: 1.4.2012 ರಿಂದ ಬಿಟ್ಟುಬಿಡಲಾಗಿದೆ.

**31. ಲೆಕ್ಕ ಪತ್ರಗಳು.-** (1) ಪ್ರತಿಯೊಬ್ಬ ನೋಂದಾಯಿತ ವ್ಯಾಪಾರಿಯು ಮತ್ತು ಈ ಅಧಿನಿಯಮದ ಅಡಿಯಲ್ಲಿ ತೆರಿಗೆ ಸಂದಾಯ ಮಾಡಲು ಬದ್ಧನಾದ ಪ್ರತಿಯೊಬ್ಬ ವ್ಯಾಪಾರಿಯು, ಸಂದಾಯ ಮಾಡಿದ ಹೂಡುವಳಿ ತೆರಿಗೆ ಮತ್ತು ಸಂದಾಯ ಮಾಡಬೇಕಾದ ಹುಟ್ಟುವಳಿ ತೆರಿಗೆಯೂ ಸೇರಿದಂತೆ ಈ ಅಧಿನಿಯಮದ ಅಡಿಯಲ್ಲಿ ತೆರಿಗೆಯ ಪ್ರತಿಯೊಂದು

ದರಕ್ಕೆ ಒಳಪಟ್ಟ ಸರಕುಗಳ ಮೌಲ್ಯಗಳನ್ನು ತೋರಿಸುವ ತನ್ನ ಎಲ್ಲಾ ಖರೀದಿಗಳ, ಸ್ವೀಕೃತಿಗಳ, ಮಾರಾಟಗಳ, ಇತರ ವಿಲೆಗಳ, ಉತ್ಪಾದನೆಯ, ತಯಾರಿಕೆಯ ಮತ್ತು ದಾಸ್ತಾನಿನ ನಿಜವಾದ ಮತ್ತು ಸರಿಯಾದ ಲೆಕ್ಕ ಪತ್ರಗಳನ್ನು ಕನ್ನಡ ಅಥವಾ ಇಂಗ್ಲೀಷ್ ಅಥವಾ ಹಿಂದಿ ಅಥವಾ ಸರ್ಕಾರವು ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದಂತೆ ಅಂಥ ಇತರ ಭಾಷೆಯಲ್ಲಿ ಇಡತಕ್ಕದ್ದು ಮತ್ತು ನಿರ್ವಹಿಸತಕ್ಕದ್ದು.

(2) ಯಾವೊಬ್ಬ ವ್ಯಾಪಾರಿಯು ಅಥವಾ ಯಾವುದೇ ವ್ಯಾಪಾರಿಗಳ ವರ್ಗವು ಇಟ್ಟುಕೊಂಡುಬಂದ ಮತ್ತು ನಿರ್ವಹಿಸಿದ ಲೆಕ್ಕ ಪತ್ರಗಳು, ಈ ಅಧಿನಿಯಮದ ಅಡಿಯಲ್ಲಿ ಅಗತ್ಯಪಡಿಸಲಾದ ವಿವರಪಟ್ಟಿಗಳನ್ನು ಪರಿಶೀಲಿಸಲು ಅಥವಾ ಅದರ ಅಡಿಯಲ್ಲಿ ಯಾವುದೇ ತೆರಿಗೆ ನಿರ್ಧರಣೆ ಮಾಡಲು ತನಗೆ ಅಥವಾ ಅದಕ್ಕೆ ಸಾಕಷ್ಟು ಅನುಕೂಲವಾಗಿಲ್ಲವೆಂದು ಆಯುಕ್ತನು ಅಥವಾ ನಿಯಮಿಸಲಾದ ಪ್ರಾಧಿಕಾರವು ಅಭಿಪ್ರಾಯಪಟ್ಟಲ್ಲಿ, ಅವನು ಅಥವಾ ಅದು, ಆದೇಶದ ಮೂಲಕ, ಯಾವೊಬ್ಬ ವ್ಯಾಪಾರಿ ಅಥವಾ ವ್ಯಾಪಾರಿಗಳ ವರ್ಗವನ್ನು, ಅವನು ಅಥವಾ ಅದು ನಿರ್ದೇಶಿಸಬಹುದಾದಂತೆ ಅಂಥ ನಮೂನೆಯಲ್ಲಿ ಮತ್ತು ಅಂಥ ರೀತಿಯಲ್ಲಿ ದಾಸ್ತಾನುಗಳ ತಯಾರಿಕೆ, ಮಾರಾಟಗಳ, ಖರೀದಿಗಳ, ವಿಲೆಗಳ ಅಥವಾ ಮಾರಾಟಗಳ ರೂಪದಲ್ಲಿ ಹೊರತು ಅನ್ಯಥಾ ವರ್ಗಾವಣೆಗಳ ದಾಖಲೆಗಳೂ ಒಳಗೊಂಡಂತೆ ತೆರಿಗೆ ಬೆಲೆಪಟ್ಟಿಯೂ ಸೇರಿದಂತೆ ಅಂಥ ಲೆಕ್ಕಪತ್ರಗಳನ್ನು ಮತ್ತು ದಾಖಲೆಗಳನ್ನು ಇಡಲು ಅಗತ್ಯಪಡಿಸಬಹುದು.

[1][(2-ಎ) ಆಯುಕ್ತನು, ತಾನು ಅಧಿಸೂಚಿಸಬಹುದಾದ ವ್ಯಾಪಾರಿ ವರ್ಗಗಳಿಗೆ ಸೇರಿದ ಪ್ರತಿಯೊಬ್ಬ ನೋಂದಾಯಿತ ವ್ಯಾಪಾರಿಯು, ಅಂಥ ವ್ಯಾಪಾರಿಯ ತೆರಿಗೆ ಹೊಣೆಗಾರಿಕೆ ಮೇಲೆ ಪರಿಣಾಮ ಬೀರಬಹುದಾದ ಯಾವುದೇ ವಿಷಯ ಅಥವಾ ವ್ಯವಹಾರಗಳ ಸಂಬಂಧದಲ್ಲಿ ಮಾಹಿತಿಯನ್ನು ಪಡೆದುಕೊಳ್ಳುವುದನ್ನು ಸಾಧ್ಯವಾಗಿಸುವ ಉದ್ದೇಶದಿಂದ ನಿಯಮಿಸಬಹುದಾದಂಥ ವಿಧದ ಮತ್ತು ವಿವರಣೆಯ ಮತ್ತು ಭದ್ರಗೊಳಿಸಬಹುದಾದಂಥ ಒಂದು ವಿದ್ಯುನ್ಮಾನ ತೆರಿಗೆ ರಿಜಿಸ್ಟರನ್ನು ಸ್ಥಾಪಿಸಬೇಕೆಂದು ಮತ್ತು ಬಳಸಬೇಕೆಂದು ಅಗತ್ಯಪಡಿಸಬಹುದು.

(2-ಬಿ) 29ನೇ ಪ್ರಕರಣದ (1) ರಿಂದ (3)ನೇ ಉಪಪ್ರಕರಣಗಳಲ್ಲಿ ಏನೇ ಇದ್ದರೂ, (2-ಎ) ಉಪಪ್ರಕರಣದ ಅಡಿಯಲ್ಲಿ ಬರುವ ಪ್ರತಿಯೊಬ್ಬ ನೋಂದಾಯಿತ ವ್ಯಾಪಾರಿಯು ಮಾರಾಟ ಮಾಡಿದ ಸರಕುಗಳ ಮೌಲ್ಯವು ಏನೇ ಇದ್ದರೂ ತೆರಿಗೆ ದರ ಪಟ್ಟಿಯನ್ನು ಅಥವಾ ಮಾರಾಟ ಬಿಲ್ಲುಗಳನ್ನು ವಿದ್ಯುನ್ಮಾನ ತೆರಿಗೆ ರಿಜಿಸ್ಟರ್ ಮೂಲಕ ನೀಡತಕ್ಕದ್ದು ಮತ್ತು ಅಂಥ ವ್ಯಾಪಾರಿಯು ವಿದ್ಯುನ್ಮಾನ ತೆರಿಗೆ ರಿಜಿಸ್ಟರಿನ ವೆಚ್ಚವನ್ನು ನಿಯಮಿಸಬಹುದಾದ ವಿಧಾನದಲ್ಲಿ ಮತ್ತು ಅಂಥ ಷರತ್ತುಗಳಿಗೆ ಒಳಪಟ್ಟು ವಸೂಲಿ ಮಾಡಿಕೊಳ್ಳಲು ಅನುಮತಿಸತಕ್ಕದ್ದು][1].

1. 2009ರ ಅಧಿನಿಯಮ ಸಂಖ್ಯೆ 5ರ ಮೂಲಕ ದಿನಾಂಕ: 1.4.2009 ರಿಂದ ಸೇರಿಸಲಾಗಿದೆ.

(3) ವ್ಯಾಪಾರಿಗಳ ಯಾವುದೇ ವರ್ಗಕ್ಕೆ ಈ ಪ್ರಕರಣಗಳ ಉಪಬಂಧಗಳ ಅನುಸಾರ ಲೆಕ್ಕಪತ್ರಗಳನ್ನು ಇಡಲು ಮತ್ತು ನಿರ್ವಹಿಸಲು, ಸಾಧ್ಯವಾಗುತ್ತಿಲ್ಲ ಎಂದು ಆಯುಕ್ತನು ಪರಿಗಣಿಸಿದರೆ, ಅವನು ಕಾರಣಗಳನ್ನು ಲಿಖಿತದಲ್ಲಿ ದಾಖಲಿಸಿ ನಿಯಮಿಸಬಹುದಾದ ರೀತಿಯಲ್ಲಿ ಲೆಕ್ಕಪತ್ರಗಳನ್ನು ನಿರ್ವಹಿಸಲು ವ್ಯಾಪಾರಿಗಳ ಅಂಥ ವರ್ಗಕ್ಕೆ ಅನುಮತಿ ನೀಡಬಹುದು.

(4) [1][ಯಾರ ಒಟ್ಟು ವಹಿವಾಟು][1] ಒಂದು ವರ್ಷದಲ್ಲಿ [2][[3][ಒಂದು ನೂರು ಲಕ್ಷ ರೂಪಾಯಿಗಳನ್ನು][3] ಮೀರುವುದೋ, ಆ ಪ್ರತಿಯೊಬ್ಬ ವ್ಯಾಪಾರಿಯು, ತನ್ನ ಲೆಕ್ಕಪತ್ರಗಳನ್ನು ನಿಯಮಿಸಬಹುದಾದಂಥ ಷರತ್ತುಗಳಿಗೆ ಮತ್ತು ಅಂಥ ಮಿತಿಗಳಿಗೆ ಒಳಪಟ್ಟು ಒಬ್ಬ ಚಾರ್ಟೆಡ್ ಅಕೌಂಟೆಂಟ್ ಅಥವಾ ಕಾಸ್ಟ್ ಅಕೌಂಟೆಂಟ್][2] ಅಥವಾ ಒಬ್ಬ ತೆರಿಗೆ ವೃತ್ತಿದಾರನಿಂದ ಪರಿಶೋಧಿಸತಕ್ಕದ್ದು ಮತ್ತು ಪರಿಶೋಧಿತ ಲೆಕ್ಕಪತ್ರಗಳ ವಿವರಣ ಪಟ್ಟಿಯ ಒಂದು ಪ್ರತಿಯನ್ನು ಮತ್ತು ನಿಯಮಿಸಲಾದ ದಸ್ತಾವೇಜುಗಳನ್ನು, ನಿಯಮಿಸಲಾದ ರೀತಿಯಲ್ಲಿ ನಿಯಮಿಸಲಾದ ಪ್ರಾಧಿಕಾರಕ್ಕೆ ಸಲ್ಲಿಸತಕ್ಕದ್ದು.

1. 2009ರ ಅಧಿನಿಯಮ ಸಂಖ್ಯೆ 5ರ ಮೂಲಕ ದಿನಾಂಕ: 1.4.2009 ರಿಂದ ಪ್ರತಿಯೋಜಿಸಲಾಗಿದೆ

2.2007ರ ಅಧಿನಿಯಮ ಸಂಖ್ಯೆ 6ರ ಮೂಲಕ ದಿನಾಂಕ: 1.4.2007 ರಿಂದ ಪ್ರತಿಯೋಜಿಸಲಾಗಿದೆ.

3.2011ರ ಅಧಿನಿಯಮ ಸಂಖ್ಯೆ 12ರ ಮೂಲಕ ದಿನಾಂಕ:1.4.2011ರಿಂದ ಪ್ರತಿಯೋಜಿಸಲಾಗಿದೆ.

[1][ಪರಂತು, 2010ರ ಮಾರ್ಚ್ 31ನೇ ದಿನಾಂಕದಂದು ಕೊನೆಗೊಳ್ಳುವ ವರ್ಷದಲ್ಲಿ ಒಟ್ಟು ವಹಿವಾಟು ನಲವತ್ತು ಲಕ್ಷ ರೂಪಾಯಿಗಳನ್ನು ಮೀರುವ ಪ್ರತಿಯೊಬ್ಬ ವ್ಯಾಪಾರಿಯು ತನ್ನ ಲೆಕ್ಕಪತ್ರಗಳನ್ನು ಲೆಕ್ಕಪರಿಶೋಧನೆ ಮಾಡಿಸತಕ್ಕದ್ದು.][1]

[2][ಮತ್ತೂ ಪರಂತು, ಲೆಕ್ಕಪರಿಶೋಧನೆ ಮಾಡಲಾದ ಲೆಕ್ಕಪತ್ರಗಳ ವಿವರಪಟ್ಟಿಗಳ ಮತ್ತು ನಿಯಮಿಸಲಾದ ವಿಧಾನದಲ್ಲಿ ನಿಯಮಿಸಲಾದ ದಸ್ತಾವೇಜುಗಳ ಪ್ರತಿಯನ್ನು ಸಲ್ಲಿಸುವುದನ್ನು ಹಾಗೆ ಯಾವ ವ್ಯಾಪಾರಿಗಳಿಗೆ ಅಗತ್ಯಪಡಿಸಲಾಗಿದೆಯೋ ಆ ವ್ಯಾಪಾರಿಗಳು, ಅವುಗಳನ್ನು ಆಯುಕ್ತನು ಅಧಿಸೂಚಿಸಿದ ಜಾಲತಾಣದ ಮುಖಾಂತರ ವಿದ್ಯುನ್ಮಾನೀಯವಾಗಿ ಸಲ್ಲಿಸತಕ್ಕದ್ದು.][2]

1. 2010ರ ಅಧಿನಿಯಮ ಸಂಖ್ಯೆ 4ರ ಮೂಲಕ ದಿನಾಂಕ: 1.4.2010 ರಿಂದ ಸೇರಿಸಲಾಗಿದೆ.

2. 2016ರ ಅಧಿನಿಯಮ ಸಂಖ್ಯೆ 06ರ ಮೂಲಕ ದಿನಾಂಕ:1.4.2016ರಿಂದ ಸೇರಿಸಲಾಗಿದೆ.

(5)[1][X X X][1]

[2][(5) ಪ್ರತಿಯೊಬ್ಬ ನೋಂದಾಯಿತ ವ್ಯಾಪಾರಿಯು ತನ್ನ ವಹಿವಾಟುಗಳ ಸಂಬಂಧದಲ್ಲಿ, ನಿಯಮಿಸಬಹುದಾದ ಅಂಥ ನಮೂನೆಯಲ್ಲಿ, ಅಂಥ ವಿವರಗಳನ್ನು ಒಳಗೊಂಡ ಒಂದು ವಿವರಣಾಪಟ್ಟಿಯನ್ನು ನಿಯಮಿಸಬಹುದಾದ ಅಂಥ ಅವಧಿಯೊಳಗೆ ನಿಯಮಿಸಲಾದ ಪ್ರಾಧಿಕಾರಕ್ಕೆ ಪ್ರತಿಯೊಂದು ವರ್ಷದಲ್ಲಿ ಸಲ್ಲಿಸತಕ್ಕದ್ದು.][2]

1. 2008ರ ಅಧಿನಿಯಮ ಸಂಖ್ಯೆ 5ರ ಮೂಲಕ ದಿನಾಂಕ: 1.8.2008 ರಿಂದ ಬಿಟ್ಟುಬಿಡಲಾಗಿದೆ.
2. 2014ರ ಅಧಿನಿಯಮ ಸಂಖ್ಯೆ 15ರ ಮೂಲಕ ದಿನಾಂಕ: 1.4.2014 ರಿಂದ ಸೇರಿಸಲಾಗಿದೆ.

[1][(6) XXX][1]

1. 2011ರ ಅಧಿನಿಯಮ ಸಂಖ್ಯೆ 12ರ ಮೂಲಕ ದಿನಾಂಕ: 1.4.2011 ರಿಂದ ಬಿಟ್ಟುಬಿಡಲಾಗಿದೆ.

**32. ಲೆಕ್ಕಪತ್ರಗಳನ್ನು ಉಳಿಸಿಕೊಳ್ಳಬೇಕಾದ ಅವಧಿ.-** (1) ಈ ಅಧಿನಿಯಮದ ಅಡಿಯಲ್ಲಿ ಅವನ ಖರೀದಿಗಳು ಮತ್ತು ಮಾರಾಟಗಳಿಗೆ ಸಂಬಂಧಪಟ್ಟಂತೆ ತೆರಿಗೆ ಬೆಲೆಪಟ್ಟಿಯೂ ಒಳಗೊಂಡಂತೆ ಲೆಕ್ಕಪತ್ರಗಳ ಪುಸ್ತಕಗಳನ್ನು ಅಥವಾ ಇತರೆ ದಾಖಲೆಗಳನ್ನು, ಇಟ್ಟುಕೊಳ್ಳಬೇಕೆಂದು ಮತ್ತು ನಿರ್ವಹಿಸಬೇಕೆಂದು ಅಗತ್ಯಪಡಿಸಲಾದ ಪ್ರತಿಯೊಬ್ಬ ವ್ಯಾಪಾರಿಯು, ಅವುಗಳು ಸಂಬಂಧಪಡುವ ವರ್ಷವು ಕೊನೆಗೊಂಡ ತರುವಾಯದ ಐದು ವರ್ಷಗಳು ಮುಕ್ತಾಯವಾಗುವವರೆಗೆ ಅಥವಾ ನಿಯಮಿಸಬಹುದಾದಂತೆ ಅಂಥ ಇತರ ಅವಧಿಯವರೆಗೆ ಅಥವಾ ತೆರಿಗೆ ನಿರ್ಧರಣೆಯು ಅಂತಿಮಘಟ್ಟ ತಲುಪುವವರೆಗೆ – ಇವುಗಳಲ್ಲಿ ಯಾವುದು ತರುವಾಯದ್ದೋ ಅಲ್ಲಿಯವರೆಗೆ ಉಳಿಸಿಕೊಳ್ಳತಕ್ಕದ್ದು.

(2) ಅಂಥ ವ್ಯಾಪಾರಿಯು ಈ ಅಧಿನಿಯಮದ ಅಡಿಯಲ್ಲಿ ಒಂದು ಅಪೀಲು ಅಥವಾ ಪುನರೀಕ್ಷಣೆಯ ಪಕ್ಷಕಾರನಾಗಿದ್ದಲ್ಲಿ, ಅವನು ಅಪೀಲು ಅಥವಾ ಪುನರೀಕ್ಷಣೆಯು ಅಥವಾ ಅದರ ಮೇಲಿನ ಯಾವುದೇ ಅಪೀಲು ಅಥವಾ ಪುನರೀಕ್ಷಣೆಯು ಅಂತಿಮವಾಗಿ ವಿಲೆಯಾಗುವವರೆಗೆ, ಅಪೀಲು ಅಥವಾ ಪುನರೀಕ್ಷಣೆಯ ವಿಷಯಕ್ಕೆ ಸಂಬಂಧಿಸಿದ ಪ್ರತಿಯೊಂದು ದಾಖಲೆ ಮತ್ತು ಲೆಕ್ಕಪತ್ರದ ದಸ್ತಾವೇಜನ್ನು ಉಳಿಸಿಕೊಳ್ಳತಕ್ಕದ್ದು.

**33. ಎಲೆಕ್ಟ್ರಾನಿಕ್ ದಾಖಲೆಗಳು.-** 31ನೇ ಪ್ರಕರಣದ ಅನುಸರಣೆಯಲ್ಲಿ ದಾಖಲೆಗಳು ಮತ್ತು ಲೆಕ್ಕಪತ್ರಗಳನ್ನು ಇಟ್ಟುಕೊಳ್ಳಲು ಮತ್ತು ನಿರ್ವಹಿಸಲು ಅಗತ್ಯಪಡಿಸಲಾದ ಮತ್ತು ಅದನ್ನು ಎಲೆಕ್ಟ್ರಾನಿಕ್ ವಿಧಾನಗಳಿಂದ ಹಾಗೆ ಇಟ್ಟುಕೊಳ್ಳುವ ಮತ್ತು ನಿರ್ವಹಿಸುವ ಪ್ರತಿಯೊಬ್ಬ ವ್ಯಾಪಾರಿಯು 32ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಉಳಿಸಿಕೊಳ್ಳುವ ಅವಧಿಗಾಗಿ ಎಲೆಕ್ಟ್ರಾನಿಕ್ ವಿಧಾನದ ಮೂಲಕ ಓದಬಲ್ಲ ಮಾದರಿಯಲ್ಲಿ ಅವುಗಳನ್ನು ಉಳಿಸಿಕೊಂಡುಬರತಕ್ಕದ್ದು.

**34. ದಸ್ತಾವೇಜುಗಳು ಮತ್ತು ಮಾಹಿತಿಗಳನ್ನು ಒದಗಿಸಲು ಅಗತ್ಯತೆಗಳು.-** ಈ ಅಧಿನಿಯಮದ ಉಪಬಂಧಗಳಲ್ಲಿ ವಿರುದ್ಧವಾದುದು ಏನೇ ಇದ್ದರೂ, ನಿಯಮಿಸಲಾದ ಪ್ರಾಧಿಕಾರವು, ಆಡಳಿತಕ್ಕೆ ಸಂಬಂಧಪಟ್ಟಂತೆ ಅಥವಾ ಈ ಅಧಿನಿಯಮವನ್ನು ಜಾರಿಗೊಳಿಸುವುದಕ್ಕೆ ಸಂಬಂಧಪಟ್ಟಂತೆ ಯಾವುದೇ ಉದ್ದೇಶಕ್ಕಾಗಿ, ನೋಟೀಸಿನಲ್ಲಿ ನಿಗದಿಪಡಿಸಲಾದಂತೆ ಅಂಥ ಸೂಕ್ತ ಸಮಯದೊಳಗೆ ಯಾವುದೇ ಮಾಹಿತಿಯೊಂದಿಗೆ ಅಥವಾ ಹೆಚ್ಚುವರಿ ಮಾಹಿತಿಯೊಂದಿಗೆ, ಈ ಅಧಿನಿಯಮದ ಅಡಿಯಲ್ಲಿ ವಿವರಣಪಟ್ಟಿಯೂ ಒಳಗೊಂಡಂತೆ ಅಥವಾ ಯಾವುದೇ ಇತರ ದಸ್ತಾವೇಜನ್ನು, ನಿಯಮಿಸಲಾದ ಪ್ರಾಧಿಕಾರಕ್ಕೆ ಒದಗಿಸುವಂತೆ ರಾಜ್ಯದ ಒಳಗೆ ಅಥವಾ ಹೊರಗೆ ನೋಟೀಸಿನ ಮೂಲಕ ಯಾವೊಬ್ಬ ವ್ಯಕ್ತಿಯನ್ನು ಅಗತ್ಯಪಡಿಸಬಹುದು.

## ಅಧ್ಯಾಯ - V

### ಆಡಳಿತ ಮತ್ತು ತೆರಿಗೆ ಸಂಗ್ರಹಣೆ

**35. ವಿವರ ಪಟ್ಟಿಗಳು.-** (1) (2) ರಿಂದ (4)ನೇ ಉಪಪ್ರಕರಣಗಳಿಗೆ ಒಳಪಟ್ಟು ಪ್ರತಿಯೊಬ್ಬ ನೋಂದಾಯಿತ ವ್ಯಾಪಾರಿಯು ಮತ್ತು 9ನೇ ಪ್ರಕರಣದ (2)ನೇ ಉಪ-ಪ್ರಕರಣದ ಅಡಿಯಲ್ಲಿ ಸಂಗ್ರಹಿಸಲಾದ ತೆರಿಗೆ ಸಂದಾಯಕ್ಕೆ ಬದ್ಧವಾದ ಕೇಂದ್ರ ಸರ್ಕಾರ, ಒಂದು ರಾಜ್ಯ ಸರ್ಕಾರ, ಶಾಸನಬದ್ಧ ನಿಕಾಯ ಮತ್ತು ಒಂದು ಸ್ಥಳೀಯ ಪ್ರಾಧಿಕಾರವು ಎಲೆಕ್ಟ್ರಾನಿಕ್ ವಿಧಾನಗಳು ಸೇರಿದಂತೆ ಅಂಥ ನಮೂನೆಯಲ್ಲಿ ಮತ್ತು ವಿಧಾನದಲ್ಲಿ ಒಂದು ವಿವರ ಪಟ್ಟಿಯನ್ನು ಒದಗಿಸತಕ್ಕದ್ದು ಮತ್ತು ನಿಯಮಿಸಬಹುದಾದಂತೆ ಹಿಂದಿನ ತಿಂಗಳ ಕೊನೆಯ ತರುವಾಯದ ಇಪ್ಪತ್ತು ದಿನಗಳೊಳಗೆ [1][ಅಥವಾ ಹದಿನೈದು ದಿನಗಳೊಳಗೆ][1] ಅಥವಾ ಇತರೆ ಯಾವುದೇ ತೆರಿಗೆ ಅವಧಿಯೊಳಗೆ ಅಂಥ ವಿವರ ಪಟ್ಟಿಯ ಮೇಲೆ ಬಾಕಿ ಇರುವ ತೆರಿಗೆಯನ್ನು ಸಂದಾಯ ಮಾಡತಕ್ಕದ್ದು.

[2][ಪರಂತು, ನಿರ್ದಿಷ್ಟಪಡಿಸಲಾದ ವರ್ಗದ ವ್ಯಾಪಾರಿಗಳು, ಆಯುಕ್ತರು ಅಧಿಸೂಚಿಸಬಹುದಾದಂತೆ ಅಂಥ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಿದ ವಿದ್ಯುನ್ಮಾನ ವಿಧಾನದಲ್ಲಿ, ಅಂತರ್ಜಾಲ ಮೂಲಕ ನಿಯಮಿಸಲಾದ ನಮೂನೆಯಲ್ಲಿ ವಿವರ ಪಟ್ಟಿಗಳನ್ನು ತಯಾರಿಸಲು ವಿವರಗಳನ್ನು ಒದಗಿಸತಕ್ಕದ್ದು [3][ಮತ್ತು][3] ನಿಯಮಿಸಲಾದ ನಮೂನೆಯಲ್ಲಿ ವಿವರ ಪಟ್ಟಿಗಳನ್ನು ಸಲ್ಲಿಸತಕ್ಕದ್ದು;

ಮತ್ತು ಪರಂತು, ನಿರ್ದಿಷ್ಟಪಡಿಸಿದ ವರ್ಗದ ವ್ಯಾಪಾರಿಗಳು, ಆಯುಕ್ತರು ಅಧಿಸೂಚಿಸಬಹುದಾದಂತೆ ವಿವರ ಪಟ್ಟಿಗಳ ಆಧಾರದ ಮೇಲೆ ತೆರಿಗೆಯನ್ನು, ಅಂಥ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಿದ ವಿಧಾನದಲ್ಲಿ, ವಿದ್ಯುನ್ಮಾನ ವಿಧಾನದಲ್ಲಿ ಅಂತರ್ಜಾಲ ಮೂಲಕ ಸಂದಾಯ ಮಾಡತಕ್ಕದ್ದು.][2]

1. 2009ರ ಅಧಿನಿಯಮ ಸಂಖ್ಯೆ 5ರ ಮೂಲಕ ದಿನಾಂಕ: 1.4.2009 ರಿಂದ ಸೇರಿಸಲಾಗಿದೆ.
2. 2010ರಿಂದ ಅಧಿನಿಯಮ ಸಂಖ್ಯೆ 4ರ ಮೂಲಕ ದಿನಾಂಕ:1.4.2010ರಿಂದ ಸೇರಿಸಲಾಗಿದೆ.
3. 2016 ಅಧಿನಿಯಮ 06ರನ್ವಯ 2010ರ ಏಪ್ರಿಲ್ ಒಂದನೇ ದಿನಾಂಕದಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ ಎಂದು ಭಾವಿಸತಕ್ಕದ್ದು.

(2) ಒದಗಿಸಲಾದ ವಿವರ ಪಟ್ಟಿಯಲ್ಲಿ ಘೋಷಿಸಲಾದ ಸರಕುಗಳ ಯಾವುದೇ ಮಾರಾಟ ಅಥವಾ ಖರೀದಿಯ ಮೇಲಿನ ತೆರಿಗೆಯನ್ನು, ಅಂಥ ತೆರಿಗೆಯ ಸಂದಾಯಕ್ಕಾಗಿ ನೋಟೀಸನ್ನು ನೀಡುವ ಅಗತ್ಯವಿಲ್ಲದಂತೆ, (1)ನೇ ಉಪ-ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಅವಧಿಯು ಮುಕ್ತಾಯವಾದಾಗ ಸಂದಾಯ ಮಾಡತಕ್ಕದ್ದು.

(3) ನಿರ್ದಿಷ್ಟಪಡಿಸಬಹುದಾದ ಅಂಥ ನಿಬಂಧನೆಗಳು ಮತ್ತು ಷರತ್ತುಗಳಿಗೆ ಒಳಪಟ್ಟು, ನಿಯಮಿಸಲಾದ ಪ್ರಾಧಿಕಾರವು ಯಾವೊಬ್ಬ ನೋಂದಾಯಿತ ವ್ಯಾಪಾರಿಯನ್ನು,-

(ಎ) ಅಂಥ ಅವಧಿಗಳಿಗಾಗಿ ಒಂದು ವಿವರ ಪಟ್ಟಿಯನ್ನು ಸಲ್ಲಿಸಲು; ಅಥವಾ

(ಬಿ) ನೋಂದಾಯಿತ ವ್ಯಾಪಾರಿಯು ಒಂದಕ್ಕಿಂತ ಹೆಚ್ಚಿನ ವ್ಯಾಪಾರ ಸ್ಥಳಗಳನ್ನು ಹೊಂದಿರುವಲ್ಲಿ, ಪ್ರತ್ಯೇಕ ಶಾಖಾ ವಿವರ ಪಟ್ಟಿಗಳನ್ನು ಒದಗಿಸಲು,

- ಅಗತ್ಯಪಡಿಸಬಹುದು.

[1][(4) 38ನೇ ಪ್ರಕರಣದ (3)ನೇ ಉಪ ಪ್ರಕರಣದ ಅಡಿಯಲ್ಲಿ ಸಲ್ಲಿಸಿದ ವಿವರಪಟ್ಟಿಯನ್ನು ಹೊರತುಪಡಿಸಿ, ಈ ಅಧಿನಿಯಮದ ಅಡಿಯಲ್ಲಿ ಒಂದು ವಿವರ ಪಟ್ಟಿಯನ್ನು ನೀಡಿರುವ ಯಾವೊಬ್ಬ ವ್ಯಾಪಾರಿಯು, ನಿಯಮಿಸಲಾದ ಪ್ರಾಧಿಕಾರವು ಮಾಡಿದ ತಪಾಸಣೆಯ ಅಥವಾ ಯಾವುದೇ ಇತರ ಮಾಹಿತಿ ಅಥವಾ ಸಾಕ್ಷ್ಯದ ಸ್ವೀಕರಿಸಿದ ಕಾರಣದ ಹೊರತಾಗಿ, ಅದರಲ್ಲಿ ಯಾವುದೇ ಲೋಪ ಅಥವಾ ಸರಿಯಲ್ಲದ ಹೇಳಿಕೆಯು ಒಳಗೊಂಡಿದ್ದರೆ,-

(ಎ) ಆತನು, ಮುಂಬರುವ ತೆರಿಗೆ ಅವಧಿಗಾಗಿ ವಿವರ ಪಟ್ಟಿಕೆಯನ್ನು ಸಲ್ಲಿಸುವುದಕ್ಕಾಗಿ ನಿಯಮಿಸಲಾದ ಕಾಲದೊಳಗೆ ಒಂದು ಪರಿಷ್ಕೃತ ವಿವರಪಟ್ಟಿಯನ್ನು ಒದಗಿಸತಕ್ಕದ್ದು; ಮತ್ತು

(ಬಿ) ಆತನು, ನಿಯಮಿಸಲಾದ ಪ್ರಾಧಿಕಾರದಿಂದ ಹಾಗೆ ಅನುಮತಿಸಿದಲ್ಲಿ, ತದನಂತರ ಯಾವುದೇ ಸಮಯದಲ್ಲಿ ಸಂಬಂಧಿಸಿದ ತೆರಿಗೆ ಅವಧಿಯ ಮುಕ್ತಾಯದಿಂದ ಆರು ತಿಂಗಳುಗಳೊಳಗೆ ಒಂದು ಪರಿಷ್ಕೃತ ವಿವರ ಪಟ್ಟಿಯನ್ನು ಒದಗಿಸತಕ್ಕದ್ದು.][1]

1. 2012ರಿಂದ ಅಧಿನಿಯಮ ಸಂಖ್ಯೆ 17ರ ಮೂಲಕ ದಿನಾಂಕ:1.4.2012ರಿಂದ ಪ್ರತಿಯೋಜಿಸಲಾಗಿದೆ.

**36. ವಿವರ ಪಟ್ಟಿಗಳನ್ನು ಒದಗಿಸಲು ಅಥವಾ ವಿವರ ಪಟ್ಟಿಯ ಮೇಲೆ ಘೋಷಿಸಲಾದ ತೆರಿಗೆಯನ್ನು ಸಂದಾಯ ಮಾಡಲು ಅಥವಾ ಇತರ ಮೊಬಲಗನ್ನು ಸಂದಾಯ ಮಾಡಲು ತಪ್ಪಿದಲ್ಲಿ ಬಡ್ಡಿ.-** (1) ಪ್ರತಿಯೊಬ್ಬ ವ್ಯಾಪಾರಿಯು, ವಿವರ ಪಟ್ಟಿಯ ಮೇಲೆ ಘೋಷಿಸಬೇಕಾಗಿದ್ದ ತೆರಿಗೆಯ ಮೇಲೆ ಆದರೆ, ಅದರಿಂದ ಬಿಟ್ಟುಬಿಡಲಾಗಿದ್ದ, ಯಾವುದೇ ಮೊಬಲಗಿನ ಮೇಲೆ, 72ನೇ ಪ್ರಕರಣದ (2)ನೇ ಉಪ-ಪ್ರಕರಣಕ್ಕೆ ಒಳಪಟ್ಟು ಹಾಗೆ ಬಿಟ್ಟುಬಿಡಲಾದ ಮೂರು ತಿಂಗಳೊಳಗೆ ಅದನ್ನು ಸರಿಪಡಿಸದಿದ್ದ ಹೊರತು ಅದರ ಮೇಲೆ ಸರಳ ಬಡ್ಡಿಯನ್ನು ಸಂದಾಯ ಮಾಡಲು ಬದ್ಧನಾಗಿರತಕ್ಕದ್ದು ಮತ್ತು ತೆರಿಗೆಯನ್ನು ಘೋಷಿಸಬೇಕಾಗಿದ್ದ ದಿನಾಂಕದಿಂದ ಅಂಥ ಬಡ್ಡಿಯನ್ನು ಸಂದಾಯ ಮಾಡಬೇಕಾಗುತ್ತದೆ ಮತ್ತು ನಿಯಮಿಸಬಹುದಾದಂತೆ ಅಂಥ ನಮೂನೆಯಲ್ಲಿ ಮತ್ತು ಅಂಥ ರೀತಿಯಲ್ಲಿ ಬಡ್ಡಿಯನ್ನು ಸಂದಾಯ ಮಾಡಲು ತನ್ನ ಬದ್ಧತೆಯನ್ನು ಘೋಷಿಸತಕ್ಕದ್ದು.

(2) ಈ ಅಧಿನಿಯಮದ ಅಡಿಯಲ್ಲಿ ಒಬ್ಬ ವ್ಯಾಪಾರಿಯು ಒಂದು ವಿವರ ಪಟ್ಟಿಯನ್ನು ಒದಗಿಸಬೇಕೆಂದು ಅಗತ್ಯಪಡಿಸಲಾಗಿದ್ದು ಅವನು,-

(ಎ) ವಿವರ ಪಟ್ಟಿಯ ಮೇಲೆ ಘೋಷಿಸಿದ್ದ ತೆರಿಗೆಯ ಯಾವುದೇ ಮೊಬಲಗನ್ನು ಅಥವಾ ಹೆಚ್ಚುವರಿ ತೆರಿಗೆಯನ್ನು ಸಂದಾಯ ಮಾಡಲು ತಪ್ಪಿದಲ್ಲಿ, ಅಥವಾ

(ಬಿ) ಹೆಚ್ಚುವರಿ ತೆರಿಗೆ ಘೋಷಿಸಿ, ತೆರಿಗೆಯನ್ನು ಸಂದಾಯ ಮಾಡಬೇಕಾಗಿದ್ದ ಅವಧಿಗೆ ಮೀರಿ ಮೂರು ತಿಂಗಳುಗಳ ನಂತರ ಒಂದು ಪರಿಷ್ಕೃತ ವಿವರ ಪಟ್ಟಿಯನ್ನು ಸಲ್ಲಿಸಿದ್ದು ಆದರೆ, (1)ನೇ ಉಪ-ಪ್ರಕರಣದ ಅಡಿಯಲ್ಲಿ ಸಂದಾಯ ಮಾಡತಕ್ಕದ್ದೆಂದು ಘೋಷಿಸಿದ ಯಾವುದೇ ಬಡ್ಡಿಯನ್ನು ಸಂದಾಯ ಮಾಡಲು ತಪ್ಪಿದಲ್ಲಿ, ಅಥವಾ

(ಸಿ) ಘೋಷಿಸಬೇಕಾಗಿದ್ದ ಯಾವುದೇ ತೆರಿಗೆ ಅಥವಾ ಬಡ್ಡಿಯನ್ನು ಘೋಷಿಸಲು ತಪ್ಪಿದಲ್ಲಿ, ಅಥವಾ

(ಡಿ) ವಿವರ ಪಟ್ಟಿಯನ್ನು ಸಲ್ಲಿಸಲು ತಪ್ಪಿದಲ್ಲಿ,

- ಅಂಥ ವ್ಯಾಪಾರಿಯು, ತಾನು ಘೋಷಿಸಿದ್ದ ತೆರಿಗೆ ಮತ್ತು ಹೆಚ್ಚುವರಿ ತೆರಿಗೆ ಅಥವಾ (1)ನೇ ಉಪ-ಪ್ರಕರಣದ ಅಡಿಯಲ್ಲಿ ಸಂದಾಯಮಾಡಬೇಕಾದ ತೆರಿಗೆ ಮತ್ತು ಸಂದಾಯಮಾಡಬೇಕಾದ ಬಡ್ಡಿಯ ಸಂಬಂಧದಲ್ಲಿ ಅವನು ವಿವರ ಪಟ್ಟಿಯನ್ನು ಒದಗಿಸಲು ತಪ್ಪಿದ ಅವಧಿಗಾಗಿ ಬಡ್ಡಿಯನ್ನು ಸಂದಾಯ ಮಾಡಲು ಬದ್ಧನಾಗಿರತಕ್ಕದ್ದು.

(3) ಈ ಅಧಿನಿಯಮದ ಅಡಿಯಲ್ಲಿ ಸಂದಾಯಮಾಡಬೇಕಾಗಿದ್ದ ಯಾವುದೇ ಇತರ ಮೊಬಲಗನ್ನು 42ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಅವಧಿಯೊಳಗೆ ಸಂದಾಯ ಮಾಡದಿದ್ದಲ್ಲಿ, ಅಂಥ ಅವಧಿಗಾಗಿ ಅಂಥ ಮೊಬಲಗಿನ ಮೇಲೆ ಬಡ್ಡಿಯನ್ನು ಸಂದಾಯ ಮಾಡತಕ್ಕದ್ದು.

(4) ಅಂಥ ತೆರಿಗೆ ಅಥವಾ ಮೊಬಲಗಿನ ಬಗ್ಗೆ ವಿವಾದಿಸುವ ಯಾವುದೇ ಅಪೀಲಿನಲ್ಲಿ ಅಥವಾ ಇತರ ವ್ಯವಹರಣೆಗಳಲ್ಲಿ ಯಾವುದೇ ಪ್ರಾಧಿಕಾರದ ಅಥವಾ ನ್ಯಾಯಾಲಯದ ಆದೇಶದ ಮೂಲಕ, ಈ ಅಧಿನಿಯಮದ ಅಡಿಯಲ್ಲಿ ಸಂದಾಯ ಮಾಡಬೇಕಾಗಿದ್ದ ಯಾವುದೇ ತೆರಿಗೆಯ ಅಥವಾ ಇತರ ಮೊಬಲಗಿನ ವಸೂಲಿಯನ್ನು ಯಾವ ಅವಧಿಯಲ್ಲಿ ತಡೆಹಿಡಿಯಲಾಗಿದೆಯೋ ಆ ಯಾವುದೇ ಅವಧಿಯಲ್ಲಿ ಈ ಪ್ರಕರಣದ ಅಡಿಯಲ್ಲಿ ಬಡ್ಡಿಯನ್ನು ಸಹ ಸಂದಾಯ ಮಾಡತಕ್ಕದ್ದು.

**37. ಬಡ್ಡಿಯ ದರ.-** (1) ಈ ಮುಂದಿನ ಸಂದರ್ಭಗಳಲ್ಲಿ 36ನೇ ಪ್ರಕರಣದ ಅಡಿಯಲ್ಲಿ ಸಂದಾಯ ಮಾಡಬೇಕಾದ ಸರಳ ಬಡ್ಡಿಯ ದರವು ತಿಂಗಳಿಗೆ [1][ಶೇಕಡಾ ಒಂದೂವರೆ][1] ಆಗಿರತಕ್ಕದ್ದು.

1. 2011 ರ ಅಧಿನಿಯಮ ಸಂಖ್ಯೆ 12 ರ ಮೂಲಕ ದಿನಾಂಕ: 1.4.2011 ರಿಂದ ಪ್ರತಿಯೋಜಿಸಲಾಗಿದೆ.

(ಎ) ತೆರಿಗೆಯನ್ನು ಸಂದಾಯಮಾಡಬೇಕಾಗಿದ್ದ ದಿನಾಂಕದಿಂದ ಅದನ್ನು ಸಂದಾಯ ಮಾಡುವ ದಿನಾಂಕದವರೆಗೆ ಅಥವಾ ಈ ಅಧಿನಿಯಮದ ಅಡಿಯಲ್ಲಿ ಯಾವುದೇ ತೆರಿಗೆ ನಿರ್ಧರಣೆಯ ದಿನಾಂಕದವರೆಗೆ, ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ; ಮತ್ತು

(ಬಿ) ಈ ಅಧಿನಿಯಮದ ಅಡಿಯಲ್ಲಿ ಸಂದಾಯ ಮಾಡಬೇಕಾದ ಯಾವುದೇ ಮೊಬಲಗು ಯಾವ ದಿನಾಂಕದಿಂದ ಬಾಕಿ ಉಳಿದಿತ್ತೋ ಆ ದಿನಾಂಕದಿಂದ;

(2) ಈ ಪ್ರಕರಣದ ಉದ್ದೇಶಕ್ಕಾಗಿ, ಒಂದು ತಿಂಗಳಿನ ಭಾಗಗಳ ಸಂಬಂಧದಲ್ಲಿ ಬಡ್ಡಿಯನ್ನು ದಾಮಾಷಾ ಪ್ರಮಾಣದಲ್ಲಿ ಲೆಕ್ಕಹಾಕತಕ್ಕದ್ದು ಮತ್ತು ತಿಂಗಳು ಎಂದರೆ, ಮೂವತ್ತು ದಿನಗಳ ಯಾವುದೇ ಅವಧಿ ಆಗಿರತಕ್ಕದ್ದು.

**38. ತೆರಿಗೆಯ ನಿರ್ಧರಣೆ.-** [1][(1) ವ್ಯಾಪಾರಿಯು, ಯಾವುದೇ ಅವಧಿಗಾಗಿ ಸಲ್ಲಿಸಿದ ವಿವರ ಪಟ್ಟಿಯ ಸಮರ್ಥನೆಗಾಗಿ ನಿಯಮಿಸಲಾದ ಪ್ರಾಧಿಕಾರದ ಮುಂದೆ ಲೆಕ್ಕಪತ್ರಗಳನ್ನು ಹಾಜರುಪಡಿಸಬೇಕಾಗಿದೆ ಎಂಬುದಾಗಿ ಆಯುಕ್ತನು ಅಧಿಸೂಚಿಸಬಹುದಾದ ಪ್ರಕರಣಗಳಲ್ಲಿ ಹೊರತು, 35ನೇ ಪ್ರಕರಣದ ಅಡಿಯಲ್ಲಿ ವ್ಯಾಪಾರಿಯು ಸಲ್ಲಿಸಿದ ವಿವರ ಪಟ್ಟಿಯ ಆಧಾರದ ಮೇಲೆ ಆತನ ತೆರಿಗೆಯನ್ನು ನಿರ್ಧರಿಸಲಾಗಿರುವುದಾಗಿ ಭಾವಿಸತಕ್ಕದ್ದು ಮತ್ತು ಲೆಕ್ಕಪತ್ರ ಹಾಜರುಪಡಿಸಿದ ಸಂದರ್ಭದಲ್ಲಿ ನಿಯಮಿಸಲಾದ ಪ್ರಾಧಿಕಾರವು–

(ಎ) ಸಲ್ಲಿಸಿದ ವಿವರ ಪಟ್ಟಿಯ ಸರಿಯಾಗಿದೆ ಮತ್ತು ಸಂಪೂರ್ಣವಾಗಿದೆ ಎಂದು ಮನಗಂಡಲ್ಲಿ ಸಲ್ಲಿಸಿದ ವಿವರಪಟ್ಟಿಯ ಆಧಾರದ ಮೇಲೆ ಅಂಥ ವ್ಯಾಪಾರಿಯ,–

ತೆರಿಗೆ ನಿರ್ಧರಣೆಗೆ ಮುಂದುವರೆಯತಕ್ಕದ್ದು, ಅಥವಾ

(ಬಿ) ಸಲ್ಲಿಸಿದ ವಿವರ ಪಟ್ಟಿಯು ಸರಿಯಾಗಿಲ್ಲವೆಂದು ಅಥವಾ ಪೂರ್ಣವಾಗಿಲ್ಲವೆಂದು ಕಂಡುಬಂದಲ್ಲಿ, ತನ್ನ ಅತ್ಯುತ್ತಮ ವಿವೇಚನೆಯಲ್ಲಿ ತೆರಿಗೆ ನಿರ್ಧರಣೆಯನ್ನು, ಅಂಥ ನಿರ್ಧರಣೆ ವಿರುದ್ಧ ಬರಹದಲ್ಲಿ ಕಾರಣವನ್ನು ತೋರಿಸಲು ಅಂಥ ವ್ಯಾಪಾರಿಗೆ ಅವಕಾಶವನ್ನು ನೀಡಿದ ಮೇಲೆ, ಮಾಡಲು ಮುಂದುವರಿಯತಕ್ಕದ್ದು ಮತ್ತು ಅದರಲ್ಲಿ ಯಾವುದೇ ಹೆಚ್ಚುವರಿ ನಿರ್ಧರಣೆಯಾದ ತೆರಿಗೆಯನ್ನು ಅಂಥ ನಿರ್ಧರಣೆಯನ್ನು ವ್ಯಾಪಾರಿಗೆ ಜಾರಿಮಾಡಿದ ದಿನಾಂಕದಿಂದ [2][ಮೂವತ್ತು ದಿನಗಳೊಳಗಾಗಿ][2] ವ್ಯಾಪಾರಿಯು ಸಂದಾಯಿಸತಕ್ಕದ್ದು.][1]

3. 2006ರ ಅಧಿನಿಯಮ ಸಂಖ್ಯೆ 4ರ ಮೂಲಕ ದಿನಾಂಕ: 11.3.2005 ರಿಂದ ಸೇರಿಸಲಾಗಿದೆ.

4. 2013ಎ ಅಧಿನಿಯಮ ಸಂಖ್ಯೆ 32ರ ಮೂಲಕ ದಿನಾಂಕ 01.04.2013ರಿಂದ ಪ್ರತ್ಯಾಯೋಜಿಸಲಾಗಿದೆ.

(2) ಒಬ್ಬ ನೋಂದಾಯಿತ ವ್ಯಾಪಾರಿಯು, ಈ ಅಧಿನಿಯಮದ ಅಥವಾ ಅದರ ಅಡಿಯಲ್ಲಿ ಮಾಡಿದ ನಿಯಮಗಳ ಅಡಿಯಲ್ಲಿ ಉಪಬಂಧಿಸಲಾದ ದಿನಾಂಕದಂದು ಅಥವಾ ದಿನಾಂಕಕ್ಕೆ ಮೊದಲು ತನ್ನ ಮಾಸಿಕ ಅಥವಾ ಅಂತಿಮ ವಿವರ ಪಟ್ಟಿಯನ್ನು ಒದಗಿಸಲು ತಪ್ಪಿದಲ್ಲಿ, [2][ಅಥವಾ ಸಲ್ಲಿಸಿದ ವಿವರಪಟ್ಟಿಯು ಸರಿಯಾಗಿಲ್ಲದಿದ್ದಲ್ಲಿ ಅಥವಾ ಅಪೂರ್ಣವಾಗಿದ್ದಲ್ಲಿ,][2] ನಿಯಮಿಸಲಾದ ಪ್ರಾಧಿಕಾರವು ನೋಂದಾಯಿತ ವ್ಯಾಪಾರಿಗೆ, ತನ್ನ ಅತ್ಯುತ್ತಮ ವಿವೇಚನೆಯಂತೆ ತೆರಿಗೆ ನಿರ್ಧರಣೆಯನ್ನು ಮಾಡತಕ್ಕದ್ದು ಮತ್ತು [1][ವ್ಯಾಪಾರಿಗೆ ಅಂಥ ತೆರಿಗೆ ನಿರ್ಧರಣೆಯನ್ನು ಜಾರಿಮಾಡಿದ][1] ದಿನಾಂಕದಿಂದ ಹತ್ತು ದಿನಗಳೊಳಗೆ ನಿರ್ಧರಣೆ ಮಾಡಿದ ತೆರಿಗೆಯನ್ನು ಸಂದಾಯ ಮಾಡತಕ್ಕದ್ದು.

1. 2006ರ ಅಧಿನಿಯಮ ಸಂಖ್ಯೆ 4ರ ಮೂಲಕ ದಿನಾಂಕ: 1.4.2006 ರಿಂದ ಪ್ರತಿಯೋಜಿಸಲಾಗಿದೆ.

2. 2016ರ ಅಧಿನಿಯಮ ಸಂಖ್ಯೆ 06 ಮೂಲಕ ದಿನಾಂಕ: 1.4.2016 ರಿಂದ ಸೇರಿಸಲಾಗಿದೆ.

(3) ಮೇಲಿನ (2)ನೇ ಉಪ-ಪ್ರಕರಣದ ಅಡಿಯಲ್ಲಿ ತೆರಿಗೆ ನಿರ್ಧರಣೆಯನ್ನು ಮಾಡಿದಲ್ಲಿ ಮತ್ತು ತೆರಿಗೆ ನಿರ್ಧರಣೆಗೆ ಸಂಬಂಧಿಸಿದ ಅವಧಿಗಾಗಿ ವಿವರ ಪಟ್ಟಿಯನ್ನು ವ್ಯಾಪಾರಿಯು ತರುವಾಯ ನೀಡಿದಲ್ಲಿ, ನಿಯಮಿಸಲಾದ ಪ್ರಾಧಿಕಾರವು, ತೆರಿಗೆ ನಿರ್ಧರಣೆಯನ್ನು ಹಿಂದಕ್ಕೆ ಪಡೆಯಬಹುದು. ಆದರೆ, ವ್ಯಾಪಾರಿಯು, ಅನ್ವಯಿಸಬಹುದಾದ ದಂಡಗಳು ಮತ್ತು ಬಡ್ಡಿಯನ್ನು ಸಂದಾಯ ಮಾಡಲು ಬದ್ಧನಾಗಿರತಕ್ಕದ್ದು.

(4) ಮೇಲಿನ (3)ನೇ ಉಪ-ಪ್ರಕರಣದ ಅಡಿಯಲ್ಲಿ ಒಂದು ವಿವರ ಪಟ್ಟಿಯನ್ನು ವ್ಯಾಪಾರಿಯು ನೀಡಿದಲ್ಲಿ, ಅಂಥ ವಿವರ ಪಟ್ಟಿಯನ್ನು [1][ವ್ಯಾಪಾರಿಗೆ ಅಂಥ ತೆರಿಗೆ ನಿರ್ಧರಣೆಯನ್ನು ಜಾರಿಮಾಡಿದ][1] ಒಂದು ತಿಂಗಳೊಳಗೆ ಒದಗಿಸತಕ್ಕದ್ದು.

1. 2006ರ ಅಧಿನಿಯಮ ಸಂಖ್ಯೆ 4ರ ಮೂಲಕ ದಿನಾಂಕ: 1.4.2006 ರಿಂದ ಪ್ರತಿಯೋಜಿಸಲಾಗಿದೆ

(5)[1][(ಎ)][1] ಈ ಅಧಿನಿಯಮದ ಅಡಿಯಲ್ಲಿ ನೋಂದಾಯಿತನಾದ ಒಬ್ಬ ವ್ಯಾಪಾರಿಯ ಅಥವಾ ಈ ಅಧಿನಿಯಮದ ಅಡಿಯಲ್ಲಿ ನೋಂದಾಯಿತನಾಗಲು ಬದ್ಧನಾದ ವ್ಯಾಪಾರಿಯ ಸಂಬಂಧದಲ್ಲಿ, ನಿಯಮಿಸಲಾದ ಪ್ರಾಧಿಕಾರವು, ತೆರಿಗೆಗೆ ಬದ್ಧನಾಗಿರುವನೆಂದು ತೋರಿಸುವ ಯಾವುದೇ ಸಾಕ್ಷ್ಯವು ತನ್ನ ಗಮನಕ್ಕೆ ಬಂದ ಮೇಲೆ, [2][ತನ್ನ ಜಂಟಿ ಆಯುಕ್ತನ ಅಥವಾ ಅಪರ ಆಯುಕ್ತನ ಪೂರ್ವಾನುಮತಿಯೊಡನೆ][2] ಅಂಥ ವ್ಯಾಪಾರಿಯು, ಹಾಗೆ ನಿರ್ಧರಿಸಲಾದ [3][ಅಥವಾ ವಿಧಿಸಲಾದ ಅಥವಾ ಸಂದಾಯಮಾಡತಕ್ಕ][3] ಯಾವುದೇ ತೆರಿಗೆ, ದಂಡ ಅಥವಾ ಬಡ್ಡಿಯನ್ನು

ಸಂದಾಯ ಮಾಡಲು ತಪ್ಪುವನೆಂದು ನಂಬಲು ಕಾರಣ ಇದೆ ಎಂದು ನಿಯಮಿಸಲಾದ ಪ್ರಾಧಿಕಾರವು ಅಭಿಪ್ರಾಯಪಟ್ಟರೆ ಆ ವ್ಯಾಪಾರಿಗೆ ರಕ್ಷಣಾತ್ಮಕ ತೆರಿಗೆ ನಿರ್ಧರಣೆಯನ್ನು ಮಾಡಬಹುದು. [4][ನಿರ್ಧರಣೆಯನ್ನು ಹೊರಡಿಸಬಹುದು][4] ಹಾಗೂ ಅಂಥ ತೆರಿಗೆ, ದಂಡ ಅಥವಾ ಬಡ್ಡಿಯನ್ನು ಕೂಡಲೇ ಸಂದಾಯ ಮಾಡತಕ್ಕದ್ದು.

1. 2007ರ ಅಧಿನಿಯಮ ಸಂಖ್ಯೆ 6ರ ಮೂಲಕ ದಿನಾಂಕ: 1.4.2007 ರಿಂದ ಮರು ಸಂಖ್ಯೆ ನೀಡಲಾಗಿದೆ.
3. 2007ರ ಅಧಿನಿಯಮ ಸಂಖ್ಯೆ 6ರ ಮೂಲಕ ದಿನಾಂಕ: 1.4.2007 ರಿಂದ ಸೇರಿಸಲಾಗಿದೆ.
4. 2006ರ ಅಧಿನಿಯಮ ಸಂಖ್ಯೆ 4ರ ಮೂಲಕ ದಿನಾಂಕ: 1.4.2006 ರಿಂದ ಸೇರಿಸಲಾಗಿದೆ
5. 2008ರ ಅಧಿನಿಯಮ ಸಂಖ್ಯೆ 5ರ ಮೂಲಕ ದಿನಾಂಕ: 1.4.2007 ರಿಂದ ಸೇರಿಸಲಾಗಿದೆ ಎಂದು ಭಾವಿಸತಕ್ಕದ್ದು.

[1][(ಬಿ)ಜಂಟಿ ಆಯುಕ್ತ ಅಥವಾ ಅಪರ ಆಯುಕ್ತನು, ವ್ಯಾಪಾರಿಯು ಅಂಥ ರಕ್ಷಣಾತ್ಮಕ ತೆರಿಗೆಯನ್ನು ಸ್ವೀಕರಿಸಿದ ದಿನಾಂಕದಿಂದ ಮೂವತ್ತು ದಿನಗಳೊಳಗೆ ಸಲ್ಲಿಸಿದ ಯಾವುದೇ ಅರ್ಜಿಯ ಮೇಲೆ ಅಥವಾ ಅಂಥ ರಕ್ಷಣಾತ್ಮಕ ತೆರಿಗೆನಿರ್ಧರಣೆಯನ್ನು ನೀಡಿದ ದಿನಾಂಕದಿಂದ ಮೂವತ್ತು ದಿನಗಳೊಳಗೆ ತಾನಾಗಿಯೇ ನೀಡಲಾದ ಯಾವುದೇ ರಕ್ಷಣಾತ್ಮಕ ತೆರಿಗೆ ನಿರ್ಧರಣೆಯು ತಪ್ಪು ಎಂದು ಪರಿಗಣಿಸಿದರೆ, ಸಂಬಂಧಪಟ್ಟ ವ್ಯಾಪಾರಿಗೆ ಅಹವಾಲನ್ನು ಹೇಳಿಕೊಳ್ಳಲು ಅವಕಾಶವನ್ನು ನೀಡಿದ ತರುವಾಯ ಮತ್ತು ತಾನು ಸೂಕ್ತವೆಂದು ಭಾವಿಸಬಹುದಾದಂಥ ವಿಚಾರಣೆಯನ್ನು ನಡೆಸಿದ ತರುವಾಯ ಪ್ರಕರಣದ ಸನ್ನಿವೇಶಕ್ಕೆ ನ್ಯಾಯೋಚಿತವಾದಂಥ ಆದೇಶವನ್ನು ಹೊರಡಿಸತಕ್ಕದ್ದು.][1]

1. 2007ರ ಅಧಿನಿಯಮ ಸಂಖ್ಯೆ 6ರ ಮೂಲಕ ದಿನಾಂಕ: 1.4.2007 ರಿಂದ ಸೇರಿಸಲಾಗಿದೆ.

[1][(6) ಈ ಅಧಿನಿಯಮದಲ್ಲಿ ಏನೇ ಇದ್ದರೂ, ವ್ಯಾಪಾರಿಯು ಒಂದು ನಿಗಮಿತ ನಿಕಾಯವಾಗಿದ್ದಲ್ಲಿ ಮತ್ತು ಒಂದಕ್ಕಿಂತ ಹೆಚ್ಚು ವ್ಯವಹಾರದ ಸ್ಥಳಗಳನ್ನು ಹೊಂದಿದ್ದಲ್ಲಿ, ಆಯುಕ್ತನು, ನಿಯಮಿಸಬಹುದಾದಂಥ ಷರತ್ತುಗಳಿಗೆ ಒಳಪಟ್ಟು ಮತ್ತು ವ್ಯಾಪಾರಿಯ ಸಮ್ಮತಿಯೊಡನೆ, ವ್ಯವಹಾರಗಳ ಅಂಥ ಪ್ರತಿಯೊಂದು ಪ್ರದೇಶವನ್ನು ತೆರಿಗೆ ವಿಧಿಸುವಿಕೆ, ನಿರ್ಧರಣೆ, ಮತ್ತು ಸಂಗ್ರಹಣೆಯ ಉದ್ದೇಶಗಳಿಗಾಗಿ ಪ್ರತ್ಯೇಕ ಘಟಕಗಳೆಂದು ಪರಿಗಣಿಸತಕ್ಕದ್ದು ಮತ್ತು ತದನಂತರ ನೋಂದಣಿ, ವಿವರ ಪಟ್ಟಿಕೆಗಳ ಸಲ್ಲಿಕೆ, ತೆರಿಗೆ ನಿರ್ಧರಣೆ ಮತ್ತು ತೆರಿಗೆ ಸಂಗ್ರಹಣೆಗೆ ಸಂಬಂಧಿಸಿದಂತೆ ಈ ಅಧಿನಿಯಮದ ಎಲ್ಲಾ ಉಪಬಂಧಗಳನ್ನು ಅಂಥ ವ್ಯವಹಾರ ಸ್ಥಳಗಳು ಪ್ರತ್ಯೇಕ ಘಟಕಗಳಾಗಿದ್ದರೆ ಹೇಗೋ ಹಾಗೆ ಅವುಗಳಿಗೆ ಅನ್ವಯವಾಗತಕ್ಕದ್ದು.]

1. 2005ರ ಅಧಿನಿಯಮ ಸಂಖ್ಯೆ 6ರ ಮೂಲಕ ದಿನಾಂಕ: 19.3.2005 ರಿಂದ ಸೇರಿಸಲಾಗಿದೆ.

[1][(7) ಈ ಬಗ್ಗೆ ಆಯುಕ್ತರು ಪ್ರಾಧಿಕಾರ ನೀಡಿದ ಪ್ರಾಧಿಕಾರಿಯು, ನಿರ್ದಿಷ್ಟಪಡಿಸಿದ ಅವಧಿಯೊಳಗೆ ನೋಂದಾಯಿತನಾಗಲು ಬದ್ಧನಾಗಿದ್ದರೂ ಹಾಗೆ ಮಾಡಲು ತಪ್ಪಿದ ವ್ಯಾಪಾರಿಯ ತೆರಿಗೆ ನಿರ್ಧರಣೆಯನ್ನು, ಆ ವ್ಯಾಪಾರಿಯು ನೋಂದಾಯಿತನಾಗಿದ್ದರೆ ಯಾವ ತೆರಿಗೆ ಅವಧಿ ಅಥವಾ ಅವಧಿಗಳು ಅವನಿಗೆ ಅನ್ವಯಿಸುತ್ತವೆಯೋ ಅವುಗಳ ಬಗ್ಗೆ ತನ್ನ ಉತ್ತಮ ವಿವೇಚನೆಯ ಅನುಸಾರ ಮತ್ತು ಅಂಥ ತೆರಿಗೆ ನಿರ್ಧರಣೆಯ ವಿರುದ್ಧ ಕಾರಣಗಳನ್ನು ಬರಹದಲ್ಲಿ ತೋರಿಸಲು ಆ ವ್ಯಾಪಾರಿಗೆ ಅವಕಾಶವನ್ನು ಕೊಟ್ಟ ನಂತರ ಮಾಡತಕ್ಕದ್ದು. ಸದರಿ ತೆರಿಗೆ ನಿರ್ಧರಣೆಯನ್ನು ಆ ವ್ಯಾಪಾರಿಯ ಮೇಲೆ ಜಾರಿ ಮಾಡಿದ ದಿನಾಂಕದಿಂದ ಹತ್ತು ದಿನಗಳೊಳಗೆ ನಿರ್ಧರಿಸಿದ ತೆರಿಗೆ ಹಾಗೂ ಯಾವುದಾದರೂ ಬಡ್ಡಿ ಸಂದಾಯವಾಗಬೇಕಿದ್ದರೆ ಅದನ್ನು ವ್ಯಾಪಾರಿಯು ಸಂದಾಯ ಮಾಡತಕ್ಕದ್ದು.][1]

1. 2007ರ ಅಧಿನಿಯಮ ಸಂಖ್ಯೆ 6ರ ಮೂಲಕ ದಿನಾಂಕ: 1.4.2007 ರಿಂದ ಸೇರಿಸಲಾಗಿದೆ.

**39. ತೆರಿಗೆಯ ಮರು ನಿರ್ಧರಣೆ.**- (1) ತೆರಿಗೆ ನಿರ್ಧರಣೆ ಮಾಡಲಾಗಿದೆಯೆಂದು ಭಾವಿಸಲಾದ, ಸಂದರ್ಭದಲ್ಲಿ ನೀಡಿದ ಯಾವುದೇ ವಿವರ ಪಟ್ಟಿಯು [1][ಅಥವಾ][1] 38ನೇ ಪ್ರಕರಣದ ಅಡಿಯಲ್ಲಿ ನೀಡಿದ ಯಾವುದೇ ತೆರಿಗೆ ನಿರ್ಧರಣೆಯು, ವ್ಯಾಪಾರಿಯ ಸರಿಯಾದ ತೆರಿಗೆ ಹೊಣೆಗಾರಿಕೆಯನ್ನು ಕಡಿಮೆ ನಿರೂಪಿಸಿದೆ ಎಂದು ನಿಯಮಿಸಲಾದ ಪ್ರಾಧಿಕಾರವು ನಂಬಲು ಕಾರಣಗಳಿದ್ದಲ್ಲಿ, ಅದು,-

1. 2007ರ ಅಧಿನಿಯಮ ಸಂಖ್ಯೆ 6ರ ಮೂಲಕ ದಿನಾಂಕ: 1.4.2007 ರಿಂದ ಪ್ರತಿಯೋಜಿಸಲಾಗಿದೆ.

(ಎ) ಲಭ್ಯವಿರುವ ಯಾವುದೇ ಮಾಹಿತಿಯ ಆಧಾರದ ಮೇಲೆ, ತನ್ನ ಅತ್ಯುತ್ತಮ ವಿವೇಚನೆಯಲ್ಲಿ, [1][ಸಂದಾಯ ಮಾಡಬೇಕಾದ ಹೆಚ್ಚುವರಿ ತೆರಿಗೆಯ ಮರುನಿರ್ಧರಣೆ ಮಾಡಬಹುದು ಮತ್ತು 72ನೇ ಪ್ರಕರಣದ (2)ನೇ ಉಪ ಪ್ರಕರಣದ ಅಡಿಯಲ್ಲಿ ಅಥವಾ [2][(5)][2]ನೇ ಉಪಪ್ರಕರಣದ ಅಡಿಯಲ್ಲಿ ಯಾವುದೇ ದಂಡವನ್ನು ಸಹ ವಿಧಿಸಬಹುದು ಹಾಗೂ ಯಾವುದೇ ಬಡ್ಡಿಯ ಸಂದಾಯಕ್ಕಾಗಿ ಒತ್ತಾಯಿಸಬಹುದು][1] ಮತ್ತು

1. 2007ರ ಅಧಿನಿಯಮ ಸಂಖ್ಯೆ 6ರ ಮೂಲಕ ದಿನಾಂಕ: 1.4.2007 ರಿಂದ ಪ್ರತಿಯೋಜಿಸಲಾಗಿದೆ.
2. 2008ರ ಅಧಿನಿಯಮ ಸಂಖ್ಯೆ 5ರ ಮೂಲಕ ದಿನಾಂಕ: 1.4.2007 ರಿಂದ ಪ್ರತಿಯೋಜಿಸಲಾಗಿದೆ ಎಂದು ಭಾವಿಸತಕ್ಕದ್ದು.

(ಬಿ) ಲಿಖಿತದಲ್ಲಿ ಅಂಥ ಮರು ನಿರ್ಧರಣೆಗೆ ಪ್ರತಿಯಾಗಿ ಕಾರಣ ತೋರಿಸಲು ವ್ಯಾಪಾರಿಗೆ ಅವಕಾಶ ನೀಡಿದ ತರುವಾಯ, ನೋಟೀಸನ್ನು ಜಾರಿಗೊಳಿಸಿದ ದಿನಾಂಕದಿಂದ [2][ಮೂವತ್ತು ದಿನಗಳೊಳಗೆ][2] ತೆರಿಗೆಯನ್ನು ಸಂದಾಯ ಮಾಡತಕ್ಕದ್ದೆಂದು ಕೋರಿ [1][xxx][1] ವ್ಯಾಪಾರಿಗೆ ಮರು ನಿರ್ಧರಣೆಯ ಒಂದು ನೋಟೀಸನ್ನು ನೀಡತಕ್ಕದ್ದು.

1. 2007ರ ಅಧಿನಿಯಮ ಸಂಖ್ಯೆ 6ರ ಮೂಲಕ ದಿನಾಂಕ: 1.4.2007 ರಿಂದ ಬಿಟ್ಟುಬಿಡಲಾಗಿದೆ.
2. 2013ರ ಅಧಿನಿಯಮ ಸಂಖ್ಯೆ 32ರ ಮೂಲಕ ದಿನಾಂಕ: 01.04.2013ರಿಂದ ಪ್ರತ್ಯಾಯೋಜಿಸಲಾಗಿದೆ.

[1][ (2)ಈ ಪ್ರಕರಣದ ಅಡಿಯಲ್ಲಿ ಮರು ನಿರ್ಧರಣೆಯನ್ನು ಮಾಡಿದ ತರುವಾಯ,–

(ಎ) ಯಾವುದೇ ಹೆಚ್ಚಿನ ಸಾಕ್ಷ್ಯವು ನಿಯಮಿಸಲಾದ ಪ್ರಾಧಿಕಾರದ ಗಮನಕ್ಕೆ ಬಂದಲ್ಲಿ, ಅಥವಾ

(ಬಿ) ನಿಯಮಿಸಲಾದ ಪ್ರಾಧಿಕಾರಕ್ಕೆ, ಯಾವುದೇ ತೆರಿಗೆ ಅವಧಿಯ ಸಂಬಂಧದಲ್ಲಿ ವ್ಯಾಪಾರಿಯ ವಹಿವಾಟಿನ ಸಂಪೂರ್ಣ ಅಥವಾ ಯಾವುದೇ ಭಾಗವು ತೆರಿಗೆಯ ಮರು ನಿರ್ಧರಣೆಯಿಂದ ತಪ್ಪಿ ಹೋಗಿದೆ ಎಂಬುದನ್ನು ನಂಬಲು ಕಾರಣವಿದ್ದರೆ; ಅಥವಾ

(ಸಿ) ತೆರಿಗೆಯು ಕಡಿಮೆಯಾಗಿ ಮರು ನಿರ್ಧರಣೆಯಾಗಿದ್ದಲ್ಲಿ; ಅಥವಾ

(ಡಿ) ಈ ಅಧಿನಿಯಮದ ಅಡಿಯಲ್ಲಿ ಯಾವ ದರದಲ್ಲಿ ತೆರಿಗೆಯನ್ನು ನಿರ್ಧರಿಸಬಹುದಾಗಿತ್ತೋ ಆ ದರಕ್ಕಿಂತ ಕಡಿಮೆ ದರದಲ್ಲಿ ಮರು ನಿರ್ಧರಿಸಿದ್ದರೆ; ಅಥವಾ

(ಇ) ಅದರ ಸಂಬಂಧದಲ್ಲಿ ಯಾವುವೇ ಕಡಿತಗಳು ಅಥವಾ ವಿನಾಯಿತಿಗಳಿಗೆ ತಪ್ಪಾಗಿ ಅವಕಾಶ ನೀಡಲಾಗಿದ್ದರೆ,

– ನಿಯಮಿಸಲಾದ ಪ್ರಾಧಿಕಾರವು, ವಹಿವಾಟಿನ ಅಂಥ ತಪ್ಪಿ ಹೋದ ಸಂಪೂರ್ಣ ಅಥವಾ ಅದರ ಭಾಗವು ಮರು ನಿರ್ಧರಣೆಯ ಕಾಲದಲ್ಲಿ ಸದರಿ ಪ್ರಾಧಿಕಾರದ ಮುಂದೆ ಈಗಾಗಲೇ ಬಂದಿತ್ತೆಂಬ ವಾಸ್ತವಾಂಶ ಏನೇ ಇದ್ದರೂ, ಅಂಥ ಮೊದಲಿನ ಮರು ನಿರ್ಧರಣೆಗೆ ಹೆಚ್ಚುವರಿಯಾಗಿ ಯಾವುದೇ ಮತ್ತಷ್ಟು ಮರು ನಿರ್ಧರಣೆ ಮಾಡಬಹುದು][1].

1. 2013ರ ಅಧಿನಿಯಮ ಸಂಖ್ಯೆ 32ರ ಮೂಲಕ ದಿನಾಂಕ: 01.04.2013ರಿಂದ ಪ್ರತ್ಯಾಯೋಜಿಸಲಾಗಿದೆ.

**40. ತೆರಿಗೆ ನಿರ್ಧರಣೆಗಾಗಿ ಕಾಲಮಿತಿ.–** [2][[1][(1) ಯಾವುದೇ ನಿಯಮಿಸಲಾದ ತೆರಿಗೆ ಅವಧಿಗಾಗಿ ಸಲ್ಲಿಸಬೇಕಾದ ತೆರಿಗೆಯ ಮೊಬಲಗಿನ ಸಂಬಂಧದಲ್ಲಿ 38ನೇ ಪ್ರಕರಣದ ಅಡಿಯಲ್ಲಿ ತೆರಿಗೆ ನಿರ್ಧರಣೆಯನ್ನು ಅಥವಾ 39ನೇ ಪ್ರಕರಣದ ಅಡಿಯಲ್ಲಿ ತೆರಿಗೆ ಮರು ನಿರ್ಧರಣೆಯನ್ನು, ನಿಯಮಿಸಲಾದ ತೆರಿಗೆ ಅವಧಿಯ ಮುಕ್ತಾಯದ ತರುವಾಯ ಐದು ವರ್ಷಗಳ ನಂತರ ಮಾಡತಕ್ಕದ್ದಲ್ಲ:

ಪರಂತು, 2007ರ ಮಾರ್ಚ್ 31ಕ್ಕೆ ಕೊನೆಗೊಳ್ಳುವವರೆಗಿನ ಅವಧಿಯವರೆಗಿನ ಯಾವುದೇ ತೆರಿಗೆ ಅವಧಿಗೆ ಸಂಬಂಧಿಸಿದ ತೆರಿಗೆ ನಿರ್ಧರಣೆ ಅಥವಾ ತೆರಿಗೆ ಮರು ನಿರ್ಧರಣೆಯನ್ನು ನಿಯಮಿಸಲಾದ ತೆರಿಗೆ ಅವಧಿಯು ಮುಕ್ತಾಯವಾದ ತರುವಾಯ ಎಂಟು ವರ್ಷಗಳ ಅವಧಿಯೊಳಗೆ ಮಾಡತಕ್ಕದ್ದು:

ಮತ್ತು ಪರಂತು, 2007ರ ಏಪ್ರಿಲ್ 1ನೇ ದಿನಾಂಕದಿಂದ ಆರಂಭವಾಗಿ 2012ರ ಮಾರ್ಚ್ 31ನೇ ದಿನಾಂಕಕ್ಕೆ ಕೊನೆಗೊಳ್ಳುವ ಅವಧಿಯವರೆಗಿನ ಯಾವುದೇ ತೆರಿಗೆ ಅವಧಿಗೆ ಸಂಬಂಧಿಸಿದ ತೆರಿಗೆ ನಿರ್ಧರಣೆಯನ್ನು ಅಥವಾ ಮರು

ತೆರಿಗೆ ನಿರ್ಧರಣೆಯನ್ನು ನಿಯಮಿಸಲಾದ ತೆರಿಗೆ ಅವಧಿಯು ಮುಕ್ತಾಯವಾದ ತರುವಾಯ**ಹತ್ತು ವರ್ಷಗಳು** ವ ಅವಧಿಯೊಳಗೆ ಮಾಡತಕ್ಕದ್ದು.

(2) (1)ನೇ ಉಪಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ನೋಂದಾಯಿತನಾಗಲು ಬದ್ಧನಾಗಿದ್ದಾಗ್ಯೂ ಹಾಗೆ ಮಾಡಲು ತಪ್ಪಿದ ಒಬ್ಬ ವ್ಯಾಪಾರಿಯು ಯಾವುದೇ ತೆರಿಗೆಯನ್ನು ಸಂದಾಯ ಮಾಡದಿದ್ದಲ್ಲಿ ಅಥವಾ ತೆರಿಗೆಯನ್ನು ಮೋಸದಿಂದ ವಂಚಿಸಿ 79ನೇ ಪ್ರಕರಣದ ಅಡಿಯಲ್ಲಿ ಶಿಕ್ಷೆಗೆ ಗುರಿಯಾಗುವ ಯಾವುದೇ ವ್ಯಾಪಾರಿಯ ಸಂದರ್ಭದಲ್ಲಿ, ನಿಯಮಿಸಲಾದ ತೆರಿಗೆ ಅವಧಿಯ ಮುಕ್ತಾಯದಿಂದ ಎಂ**ಟು ವರ್ಷಗಳ** ಅವಧಿಯೊ ಳಗೆ ತೆರಿಗೆ ನಿರ್ಧರಣೆಯನ್ನು ಮಾಡಬಹುದು ಅಥವಾ ಮರು ನಿರ್ಧರಣೆಯನ್ನು ಮಾಡಬಹುದು:

ಪರಂತು, 2007ರ ಮಾರ್ಚ್ 31ನೇ ದಿನಾಂಕಕ್ಕೆ ಕೊನೆಗೊಳ್ಳುವ ಅವಧಿಯವರೆಗೆ ಯಾವುದೇ ತೆರಿಗೆ ಅವಧಿಗೆ ಸಂಬಂಧಿಸಿದ ತೆರಿಗೆ ನಿರ್ಧರಣೆ ಅಥವಾ ತೆರಿಗೆಯ ಮರು ನಿರ್ಧರಣೆಯನ್ನು ನಿಯಮಿಸಲಾದ ತೆರಿಗೆ ಅವಧಿಯು ಕೊನೆಗೊಂಡ ತರುವಾಯ ಹತ್ತು ವರ್ಷಗಳ ಅವಧಿಯೊಳಗೆ ಈ ಉಪಪ್ರಕರಣದಡಿಯಲ್ಲಿ ಮಾಡತಕ್ಕದ್ದು.][1]][2]

1. 2012ರ ಅಧಿನಿಯಮ ಸಂಖ್ಯೆ 17ರ ಮೂಲಕ ದಿನಾಂಕ: 1.4.2012 ರಿಂದ ಪ್ರತಿಯೋಜಿಸಲಾಗಿದೆ.
2. 2013ರ ಅಧಿನಿಯಮ ಸಂಖ್ಯೆ 54ರ ಮೂಲಕ ದಿನಾಂಕ: 1.4.2005 ರಿಂದ ಪ್ರತಿಯೋಜಿಸಲಾಗಿದೆ.

(3) ಈ ಅಧಿನಿಯಮದ ಅಡಿಯಲ್ಲಿ ತೆರಿಗೆ ನಿರ್ಧರಣೆಗಾಗಿ ಅಥವಾ ಸಂದರ್ಭಾನುಸಾರ ತೆರಿಗೆಯ ಮರು ನಿರ್ಧರಣೆಗಾಗಿ ನಿರ್ದಿಷ್ಟಪಡಿಸಿದ ಕಾಲಪರಿಮಿತಿಯ ಅವಧಿಯನ್ನು ಲೆಕ್ಕಹಾಕುವಾಗ, ತೆರಿಗೆ ನಿರ್ಧರಣೆಯ ಅಥವಾ ಇತರ ವ್ಯವಹರಣೆಯ ವಿರುದ್ಧದ ಯಾವುದೇ ಅಪೀಲಿನ ವಿಲೆಗಾಗಿ ಅಪೀಲು ಪ್ರಾಧಿಕಾರ, ನ್ಯಾಯಾಧಿಕರಣ ಅಥವಾ ಸಕ್ಷಮ ನ್ಯಾಯಾಲಯವು ತೆಗೆದುಕೊಂಡ ಅವಧಿಯನ್ನು ತೆರಿಗೆ ನಿರ್ಧರಣೆ ಅಥವಾ ಸಂದರ್ಭಾನುಸಾರ ತೆರಿಗೆಯ ಮರುನಿರ್ಧರಣೆಗಾಗಿನ ಅಂಥ ಅವಧಿಯನ್ನು ಗಣನೆಗೆ ತೆಗೆದುಕೊಳ್ಳುವಲ್ಲಿ ಲೆಕ್ಕಕ್ಕೆ ತೆಗೆದುಕೊಳ್ಳತಕ್ಕದ್ದಲ್ಲ.

**41. ಕೆಲವು ಸಂದರ್ಭಗಳಲ್ಲಿ ತೆರಿಗೆ ನಿರ್ಧರಣೆಯನ್ನು ಅಥವಾ ತೆರಿಗೆಯ ಮರುನಿರ್ಧರಣೆಯನ್ನು ಸರಿಪಡಿಸುವ ಅಧಿಕಾರ.**- (1) ಒಂದು ನ್ಯಾಯಾಲಯದ ಅಥವಾ ನ್ಯಾಯಾಧಿಕರಣದ ಹೊರತಾಗಿ ಅಪೀಲು ಪ್ರಾಧಿಕಾರದ ಅಥವಾ ಪುನರೀಕ್ಷಣಾ ಪ್ರಾಧಿಕಾರದ ಯಾವುದೇ ತೆರಿಗೆ ನಿರ್ಧರಣೆ ಅಥವಾ ತೆರಿಗೆಯ ಮರು ನಿರ್ಧರಣೆ ಅಥವಾ ಒಂದು ಆದೇಶವು, ಯಾವುದೇ ನ್ಯಾಯಾಲಯದ ತೀರ್ಪು ಅಥವಾ ಆದೇಶದ ಮೂಲಕವಾದ ಸಾರ್ವಜನಿಕ ರಾಜಸ್ವದ ಹಿತಾಸಕ್ತಿಗೆ ಬಾಧಕವಾಗುವಷ್ಟರ ಮಟ್ಟಿಗೆ ತಪ್ಪಾಗಿದೆಯೆಂದು ಕಂಡು ಬಂದಲ್ಲಿ ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದಾಗ್ಯೂ, ಸಂಬಂಧಪಟ್ಟ ಪ್ರಾಧಿಕಾರವು, ಅಂಥ ತೆರಿಗೆ ನಿರ್ಧರಣೆಯನ್ನು ಅಥವಾ ಮರು ತೆರಿಗೆ ನಿರ್ಧರಣೆಯನ್ನು ಅಥವಾ ಆದೇಶವನ್ನು ಸರಿಪಡಿಸಲು ಕ್ರಮಕೈಗೊಳ್ಳಲು ಮುಂದುವರಿಯಬಹುದು ಮತ್ತು ಅಂಥ ತೀರ್ಪು ಅಥವಾ ಆದೇಶದ ದಿನಾಂಕದಿಂದ ಮೂರು ವರ್ಷಗಳ ಅವಧಿಯೊಳಗೆ ಯಾವುದೇ ಸಮಯದಲ್ಲಿ ಅಂಥ ತೀರ್ಪು ಅಥವಾ ಆದೇಶಕ್ಕನುಸಾರವಾಗಿ ವ್ಯಾಪಾರಿಯು ಸಂದಾಯಮಾಡಬೇಕಾದ ತೆರಿಗೆಯನ್ನು ನಿರ್ಧರಿಸಬಹುದು.

(2) ಈ ಅಧಿನಿಯಮದ ಅಥವಾ ಇತರ ಯಾವುದೇ ಕಾನೂನಿನ ಅಡಿಯಲ್ಲಿ ಮಾಡಿದ ಯಾವುದೇ ತೆರಿಗೆ ನಿರ್ಧರಣೆಯನ್ನು ಈಗಾಗಲೇ ಯಾವ ಕಾನೂನಿನ ಅಡಿಯಲ್ಲಿ ನಿರ್ಧರಣೆ ಮಾಡಲಾಗಿತ್ತೋ ಅದಕ್ಕೆ ಬದಲಾಗಿ ಬೇರೊಂದು ಕಾನೂನಿನ ಉಪಬಂಧದ ಅಡಿಯಲ್ಲಿ ತೆರಿಗೆ ನಿರ್ಧರಣೆಯನ್ನು ಮಾಡಬೇಕಾಗಿತ್ತು ಎಂಬುದಾಗಿ ಯಾವುದೇ ನ್ಯಾಯಾಲಯ ಅಥವಾ ನ್ಯಾಯಾಧಿಕರಣವು ಆದೇಶ ಮಾಡಿದ್ದರೆ ಅಥವಾ ತೀರ್ಪು ನೀಡಿದ್ದರೆ, ಆಗ ಯಾವುದೇ ಅಂಥ ಆದೇಶ ಅಥವಾ ತೀರ್ಪಿನ ಪರಿಣಾಮವಾಗಿ ಅಥವಾ ಅಂಥ ಯಾವುದೇ ಆದೇಶ ಅಥವಾ ತೀರ್ಪಿನಲ್ಲಿ ಒಳಗೊಂಡಿರುವ ಯಾವುದೇ ನಿರ್ಣಯ ಅಥವಾ ನಿರ್ದೇಶನವನ್ನು ಜಾರಿಗೊಳಿಸುವುದಕ್ಕಾಗಿ, ವಹಿವಾಟಿನ ಅಥವಾ ಅದರ ಭಾಗದ ತೆರಿಗೆಯ ನಿರ್ಧರಣೆ ಅಥವಾ ಸಂದರ್ಭಾನುಸಾರ ತೆರಿಗೆಯ ಮರು ನಿರ್ಧರಣೆಯನ್ನು, ನಿರ್ಧರಣೆ ಅಥವಾ ಮರು ನಿರ್ಧರಣೆಗೆ ಅನ್ವಯವಾಗುವ ಕಾನೂನಿನ ಮೇರೆಗೆ ಅನ್ಯಥಾ ಅನ್ವಯವಾಗುವ ಕಾಲಮಿತಿ ಅವಧಿಯು ಏನೇ ಇದ್ದರೂ, ಅಂಥ ಆದೇಶ ಅಥವಾ ತೀರ್ಪಿನ ದಿನಾಂಕದಿಂದ ಐದು ವರ್ಷಗಳ ಒಳಗೆ ಯಾವುದೇ ಸಮಯದಲ್ಲಿ ಮಾಡಬಹುದು.

(3) ಸಂದಾಯ ಮಾಡದೇ ಉಳಿದ ಯಾವುದೇ ತೆರಿಗೆ, ದಂಡ, ಬಡ್ಡಿ ಅಥವಾ ಅದರ ಯಾವುದೇ ಉಳಿದ ಭಾಗಕ್ಕಾಗಿ ಯಾವುವೇ ವ್ಯವಹರಣೆಗಳು ಒಂದು ನ್ಯಾಯಾಲಯದಲ್ಲಿ ಪ್ರಾರಂಭವಾಗಿದ್ದು ಮತ್ತು ಅಪೀಲಿನಲ್ಲಿ ಮಾಡಿದ ಯಾವುದೇ ತೀರ್ಮಾನದ ಅಥವಾ ಹೊರಡಿಸಿದ ಆದೇಶದ ಪರಿಣಾಮದಿಂದಾಗಿ ತೆರಿಗೆ, ದಂಡ ಅಥವಾ ಬಡ್ಡಿಯ

ಮೊಬಲಗನ್ನು ಆ ತರುವಾಯ ಮಾರ್ಪಡಿಸಿದಲ್ಲಿ, ಹೆಚ್ಚಿಸಿದಲ್ಲಿ ಅಥವಾ ಇಳಿಸಿದಲ್ಲಿ, ನಿಯಮಿಸಲಾದ ಪ್ರಾಧಿಕಾರವು, ನಿಯಮಿಸಬಹುದಾದ ಅಂಥ ರೀತಿಯಲ್ಲಿ ಮತ್ತು ಅಂಥ ಅವಧಿಯೊಳಗೆ, ವ್ಯಾಪಾರಿಗೆ ಅಥವಾ ವ್ಯಕ್ತಿಗೆ ಮತ್ತು ಅಂಥ ವಸೂಲಿಯನ್ನು ಯಾರ ಆದೇಶದ ಅಡಿಯಲ್ಲಿ ಮಾಡಲಾಗುವುದೋ ಆ ಪ್ರಾಧಿಕಾರಕ್ಕೆ ತಿಳಿಸತಕ್ಕದ್ದು ಮತ್ತು ತದನಂತರ, ಅಂಥ ವ್ಯವಹರಣೆಗಳನ್ನು ಮಾರ್ಪಾಟಾದ, ಹೆಚ್ಚಿಸಿದ ಅಥವಾ ಇಳಿಸಿದ ತೆರಿಗೆ, ದಂಡ ಅಥವಾ ಬಡ್ಡಿಯ ಮೊತ್ತವನ್ನು ಪ್ರತಿಯೋಜಿಸುವುದರೊಂದಿಗೆ ಮುಂದುವರಿಸಬಹುದು.

(4) ಈ ಪ್ರಕರಣದ ಅಡಿಯಲ್ಲಿನ ತೆರಿಗೆಯ ಮರು ನಿರ್ಧಾರಣೆಯಲ್ಲಿನ ಯಾವುದೇ ಆದೇಶವನ್ನು, ವ್ಯಾಪಾರಿಗೆ ಅಂಥ ಸರಿಪಡಿಸುವಿಕೆಯ ವಿರುದ್ಧ ಲಿಖಿತದಲ್ಲಿ ಕಾರಣವನ್ನು ತೋರಿಸುವ ಅವಕಾಶವನ್ನು ನೀಡಿದ ಹೊರತು ಜಾರಿಗೊಳಿಸತಕ್ಕದ್ದಲ್ಲ.

**42. ತೆರಿಗೆ, ದಂಡಗಳು, ಬಡ್ಡಿ ಮತ್ತು ಇತರ ಮೊಬಲಗುಗಳ ಸಂದಾಯ ಮತ್ತು ವಸೂಲಿ, [1][ತೀರುವಳಿ ಪ್ರಮಾಣ ಪತ್ರಗಳ ನೀಡಿಕೆ][1].–** (1) ಪ್ರತಿಯೊಬ್ಬ ನೋಂದಾಯಿತ ವ್ಯಾಪಾರಿಯು, ನಿಯಮಿಸಲಾದ ಪ್ರಾಧಿಕಾರಕ್ಕೆ ವಿವರ ಪಟ್ಟಿಗಳನ್ನು ಸಲ್ಲಿಸತಕ್ಕದ್ದು ಮತ್ತು ಸಂದಾಯ ಮಾಡಬೇಕಾದ ತೆರಿಗೆಯನ್ನು ನಿರ್ದಿಷ್ಟಪಡಿಸಿದ ಅವಧಿಯೊಳಗೆ ನಿಯಮಿಸಬಹುದಾದಂಥ ರೀತಿಯಲ್ಲಿ ಸಂದಾಯ ಮಾಡತಕ್ಕದ್ದು ಮತ್ತು ವ್ಯಾಪಾರಿಯು ಸಲ್ಲಿಸಿದ ಅರ್ಜಿಯ ಮೇಲೆ, ನಿಯಮಿಸಬಹುದಾದಂತೆ ಅಂಥ ಕಂತುಗಳಲ್ಲಿ ಮತ್ತು ಅಂಥ ಅಂತರಗಳಲ್ಲಿ ತೆರಿಗೆಯ ಅಥವಾ ಸಂದಾಯ ಮಾಡಬೇಕಾದ ಯಾವುದೇ ಮೊಬಲಗಿನ ಸಂದಾಯವನ್ನು ನಿಯಮಿಸಬಹುದಾದಂತೆ ಅಂಥ ಷರತ್ತುಗಳಿಗೆ ಒಳಪಟ್ಟು ಸರ್ಕಾರ ಅಥವಾ ಆಯುಕ್ತನು ಅನುಮತಿಸಬಹುದು.

1. 2006ರ ಅಧಿನಿಯಮ ಸಂಖ್ಯೆ 4ರ ಮೂಲಕ ದಿನಾಂಕ: 1.4.2006 ರಿಂದ ಸೇರಿಸಲಾಗಿದೆ

(2) ಪ್ರತಿಯೊಬ್ಬ ನೋಂದಾಯಿತ ವ್ಯಾಪಾರಿಯು ನಿಯಮಿಸಲಾದ ಪ್ರಾಧಿಕಾರದಿಂದ ಒಂದು ನೋಟೀಸನ್ನು ಸ್ವೀಕರಿಸಿದ್ದರ ಮೇಲೆ ನಿಯಮಿಸಬಹುದಾದಂತೆ ಅಂಥ ರೀತಿಯಲ್ಲಿ, ಯಾವುದೇ ದಂಡ ಅಥವಾ ಬಡ್ಡಿಯನ್ನು ಸಂದಾಯ ಮಾಡತಕ್ಕದ್ದು.

(3)[1][(ಎ) ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದಾಗ್ಯೂ, ಸರ್ಕಾರವು, ನಿಯಮಿಸಬಹುದಾದಂಥ ಸನ್ನಿವೇಶಗಳಲ್ಲಿ ಮತ್ತು ಅಂಥ ಷರತ್ತುಗಳಿಗೆ ಒಳಪಟ್ಟು, ಅಧಿಸೂಚನೆಯ ಮೂಲಕ, ಯಾವುದೇ ಹೊಸ ಕೈಗಾರಿಕಾ ಘಟಕದ ಸಂಬಂಧದಲ್ಲಿ ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮ, 1957ರ (1957ರ ಕರ್ನಾಟಕ ಅಧಿನಿಯಮ ಸಂಖ್ಯೆ 25) ಉಪಬಂಧಗಳ ಅಡಿಯಲ್ಲಿ ಅಂಥ ಹೊಸ ಕೈಗಾರಿಕಾ ಘಟಕದ ಸಂಬಂಧದಲ್ಲಿ ಸರ್ಕಾರವು ಈಗಾಗಲೇ ತೆರಿಗೆ ಸಂದಾಯದ ಮುಂದೂಡುವಿಕೆಯನ್ನು ಅಧಿಸೂಚಿಸಿದೆ ಎಂಬ ಷರತ್ತಿಗೆ ಒಳಪಟ್ಟು ಯಾವುದೇ ಅವಧಿಗೆ ಸಂಬಂಧಪಟ್ಟಂತೆ ಅದು ಸಂದಾಯ ಮಾಡಬೇಕಾದ ತೆರಿಗೆಯನ್ನು ಪೂರ್ಣವಾಗಿ ಅಥವಾ ಭಾಗಶಃ ಸಂದಾಯ ಮಾಡುವುದನ್ನು ಮುಂದೂಡಬಹುದು ಮತ್ತು ಯಾವುದೇ ಮುಂದೂಡಿದ ಅವಧಿಯು ಮುಕ್ತಾಯವಾಗುವುದಕ್ಕೆ ಮೊದಲು ಅಂಥ ತೆರಿಗೆಯ ಸಂದಾಯಕ್ಕೆ ಸಹ ಅನುಮತಿಸಬಹುದು.][1]

1. 2006ರ ಅಧಿನಿಯಮ ಸಂಖ್ಯೆ 4ರ ಮೂಲಕ ದಿನಾಂಕ: 11.3.2005 ರಿಂದ ಪ್ರತಿಯೋಜಿಸಲಾಗಿದೆ.

(ಬಿ) ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದರೂ, ಆದರೆ ಸರ್ಕಾರವು ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ನಿರ್ದಿಷ್ಟ ಪಡಿಸಬಹುದಾದ ಅಂಥ ಷರತ್ತುಗಳಿಗೆ ಒಳಪಟ್ಟು, ಕಾಲಕಾಲಕ್ಕೆ ಸರ್ಕಾರವು ಹೊರಡಿಸಿದ ಆದೇಶಗಳ ಮೇರೆಗೆ, ಮುಂದೂಡುವಿಕೆಯ ಮೂಲಕ, ಒಬ್ಬ ವ್ಯಾಪಾರಿಗೆ ಕೊಡಲಾದ ಪ್ರೋತ್ಸಾಹಕಗಳನ್ನು ಅರ್ಹತಾ ಪ್ರಮಾಣ ಪತ್ರದಿಂದಾಗಿ ಮಂಜೂರು ಮಾಡಲಾಗಿದ್ದಲ್ಲಿ ಮತ್ತು ಅಂಥ ವ್ಯಾಪಾರಿಯು ಸಂದಾಯ ಮಾಡಬೇಕಾದ ಯಾವುದೇ ಅಂಥ ತೆರಿಗೆ ಮೊಬಲಗಿಗೆ ಸಮಾನವಾದ ಬದ್ಧತೆಯನ್ನು ಕರ್ನಾಟಕ ಸರ್ಕಾರದ ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆಯ ಮೂಲಕ ಸಾಲವೆಂಬಂತೆ ಸೃಜಿಸಲಾಗಿದ್ದರೆ, ಸಾರ್ವಜನಿಕ ಹಿತಾಸಕ್ತಿಯಲ್ಲಿ ಅಂಥ ತೆರಿಗೆಯನ್ನು ಸಂದಾಯಮಾಡಲಾಗಿದೆ ಎಂದು ಭಾವಿಸತಕ್ಕದ್ದು.

(ಸಿ) ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದರೂ, (ಎ) ಖಂಡದ ಅಡಿಯಲ್ಲಿ ಮುಂದೂಡಿದ ತೆರಿಗೆಯ ಸಂದಾಯಕ್ಕೆ, 36ನೇ ಪ್ರಕರಣದ (2)ನೇ ಉಪಪ್ರಕರಣದ ಅಡಿಯಲ್ಲಿ ಬಡ್ಡಿ ಅನ್ವಯವಾಗತಕ್ಕದ್ದಲ್ಲ, ಪರಂತು, ಮುಂದೂಡಲಾದ ತೆರಿಗೆ ಸಂದಾಯಕ್ಕೆ ವಿಧಿಸಲಾದ ಷರತ್ತುಗಳನ್ನು ಪೂರೈಸಿರತಕ್ಕದ್ದು.

(4) ಈ ಅಧಿನಿಯಮದ ಅಡಿಯಲ್ಲಿ ಬಾಕಿ ಇರುವ ಇತರ ಯಾವುದೇ ಮೊಬಲಗನ್ನು, ಅನ್ಯಥಾ ನಿರ್ದಿಷ್ಟಪಡಿಸಿದ್ದ ಹೊರತು, ಅಂಥ ಮೊಬಲಗನ್ನು ವಿಧಿಸುವ ಆದೇಶವನ್ನು ಅಥವಾ ವ್ಯವಹರಣೆಗಳನ್ನು ಜಾರಿಗೊಳಿಸಿದ ದಿನಾಂಕದಿಂದ ಹತ್ತು ದಿನಗಳೊಳಗೆ ಸಂದಾಯ ಮಾಡತಕ್ಕದ್ದು.

(5) ಆಯುಕ್ತನು ಅಥವಾ ಸರ್ಕಾರವು, ತಾನು ನಿರ್ದಿಷ್ಟಪಡಿಸಬಹುದಾದ ಅಂಥ ಷರತ್ತುಗಳಿಗೆ ಒಳಪಟ್ಟು ಯಾವೊಬ್ಬ ವ್ಯಕ್ತಿ ಅಥವಾ ವ್ಯಕ್ತಿಗಳ ವರ್ಗವು ಯಾವುದೇ ಅವಧಿಗೆ ಸಂಬಂಧಪಟ್ಟಂತೆ ಸಂದಾಯ ಮಾಡಬೇಕಾದ ಬಡ್ಡಿಯನ್ನು ಪೂರ್ಣವಾಗಿ ಅಥವಾ ಭಾಗಶಃ ಆದೇಶದ ಮೂಲಕ ಮಾಫಿ ಮಾಡಬಹುದು.

(6) ಸಂದಾಯ ಮಾಡಿದ ಮೊಬಲಗು, ತೆರಿಗೆಯ ಅಥವಾ ಬಾಕಿ ಇರುವ ಯಾವುದೇ ಮೊಬಲಗಿನ ಮತ್ತು ಸಂದಾಯ ಮಾಡಬೇಕಾದ ಬಡ್ಡಿಯ ಒಟ್ಟಾರೆ ಮೊಬಲಗಿಗಿಂತ ಕಡಿಮೆಯಾಗಿದ್ದಲ್ಲಿ ಹಾಗೆ ಸಂದಾಯ ಮಾಡಲಾದ ಮೊಬಲಗನ್ನು ಸಂದಾಯ ಮಾಡಬೇಕಾದ ಬಡ್ಡಿಗೆ ಮೊದಲು ಹೊಂದಾಣಿಕೆ ಮಾಡತಕ್ಕದ್ದು ಮತ್ತು ಬಾಕಿ ಯಾವುದಾದರೂ ಉಳಿದಲ್ಲಿ ಅದನ್ನು ತೆರಿಗೆ ಅಥವಾ ಇತರ ಯಾವುದೇ ಬಾಕಿ ಇರುವ ಮೊಬಲಗಿಗೆ ಹೊಂದಾಣಿಕೆ ಮಾಡತಕ್ಕದ್ದು.

(7) ಒಬ್ಬ ನೋಂದಾಯಿತ ವ್ಯಾಪಾರಿಯು, ಈ ಅಧಿನಿಯಮಕ್ಕೆ ಅನುಸಾರವಾಗಿ ಒಂದು ಪರಿಷ್ಕೃತ ವಿವರ ಪಟ್ಟಿಯನ್ನು ಒದಗಿಸಿದ್ದು, ಅದು ಮೂಲ ವಿವರ ಪಟ್ಟಿಗೆ ಅನುಸಾರವಾಗಿ ಸಂದಾಯ ಮಾಡಿದ ಅಥವಾ ಸಂದಾಯ ಮಾಡಬೇಕಾದ ಬಾಕಿ ಮೊಬಲಗಿಗಿಂತ ಹೆಚ್ಚಿನ ತೆರಿಗೆ ಮೊಬಲಗನ್ನು ತೋರಿಸುತ್ತಿದ್ದಲ್ಲಿ, ಆ ಪರಿಷ್ಕೃತ ವಿವರ ಪಟ್ಟಿಯೊಂದಿಗೆ ನಿಯಮಿಸಬಹುದಾದಂತೆ ಅಂಥ ರೀತಿಯಲ್ಲಿ ಹಾಗೆ ಸಂದಾಯವಾಗಬೇಕಾದ ತೆರಿಗೆಯನ್ನು ಸಂದಾಯ ಮಾಡತಕ್ಕದ್ದು.

(8) ಸಂದಾಯದ ನಿಗದಿತ ದಿನಾಂಕದ ತರುವಾಯ ಈ ಅಧಿನಿಯಮದ ಅಡಿಯಲ್ಲಿ ಯಾವುದೇ ಮೊಬಲಗು ಸಂದಾಯವಾಗದೇ ಉಳಿದಿದ್ದಲ್ಲಿ ಅದನ್ನು ಈ ಅಧಿನಿಯಮದ ಅಡಿಯಲ್ಲಿ ನಿರ್ದಿಷ್ಟಪಡಿಸಿದ ರೀತಿಯಲ್ಲಿ ವ್ಯಾಪಾರಿಯಿಂದ ವಸೂಲಿ ಮಾಡತಕ್ಕದ್ದು.

(9) ಈ ಅಧಿನಿಯಮದ ಅಡಿಯಲ್ಲಿ ಒಬ್ಬ ವ್ಯಾಪಾರಿಯಿಂದ ಅಥವಾ ಯಾವೊಬ್ಬ ವ್ಯಕ್ತಿಯಿಂದ ಬಾಕಿ ಇರುವ ಅಥವಾ ನಿರ್ಧರಣೆ ಮಾಡಿದ ಯಾವುದೇ ತೆರಿಗೆ ಅಥವಾ ಬಾಕಿ ಇರುವ ಯಾವುದೇ ಇತರೆ ಮೊಬಲಗನ್ನು ಇತರ ಯಾವುದೇ ರೀತಿಯ ಸಂಗ್ರಹಣೆಗೆ ಪ್ರತಿಕೂಲ ಉಂಟುಮಾಡದೆ ಎಂದರೆ,-

(ಎ) ಅದು ಭೂ-ಕಂದಾಯದ ಬಾಕಿಯಾಗಿದ್ದರೆ ಹೇಗೋ ಹಾಗೆ ವಸೂಲಿ ಮಾಡತಕ್ಕದ್ದು. ಅಥವಾ

(ಬಿ) ನಿಯಮಿಸಬಹುದಾದಂಥ ರೀತಿಯಲ್ಲಿ, ನಿಯಮಿಸಲಾದ ಪ್ರಾಧಿಕಾರವು ಅಥವಾ ನಿಯಮಿಸಲಾದ ಅಧಿಕಾರಿಯು, ಅಂಥ ವ್ಯಾಪಾರಿಯ ಅಥವಾ ಯಾವೊಬ್ಬ ಇತರ ವ್ಯಕ್ತಿಯ ಯಾವುದೇ ಸ್ವತ್ತಿನ ಜಪ್ತಿ ಮತ್ತು ಮಾರಾಟದ ಮೂಲಕ ಅಥವಾ ಜಪ್ತಿ ಇಲ್ಲದೇ ಮಾರಾಟದ ಮೂಲಕ ವಸೂಲಿ ಮಾಡತಕ್ಕದ್ದು ಮತ್ತು ಅಂಥ ಮಾರಾಟದ ಸಂಬಂಧದಲ್ಲಿ ನೀಡಲಾದ ಯಾವುದೇ ನಿಯಮಿಸಲಾದ ಪ್ರಮಾಣ ಪತ್ರವನ್ನು ಅಂಥ ನ್ಯಾಯಾಲಯದ ಒಂದು ಡಿಕ್ರಿ ಎಂಬಂತೆ ಅದೇ ರೀತಿಯಲ್ಲಿ ಜಾರಿಗೊಳಿಸತಕ್ಕದ್ದು; ಅಥವಾ

(ಸಿ) ದಂಡ ಪ್ರಕ್ರಿಯಾ ಸಂಹಿತೆ, 1973 (1974ರ ಕೇಂದ್ರ ಅಧಿನಿಯಮ 2) ರಲ್ಲಿ ಏನೇ ಒಳಗೊಂಡಿದ್ದರೂ, ಯಾವೊಬ್ಬ ಮ್ಯಾಜಿಸ್ಟ್ರೇಟನಿಗೆ ಅರ್ಜಿ ಸಲ್ಲಿಸಿದಾಗ, ಅಂಥ ಮ್ಯಾಜಿಸ್ಟ್ರೇಟನು ವಿಧಿಸಿದ ದಂಡವಾಗಿದ್ದರೆ ಹೇಗೋ ಹಾಗೆ ವಸೂಲಿ ಮಾಡತಕ್ಕದ್ದು.

(10) ಈ ಅಧಿನಿಯಮದ ಅಡಿಯಲ್ಲಿ ಮಾಡಿದ ಯಾವುದೇ ಆದೇಶದ ಪರಿಷ್ಕರಣೆಗಾಗಿ ಒಬ್ಬ ವ್ಯಾಪಾರಿ ಅಥವಾ ಇತರ ವ್ಯಕ್ತಿಯು ಅಪೀಲು ಸಲ್ಲಿಸಿದ್ದಲ್ಲಿ ಅಥವಾ ಅರ್ಜಿ ಸಲ್ಲಿಸಿದ್ದಲ್ಲಿ ಮತ್ತು ತೆರಿಗೆಯ ಅಥವಾ ಇತರ ಮೊಬಲಗಿನ ಸಂದಾಯಕ್ಕೆ ಸಂಬಂಧಪಟ್ಟಂತೆ ಅಪೀಲು ಅಥವಾ ಪರಿಷ್ಕರಣ ಪ್ರಾಧಿಕಾರವು ಮಾಡಿದ ಆದೇಶವನ್ನು ಪಾಲಿಸಿದ್ದಲ್ಲಿ, ಪರಿಷ್ಕರಣೆಗಾಗಿನ ಅಂಥ ಅಪೀಲು ಅಥವಾ ಅರ್ಜಿಯು ವಿಲೆಯಾಗುವವರೆಗೆ ಈ ಪ್ರಕರಣದ ಅಡಿಯಲ್ಲಿ ವಸೂಲಾತಿಗಾಗಿ ಯಾವುದೇ ವ್ಯವಹರಣೆಯನ್ನು ಕೈಗೊಳ್ಳತಕ್ಕದ್ದಲ್ಲ ಅಥವಾ ಮುಂದುವರಿಸತಕ್ಕದ್ದಲ್ಲ.

(11) ಉಚ್ಚ ನ್ಯಾಯಾಲಯವು, ತಾನಾಗಿಯೇ ಆಗಲಿ ಅಥವಾ ಆಯುಕ್ತನು ಅಥವಾ ಆದೇಶದಿಂದ ಬಾಧಿತನಾದ ಯಾವೊಬ್ಬ ವ್ಯಕ್ತಿಯು ಸಲ್ಲಿಸಿದ ಅರ್ಜಿಯ ಮೇಲೆ (9)ನೇ ಉಪ-ಪ್ರಕರಣದ (ಸಿ) ಖಂಡದ ಅಡಿಯಲ್ಲಿ ಮ್ಯಾಜಿಸ್ಟ್ರೇಟನು ಮಾಡಿದ ಯಾವುದೇ ಆದೇಶವನ್ನು ಪರಿಷ್ಕರಿಸಬಹುದು.

[1][(12) ಈ ಅಧಿನಿಯಮದ ಅಡಿಯಲ್ಲಿ ತೆರಿಗೆ ಅಥವಾ ಯಾವುದೇ ಇತರ ಮೊಬಲಗಿನ ಸಂದಾಯ ಸಂಬಂಧದಲ್ಲಿ ತೀರುವಳಿ ಪ್ರಮಾಣಪತ್ರವನ್ನು ತೋರಿಸುವಂತೆ ಅಗತ್ಯಪಡಿಸುವ ಯಾವುದೇ ಕಾನೂನಿನ ಪಾಲನೆಯ ಉದ್ದೇಶಕ್ಕಾಗಿ, ನೋಂದಾಯಿತ ವ್ಯಾಪಾರಿಯು ನಿಯಮಿಸಲಾದ ಪ್ರಾಧಿಕಾರಕ್ಕೆ ಅರ್ಜಿಯನ್ನು ಸಲ್ಲಿಸಿದಾಗ, ನಿಯಮಿಸಲಾದ ಪ್ರಾಧಿಕಾರವು, ಈ ಅಧಿನಿಯಮದ ಅಡಿಯಲ್ಲಿ ಅಂಥ ನೋಂದಾಯಿತ ವ್ಯಾಪಾರಿಯಿಂದ ನಿರ್ಧರಿಸಿದ ತೆರಿಗೆಯ ಯಾವುದೇ ಮೊಬಲಗು ಅಥವಾ ಯಾವುದೇ ಇತರ ಮೊಬಲಗು ಬಾಕಿ ಇಲ್ಲದಿದ್ದರೆ ಅಥವಾ ಅಂಥ ವ್ಯಾಪಾರಿಯಿಂದ 35ನೇ ಪ್ರಕರಣದ (1)ನೇ ಉಪ ಪ್ರಕರಣದ ಉಪಬಂಧಗಳಿಗೆ ಅನುಸಾರವಾಗಿ ಸಂದಾಯಮಾಡತಕ್ಕ ಮೊಬಲಗಿನ ಯಾವುದೇ ತೆರಿಗೆ ಮೊಬಲಗು ಬಾಕಿ ಇಲ್ಲದಿದ್ದರೆ, ನಿಯಮಿಸಲಾದ ನಮೂನೆಯಲ್ಲಿ ತೀರುವಳಿ ಪ್ರಮಾಣ ಪತ್ರವನ್ನು ನೀಡತಕ್ಕದ್ದು.][1]

1. 2006ರ ಅಧಿನಿಯಮ ಸಂಖ್ಯೆ 4ರ ಮೂಲಕ ದಿನಾಂಕ: 1.4.2006 ರಿಂದ ಸೇರಿಸಲಾಗಿದೆ.

**43. ರಿಸೀವರನ ಕರ್ತವ್ಯಗಳು.-** (1) ಯಾವುದೇ ನ್ಯಾಯಾಲಯವು ನೇಮಕ ಮಾಡಿದ ಒಬ್ಬ ರಿಸೀವರನು, ರಿಸೀವರನ ಸ್ಥಾನಕ್ಕೆ ನೇಮಕಗೊಂಡ ಹದಿನಾಲ್ಕು ದಿನಗಳೊಳಗೆ ಅಥವಾ ರಾಜ್ಯದಲ್ಲಿ ಆಸ್ತಿಯನ್ನು ಸ್ವಾಧೀನಕ್ಕೆ ತೆಗೆದುಕೊಂಡ ತರುವಾಯ, ಇವುಗಳಲ್ಲಿ ಯಾವುದು ಮೊದಲೋ ಆಗ ಅದರ ಬಗ್ಗೆ ಲಿಖಿತದಲ್ಲಿ ಆಯುಕ್ತನಿಗೆ ಅಧಿಸೂಚಿಸತಕ್ಕದ್ದು.

(2) ಆಯುಕ್ತನು, ಯಾವ ವ್ಯಕ್ತಿಯ ಆಸ್ತಿಗಳು ರಿಸೀವರನ ಸ್ವಾಧೀನದಲ್ಲಿವೆಯೋ ಆ ವ್ಯಕ್ತಿಯು ಸಂದಾಯ ಮಾಡತಕ್ಕ ಅಥವಾ ಸಂದಾಯ ಮಾಡಬೇಕಾದ ಯಾವುದೇ ತೆರಿಗೆಯನ್ನು ಸಂದಾಯಮಾಡುವುದಕ್ಕಾಗಿ ಸಾಕಷ್ಟಾಗುವುದೆಂದು ಕಂಡು ಬರುವ ಮೊಬಲಗನ್ನು ಲಿಖಿತದಲ್ಲಿ ರಿಸೀವರನಿಗೆ ಅಧಿಸೂಚಿಸಬಹುದು.

(3) ಒಬ್ಬ ರಿಸೀವರನು, ರಿಸೀವರನ ಸಾಮರ್ಥ್ಯದಲ್ಲಿ ತಾನು ಧಾರಣ ಮಾಡಿದ ರಾಜ್ಯದಲ್ಲಿರುವ ಯಾವುದೇ ಆಸ್ತಿಯನ್ನು, ಆಯುಕ್ತನ ಅಥವಾ ಆತನಿಂದ ಪ್ರಾಧಿಕೃತನಾದ ಯಾವೊಬ್ಬ ಇತರ ಅಧಿಕಾರಿಯ ಲಿಖಿತ ಪೂರ್ವಾನುಮತಿಯಿಲ್ಲದೆ ತನ್ನ ವಶದಿಂದ ಬಿಟ್ಟುಕೊಡತಕ್ಕದ್ದಲ್ಲ.

(4) ಒಬ್ಬ ರಿಸೀವರನು,-

(ಎ) (2)ನೇ ಉಪ-ಪ್ರಕರಣದ ಅಡಿಯಲ್ಲಿ ಆಯುಕ್ತನು ಅಧಿಸೂಚಿಸಿದ ಮೊಬಲಗನ್ನು ಅಥವಾ ಆಯುಕ್ತನು ಆ ತರುವಾಯ ನಿಗದಿಪಡಿಸಬಹುದಾದಂತೆ ಅಂಥ ಕಡಿಮೆ ಮೊಬಲಗನ್ನು ಆಸ್ತಿಯ ಮಾರಾಟದ ಉತ್ಪತ್ತಿಯಿಂದ ತೆಗೆದಿಡತಕ್ಕದ್ದು;

(ಬಿ) ಆಸ್ತಿಯ ಮಾಲೀಕತ್ವ ಹೊಂದಿದ ವ್ಯಕ್ತಿಯು ಸಂದಾಯಮಾಡಬೇಕಾದ ತೆರಿಗೆಯ ಮೊಬಲಗಿನಷ್ಟರಮಟ್ಟಿಗೆ ಬದ್ಧನಾಗಿರತಕ್ಕದ್ದು; ಮತ್ತು

(ಸಿ) ಈ ಪ್ರಕರಣದ ಯಾವುದೇ ಉಪಬಂಧದಲ್ಲಿ ಏನೇ ಇದ್ದರೂ, ಈ ಪ್ರಕರಣದಲ್ಲಿ ಉಲ್ಲೇಖಿಸಲಾದ ತೆರಿಗೆಗಿಂತ ಆದ್ಯತೆ ಹೊಂದಿರುವ ಯಾವುದೇ ಋಣವನ್ನು ಸಂದಾಯ ಮಾಡಬಹುದು.

(5) ರಿಸೀವರನು, ಈ ಪ್ರಕರಣದ ಅಗತ್ಯತೆಗಳನ್ನು ಪಾಲಿಸಲು ವಿಫಲನಾದರೆ ಮತ್ತು ಅಷ್ಟರಮಟ್ಟಿಗೆ (2)ನೇ ಉಪ-ಪ್ರಕರಣದಲ್ಲಿ ಉಲ್ಲೇಖಿಸಲಾದ ತೆರಿಗೆ ಸಂಬಂಧದಲ್ಲಿ (4)ನೇ ಉಪಪ್ರಕರಣದ ಅಡಿಯಲ್ಲಿ ಸಂದಾಯಮಾಡುವುದಕ್ಕೆ ಅಗತ್ಯವಿರುವ ಯಾವುದೇ ಮೊಬಲಗಿನಷ್ಟನ್ನು ತೆಗೆದಿರಿಸಲು ರಿಸೀವರನು ವೈಯಕ್ತಿಕವಾಗಿ ಬದ್ಧನಾಗಿರುತ್ತಾನೆ.

(6) ಈ ಪ್ರಕರಣದಲ್ಲಿ "ರಿಸೀವರ್" ಎಂಬುದು, ರಾಜ್ಯದಲ್ಲಿರುವ ಆಸ್ತಿಯ ಸಂಬಂಧದಲ್ಲಿ,-

(ಎ) ಕಂಪನಿಯ ಒಬ್ಬ ಸಮಾಪಕ; ಅಥವಾ

(ಬಿ) ನ್ಯಾಯಾಲಯದ ಹೊರಗಿನ ಅಥವಾ ನ್ಯಾಯಾಲಯವು ನೇಮಕ ಮಾಡಿದ ಒಬ್ಬ ರಿಸೀವರ್; ಅಥವಾ

(ಸಿ) ಒಬ್ಬ ದಿವಾಳಿದಾರನಾದ ವ್ಯಕ್ತಿಗಾಗಿ ಒಬ್ಬ ಟ್ರಸ್ಟೀ; ಅಥವಾ

(ಡಿ) ಸ್ವಾಧೀನತೆ ಹೊಂದಿರುವ ಒಬ್ಬ ಅಡಮಾನ ಪಡೆದವ; ಅಥವಾ

(ಇ) ಮೃತನಾದ ವ್ಯಕ್ತಿಯ ಎಸ್ಟೇಟಿನ ಒಬ್ಬ ನಿರ್ವಾಹಕ; ಅಥವಾ

– ಕಾನೂನು ಬದ್ಧವಾಗಿ ಅಸಮರ್ಥಗೊಳಿಸಲಾದ ಒಬ್ಬ ವ್ಯಕ್ತಿಯ ವ್ಯವಹಾರವನ್ನು ನಡೆಸುತ್ತಿರುವ ಯಾವೊಬ್ಬ ಇತರ ವ್ಯಕ್ತಿಯನ್ನು,

– ಒಳಗೊಳ್ಳುತ್ತದೆ.

**44. ಕಂಪೆನಿಗಳಿಗೆ ಸಂಬಂಧಪಟ್ಟಂತೆ ವಿಶೇಷ ಉಪಬಂಧಗಳು.–** (1) ಕಂಪೆನಿಗಳ ಅಧಿನಿಯಮ 1956ರಲ್ಲಿ (1956ರ 1) ಏನೇ ಒಳಗೊಂಡಿದ್ದರೂ, ಈ ಅಧಿನಿಯಮದ ಅಡಿಯಲ್ಲಿ, ಯಾವುದೇ ಅವಧಿಗಾಗಿ ಒಂದು ಕಂಪನಿಯಿಂದ ಯಾವುದೇ ತೆರಿಗೆ ಬಾಕಿ ಇದ್ದಾಗ ಅಥವಾ ಅದರ ತೆರಿಗೆ ನಿರ್ಧರಣೆ ಮಾಡಿದ್ದು, ಅದನ್ನು ವಸೂಲಿ ಮಾಡದಿದ್ದಾಗ, ಆಗ ತೆರಿಗೆಯು ಬಾಕಿ ಇದ್ದ ಅವಧಿಯ ಯಾವುದೇ ಸಮಯದಲ್ಲಿ ಆ ಕಂಪನಿಯ ನಿರ್ದೇಶಕನಾಗಿರುವ ಅಥವಾ ನಿರ್ದೇಶಕನಾಗಿದ್ದ ಪ್ರತಿಯೊಬ್ಬ ವ್ಯಕ್ತಿಯು, ಆ ಕಂಪನಿಯ ವ್ಯವಹಾರಗಳ ಸಂಬಂಧದಲ್ಲಿ ತೆರಿಗೆ ವಸೂಲಿ ಮಾಡಿಲ್ಲದಿರುವುದು ತನ್ನಿಂದ ಕರ್ತವ್ಯದ ಯಾವುದೇ ಒಟ್ಟಾರೆ ಉಪೇಕ್ಷೆ, ತಪ್ಪು ಗ್ರಹಿಕೆ ಅಥವಾ ಕರ್ತವ್ಯ ಲೋಪದಿಂದ ಉಂಟಾದದ್ದಲ್ಲವೆಂಬುದನ್ನು ರುಜುವಾತುಪಡಿಸಿದ ಹೊರತು, ಅಂಥ ತೆರಿಗೆ ಸಂದಾಯಕ್ಕಾಗಿ ಜಂಟಿಯಾಗಿ ಮತ್ತು ಪ್ರತ್ಯೇಕವಾಗಿ ಹೊಣೆಗಾರರಾಗಿರತಕ್ಕದ್ದು.

(2) (ಎ) ಈ ಅಧಿನಿಯಮದ ಅಡಿಯಲ್ಲಿ ಅಪರಾಧವನ್ನು ಮಾಡುವ ವ್ಯಕ್ತಿಯು ಒಂದು ಕಂಪೆನಿಯಾಗಿದ್ದರೆ, ಆ ಕಂಪೆನಿಯು ಮತ್ತು ಅಪರಾಧವು ನಡೆದ ಕಾಲದಲ್ಲಿ ಅದರ ವ್ಯವಹಾರವನ್ನು ನಡೆಸುವುದಕ್ಕಾಗಿ ಕಂಪೆನಿಯ ಪ್ರಭಾರದಲ್ಲಿರುವ ಅಥವಾ ಅದಕ್ಕೆ ಜವಾಬ್ದಾರನಾದ ಪ್ರತಿಯೊಬ್ಬ ವ್ಯಕ್ತಿಯು ಆ ಅಪರಾಧದ ಬಗ್ಗೆ ತಪ್ಪಿತಸ್ಥನಾಗಿರುವುದಾಗಿ ಭಾವಿಸತಕ್ಕದ್ದು ಮತ್ತು ತದನುಸಾರವಾಗಿ ತನ್ನ ವಿರುದ್ಧ ವ್ಯವಹರಣೆಗೆ ಬದ್ಧನಾಗಿರತಕ್ಕದ್ದು ಮತ್ತು ಶಿಕ್ಷೆಗೆ ಗುರಿಯಾಗತಕ್ಕದ್ದು;

(ಬಿ) ಮೇಲಿನ (ಎ) ಖಂಡದಲ್ಲಿ ಉಲ್ಲೇಖಿಸಲಾದ ಅಂಥ ಯಾವೊಬ್ಬ ವ್ಯಕ್ತಿಯು, ಅಪರಾಧವು ತನಗೆ ತಿಳಿಯದಂತೆ ನಡೆಯಿತೆಂದು ಅಥವಾ ಅಂಥ ಅಪರಾಧ ನಡೆಯುವುದನ್ನು ತಡೆಗಟ್ಟಲು ಎಲ್ಲಾ ಯುಕ್ತ ಜಾಗರೂಕತೆ ವಹಿಸಿದ್ದನೆಂದು ಅವನು ರುಜುವಾತುಪಡಿಸಿದರೆ ಅವನು ಯಾವುದೇ ಶಿಕ್ಷೆಗೆ ಗುರಿಯಾಗತಕ್ಕದ್ದಲ್ಲ;

(ಸಿ) ಮೇಲಿನ (ಎ) ಖಂಡದಲ್ಲಿ ಏನೇ ಒಳಗೊಂಡಿದ್ದರೂ, ಈ ಅಧಿನಿಯಮದ ಅಡಿಯಲ್ಲಿ ಒಂದು ಅಪರಾಧವನ್ನು ಕಂಪೆನಿಯು ಮಾಡಿರುವಲ್ಲಿ ಮತ್ತು ಅಪರಾಧವು ಕಂಪನಿಯ ಯಾವೊಬ್ಬ ನಿರ್ದೇಶಕ, ವ್ಯವಸ್ಥಾಪಕ, ವ್ಯವಸ್ಥಾಪಕ ಏಜೆಂಟ್ ಅಥವಾ ಇತರ ಯಾವೊಬ್ಬ ಅಧಿಕಾರಿಯ ಸಮ್ಮತಿಯಿಂದ ಅಥವಾ ಪರೋಕ್ಷ ಸಮ್ಮತಿಯಿಂದ ನಡೆಯಿತೆಂದು ರುಜುವಾತಾದಲ್ಲಿ ಅಥವಾ ಯಾವುದೇ ನಿರ್ಲಕ್ಷ್ಯತೆಯಿಂದ ನಡೆಯಿತೆಂದು ಆರೋಪಿಸ ಬಹುದಾಗಿರುವಲ್ಲಿ ಅಂಥ ನಿರ್ದೇಶಕ, ವ್ಯವಸ್ಥಾಪಕ, ವ್ಯವಸ್ಥಾಪಕ ಏಜೆಂಟ್ ಅಥವಾ ಯಾವೊಬ್ಬ ಇತರ ಅಧಿಕಾರಿಯನ್ನು ಸಹ ಅಂಥ ಅಪರಾಧದ ಬಗ್ಗೆ ತಪ್ಪಿತಸ್ಥನೆಂದು ಭಾವಿಸತಕ್ಕದ್ದು ಮತ್ತು ತದನುಸಾರವಾಗಿ ಅವರ ವಿರುದ್ಧದ ವ್ಯವಹರಣೆಗೆ ಮತ್ತು ಶಿಕ್ಷೆಗೆ ಗುರಿಯಾಗತಕ್ಕದ್ದು.

(3) ಒಂದು ನ್ಯಾಯಾಲಯದ ಅಥವಾ ಕೇಂದ್ರ ಸರ್ಕಾರದ ಆದೇಶದಿಂದ ಎರಡು ಅಥವಾ ಹೆಚ್ಚಿನ ಕಂಪನಿಗಳನ್ನು ಸಮ್ಮಿಳಿತಗೊಳಿಸಬೇಕಾದಾಗ ಮತ್ತು ಆದೇಶದ ದಿನಾಂಕಕ್ಕೆ ಮೊದಲಿನ ಒಂದು ದಿನಾಂಕದಿಂದ ಆದೇಶವು ಪರಿಣಾಮಕಾರಿಯಾಗಬೇಕಾಗಿದ್ದರೆ ಮತ್ತು ಅಂಥ ಆದೇಶವು ಯಾವ ದಿನಾಂಕದಂದು ಪ್ರಾರಂಭವಾಗಬೇಕಾಗಿತ್ತೋ ಆ ದಿನಾಂಕದಿಂದ ಮತ್ತು ಆದೇಶದ ದಿನಾಂಕಕ್ಕೆ ಮುಕ್ತಾಯಗೊಂಡ ಅವಧಿಯಲ್ಲಿ ಅಂಥ ಎರಡು ಅಥವಾ ಹೆಚ್ಚಿನ ಕಂಪೆನಿಗಳು ಪರಸ್ಪರ ಯಾವುವೇ ಸರಕುಗಳನ್ನು ಮಾರಾಟ ಮಾಡಿದ್ದರೆ ಅಥವಾ ಖರೀದಿಸಿದ್ದರೆ, ಆಗ, ಅಂಥ ಮಾರಾಟ ಅಥವಾ ಖರೀದಿಯ ವ್ಯವಹಾರಗಳನ್ನು ಸಂಬಂಧಪಟ್ಟ ಕಂಪೆನಿಗಳ ಮಾರಾಟ ಅಥವಾ ಖರೀದಿಯ ವಹಿವಾಟಿನಲ್ಲಿ ಸೇರಿಸಲಾಗುವುದು ಮತ್ತು ತದನುಸಾರವಾಗಿ, ತೆರಿಗೆ ನಿರ್ಧರಣೆ ಮಾಡಲಾಗುವುದು ಮತ್ತು ಸದರಿ ಎರಡು ಅಥವಾ ಹೆಚ್ಚಿನ ಕಂಪೆನಿಗಳನ್ನು ಸದರಿ ಆದೇಶದ ದಿನಾಂಕದವರೆಗಿನ ಎಲ್ಲಾ ಅವಧಿಗಳಿಗಾಗಿ ಬೇರೆ ಬೇರೆ ಕಂಪೆನಿಗಳೆಂದು ಪರಿಗಣಿಸತಕ್ಕದ್ದು ಮತ್ತು ಸದರಿ ಕಂಪನಿಗಳ ನೋಂದಣಿ ಪ್ರಮಾಣಪತ್ರಗಳನ್ನು ಸದರಿ ಆದೇಶದ ದಿನಾಂಕದಿಂದ ಜಾರಿಗೆ ಬರುವಂತೆ ಅವಶ್ಯಕವಿದ್ದಲ್ಲಿ ರದ್ದುಗೊಳಿಸತಕ್ಕದ್ದು.

**45. ಕೆಲವು ಇತರ ವ್ಯಕ್ತಿಗಳಿಂದ ತೆರಿಗೆ, ದಂಡ ಅಥವಾ ಇತರ ಯಾವುದೇ ಮೊಬಲಗಿನ ವಸೂಲಿ.–** (1) ನಿಯಮಿಸಲಾದ ಪ್ರಾಧಿಕಾರವು, ಯಾವುದೇ ಕಾಲದಲ್ಲಿ ಅಥವಾ ಕಾಲಕಾಲಕ್ಕೆ ಲಿಖಿತ ನೋಟೀಸು ನೀಡುವ ಮೂಲಕ, ಅದರ ಒಂದು ಪ್ರತಿಯನ್ನು ನಿಯಮಿಸಲಾದ ಪ್ರಾಧಿಕಾರವು, ತನಗೆ ತಿಳಿದಿರುವ ವ್ಯಾಪಾರಿಯ ಇತ್ತೀಚಿನ ವಿಳಾಸಕ್ಕೆ

ಕಳುಹಿಸಿ, ವ್ಯಾಪಾರಿಗೆ ಯಾವ ವ್ಯಕ್ತಿಯಿಂದ ಹಣ ಬಾಕಿ ಇದೆಯೋ ಅಥವಾ ಬಾಕಿಯಾಗಬಹುದೋ ಆ ಯಾವೊಬ್ಬ ವ್ಯಕ್ತಿ ಅಥವಾ ವ್ಯಾಪಾರಿಗಾಗಿ ಅಥವಾ ಅವನ ನಿಮಿತ್ತವಾಗಿ ಹಣವನ್ನು ಹೊಂದಿರುವ ಅಥವಾ ತರುವಾಯ ಹೊಂದಬಹುದಾದ ಯಾವೊಬ್ಬ ವ್ಯಕ್ತಿಯನ್ನು, ಹಣ ಬಾಕಿಯಾದ ಅಥವಾ ಹೊಂದಿದ ತಕ್ಷಣವೇ ಆಗಲಿ ಅಥವಾ ನೋಟೀಸಿನಲ್ಲಿ ನಿರ್ದಿಷ್ಟಪಡಿಸಿದ ಕಾಲದೊಳಗೆ ಆಗಲಿ, ಹಾಗೆ ಬಾಕಿಯಾಗುವುದಕ್ಕೆ ಅಥವಾ ಹೊಂದಿರುವುದಕ್ಕೆ ಮುಂಚಿತವಾಗಿಲ್ಲದಂತೆ, ನಿಯಮಿಸಲಾದ ಪ್ರಾಧಿಕಾರಕ್ಕೆ ತೆರಿಗೆ ಬಾಕಿಗಳು ಅಥವಾ ದಂಡಕ್ಕೆ ಸಂಬಂಧಿಸಿದಂತೆ ವ್ಯಾಪಾರಿಯಿಂದ ಬಾಕಿಯಾಗುವ ಮೊಬಲಗನ್ನು ಸಂದಾಯ ಮಾಡುವುದಕ್ಕೆ ಸಾಕಾಗುವಷ್ಟು ಹಣವನ್ನು ಅಥವಾ ಅದು ಮೊಬಲಗಿಗೆ ಸಮನಾಗಿದ್ದಲ್ಲಿ ಅಥವಾ ಕಡಿಮೆಯಾಗಿದ್ದಲ್ಲಿ, ಆ ಪೂರ್ಣ ಮೊತ್ತವನ್ನು ಸಂದಾಯಮಾಡುವಂತೆ ಅಗತ್ಯಪಡಿಸಬಹುದು.

(2) ನಿಯಮಿಸಲಾದ ಪ್ರಾಧಿಕಾರವು, ಯಾವುದೇ ಕಾಲದಲ್ಲಿ ಅಥವಾ ಕಾಲಕಾಲಕ್ಕೆ ಯಾವುದೇ ಅಂಥ ನೋಟೀಸನ್ನು ತಿದ್ದುಪಡಿ ಮಾಡಬಹುದು ಅಥವಾ ರದ್ದುಪಡಿಸಬಹುದು ಅಥವಾ ನೋಟೀಸಿನ ಅನುಸರಣೆಯಲ್ಲಿ ಯಾವುದೇ ಸಂದಾಯ ಮಾಡುವುದಕ್ಕಾಗಿ ಸಮಯವನ್ನು ವಿಸ್ತರಿಸಬಹುದು.

(3) ಈ ಪ್ರಕರಣದ ಅಡಿಯಲ್ಲಿ ನೋಟೀಸಿನ ಪಾಲನೆಯಲ್ಲಿ ಯಾವುದೇ ಸಂದಾಯವನ್ನು ಮಾಡುವ ಯಾವೊಬ್ಬ ವ್ಯಕ್ತಿಯು, ಅವನು ವ್ಯಾಪಾರಿಯ ಅಧಿಕಾರದ ಮೇರೆಗೆ ಸಂದಾಯವನ್ನು ಮಾಡಿರುವುದಾಗಿ ಭಾವಿಸತಕ್ಕದ್ದು ಮತ್ತು ನಿಯಮಿಸಲಾದ ಪ್ರಾಧಿಕಾರದ ರಸೀದಿಯು, ಆ ರಸೀದಿಯಲ್ಲಿ ಉಲ್ಲೇಖಿಸಲಾದ ಮೊಬಲಗಿನಷ್ಟರಮಟ್ಟಿಗೆ ಅಂಥ ವ್ಯಕ್ತಿಯ ಹೊಣೆಗಾರಿಕೆಯ ಬಗ್ಗೆ ಉಚಿತ ಮತ್ತು ಸಾಕಷ್ಟು ವಿಮೋಚನೆಯಾಗಿರತಕ್ಕದ್ದು.

(4) ಈ ಪ್ರಕರಣದಲ್ಲಿ ಉಲ್ಲೇಖಿಸಿದ ನೋಟೀಸಿನ ಸ್ವೀಕೃತಿಯ ತರುವಾಯ ವ್ಯಾಪಾರಿಯ, ಯಾವುದೇ ಹೊಣೆಗಾರಿಕೆಯನ್ನು ವಿಮೋಚನೆಗೊಳಿಸುವ ಯಾವೊಬ್ಬ ವ್ಯಕ್ತಿಯು ವಿಮೋಚನೆಗೊಳಿಸಿದ ಹೊಣೆಗಾರಿಕೆಯಷ್ಟರಮಟ್ಟಿಗೆ ಅಥವಾ ಈ ಅಧಿನಿಯಮದ ಅಡಿಯಲ್ಲಿ ಬಾಕಿಯಾಗಿರುವ ಮೊಬಲಗಿಗಾಗಿ ವ್ಯಾಪಾರಿಯ ಹೊಣೆಗಾರಿಕೆಯಷ್ಟರಮಟ್ಟಿಗೆ, ಇವುಗಳಲ್ಲಿ ಯಾವುದು ಕಡಿಮೆಯೋ ಅಷ್ಟರಮಟ್ಟಿಗೆ ನಿಯಮಿಸಲಾದ ಪ್ರಾಧಿಕಾರಕ್ಕೆ ವೈಯಕ್ತಿಕವಾಗಿ ಬದ್ಧನಾಗಿರತಕ್ಕದ್ದು.

(5) ಈ ಪ್ರಕರಣದ ಅಡಿಯಲ್ಲಿ ನೋಟೀಸನ್ನು ಕಳುಹಿಸಲಾಗಿರುವ ಯಾವೊಬ್ಬ ವ್ಯಕ್ತಿಯು, ಅಂಥ ನೋಟೀಸನ್ನು ನೀಡಿದ್ದ ನಿಯಮಿಸಲಾದ ಪ್ರಾಧಿಕಾರಕ್ಕೆ ಅಥವಾ ಸತ್ಯಾಪನೆಗಾಗಿ ಯಾವ ಅಧಿಕಾರಿಗೆ ವಿಷಯವನ್ನು ಉಲ್ಲೇಖಿಸಲಾಗಿದೆಯೋ ಆ ಅಧಿಕಾರಿಗೆ ತಗಾದೆ ಮಾಡಲಾಗಿದ್ದ ಯಾವುದೇ ಮೊತ್ತ ಅಥವಾ ಅದರ ಭಾಗವು ಅವನಿಂದ ವ್ಯಾಪಾರಿಗೆ ಬಾಕಿ ಇಲ್ಲ ಎಂಬುದನ್ನು ಅಥವಾ ಅವನು ವ್ಯಾಪಾರಿಗಾಗಿ ಅಥವಾ ಅವನ ನಿಮಿತ್ತವಾಗಿ ಯಾವುದೇ ಹಣವನ್ನು ಹೊಂದಿಲ್ಲವೆಂಬುದನ್ನು ಮನವರಿಕೆಯಾಗುವಂತೆ ರುಜುವಾತುಪಡಿಸಿದಲ್ಲಿ, ಆಗ ಅದಕ್ಕೆ ಆಕ್ಷೇಪಿಸಿರುವಲ್ಲಿ, ಈ ಪ್ರಕರಣದಲ್ಲಿ ಒಳಗೊಂಡಿರುವುದು ಯಾವುದೂ ತಗಾದೆ ಮೊಬಲಗನ್ನು ಅಥವಾ ಅದರ ಭಾಗವನ್ನು ನಿಯಮಿಸಲಾದ ಪ್ರಾಧಿಕಾರಕ್ಕೆ ಸಂದಾಯ ಮಾಡಲು ಅಂಥ ವ್ಯಕ್ತಿಯನ್ನು ಅಗತ್ಯಪಡಿಸಲಾಗಿದೆ ಎಂದು ಭಾವಿಸತಕ್ಕದ್ದಲ್ಲ.

(6) ಒಬ್ಬ ವ್ಯಕ್ತಿಯು, ಯಾವ ಮೊಬಲಗನ್ನು ನಿಯಮಿಸಲಾದ ಪ್ರಾಧಿಕಾರಕ್ಕೆ ಸಂದಾಯಮಾಡಬೇಕೆಂದು ಅಗತ್ಯಪಡಿಸಲಾಗಿದೆಯೋ ಅಥವಾ ಯಾವ ಮೊಬಲಗಿಗಾಗಿ ಈ ಪ್ರಕರಣದ ಅಡಿಯಲ್ಲಿ ನಿಯಮಿಸಲಾದ ಪ್ರಾಧಿಕಾರಕ್ಕೆ ಅವನು ವೈಯಕ್ತಿಕವಾಗಿ ಬದ್ಧನಾಗಿರುವನೋ ಆ ಯಾವುದೇ ಮೊಬಲಗು, ಸಂದಾಯವಾಗದೇ ಉಳಿದಿದ್ದರೆ ಸದರಿ ವ್ಯಕ್ತಿಯ ಸ್ವತ್ತುಗಳ ಮೇಲೆ ಅದು ಋಣ ಭಾರವಾಗಿರತಕ್ಕದ್ದು ಮತ್ತು [1][ಈ ಅಧಿನಿಯಮದ ಅಡಿಯಲ್ಲಿ ಸಂದಾಯಮಾಡಬೇಕಾದ ಬಾಕಿ ತೆರಿಗೆ][1] ಎಂಬಂತೆ ಅದನ್ನು ವಸೂಲು ಮಾಡಬಹುದು.

1. 2007ರ ಅಧಿನಿಯಮ ಸಂಖ್ಯೆ 6ರ ಮೂಲಕ ದಿನಾಂಕ: 11.3.2005 ರಿಂದ ಪ್ರತಿಯೋಜಿಸಲಾಗಿದೆ.

(7) ಈ ಪ್ರಕರಣದ ಉದ್ದೇಶಕ್ಕಾಗಿ ಯಾವೊಬ್ಬ ವ್ಯಕ್ತಿಯಿಂದ ಒಬ್ಬ ವ್ಯಾಪಾರಿಗೆ ಬಾಕಿಯಾಗಿರುವ ಅಥವಾ ಹೊಂದಿರುವ ಮೊಬಲಗನ್ನು ಅಥವಾ ವ್ಯಾಪಾರಿಗಾಗಿ ಅಥವಾ ಅವನ ನಿಮಿತ್ತವಾಗಿ ಹೊಂದಿರುವ ಹಣವನ್ನು ಅಂಥ ವ್ಯಕ್ತಿಗೆ ಅಂಥ ವ್ಯಾಪಾರಿಯು ಸಂದಾಯಮಾಡುವುದಕ್ಕಾಗಿ ಬಾಕಿಯಾಗಿರಬಹುದಾದಂಥ ಮತ್ತು ಕಾನೂನು ಸಮ್ಮತವಾಗಿ ಅಸ್ತಿತ್ವದಲ್ಲಿರುವಂಥ ಕ್ಲೇಮುಗಳು ಯಾವುವಾದರೂ ಇದ್ದರೆ, ಅಂಥ ಕ್ಲೇಮುಗಳನ್ನು ಗಣನೆಗೆ ತೆಗೆದುಕೊಂಡ ತರುವಾಯ ಲೆಕ್ಕಹಾಕತಕ್ಕದ್ದು.

[1][(8) ಈ ಪ್ರಕರಣದ ಉಪಬಂಧಗಳು ಯಥೋಚಿತ ಬದಲಾವಣೆಗಳೊಂದಿಗೆ ಯಾರೇ ಇತರ ವ್ಯಕ್ತಿಯಿಂದ ಬರಬೇಕಾದ ಬಾಕಿಗಳು ಯಾವುವಾದರೂ ಇದ್ದರೆ ಅವುಗಳ ವಸೂಲಿಗೆ ಅನ್ವಯವಾಗತಕ್ಕದ್ದು.][1]

1. 2008ರ ಅಧಿನಿಯಮ ಸಂಖ್ಯೆ 5ರ ಮೂಲಕ ದಿನಾಂಕ: 1.8.2008 ರಿಂದ ಸೇರಿಸಲಾಗಿದೆ.

**46. ವ್ಯವಹಾರದ ವರ್ಗಾವಣೆ ಮೇಲೆ ಸಂದಾಯಮಾಡಬೇಕಾದ ತೆರಿಗೆ, ಕಾನೂನು ಸಮ್ಮತ ಪ್ರತಿನಿಧಿಗಳ ಬಗ್ಗೆ ತೆರಿಗೆ ನಿರ್ಧರಣೆ, ಇತ್ಯಾದಿ.-** (1) ಒಬ್ಬ ವ್ಯಾಪಾರಿಯ ವ್ಯವಹಾರದ ಮಾಲೀಕತ್ವವು ವರ್ಗಾವಣೆಯಾದಾಗ, ವರ್ಗಾವಣೆಯ ಸಮಯದಲ್ಲಿ ಸಂದಾಯವಾಗದೇ ಉಳಿದಿರುವ ಅಥವಾ ಅಂಥ ವ್ಯವಹಾರಕ್ಕೆ ಸಂಬಂಧಿಸಿದಂತೆ ವರ್ಗಾವಣೆಯ ದಿನಾಂಕದ ತರುವಾಯ, ಆದರೆ, ವರ್ಗಾವಣೆಯ ದಿನಾಂಕದವರೆಗಿನ ವರ್ಷಗಳಿಗೆ ಸಂಬಂಧಿಸಿದಂತೆ ಸಂದಾಯವಾಗಬಹುದಾದಂಥ ಯಾವುದೇ ತೆರಿಗೆ ಅಥವಾ ದಂಡ ಅಥವಾ ಇತರ ಮೊಬಲಗನ್ನು ಸಂದಾಯ ಮಾಡಲು, ವರ್ಗಾವಣೆದಾರನು ಮತ್ತು ವರ್ಗಾವಣೆ ಪಡೆದವನು ಜಂಟಿಯಾಗಿ ಮತ್ತು ಪ್ರತ್ಯೇಕವಾಗಿ ಹೊಣೆಗಾರರಾಗಿರತಕ್ಕದ್ದು ಮತ್ತು ವರ್ಗಾವಣೆ ಪಡೆದವನಿಂದ ವಸೂಲಿಯ ಉದ್ದೇಶಕ್ಕಾಗಿ ಅಂಥ ವರ್ಗಾವಣೆ ಪಡೆದವನನ್ನು ಈ ಅಧಿನಿಯಮದ ಅಡಿಯಲ್ಲಿ ತೆರಿಗೆ ಅಥವಾ ದಂಡ ಅಥವಾ ಬಾಕಿ ಇರುವ ಇತರ ಮೊಬಲಗನ್ನು ಸಂದಾಯ ಮಾಡಲು ಬದ್ಧನಾದ ವ್ಯಾಪಾರಿ ಎಂದು ಪರಿಗಣಿಸತಕ್ಕದ್ದು.

(2) ತೆರಿಗೆ ಅಥವಾ ದಂಡವನ್ನು ಸಂದಾಯ ಮಾಡಲು ಬದ್ಧವಾಗಿರುವ ಒಂದು ಫರ್ಮಿನ ವಿಘಟನೆಯಾದಾಗ, ತೆರಿಗೆಯ ನಿರ್ಧರಣೆಯನ್ನು ಮತ್ತು ದಂಡ ವಿಧಿಸುವುದನ್ನು ಆ ಫರ್ಮಿನ ವಿಘಟನೆಯಾಗಿಲ್ಲದಿದ್ದರೆ ಹೇಗೋ ಹಾಗೆ ಮಾಡತಕ್ಕದ್ದು ಮತ್ತು ವಿಘಟನೆಯ ಕಾಲದಲ್ಲಿ ಆ ಫರ್ಮಿನ ಪಾಲುದಾರನಾಗಿದ್ದ ಪ್ರತಿಯೊಬ್ಬ ವ್ಯಕ್ತಿಯು ಮತ್ತು ಮರಣ ಹೊಂದಿದ ಅಂಥ ಯಾವೊಬ್ಬ ವ್ಯಕ್ತಿಯ ಕಾನೂನುಬದ್ಧ ಪ್ರತಿನಿಧಿಯು, ಜಂಟಿಯಾಗಿ ಮತ್ತು ಪ್ರತ್ಯೇಕವಾಗಿ, ನಿರ್ಧರಣೆ ಮಾಡಲಾಗಿದ್ದ ತೆರಿಗೆಯನ್ನು ಅಥವಾ ವಿಧಿಸಲಾಗಿದ್ದ ದಂಡವನ್ನು ಸಂದಾಯ ಮಾಡಲು ಬದ್ಧನಾಗತಕ್ಕದ್ದು.

[1][(2ಎ)ನೋಂದಾಯಿತ ವ್ಯಾಪಾರಿಯ ವ್ಯವಹಾರವನ್ನು ಒಡೆತನದ ಬದಲಾವಣೆ, ಮಾರಾಟ, ವಿಲೀನಗೊಳಿಸುವಿಕೆ, ಸಮ್ಮಿಲನ, ಗುತ್ತಿಗೆ ಅಥವಾ ಒಂದು ಜಂಟಿ ಉದ್ಯಮಕ್ಕೆ ವ್ಯವಹಾರದ ವರ್ಗಾವಣೆಯ ಕಾರಣದಿಂದಾಗಿ ಸಂಪೂರ್ಣವಾಗಿ ವರ್ಗಾವಣೆ ಮಾಡಿರುವಲ್ಲಿ ನೋಂದಣಿಯನ್ನು ರದ್ದುಗೊಳಿಸಿದ ತರುವಾಯ ನಿಯಮಿಸಬಹುದಾದಂಥ ನಿರ್ಬಂಧಗಳಿಗೆ ಮತ್ತು ಷರತ್ತುಗಳಿಗೆ ಒಳಪಟ್ಟು, ನೋಂದಾಯಿತ ವ್ಯಾಪಾರಿಯು ತಾನು ಸರಿಹೊಂದಿಸಿಲ್ಲದ ಅಥವಾ ತನಗೆ ಮರುಪಾವತಿ ಮಾಡಿಲ್ಲದ ಯಾವುದೇ ಹೆಚ್ಚುವರಿ ಹೂಡುವಳಿ ತೆರಿಗೆಯನ್ನು ವರ್ಗಾವಣೆ ಪಡೆದವನಿಗೆ ವರ್ಗಾಯಿಸಲು ಆಯ್ಕೆಮಾಡಿಕೊಳ್ಳಬಹುದು.][1]

1. 2008ರ ಅಧಿನಿಯಮ ಸಂಖ್ಯೆ 5ರ ಮೂಲಕ ದಿನಾಂಕ: 1.8.2008 ರಿಂದ ಸೇರಿಸಲಾಗಿದೆ.

(3) ಈ ಅಧಿನಿಯಮದ ಅಡಿಯಲ್ಲಿ ಯಾವುದೇ ತೆರಿಗೆ ಅಥವಾ ದಂಡ ಅಥವಾ ಇತರ ಮೊಬಲಗನ್ನು ಸಂದಾಯ ಮಾಡಲು ಯಾವುದೇ ಫರ್ಮ್ ಬದ್ಧವಾಗಿದ್ದಲ್ಲಿ ಆ ಫರ್ಮು ಮತ್ತು ಫರ್ಮಿನ ಪ್ರತಿಯೊಬ್ಬ ಪಾಲುದಾರನು ಅಂಥ ಸಂದಾಯಕ್ಕಾಗಿ ಜಂಟಿಯಾಗಿ ಮತ್ತು ಪ್ರತ್ಯೇಕವಾಗಿ ಬದ್ಧನಾಗಿರತಕ್ಕದ್ದು.

(4) ಈ ಅಧಿನಿಯಮದ ಅಡಿಯಲ್ಲಿ ಯಾವುದೇ ತೆರಿಗೆ ಅಥವಾ ದಂಡ ಅಥವಾ ಯಾವುದೇ ಇತರ ಮೊಬಲಗನ್ನು ಸಂದಾಯ ಮಾಡಲು ಬದ್ಧನಾದ ಫರ್ಮಿನ ಒಬ್ಬ ಪಾಲುದಾರನು ನಿವೃತ್ತಿ ಹೊಂದಿದಲ್ಲಿ, ಅದಕ್ಕೆ ತದ್ವಿರುದ್ಧವಾಗಿ ಯಾವುದೇ ಕರಾರು ಇದ್ದರೂ, ಅವನ ನಿವೃತ್ತಿ ಕಾಲದಲ್ಲಿ ಸಂದಾಯವಾಗದೇ ಉಳಿದಿರುವ ಯಾವುದೇ ತೆರಿಗೆ ಅಥವಾ ದಂಡ ಅಥವಾ ಇತರ ಯಾವುದೇ ಮೊಬಲಗನ್ನು ಮತ್ತು ತೆರಿಗೆ ನಿರ್ಧರಣೆಯಾಗದಿದ್ದರೂ ಅವನ ನಿವೃತ್ತಿಯ ದಿನಾಂಕದವರೆಗೆ ಬಾಕಿ ಇರುವ ಯಾವುದೇ ತೆರಿಗೆ ಅಥವಾ ದಂಡ ಅಥವಾ ಯಾವುದೇ ಇತರ ಮೊಬಲಗನ್ನು ಸಂದಾಯ ಮಾಡಲು ಬದ್ಧನಾಗಿರತಕ್ಕದ್ದು.

(5) ತೆರಿಗೆ ಅಥವಾ ದಂಡವನ್ನು ಸಂದಾಯ ಮಾಡಲು ಬದ್ಧವಾದ ಒಂದು ಹಿಂದೂ ಅವಿಭಕ್ತ ಕುಟುಂಬ ಅಥವಾ ಅಳಿಯ ಸಂತಾನ ಕುಟುಂಬವು ವಿಭಜನೆಯಾದಾಗ ಆ ಕುಟುಂಬದ ವಿಭಜನೆ ನಡೆದಿಲ್ಲದಿದ್ದರೆ ಹೇಗೋ ಹಾಗೆ ತೆರಿಗೆ ನಿರ್ಧರಣೆಯನ್ನು ಮತ್ತು ದಂಡ ವಿಧಿಸುವಿಕೆಯನ್ನು ಮಾಡತಕ್ಕದ್ದು ಮತ್ತು ವಿಭಜನೆಗೆ ಮುಂಚೆ ಆ ಕುಟುಂಬದ ಸದಸ್ಯನಾಗಿದ್ದ ಪ್ರತಿಯೊಬ್ಬ ವ್ಯಕ್ತಿಯು, ನಿರ್ಧರಣೆ ಮಾಡಲಾಗಿದ್ದ ತೆರಿಗೆ ಅಥವಾ ವಿಧಿಸಲಾಗಿದ್ದ ದಂಡವನ್ನು ಸಂದಾಯ ಮಾಡಲು ಜಂಟಿಯಾಗಿ ಮತ್ತು ಪ್ರತ್ಯೇಕವಾಗಿ ಬದ್ಧನಾಗಿರತಕ್ಕದ್ದು.

(6) ಒಬ್ಬ ವ್ಯಾಪಾರಿಯು ಮರಣ ಹೊಂದಿದಲ್ಲಿ ಅವನ ನಿರ್ವಾಹಕ, ಆಡಳಿತಗಾರ ಅಥವಾ ಇತರ ಕಾನೂನು ಬದ್ಧ ಪ್ರತಿನಿಧಿಯನ್ನು ಈ ಅಧಿನಿಯಮದ ಉದ್ದೇಶಗಳಿಗಾಗಿ ವ್ಯಾಪಾರಿ ಎಂದು ಭಾವಿಸತಕ್ಕದ್ದು ಮತ್ತು ಈ ಅಧಿನಿಯಮದ ಉಪಬಂಧಗಳು ಮರಣಹೊಂದಿದ ಸದರಿ ವ್ಯಾಪಾರಿಯ ವ್ಯವಹಾರಗಳಿಗೆ ಸಂಬಂಧಪಟ್ಟಂತೆ ಅವನಿಗೆ ಅನ್ವಯವಾಗತಕ್ಕದ್ದು, ಪರಂತು, ಯಾವೊಬ್ಬ ಅಂಥ ವ್ಯಾಪಾರಿಯು ಸಂದಾಯ ಮಾಡಬೇಕಾದುದೆಂದು ನಿರ್ಧರಣೆ ಮಾಡಲಾಗಿದ್ದ ಯಾವುದೇ

ತೆರಿಗೆ, ದಂಡ ಅಥವಾ ಶುಲ್ಕದ ಸಂಬಂಧದಲ್ಲಿ ಅಥವಾ ಅವನು ಮರಣ ಹೊಂದಿಲ್ಲದಿದ್ದರೆ ಈ ಅಧಿನಿಯಮದ ಮೇರೆಗೆ ಅವನು ಸಂದಾಯ ಮಾಡಬೇಕಾಗಿದ್ದ ಯಾವುದೇ ತೆರಿಗೆ, ದಂಡ ಅಥವಾ ಶುಲ್ಕವನ್ನು ಸಂದಾಯ ಮಾಡಲು ಆ ನಿರ್ವಾಹಕ, ಆಡಳಿತಗಾರ ಅಥವಾ ಇತರ ಕಾನೂನು ಬದ್ಧ ಪ್ರತಿನಿಧಿಯು ಅವನ ವಶದಲ್ಲಿರುವ ಮೃತನ ಆಸ್ತಿಗಳಷ್ಟರಮಟ್ಟಿಗೆ ಮಾತ್ರ ಬದ್ಧನಾಗಿರತಕ್ಕದ್ದು.

**47. ವ್ಯಾಪಾರಿಯಿಂದ ತೆರಿಗೆ ರೂಪದಲ್ಲಿ ತಪ್ಪಾಗಿ ಸಂಗ್ರಹಿಸಲಾದ ಮೊಬಲಗುಗಳ ಸಂದಾಯ ಮತ್ತು ಬಟವಾಡೆ.-** (1) [1][XXX][1] ಯಾವೊಬ್ಬ ವ್ಯಾಪಾರಿಯು, ತಿಳಿದೋ ಅಥವಾ ತಿಳಿಯದೆಯೋ ಯಾವೊಬ್ಬ ವ್ಯಕ್ತಿಯಿಂದ ತೆರಿಗೆಯ ರೂಪದಲ್ಲಿ ಅಥವಾ ತೆರಿಗೆ ರೂಪದಲ್ಲಿ ಎಂದು ತಾತ್ಪರ್ಯವಾಗುವ ಯಾವುದೇ ಮೊಬಲಗನ್ನು ಸಂಗ್ರಹಿಸಿದ್ದಲ್ಲಿ, ಈ ಅಧಿನಿಯಮದ ಅಡಿಯಲ್ಲಿ ಆ ವ್ಯಾಪಾರಿಯು, ತೆರಿಗೆಯಾಗಿ ಅಂಥ ಮೊಬಲಗನ್ನು ಸಂದಾಯ ಮಾಡಲು ಬದ್ಧನಾಗಿಲ್ಲದಿದ್ದರೂ ಅಥವಾ ತೆರಿಗೆಯಾಗಿ ಅದರ ಒಂದು ಭಾಗವು ಮಾತ್ರ ಅವನಿಂದ ಬಾಕಿ ಉಳಿದಿದ್ದರೂ, ಅಂಥ ವ್ಯಾಪಾರಿಯು ಹಾಗೆ ಸಂಗ್ರಹಿಸಿದ ಸಂಪೂರ್ಣ ಮೊಬಲಗನ್ನು, ಅಂಥ ಮೊಬಲಗನ್ನು ಸಂಗ್ರಹಿಸಿದ ತಿಂಗಳ ಮುಕ್ತಾಯದ ತರುವಾಯ ಇಪ್ಪತ್ತು ದಿನಗಳೊಳಗೆ, ನಿಯಮಿಸಲಾದ ಪ್ರಾಧಿಕಾರಕ್ಕೆ ಸಂದಾಯ ಮಾಡತಕ್ಕದ್ದು.

1. 2013ರ ಅಧಿನಿಯಮ ಸಂಖ್ಯೆ 32ರ ಮೂಲಕ ದಿನಾಂಕ: 01.04.2013ರಿಂದ ಬಿಟ್ಟುಬಿಡಲಾಗಿದೆ.

(2) ಮೇಲಿನ (1)ನೇ ಉಪ-ಪ್ರಕರಣಕ್ಕೆ ಅನುಸಾರವಾಗಿ ಮೊಬಲಗನ್ನು ಸಂದಾಯ ಮಾಡಲು ತಪ್ಪಿದಲ್ಲಿ,-

(ಎ) ಸಂದಾಯ ಮಾಡಲು ತಪ್ಪಿದ ದಿನಾಂಕದಂದು ಬಾಕಿ ಉಳಿದಿರುವ ಸಂಪೂರ್ಣ ಮೊಬಲಗು ಆ ಕೂಡಲೇ ಬಾಕಿಯಾಗತಕ್ಕದ್ದು ಮತ್ತು ವ್ಯಾಪಾರಿಯ ಸ್ವತ್ತುಗಳ ಮೇಲೆ ಒಂದು ಋಣಭಾರವಾಗಿರತಕ್ಕದ್ದು.

(ಬಿ) ಮೊಬಲಗನ್ನು ಸಂದಾಯ ಮಾಡಲು ಬದ್ಧನಾದ ವ್ಯಾಪಾರಿಯು, ಸಂದಾಯ ಮಾಡಲು ತಪ್ಪಿದ ಪ್ರತಿಯೊಂದು ತಿಂಗಳಿಗಾಗಿ ಅಂಥ ಮೊಬಲಗಿನ [1][ಶೇಕಡಾ ಒಂದೂಕಾಲರಷ್ಟು] ದರದಲ್ಲಿ ಬಡ್ಡಿಯನ್ನು ಸಂದಾಯ ಮಾಡತಕ್ಕದ್ದು, ಮತ್ತು;

1.2005 ರ ಅಧಿನಿಯಮ ಸಂಖ್ಯೆ 11 ರ ಮೂಲಕ ದಿನಾಂಕ: 1.4.2005 ರಿಂದ ಪ್ರತಿಯೋಜಿಸಲಾಗಿದೆ.

(ಸಿ) ಈ ಉಪ-ಪ್ರಕರಣದ, (ಬಿ) ಖಂಡದ ಅಡಿಯಲ್ಲಿ ಲೆಕ್ಕಹಾಕಲಾದ ಬಡ್ಡಿಯೊಡನೆ, ಸಂದಾಯಮಾಡದೇ ಉಳಿದ ಪೂರ್ಣ ಮೊಬಲಗನ್ನು 42ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ರೀತಿಯಲ್ಲಿ ವಸೂಲ್ಮಾಡತಕ್ಕದ್ದು.

(3) ಈ ಅಧಿನಿಯಮದಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ (1)ನೇ ಉಪ-ಪ್ರಕರಣದ ಅಡಿಯಲ್ಲಿ ಯಾವೊಬ್ಬ ವ್ಯಾಪಾರಿಯು ಸಂದಾಯ ಮಾಡಿದ ಅಥವಾ ಸಂದಾಯ ಮಾಡಬೇಕಾದ ಯಾವುದೇ ಮೊಬಲಗನ್ನು, ಅದು ತೆರಿಗೆ ಬಾಕಿಯಲ್ಲದಿರುವಷ್ಟರಮಟ್ಟಿಗೆ, ರಾಜ್ಯ ಸರ್ಕಾರಕ್ಕೆ ಮುಟ್ಟುಗೋಲಾಗತಕ್ಕದ್ದು ಮತ್ತು ಅವನಿಂದ ವಸೂಲಿ ಮಾಡತಕ್ಕದ್ದು ಮತ್ತು ಅಂಥ ಸಂದಾಯ ಅಥವಾ ವಸೂಲಾತಿಯು, ಅದನ್ನು ಯಾರಿಂದ ಸಂಗ್ರಹಿಸಲಾಗಿತ್ತೋ ಆ ವ್ಯಕ್ತಿಗೆ ಆ ಮೊಬಲಗನ್ನು ಮರುಪಾವತಿ ಮಾಡುವ ಬದ್ಧತೆಯಿಂದ ಅವನನ್ನು ವಿಮೋಚನೆಗೊಳಿಸತಕ್ಕದ್ದು.

(4) ಮೇಲಿನ (1)ನೇ ಅಥವಾ (3)ನೇ ಉಪ-ಪ್ರಕರಣದ ಅಡಿಯಲ್ಲಿ ಯಾವುದೇ ಮೊಬಲಗನ್ನು, ಯಾವೊಬ್ಬ ವ್ಯಾಪಾರಿಯು [1][ಆದರೆ ತನ್ನಿಂದ ವಸೂಲು ಮಾಡಿದ ತೆರಿಗೆಯ ಮೇಲೆ ಹೂಡುವಳಿ ತೆರಿಗೆಯ ಮುರುಗಡೆಯನ್ನು ಕ್ಲೇಮು ಮಾಡಿರುವಂಥ ವ್ಯಾಪಾರಿಯನ್ನು ಹೊರತುಪಡಿಸಿ][1] ಸಂದಾಯ ಮಾಡಿದ್ದಲ್ಲಿ ಅಥವಾ ಅವನಿಂದ ವಸೂಲ್ಮಾಡಿದ್ದಲ್ಲಿ, ಅಂಥ ಮೊಬಲಗಿನ ಅಥವಾ ಅದರ ಯಾವುದೇ ಭಾಗದ ಮರುಪಾವತಿಯನ್ನು, ತೆರಿಗೆಯ ರೂಪದಲ್ಲಿ ಅದನ್ನು ಯಾರಿಂದ ವಸೂಲಿ ಮಾಡಲಾಗಿತ್ತೋ ಆ ವ್ಯಕ್ತಿಯು, ಸರ್ಕಾರದಿಂದ ಕ್ಲೇಮು ಮಾಡಬಹುದು, ಪರಂತು ಮುಟ್ಟುಗೋಲು ಆದೇಶದ ದಿನಾಂಕದಿಂದ ಎರಡು ವರ್ಷಗಳೊಳಗೆ ನಿಗದಿತ ನಮೂನೆಯಲ್ಲಿ, ಲಿಖಿತ ಅರ್ಜಿಯನ್ನು, ಆಯುಕ್ತನಿಗೆ ಸಲ್ಲಿಸತಕ್ಕದ್ದು. ಅಂಥ ಯಾವುದೇ ಅರ್ಜಿಯನ್ನು ಸ್ವೀಕರಿಸಿದ ತರುವಾಯ, ಆಯುಕ್ತನು ತಾನು ಸೂಕ್ತವೆಂದು ಭಾವಿಸುವಂಥ ವಿಚಾರಣೆಯನ್ನು ನಡೆಸತಕ್ಕದ್ದು ಮತ್ತು ಕ್ಲೇಮು ನ್ಯಾಯಸಮ್ಮತವಾದುದೆಂದು ಮತ್ತು ಅಂಗೀಕಾರಾರ್ಹವಾದುದೆಂದು ಮತ್ತು ಮರುಪಾವತಿ ಮಾಡಬೇಕೆಂದು, ಹಾಗೆ ಕ್ಲೇಮು ಮಾಡಿದ ಮೊಬಲಗನ್ನು ವಾಸ್ತವವಾಗಿ ಸಂದಾಯಮಾಡಲಾಗಿದೆ ಅಥವಾ ವಸೂಲ್ಮಾಡಲಾಗಿದೆ ಎಂದು ಆಯುಕ್ತನಿಗೆ ಮನವರಿಕೆಯಾದರೆ, ಅವನು ಆ ಮೊಬಲಗನ್ನು ಅಥವಾ ಅದರ ಯಾವುದೇ ಭಾಗವನ್ನು ಸಂಬಂಧಪಟ್ಟ ವ್ಯಕ್ತಿಗೆ ಪಾವತಿ ಮಾಡತಕ್ಕದ್ದು.

1. 2006 ರ ಅಧಿನಿಯಮ ಸಂಖ್ಯೆ 4ರ ಮೂಲಕ ದಿನಾಂಕ: 1.4.2006 ರಿಂದ ಸೇರಿಸಲಾಗಿದೆ.

[1][(5) (2)ನೇ ಉಪ ಪ್ರಕರಣದ ಉದ್ದೇಶಕ್ಕಾಗಿ, ಈ ಉಪ ಪ್ರಕರಣದ ಉದ್ದೇಶಕ್ಕಾಗಿ, ಈ ಪ್ರಕರಣದ ಅಡಿಯಲ್ಲಿ ಯಾವುದೇ ಅವಧಿಯಲ್ಲಿ ವಸೂಲಿ ಮಾಡಬೇಕಾಗಿದ್ದ ಯಾವುದೇ ಹಣವನ್ನು, ಅಂಥ ಹಣದ ಸಂದಾಯವನ್ನು ವಿವಾದಿಸುತ್ತಾ ಹಾಕಿಕೊಂಡ ಅಪೀಲು ಅಥವಾ ಇತರ ವ್ಯವಹರಣೆಯಲ್ಲಿ ಯಾವುದೇ ಪ್ರಾಧಿಕಾರದ ಅಥವಾ ನ್ಯಾಯಾಲಯವು ಸಂದಾಯಮಾಡದಂತೆ ತಡೆಹಿಡಿದ ಕಾರಣದಿಂದ ಯಾವುದೇ ಅವಧಿಯಲ್ಲಿ ಹಣ ಸಂದಾಯ ಮಾಡದೇ ಇರುವುದನ್ನು ಅಂಥ ಪ್ರಾಧಿಕಾರವು ಅಂಥ ಅಪೀಲು ಅಥವಾ ಇತರ ವ್ಯವಹರಣೆಯನ್ನು ಪುರಸ್ಕರಿಸಿದ ಹೊರತು ಒಂದು "ಸಂದಾಯ ತಪ್ಪುವಿಕೆ" ಎಂದು ಭಾವಿಸತಕ್ಕದು.]

1. 2005 ರ ಅಧಿನಿಯಮ ಸಂಖ್ಯೆ 11 ರ ಮೂಲಕ ದಿನಾಂಕ: 1.4.2005 ರಿಂದ ಸೇರಿಸಲಾಗಿದೆ.

[1][**47ಎ. ತೆರಿಗೆ ಮುಂತಾದವುಗಳನ್ನು ಪೂರ್ಣಾಂಕಗೊಳಿಸುವುದು ಇತ್ಯಾದಿ:–** ಈ ಅಧಿನಿಯಮದ ಮೇರೆಗೆ ಸಂದಾಯ ಮಾಡಬೇಕಾಗಿರುವ ತೆರಿಗೆಯ, ದಂಡದ ಅಥವಾ ಯಾವುದೇ ಇತರ ಮೊಬಲಗನ್ನು ಮತ್ತು ಬಾಕಿ ಇರುವ ಮರುಪಾವತಿಯ ಮೊಬಲಗನ್ನು ಸಮೀಪದ ರೂಪಾಯಿಗೆ ಪೂರ್ಣಾಂಕಗೊಳಿಸತಕ್ಕದ್ದು ಮತ್ತು ಈ ಉದ್ದೇಶಕ್ಕಾಗಿ, ಅಂಥ ಮೊಬಲಗು ಪೈಸೆಗಳಲ್ಲಿ ರೂಪಾಯಿಯ ಒಂದು ಭಾಗವನ್ನು ಒಳಗೊಂಡಿದ್ದರೆ, ಆಗ, ಅಂಥ ಭಾಗವು ಐವತ್ತು ಪೈಸೆ ಅಥವಾ ಅದಕ್ಕಿಂತ ಹೆಚ್ಚಾಗಿದ್ದರೆ, ಅದನ್ನು ಒಂದು ರೂಪಾಯಿಗೆ ಹೆಚ್ಚಿಸತಕ್ಕದ್ದು ಮತ್ತು ಅಂಥ ಭಾಗವು ಐವತ್ತು ಪೈಸೆಗಿಂತ ಕಡಿಮೆ ಇರುವಲ್ಲಿ, ಅದನ್ನು ಬಿಟ್ಟುಬಿಡತಕ್ಕದ್ದು.][1]

1. 2008 ರ ಅಧಿನಿಯಮ ಸಂಖ್ಯೆ 5ರ ಮೂಲಕ ದಿನಾಂಕ: 1.8.2008ರಿಂದ ಸೇರಿಸಲಾಗಿದೆ.

**48. ತೆರಿಗೆಯು ಸ್ವತ್ತಿನ ಮೇಲೆ ಮೊದಲನೇ ಋಣಭಾರವಾಗಿರುವುದು.–** ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ಇದಕ್ಕೆ ವಿರುದ್ಧವಾದುದು ಏನೇ ಒಳಗೊಂಡಿದ್ದರೂ, ತೆರಿಗೆ, ದಂಡ ಅಥವಾ ಬಡ್ಡಿಯ ನಿಮಿತ್ತವಾಗಿ ಒಬ್ಬ ವ್ಯಾಪಾರಿ ಅಥವಾ ಯಾವೊಬ್ಬ ಇತರ ವ್ಯಕ್ತಿಯು ಸಂದಾಯ ಮಾಡಬೇಕಾದ ಯಾವುದೇ ಮೊಬಲಗು ಅಥವಾ ಒಬ್ಬ ವ್ಯಾಪಾರಿಯು ಸಂದಾಯ ಮಾಡಬೇಕೆಂದು ಅಥವಾ ಸಂದಾಯದಿಂದ ಕಡಿತ ಮಾಡಬೇಕೆಂದು ಅಗತ್ಯಪಡಿಸಲಾದ ಅಥವಾ ಸರ್ಕಾರಕ್ಕೆ ಅವನು ವೈಯಕ್ತಿಕವಾಗಿ ಬದ್ಧನಾಗಿರುವ ಯಾವುದೇ ಮೊಬಲಗು ಸಂದರ್ಭಾನುಸಾರ ವ್ಯಾಪಾರಿಯ ಅಥವಾ ಅಂಥ ವ್ಯಕ್ತಿಯ ಸ್ವತ್ತಿನ ಮೇಲಿನ ಮೊದಲನೇ ಋಣಭಾರವಾಗಿರತಕ್ಕದ್ದು.

**49. ತೆರಿಗೆಯ ವಸೂಲಿಗಾಗಿ ಕಾಲಮಿತಿಯ ಅವಧಿ.–** (1) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ, ಈ ಅಧಿನಿಯಮದ ಅಡಿಯಲ್ಲಿ ಯಾವುದೇ ಮೊಬಲಗಿನ ವಸೂಲಿಗಾಗಿ ಯಾವುದೇ ವ್ಯವಹರಣೆಯನ್ನು, ಸಂಬಂಧಪಟ್ಟ ತೆರಿಗೆ ಅವಧಿಯ ಕೊನೆಯಿಂದ ಅಥವಾ ಸಂಬಂಧಪಟ್ಟ ತೆರಿಗೆ ನಿರ್ಧರಣೆಯ ದಿನಾಂಕದಿಂದ ಹನ್ನೆರಡು ವರ್ಷಗಳು ಮುಕ್ತಾಯಗೊಂಡ ತರುವಾಯ ಪ್ರಾರಂಭಿಸತಕ್ಕದ್ದಲ್ಲ, ಪರಂತು, ಒಂದು ಅಪೀಲು ಅಥವಾ ಪುನರೀಕ್ಷಣೆಗಾಗಿ ಅರ್ಜಿಯನ್ನು ಸಲ್ಲಿಸಲಾಗಿದ್ದಾಗ, ಕಾಲಮಿತಿ ಅವಧಿಯು ಯಾವ ದಿನಾಂಕದಂದು ಬಾಕಿ ಮೊಬಲಗನ್ನು ಅಂತಿಮವಾಗಿ ನಿರ್ಧರಿಸಲಾಗುವುದೋ ಆ ದಿನಾಂಕದವರೆಗೆ ಮುಂದುವರಿಯತಕ್ಕದ್ದು.

(2) ಮೇಲಿನ (1)ನೇ ಉಪ-ಪ್ರಕರಣದ ಅಡಿಯಲ್ಲಿ ನಿರ್ದಿಷ್ಟಪಡಿಸಿದ ಕಾಲಮಿತಿ ಅವಧಿಯು ಯಾವ ಪ್ರಕರಣದ ಸಂಬಂಧದಲ್ಲಿ, 42ನೇ ಪ್ರಕರಣದ [1][(9)][1] ನೇ ಉಪ-ಪ್ರಕರಣದ ಯಾವುದೇ ಖಂಡದ ಅಡಿಯಲ್ಲಿ ಅಥವಾ 45ನೇ ಪ್ರಕರಣದ ಅಡಿಯಲ್ಲಿ ಪ್ರಾರಂಭಿಸಲಾದ ವಸೂಲಿ ವ್ಯವಹರಣೆಗಳು ನಡೆಯುತ್ತಿರುವಾಗ ಯಾವುವೇ ಇತರ ಹೊಸ ವ್ಯವಹರಣೆಗಳನ್ನು ಪ್ರಾರಂಭಿಸಲಾಗಿದ್ದರೆ [2][ಅಥವಾ ತೆರಿಗೆಯಾಗಿ ಅಥವಾ ತೆರಿಗೆಯಾಗಿ ಎಂದು ಕಂಡು ಬರುವ ರೀತಿಯಲ್ಲಿ ಯಾವುದೇ ಮೊಬಲಗನ್ನು ಸಂಗ್ರಹಮಾಡಿದ ವ್ಯಾಪಾರಿಗೆ][2] ಆ ಯಾವುದೇ ಪ್ರಕರಣಕ್ಕೆ ಅನ್ವಯವಾಗತಕ್ಕದ್ದಲ್ಲ.

1. 2006 ರ ಅಧಿನಿಯಮ ಸಂಖ್ಯೆ 4ರ ಮೂಲಕ ದಿನಾಂಕ: 11.3.2005 ರಿಂದ ಪ್ರತಿಯೋಜಿಸಲಾಗಿದೆ.
2. 2006 ರ ಅಧಿನಿಯಮ ಸಂಖ್ಯೆ 4ರ ಮೂಲಕ ದಿನಾಂಕ: 1.4.2006 ರಿಂದ ಸೇರಿಸಲಾಗಿದೆ.

**50. ಮರುಪಾವತಿಗಳ ಮೇಲೆ ಬಡ್ಡಿ ಸಂದಾಯ.–** (1) ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳ ಯಾವುದೇ ಉಪಬಂಧದ ಅಡಿಯಲ್ಲಿ ಮಾಡಿದ ಒಂದು ಆದೇಶದ ಅಥವಾ ಕೈಗೊಂಡ ವ್ಯವಹರಣೆಗಳ ಅಡಿಯಲ್ಲಿ ಯಾವೊಬ್ಬ ವ್ಯಕ್ತಿಗೆ ಸಂದಾಯ ಮಾಡಬೇಕಾದ ಯಾವುದೇ ಮೊಬಲಗನ್ನು,–

(ಎ) ಮರುಪಾವತಿಗಾಗಿ ಆದೇಶಿಸುವ ಪ್ರಾಧಿಕಾರವು ಆ ಆದೇಶವನ್ನು ಮಾಡಿದ್ದಲ್ಲಿ ಅಂಥ ಆದೇಶದ ದಿನಾಂಕದಿಂದ; ಅಥವಾ

(ಬಿ) ಮರುಪಾವತಿಗಾಗಿ ಆದೇಶಿಸುವ ಪ್ರಾಧಿಕಾರದ ಹೊರತಾಗಿ ಯಾವುದೇ ಇತರ ಪ್ರಾಧಿಕಾರವು ಆ ಆದೇಶವನ್ನು ಮಾಡಿದ್ದಲ್ಲಿ ಮರುಪಾವತಿಗಾಗಿ ಆದೇಶಿಸುವ ಪ್ರಾಧಿಕಾರವು ಮಾಡಿದ ಅಂಥ ಆದೇಶದ ಸ್ವೀಕೃತಿಯ ದಿನಾಂಕದಿಂದ,

- ಮೂವತ್ತೈದು ದಿನಗಳೊಳಗೆ ಅವನಿಗೆ ಮರುಪಾವತಿ ಮಾಡದಿದ್ದಲ್ಲಿ ಮರುಪಾವತಿಗಾಗಿ ಆದೇಶಿಸುವ ಪ್ರಾಧಿಕಾರವು, ಈ ಅಧಿನಿಯಮದ ಅಡಿಯಲ್ಲಿ ಯಾವುದೇ ಮರುಪಾವತಿ ಮಾಡಲು ಪ್ರಾಧಿಕೃತನಾದ ವಾಣಿಜ್ಯ ತೆರಿಗೆಗಳ ಇಲಾಖೆಯ ಯಾವೊಬ್ಬ ಅಧಿಕಾರಿಯಾಗಿದ್ದರೆ, ಸದರಿ ಮೂವತ್ತೈದು ದಿನಗಳು ಮುಕ್ತಾಯವಾದ ನಿಕಟ ತರುವಾಯದ ದಿನದಿಂದ ಮರುಪಾವತಿಯ ದಿನದವರೆಗೆ, ಸದರಿ ಮೊಬಲಗಿನ ಮೇಲೆ ವಾರ್ಷಿಕ [1][ಶೇಕಡಾ ಆರರ] ದರದಂತೆ ಸರಳ ಬಡ್ಡಿಯನ್ನು ಅಂಥ ವ್ಯಕ್ತಿಗೆ ಸಂದಾಯ ಮಾಡತಕ್ಕದ್ದು.

1. 2005ರ ಅಧಿನಿಯಮ ಸಂಖ್ಯೆ 6ರ ಮೂಲಕ ದಿನಾಂಕ: 19.3.2005 ರಿಂದ ಪ್ರತಿಯೋಜಿಸಲಾಗಿದೆ.

(2) ಮೇಲಿನ (1)ನೇ ಉಪ-ಪ್ರಕರಣದ ಅಡಿಯಲ್ಲಿ ಲೆಕ್ಕಹಾಕಬಹುದಾದ ಬಡ್ಡಿಯನ್ನು, ಅಂಥ ಬಡ್ಡಿಯನ್ನು ಲೆಕ್ಕಹಾಕಬೇಕಾಗಿದ್ದ ದಿನಾಂಕದಿಂದ ಆ ವ್ಯಕ್ತಿಯಿಂದ ಯಾವುದೇ ವರ್ಷಕ್ಕಾಗಿ, ಈ ಅಧಿನಿಯಮದ ಅಡಿಯಲ್ಲಿ ಬಾಕಿಯಾಗಿರುವ ಯಾವುದೇ ತೆರಿಗೆ, ಬಡ್ಡಿ ಅಥವಾ ಇತರ ಮೊಬಲಗನ್ನು ಮರುಪಾವತಿ ಮಾಡಬೇಕಾದ ಮೊಬಲಗಿನಿಂದ ಹೊಂದಾಣಿಕೆ ಮಾಡಿದ ತರುವಾಯ ಉಳಿದ ಮೊಬಲಗಿನ ಶಿಲ್ಕಿನ ಮೇಲೆ ಲೆಕ್ಕಹಾಕತಕ್ಕದ್ದು.

(3) ಮೇಲಿನ (1)ನೇ ಉಪ-ಪ್ರಕರಣದಲ್ಲಿ ಉಲ್ಲೇಖಿಸಲಾದ ಮೂವತ್ತೈದು ದಿನಗಳ ಅವಧಿಯನ್ನು ಲೆಕ್ಕಹಾಕುವಾಗ, ನಿಯಮಿಸಬಹುದಾದಂತೆ ಅಂಥ ಅವಧಿಗಳನ್ನು ಹೊರತುಪಡಿಸತಕ್ಕದ್ದು.

(4) ತಿಂಗಳ ಒಂದು ಭಾಗಕ್ಕಾಗಿ ಸಂದಾಯಮಾಡಬೇಕಾದ ಬಡ್ಡಿಯನ್ನು ಪ್ರಮಾಣಾನುಸಾರವಾಗಿ ನಿರ್ಧರಿಸತಕ್ಕದ್ದು.

**51. ಕೆಲವು ಪ್ರಕರಣಗಳಲ್ಲಿ ಮರುಪಾವತಿಯನ್ನು ತಡೆಹಿಡಿಯುವ ಅಧಿಕಾರ.**-[1][(1) ಮರುಪಾವತಿ ನೀಡಬೇಕಾಗಿ ಬರುವಂಥ ಒಂದು ಆದೇಶವು, ಒಂದು ಅಪೀಲು ಅಥವಾ ಮುಂದುವರಿದ ವ್ಯವಹರಣೆಯ ವಸ್ತು ವಿಷಯವಾಗಿರುವಲ್ಲಿ ಅಥವಾ ಈ ಅಧಿನಿಯಮದ ಅಡಿಯಲ್ಲಿನ ಯಾವುದೇ ಇತರ ವ್ಯವಹರಣೆ ಬಾಕಿ ಇರುವಲ್ಲಿ ಮತ್ತು ಅಂಥ ಮರುಪಾವತಿಯನ್ನು ಮಂಜೂರು ಮಾಡಲು ಸಕ್ಷಮನಾದ ಪ್ರಾಧಿಕಾರಿಯು ಅಂಥ ಮರುಪಾವತಿಯು ರಾಜಸ್ವಕ್ಕೆ ಪ್ರತಿಕೂಲ ಪರಿಣಾಮವನ್ನುಂಟು ಮಾಡಬಹುದೆಂದು ಅಭಿಪ್ರಾಯ ಪಟ್ಟಲ್ಲಿ, ಅಂಥ ಪ್ರಾಧಿಕಾರಿಯು, ಆಯುಕ್ತರ ಪೂರ್ವ ಅನುಮೋದನೆಯೊಡನೆ ಆಯುಕ್ತರು ತೀರ್ಮಾನಿಸುವಂಥ ಸಮಯದವರೆಗೆ ಮರುಪಾವತಿಯನ್ನು ತಡೆಹಿಡಿಯಬಹುದು.][1]

1. 2006 ರ ಅಧಿನಿಯಮ ಸಂಖ್ಯೆ 4ರ ಮೂಲಕ ದಿನಾಂಕ: 1.4.2006 ರಿಂದ ಪ್ರತಿಯೋಜಿಸಲಾಗಿದೆ.

(2) ಮೇಲಿನ (1)ನೇ ಉಪ-ಪ್ರಕರಣದಲ್ಲಿ ಉಲ್ಲೇಖಿಸಲಾದ ಮರುಪಾವತಿಯ ಆದೇಶದ ದಿನಾಂಕದಿಂದ ಮೂವತ್ತೈದು ದಿನಗಳು ಮುಕ್ತಾಯವಾದ ತರುವಾಯ ಪ್ರಾರಂಭವಾಗುವ ಅವಧಿಗಾಗಿ, ಅಂಥ ವ್ಯವಹರಣೆಗಳ ಪರಿಣಾಮದಿಂದ ವ್ಯಾಪಾರಿಗೆ ಬಾಕಿಯಾಗಿದೆ ಎಂದು ಅಂತಿಮವಾಗಿ ನಿರ್ಧರಿಸಲಾದ ಮರುಪಾವತಿಯ ಮೊಬಲಗಿನ ಮೇಲೆ 50ನೇ ಪ್ರಕರಣದ (1)ನೇ ಉಪ-ಪ್ರಕರಣದ ಅಡಿಯಲ್ಲಿ ವ್ಯಾಪಾರಿಗೆ ಬಡ್ಡಿಯನ್ನು ಸಂದಾಯ ಮಾಡತಕ್ಕದ್ದು.

**52. ದಸ್ತಾವೇಜುಗಳನ್ನು ಹಾಜರುಪಡಿಸುವುದು ಮತ್ತು ಪರಿಶೀಲಿಸುವುದು ಮತ್ತು ಪ್ರವೇಶ, ಶೋಧನೆ ಮತ್ತು ವಶಕ್ಕೆ ತೆಗೆದುಕೊಳ್ಳಲು ಅಧಿಕಾರಗಳು.**- (1) ಈ ಸಂಬಂಧದಲ್ಲಿ ಆಯುಕ್ತನು [1][ಈ ಕೆಳಗೆ ನಿರ್ದಿಷ್ಟಪಡಿಸಿರುವ ಎಲ್ಲ ಅಥವಾ ಯಾವುವೇ ಅಧಿಕಾರಗಳನ್ನು ಸಾಮಾನ್ಯವಾಗಿ ಅಥವಾ ನಿರ್ದಿಷ್ಟವಾಗಿ ಚಲಾಯಿಸಲು][1] ಪ್ರಾಧಿಕೃತಗೊಳಿಸಿದ ಯಾವೊಬ್ಬ ಅಧಿಕಾರಿಯು, ಈ ಮುಂದಿನ ಅಧಿಕಾರಗಳನ್ನು ಹೊಂದಿರತಕ್ಕದ್ದು,-

1. 2008 ರ ಅಧಿನಿಯಮ ಸಂಖ್ಯೆ 5ರ ಮೂಲಕ ದಿನಾಂಕ: 11.3.2005 ರಿಂದ ಸೇರಿಸಲಾಗಿದೆ ಎಂದು ಭಾವಿಸತಕ್ಕದ್ದು.

(ಎ) ಯಾವೊಬ್ಬ ವ್ಯಾಪಾರಿಯ ವ್ಯವಹಾರದ ಸ್ಥಳದಲ್ಲಿ ಅಥವಾ ಇತರ ಯಾವುದೇ ಸ್ಥಳದಲ್ಲಿ ಅಂಥ ವ್ಯವಹಾರವು ನಡೆಯುತ್ತಿದೆ ಎಂದು ಅಥವಾ ಅಂಥ ವ್ಯಾಪಾರಿಯು, ದಸ್ತಾವೇಜುಗಳೂ ಸೇರಿದಂತೆ ಲೆಕ್ಕಪತ್ರಗಳನ್ನು

ಇಟ್ಟಿದ್ದಾನೆಂದು ಅಂಥ ಅಧಿಕಾರಿಯು ನಂಬಿದಲ್ಲಿ, ಅಂಥ ಸ್ಥಳವನ್ನು ಪ್ರವೇಶಿಸುವುದು ಮತ್ತು ಪರಿಶೀಲಿಸುವುದು;

[1][(ಎ–1) ಅಂಥ ವ್ಯಾಪಾರಿಯು ತೆರಿಗೆ ದರಪಟ್ಟಿಗಳು ಅಥವಾ ಮಾರಾಟದ ಬಿಲ್ಲುಗಳನ್ನು ನೀಡುವುದನ್ನು ಪರೀಕ್ಷಿಸುವುದಕ್ಕಾಗಿ ಯಾವೊಬ್ಬ ವ್ಯಾಪಾರಿಯ ವ್ಯವಹಾರದ ಆವರಣದಿಂದ ತಾನು ಪ್ರಾಧಿಕರಿಸಿದ ಯಾವೊಬ್ಬ ವ್ಯಕ್ತಿಯು, ಯಾವುವೇ ಸರಕುಗಳ ಖರೀದಿ ಮಾಡುವಂತೆ ಮಾಡುವುದಕ್ಕೆ ಅಧಿಕಾರ ಹೊಂದಿರತಕ್ಕದ್ದು ಮತ್ತು ಅಂಥ ಅಧಿಕಾರಿಯು ಹಾಗೆ ಖರೀದಿಸಿದ ಸರಕುಗಳನ್ನು ಹಿಂದಿರುಗಿಸಿದ ಮೇಲೆ, ಅಂಥ ವ್ಯಾಪಾರಿಯು ಅಥವಾ ವ್ಯವಹಾರದ ಆವರಣಗಳ ಪ್ರಭಾರದಲ್ಲಿರುವ ಯಾವೊಬ್ಬ ವ್ಯಕ್ತಿಯು ತಾನು ನೀಡಿದ್ದ ಯಾವುದೇ ತೆರಿಗೆ ದರಪಟ್ಟಿ ಅಥವಾ ಮಾರಾಟದ ಬಿಲ್ಲನ್ನು ರದ್ದುಪಡಿಸಿ ಸರಕುಗಳಿಗಾಗಿ ಸಂದಾಯಮಾಡಿದ್ದ ಮೊಬಲಗನ್ನು ಮರುಪಾವತಿ ಮಾಡತಕ್ಕದ್ದು.][1]

1. 2007 ರ ಅಧಿನಿಯಮ ಸಂಖ್ಯೆ 6ರ ಮೂಲಕ ದಿನಾಂಕ: 1.4.2007 ರಿಂದ ಸೇರಿಸಲಾಗಿದೆ.

(ಬಿ) ಒಬ್ಬ ವ್ಯಾಪಾರಿಯ ವ್ಯವಹಾರದ ಕಾರ್ಯಚಟುವಟಿಕೆಗಳಿಗೆ ಸಂಬಂಧಿಸಿದಂತೆ ಲೆಕ್ಕಪತ್ರಗಳು, ರಿಜಿಸ್ಟರುಗಳು ಮತ್ತು ದಸ್ತಾವೇಜುಗಳನ್ನು, ಅಂಥ ಸಮಯದಲ್ಲಿ ಮತ್ತು ಅಂಥ ಸ್ಥಳದಲ್ಲಿ ಪರಿಶೀಲನೆಗಾಗಿ ಹಾಜರುಪಡಿಸುವಂತೆ ಅಂಥ ವ್ಯಾಪಾರಿಗೆ ನಿರ್ದೇಶಿಸುವುದು;

[1][(ಬಿ–1) ಅಂಥ ವ್ಯಾಪಾರಿಯು ವಿದ್ಯುನ್ಮಾನ ತೆರಿಗೆ ರಿಜಿಸ್ಟರನ್ನು ಪರಿಶೀಲನೆಗಾಗಿ ಹಾಜರುಪಡಿಸಲು ನಿರ್ದೇಶಿಸುವುದು;][1]

1. 2009 ರ ಅಧಿನಿಯಮ ಸಂಖ್ಯೆ 5ರ ಮೂಲಕ ದಿನಾಂಕ: 1.4.2009 ರಿಂದ ಸೇರಿಸಲಾಗಿದೆ.

(ಸಿ) ವ್ಯಾಪಾರಿಯ ಸ್ವಾಧೀನತೆಯಲ್ಲಿರುವ ಅಥವಾ ಅಂಥ ವ್ಯಾಪಾರಿಯ ಪರವಾಗಿ ಇತರೆ ಯಾವೊಬ್ಬ ವ್ಯಕ್ತಿಯ ಸ್ವಾಧೀನತೆಯಲ್ಲಿರುವ ಅಂಥ ಸರಕುಗಳನ್ನು, ಎಲ್ಲೆಲ್ಲಿ ಇಡಲಾಗಿದೆಯೋ ಆ ಸ್ಥಳಗಳನ್ನು ಪ್ರವೇಶಿಸುವುದು ಮತ್ತು ಪರಿಶೀಲಿಸುವುದು;

(ಡಿ) ವ್ಯವಹಾರಗಳಿಗೆ ಸಂಬಂಧಪಟ್ಟಂತೆ ವಾಸ್ತವಾಂಶಗಳನ್ನು ಮುಚ್ಚಿಡಲಾಗಿದೆ ಎಂದು ಅನುಮಾನಬಂದಲ್ಲಿ, ವ್ಯಾಪಾರಿಯ ನಿವಾಸ ಸ್ಥಳವೂ ಒಳಗೊಂಡಂತೆ ವ್ಯಾಪಾರಿಯ ಅಥವಾ ಅಲ್ಲಿ ಇರುವ ವ್ಯಾಪಾರಿಯ ಪರವಾಗಿ ಕಾರ್ಯನಿರ್ವಹಿಸುತ್ತಿರುವ ವ್ಯಕ್ತಿಯ ಶೋಧನೆ ಮಾಡುವುದೂ ಸೇರಿದಂತೆ, ಅಂಥ ಸ್ಥಳಗಳನ್ನು ಪ್ರವೇಶಿಸುವುದು ಮತ್ತು ಪರಿಶೀಲಿಸುವುದು;

(ಇ) ಒಬ್ಬ ವ್ಯಾಪಾರಿಯು, ಯಾವುದೇ ರೀತಿಯಲ್ಲಿ ತೆರಿಗೆಯನ್ನು ತಪ್ಪಿಸುವ ಅಥವಾ ತೆರಿಗೆಯಿಂದ ನುಣುಚಿಕೊಳ್ಳುವ ಪ್ರಯತ್ನ ಮಾಡುತ್ತಿದ್ದಾನೆ ಅಥವಾ ತನ್ನ ತೆರಿಗೆ ಬದ್ಧತೆಯನ್ನು ಮರೆಮಾಚುತ್ತಿದ್ದಾನೆಂದು ಅನುಮಾನಿಸಲು ಕಾರಣಗಳಿದ್ದಲ್ಲಿ, ಅಂಥ ಕಾರಣಗಳನ್ನು ಲಿಖಿತದಲ್ಲಿ ದಾಖಲಿಸಿದ ತರುವಾಯ ವ್ಯಾಪಾರಿಯಿಂದ ಯಾವುವೇ ಲೆಕ್ಕಪತ್ರಗಳು, [1][ವಿದ್ಯುನ್ಮಾನ ತೆರಿಗೆ ರಿಜಿಸ್ಟರುಗಳು ಒಳಗೊಂಡಂತೆ][1] ರಿಜಿಸ್ಟರುಗಳು ಅಥವಾ ದಸ್ತಾವೇಜುಗಳನ್ನು ವಶಕ್ಕೆತೆಗೆದುಕೊಳ್ಳುವುದು ಮತ್ತು ಯಾರ ಅಭಿರಕ್ಷೆಯಿಂದ ಅಂಥ ಲೆಕ್ಕ ಪತ್ರಗಳು, [1][ವಿದ್ಯುನ್ಮಾನ ತೆರಿಗೆ ರಿಜಿಸ್ಟರುಗಳು ಒಳಗೊಂಡಂತೆ][1] ದಾಖಲೆಗಳು ಅಥವಾ ದಸ್ತಾವೇಜುಗಳನ್ನು ವಶಕ್ಕೆ ತೆಗೆದುಕೊಳ್ಳಲಾಗಿದೆಯೋ ಆ ವ್ಯಾಪಾರಿಗೆ ಅಥವಾ ಯಾವೊಬ್ಬ ಇತರ ವ್ಯಕ್ತಿಗೆ ಆ ಬಗ್ಗೆ ಸ್ವೀಕೃತಿ ಪತ್ರವನ್ನು ಮತ್ತು ಅವನು ಕೋರಿಕೊಂಡಲ್ಲಿ, ಅದರ ಪ್ರತಿಗಳನ್ನು ನೀಡತಕ್ಕದ್ದು ಮತ್ತು ತಾನು ಅವಶ್ಯಕವೆಂದು ಪರಿಗಣಿಸಬಹುದಾದ ಅಂಥ ಅವಧಿಯವರೆಗೆ ಪರಿಶೀಲನೆ, ವಿಚಾರಣೆ, ಪ್ರಾಷಿಕ್ಯೂಷನ್ ಅಥವಾ ಇತರ ಕಾನೂನು ವ್ಯವಹರಣೆಗಳಿಗಾಗಿ ಅವುಗಳನ್ನು ತನ್ನ ಅಭಿರಕ್ಷೆಯಲ್ಲಿ ಇಟ್ಟುಕೊಳ್ಳಬಹುದು.

1. 2009 ರ ಅಧಿನಿಯಮ ಸಂಖ್ಯೆ 5ರ ಮೂಲಕ ದಿನಾಂಕ: 1.4.2009 ರಿಂದ ಸೇರಿಸಲಾಗಿದೆ.

(ಎಫ್) ಲೆಕ್ಕಪತ್ರಗಳನ್ನು ಅಥವಾ ತೆರಿಗೆಗೆ ಗುರಿಯಾಗತಕ್ಕ ಸರಕುಗಳನ್ನು ಇಡಲಾಗಿದೆಯೆಂದು ಅಥವಾ ದಾಸ್ತಾನು ಮಾಡಲಾಗಿದೆಯೆಂದು ಅನುಮಾನ ಬರುವಂಥ ಯಾವುದೇ ಪೆಟ್ಟಿಗೆ ಅಥವಾ ಧಾರಕ, ಗೋದಾಮು ಅಥವಾ ಕಟ್ಟಡ ಅಥವಾ ಗೋದಾಮಿನ ಅಥವಾ ಕಟ್ಟಡದ ಯಾವುದೇ ಭಾಗವನ್ನು ಅಲ್ಲಿ ವ್ಯವಹಾರ ನಡೆಸುತ್ತಿರುವ ಮಾಲೀಕ ಅಥವಾ ಅದರ ಪ್ರಭಾರದಲ್ಲಿರುವ ವ್ಯಕ್ತಿ ಅಥವಾ ವ್ಯವಹಾರದ ಪ್ರಭಾರದಲ್ಲಿರುವ ಇತರ ಯಾವೊಬ್ಬ ವ್ಯಕ್ತಿ ಅಥವಾ ಅನುಭೋಗದಲ್ಲಿರುವ ಇತರ ಯಾವೊಬ್ಬ ವ್ಯಕ್ತಿಯು ಆವರಣವನ್ನು ಬಿಟ್ಟುಹೋಗಿದ್ದಲ್ಲಿ ಅಥವಾ ಅವನು ಅಲ್ಲಿ ಇರದಿದ್ದಲ್ಲಿ ಅಥವಾ ಯಾವುದೇ ಪೆಟ್ಟಿಗೆ ಅಥವಾ ಧಾರಕವನ್ನು, ಗೋದಾಮು

ಅಥವಾ ಕಟ್ಟಡ ಅಥವಾ ಗೋದಾಮು ಅಥವಾ ಕಟ್ಟಡದ ಯಾವುದೇ ಭಾಗವನ್ನು ತೆರೆಯಲು ಹೇಳಿದಾಗ ಹಾಗೆ ಮಾಡಲು ವಿಫಲನಾದಲ್ಲಿ ಅಥವಾ ತಿರಸ್ಕರಿಸಿದಲ್ಲಿ ಆ ಯಾವುದನ್ನೂ ಮೊಹರು (ಸೀಲ್) ಮಾಡುವುದು.

(ಜಿ) ವ್ಯವಹಾರವನ್ನು ನಡೆಸುತ್ತಿರುವ ಮಾಲೀಕ ಅಥವಾ ಅದರ ಪ್ರಭಾರದಲ್ಲಿರುವ ವ್ಯಕ್ತಿ ಅಥವಾ ಅನುಭೋಗದಲ್ಲಿರುವ ವ್ಯಕ್ತಿಯು, ಆವರಣವನ್ನು ಬಿಟ್ಟುಹೋಗಿದ್ದಲ್ಲಿ ಅಥವಾ ಧಾರಕ, ಗೋದಾಮು ಅಥವಾ ಕಟ್ಟಡ ಅಥವಾ ಗೋದಾಮಿನ ಅಥವಾ ಕಟ್ಟಡದ ಭಾಗವನ್ನು ತೆರೆಯಲು ಅವನಿಗೆ ಅವಕಾಶವನ್ನು ಕೊಟ್ಟ ತರುವಾಯ ಅವನು ಹಾಗೆ ಮಾಡಲು ವಿಫಲನಾದಲ್ಲಿ, ಧಾರಕ ಅಥವಾ ಗೋದಾಮು ಅಥವಾ ಕಟ್ಟಡ ಅಥವಾ ಗೋದಾಮಿನ ಅಥವಾ ಕಟ್ಟಡದ ಭಾಗವನ್ನು ಒಡೆದು ತೆರೆಯುವುದು ಮತ್ತು ಅದರಲ್ಲಿ ಕಂಡುಬಂದ ಸರಕುಗಳು ಮತ್ತು ದಸ್ತಾವೇಜುಗಳ ಒಂದು ಪಟ್ಟಿಯನ್ನು ತಯಾರಿಸುವುದು.

(ಹೆಚ್) ಯಾವೊಬ್ಬ ವ್ಯಾಪಾರಿ ಅಥವಾ ಅವನ ವ್ಯವಸ್ಥಾಪಕ, ಏಜೆಂಟ್ ಅಥವಾ ನೌಕರನ ಹೇಳಿಕೆಯನ್ನು ದಾಖಲಿಸುವುದು, ಯಾವುದೇ ಆವರಣದಲ್ಲಿ ಕಂಡುಬರುವ ದಾಖಲೆಗಳಿಂದ ಉದ್ಧೃತ ಭಾಗವನ್ನು ತೆಗೆದುಕೊಳ್ಳುವುದು ಮತ್ತು ಲೆಕ್ಕಪತ್ರಗಳು, ರಿಜಿಸ್ಟರುಗಳು ಅಥವಾ ದಸ್ತಾವೇಜುಗಳ ಮೇಲೆ ಗುರುತು ಚಿಹ್ನೆಗಳನ್ನು ಹಾಕುವುದು.

(ಐ) ತಪ್ಪು ಅಥವಾ ಮೋಸದ ವಿರುದ್ಧ ರಾಜಸ್ವವನ್ನು ರಕ್ಷಿಸುವುದು ಅವಶ್ಯಕವೆಂದು ಅವನು ಪರಿಗಣಿಸಿದಲ್ಲಿ, ಯಾವೊಬ್ಬ ವ್ಯಾಪಾರಿಯ ಸ್ವಾಧೀನದಿಂದ ಸರಕುಗಳ ಮಾದರಿಗಳನ್ನು ತೆಗೆದುಕೊಳ್ಳುವುದು ಮತ್ತು ಹಾಗೆ ತೆಗೆದುಕೊಂಡ ಯಾವುವೇ ಮಾದರಿಗಳಿಗಾಗಿ ಒಂದು ಸ್ವೀಕೃತಿ ಪತ್ರವನ್ನು ನೀಡುವುದು, ಮತ್ತು ಅಪರಾಧವು ಕಂಡುಬಂದ ಹೊರತು [1][ಅಂಥ ಅಧಿಕಾರಿಯು][1] ಮಾದರಿಗಳನ್ನು ವ್ಯಾಪಾರಿಗೆ ಹಿಂತಿರುಗಿಸತಕ್ಕದ್ದು ಅಥವಾ ಆ ವ್ಯಾಪಾರಿಯ ಸಮ್ಮತಿಯೊಂದಿಗೆ ವಿಲೆ ಮಾಡತಕ್ಕದ್ದು.

1. 2007 ರ ಅಧಿನಿಯಮ ಸಂಖ್ಯೆ 6ರ ಮೂಲಕ ದಿನಾಂಕ: 1.4.2007 ರಿಂದ ಪ್ರತಿಯೋಜಿಸಲಾಗಿದೆ.

(ಜೆ) ಒಬ್ಬ ವ್ಯಾಪಾರಿಯ ಅಥವಾ ಒಬ್ಬ ವ್ಯಾಪಾರಿಯ ಪರವಾಗಿ ಯಾವೊಬ್ಬ ವ್ಯಕ್ತಿಯ ಸ್ವಾಧೀನತೆಯಲ್ಲಿವೆಯೆಂದು ಕಂಡುಬಂದ ಮತ್ತು ಅವನ ವ್ಯವಹಾರದ ಕ್ರಮದಲ್ಲಿ ನಿರ್ವಹಿಸಲಾಗುತ್ತಿದ್ದ ಲೆಕ್ಕಪತ್ರಗಳು, ದಾಖಲೆಗಳು ಅಥವಾ ದಸ್ತಾವೇಜುಗಳಲ್ಲಿ ಅವನ ಲೆಕ್ಕಕ್ಕೆ ತೆಗೆದುಕೊಳ್ಳದಿದ್ದ, ತೆರಿಗೆಗೆ ಬದ್ಧವಾದ ಯಾವುದೇ ದಾಸ್ತಾನನ್ನು ವಶಕ್ಕೆತೆಗೆದುಕೊಳ್ಳುವುದು, ಆದರೆ, ಅವುಗಳ ಮೌಲ್ಯವು, ಅವನ ತೆರಿಗೆ ಬದ್ಧತೆ ಮತ್ತು ಬಡ್ಡಿಯೂ ಸೇರಿದಂತೆ ಯಾವುದೇ ದಂಡ ಇವುಗಳನ್ನು ಮೀರತಕ್ಕದ್ದಲ್ಲ ಮತ್ತು ಹಾಗೆ ವಶಕ್ಕೆ ತೆಗೆದುಕೊಂಡ ಸರಕುಗಳ ಒಂದು ಪಟ್ಟಿಯನ್ನು ಅಂಥ ಅಧಿಕಾರಿಯು ತಯಾರಿಸತಕ್ಕದ್ದು ಮತ್ತು ಅದರ ಒಂದು ಪ್ರತಿಯನ್ನು ವ್ಯಾಪಾರಿಗೆ ಅಥವಾ ಯಾರ ಅಭಿರಕ್ಷೆಯಿಂದ ವಶಕ್ಕೆ ತೆಗೆದುಕೊಳ್ಳಲಾಯಿತೋ ಆ ಸರಕುಗಳನ್ನು ಯಾವೊಬ್ಬ ಇತರ ವ್ಯಕ್ತಿಗೆ ನೀಡತಕ್ಕದ್ದು.

(ಕೆ) ಮೇಲಿನ (1)ನೇ ಉಪಪ್ರಕರಣದ ಅಡಿಯಲ್ಲಿ ಲೆಕ್ಕಪತ್ರಗಳು, ದಾಖಲೆಗಳು ಅಥವಾ ದಸ್ತಾವೇಜುಗಳನ್ನು ಅಥವಾ (3)ನೇ ಉಪ-ಪ್ರಕರಣದ ಅಡಿಯಲ್ಲಿ ಸರಕುಗಳನ್ನು ವಶಕ್ಕೆ ತೆಗೆದುಕೊಳ್ಳುವುದು ಸಾಧ್ಯವಾಗದಿರುವ ಸಂದರ್ಭಗಳಲ್ಲಿ ಸಂಬಂಧಪಟ್ಟ ಅಧಿಕಾರಿಯು, ಅವುಗಳ ಮಾಲೀಕ ಅಥವಾ ನಿಕಟ ಸ್ವಾಧೀನತೆ ಹೊಂದಿರುವ ಅಥವಾ ನಿಯಂತ್ರಣ ಹೊಂದಿರುವ ವ್ಯಕ್ತಿಗೆ, ಅಂಥ ಅಧಿಕಾರಿಯ ಪೂರ್ವಾನುಮತಿ ಪಡೆದ ಹೊರತು ಅವುಗಳನ್ನು ತೆಗೆದುಹಾಕತಕ್ಕದ್ದಲ್ಲ, ಬಿಟ್ಟುಕೊಡತಕ್ಕದ್ದಲ್ಲ, ಅಥವಾ ಅನ್ಯಥಾ ವ್ಯವಹರಿಸತಕ್ಕದ್ದಲ್ಲವೆಂಬ ಆದೇಶವನ್ನು ಜಾರಿಮಾಡುವುದು ಮತ್ತು ಅವನು ಅಂಥ ಆದೇಶವನ್ನು ಜಾರಿಗೊಳಿಸಿದ ತರುವಾಯ, ಆದೇಶದಲ್ಲಿ ಉಲ್ಲೇಖಿಸಿದ ವಸ್ತುಗಳನ್ನು ಪಡೆದುಕೊಳ್ಳುವುದಕ್ಕಾಗಿ ಅವಶ್ಯಕವೆಂದು ಭಾವಿಸಬಹುದಾದ ಅಂಥ ಕ್ರಮಗಳನ್ನು ಕೈಗೊಳ್ಳುವುದು.

(ಎಲ್) ಮೇಲ್ಕಂಡ 38ನೇ ಪ್ರಕರಣದ (5)ನೇ ಉಪ-ಪ್ರಕರಣದಲ್ಲಿ ನಿರ್ದಿಷ್ಟಪಡಿಸಲಾದಂತೆ ರಕ್ಷಣಾತ್ಮಕ ತೆರಿಗೆ ನಿರ್ಧರಣೆಯನ್ನು ನೀಡುವುದು.

[1][(1-ಎ) ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾ ಲೆಕ್ಕಪರಿಶೋಧಕರು ಪ್ರಾಧೀಕರಿಸಿದ ಲೆಕ್ಕಪರಿಶೋಧನಾ ಸಿಬ್ಬಂದಿ ತಂಡವು ಯಾವೊಬ್ಬ ನೋಂದಾಯಿತ ವ್ಯಾಪಾರಿಗೆ ತಾನು ನಿರ್ದಿಷ್ಟಪಡಿಸಬಹುದಾದಂಥ ಸಮಯ ಮತ್ತು ಸ್ಥಳದಲ್ಲಿ ಆತನ ವ್ಯವಹಾರದ ಚಟುವಟಿಕೆಗಳಿಗೆ ಸಂಬಂಧಪಟ್ಟ ಲೆಕ್ಕಪತ್ರಗಳು, ರಿಜಿಸ್ಟರುಗಳು, ವಿದ್ಯುನ್ಮಾನ ತೆರಿಗೆ

ರಿಜಿಸ್ಟರುಗಳು ಮತ್ತು ದಸ್ತಾವೇಜುಗಳನ್ನು ಪರಿಶೀಲನೆಗಾಗಿ ಹಾಜರುಪಡಿಸಲು ನಿರ್ದೇಶನ ನೀಡುವ ಅಧಿಕಾರವನ್ನು ಹೊಂದಿರತಕ್ಕದ್ದು.][1]

1. 2009 ರ ಅಧಿನಿಯಮ ಸಂಖ್ಯೆ 5ರ ಮೂಲಕ ದಿನಾಂಕ: 1.4.2009 ರಿಂದ ಸೇರಿಸಲಾಗಿದೆ.

(2) ಮೇಲಿನ 31 ಮತ್ತು 33ನೇ ಪ್ರಕರಣಗಳ ಅಡಿಯಲ್ಲಿನ ದಾಖಲೆಗಳು ಮತ್ತು ಲೆಕ್ಕಪತ್ರಗಳನ್ನು ಎಲೆಕ್ಟ್ರಾನಿಕ್ ಉಪಕರಣಗಳ ಮೂಲಕ ನಿರ್ವಹಿಸಲಾಗಿದ್ದಲ್ಲಿ, ವ್ಯಾಪಾರಿಯು, ಅಂಥ ಲೆಕ್ಕ ಪತ್ರಗಳು ಮತ್ತು ದಾಖಲೆಗಳಿಗೆ ಸಂಬಂಧಿಸಿದಂತೆ ಮೇಲ್ಕಂಡ [1][(1)ನೇ ಅಥವಾ (1–ಎ) ಉಪ ಪ್ರಕರಣಗಳ ಅಡಿಯಲ್ಲಿ ಪ್ರಾಧಿಕೃತನಾದ ಅಧಿಕಾರಿ ಅಥವಾ ಲೆಕ್ಕಪರಿಶೋಧನಾ ಸಿಬ್ಬಂದಿ ತಂಡವು][1] ಅಗತ್ಯಪಡಿಸಬಹುದಾದಂತೆ ಅವುಗಳನ್ನು ಪರಿಶೀಲಿಸಲು ಅವಕಾಶ ನೀಡತಕ್ಕದ್ದು.

1. 2009 ರ ಅಧಿನಿಯಮ ಸಂಖ್ಯೆ 5ರ ಮೂಲಕ ದಿನಾಂಕ: 1.4.2009 ರಿಂದ ಪ್ರತಿಯೋಜಿಸಲಾಗಿದೆ.

(3) ಮೇಲಿನ ಉಪ-ಪ್ರಕರಣದ (ಡಿ) ಯಿಂದ (ಜಿ), (ಐ) ಮತ್ತು (ಜೆ) ಖಂಡಗಳ ಅಡಿಯಲ್ಲಿ ಅಧಿಕಾರಿಗೆ ಪ್ರದತ್ತವಾದ ಅಧಿಕಾರಗಳನ್ನು ದಂಡ ಪ್ರಕ್ರಿಯಾ ಸಂಹಿತೆ, 1973ರ (1974ರ ಕೇಂದ್ರ ಅಧಿನಿಯಮ 2) ಉಪಬಂಧಗಳಿಗನುಸಾರವಾಗಿ ಆತನು ಚಲಾಯಿಸತಕ್ಕದ್ದು ಮತ್ತು ವ್ಯಾಪಾರಿಯ ವಾಸ ಸ್ಥಳದ ಪ್ರವೇಶಕ್ಕೆ ಅಧಿಕಾರವನ್ನು, ಜಂಟಿ ಆಯುಕ್ತನ ದರ್ಜೆಗೆ ಕಡಿಮೆಯಲ್ಲದ ದರ್ಜೆಯ ಒಬ್ಬ ಅಧಿಕಾರಿಯು ಪ್ರಾಧಿಕೃತಗೊಳಿಸತಕ್ಕದ್ದು.

(4) ಮೇಲ್ಕಂಡ (1)ನೇ ಉಪ-ಪ್ರಕರಣದ ಅಡಿಯಲ್ಲಿ, ಕಂಪ್ಯೂಟರ್ ಹಾರ್ಡ್‌ವೇರ್ ಮತ್ತು ಸಾಫ್ಟ್‌ವೇರ್ ಮತ್ತು ಇತರ ದಸ್ತಾವೇಜುಗಳೂ ಒಳಗೊಂಡಂತೆ ವಶಕ್ಕೆ ತೆಗೆದುಕೊಳ್ಳಲಾದ ಲೆಕ್ಕಪತ್ರಗಳು, ರಿಜಿಸ್ಟರುಗಳು, ದಾಖಲೆಗಳನ್ನು ಅಂಥ ಅಧಿಕಾರಿಯು ಅವುಗಳನ್ನು ವಶಕ್ಕೆ ತೆಗೆದುಕೊಂಡ ದಿನಾಂಕದಿಂದ ಒಂದು ನೂರಾ ಎಂಭತ್ತು ದಿನಗಳನ್ನು ಮೀರಿದ ಅವಧಿಗಾಗಿ, ಆದರೆ, ಸದರಿ ಅವಧಿಯನ್ನು ಮೀರಿ ಅವುಗಳನ್ನು ತನ್ನಲ್ಲಿ ಉಳಿಸಿಕೊಳ್ಳುವುದಕ್ಕೆ ಅವನಿಂದ ಲಿಖಿತದಲ್ಲಿ ದಾಖಲಿಸಿದ ಕಾರಣಗಳಿದ್ದ ಹೊರತು ಮತ್ತು ಅದಕ್ಕೆ ತನ್ನ ನಿಕಟಪೂರ್ವದ ಹಿರಿಯ ಅಧಿಕಾರಿಯ ಅನುಮೋದನೆಯನ್ನು ಪಡೆದಿದ್ದ ಹೊರತು ತನ್ನಲ್ಲಿ ಇಟ್ಟುಕೊಳ್ಳತಕ್ಕದ್ದಲ್ಲ ಮತ್ತು ಯಾವುದೇ ಸಂದರ್ಭದಲ್ಲಿ ಅಂಥ ಅನುಮೋದನೆಯು ಒಂದು ಬಾರಿಗೆ ಅರವತ್ತು ದಿನಗಳನ್ನು ಮೀರತಕ್ಕದ್ದಲ್ಲ.

(5) ವ್ಯವಹಾರದ ಯಾವುದೇ ಸ್ಥಳದಲ್ಲಿ ಕಂಡುಬಂದ ಸರಕುಗಳು, ಲೆಕ್ಕಪತ್ರಗಳು, ರಿಜಿಸ್ಟ್ರರುಗಳು ಅಥವಾ ದಸ್ತಾವೇಜುಗಳಿಗೆ ಸಂಬಂಧಪಟ್ಟಂತೆ ಅವನ ವ್ಯವಹಾರವು ಆ ಸ್ಥಳದಲ್ಲಿ ನಡೆಯುತ್ತಿದೆ ಎಂಬುದಕ್ಕೆ ವಿರುದ್ಧವಾದುದನ್ನು ವ್ಯಾಪಾರಿಯು ರುಜುವಾತು ಪಡಿಸಿದ ಹೊರತು ಅವುಗಳು ಆ ವ್ಯವಹಾರಕ್ಕೆ ಸಂಬಂಧಪಟ್ಟಿವೆ ಎಂಬ ಪೂರ್ವಭಾವನೆ ಇರತಕ್ಕದ್ದು.

(6) ಮೇಲಿನ (1)ನೇ ಉಪ-ಪ್ರಕರಣದ (ಜೆ) ಖಂಡದ ಅಡಿಯಲ್ಲಿ ಸರಕುಗಳನ್ನು ಮುಟ್ಟುಗೋಲು ಹಾಕಿಕೊಂಡುದರ ವಿರುದ್ಧ ಮುಟ್ಟುಗೋಲು ಹಾಕಿಕೊಂಡ ಸರಕುಗಳ ವ್ಯಾಪಾರಿ ಅಥವಾ ವ್ಯಕ್ತಿಯು ಅಪೀಲನ್ನು ಸಲ್ಲಿಸಲು ಏಳು ದಿನಗಳ ಅವಕಾಶವಿರತಕ್ಕದ್ದು.

(7) ಮೇಲಿನ (6)ನೇ ಉಪ-ಪ್ರಕರಣಕ್ಕೆ ಒಳಪಟ್ಟು, ನಿಯಮಿಸಲಾದ ಅವಧಿಯ ಮುಕ್ತಾಯದ ತರುವಾಯ, ಯಾವುದೇ ನಿರ್ಧರಣೆಯನ್ನು ಮಾಡಿದ ತೆರಿಗೆಯನ್ನು ಅಥವಾ ಬಾಕಿ ಇರುವ ದಂಡ ಅಥವಾ ಬಡ್ಡಿಯನ್ನು ಸಂದಾಯ ಮಾಡದಿದ್ದಲ್ಲಿ, ಅಧಿಕಾರಿಯು, ಸರಕುಗಳನ್ನು ಸಾರ್ವಜನಿಕ ಹರಾಜಿನ ಮೂಲಕ ವಿಲೆ ಮಾಡತಕ್ಕದ್ದು ಮತ್ತು ಮಾರಾಟದಿಂದ ಬಂದ ಅಂಥ ಮೊಬಲಗನ್ನು ಬಾಕಿ ಮೊಬಲಗಿಗೆ ಹೊಂದಾಣಿಕೆ ಮಾಡತಕ್ಕದ್ದು ಮತ್ತು ಹೆಚ್ಚುವರಿಯಾದ ಮೊಬಲಗನ್ನು, ರಾಜ್ಯದಿಂದ ಭರಿಸಲಾದ ವೆಚ್ಚಗಳನ್ನು ಕಡಿತಗೊಳಿಸಿದ ತರುವಾಯ, ನಿಯಮಿಸಲಾದ ರೀತಿಯಲ್ಲಿ ಮರುಸಂದಾಯ ಮಾಡತಕ್ಕದ್ದು.

**53. ಚೆಕ್‌ಪೋಸ್ಟ್‌ಗಳ ಸ್ಥಾಪನೆ ಮತ್ತು ಸಾಗಣೆಯಲ್ಲಿರುವ ಸರಕುಗಳ ಪರಿಶೀಲನೆ.–** (1) ರಾಜ್ಯದಲ್ಲಿನ ಯಾವುದೇ ಸ್ಥಳ ಅಥವಾ ಸ್ಥಳಗಳಲ್ಲಿ, ಈ ಅಧಿನಿಯಮದ ಅಡಿಯಲ್ಲಿ ತೆರಿಗೆಯನ್ನು ತಪ್ಪಿಸುವುದನ್ನು ತಡೆಹಿಡಿಯುವ ಅಥವಾ ಪ್ರತಿಬಂಧಿಸುವ ದೃಷ್ಟಿಯಿಂದ ರಾಜ್ಯ ಸರ್ಕಾರ ಅಥವಾ ಆಯುಕ್ತನು ಅವಶ್ಯಕವೆಂದು ಪರಿಗಣಿಸಿದಲ್ಲಿ ಅದು ಅಥವಾ ಅವನು, ಅಧಿಸೂಚಿಸಬಹುದಾದಂತೆ ಅಂಥ ಸ್ಥಳ ಅಥವಾ ಸ್ಥಳಗಳಲ್ಲಿ ಚೆಕ್‌ಪೋಸ್ಟ್‌ನ್ನು ಅಥವಾ ಸುಂಕದ ಕಟ್ಟೆಯನ್ನು ಅಥವಾ ಅವೆರಡನ್ನು ಸ್ಥಾಪಿಸುವಂತೆ ಅಧಿಸೂಚನೆಯ ಮೂಲಕ, ನಿರ್ದೇಶಿಸಬಹುದು.

(2) ಒಂದು ಸರಕು ವಾಹನ ಅಥವಾ ನಾವೆ, ಹಡಗು ಅಥವಾ ಅಂಥದೇ ನೌಕೆಯ ಮಾಲೀಕ ಅಥವಾ ಪ್ರಭಾರ ಹೊಂದಿದ ವ್ಯಕ್ತಿಯು,-

(ಎ) ತನ್ನ ಜೊತೆಯಲ್ಲಿ ಸಂದರ್ಭಾನುಸಾರ ಸರಕು ವಾಹನದ ದಾಖಲೆ, ಟ್ರಿಪ್‌ಶೀಟ್ ಅಥವಾ ಲಾಗ್ ಪುಸ್ತಕವನ್ನು ಒಯ್ಯತಕ್ಕದ್ದು; ಮತ್ತು

(ಬಿ) ಸರಕುಗಳ ವಾಹನ ಅಥವಾ ನಾವೆ, ಹಡಗು ಅಥವಾ ಅಂಥದೇ ನೌಕೆಯಲ್ಲಿ ಸಾಗಿಸುತ್ತಿರುವ ಸರಕುಗಳಿಗೆ ಸಂಬಂಧಪಟ್ಟಂತೆ, [1][ನಿಯಮಿಸಬಹುದಾದಂಥ [2][ಅಥವಾ ಆಯುಕ್ತರು ಅಧಿಸೂಚಿಸಬಹುದಾದಂತೆ][2] ದಸ್ತಾವೇಜುಗಳನ್ನು][1] ತನ್ನ ಜೊತೆಯಲ್ಲಿ ತೆಗೆದುಕೊಂಡು ಒಯ್ಯತಕ್ಕದ್ದು; ಮತ್ತು

1. 2007 ರ ಅಧಿನಿಯಮ ಸಂಖ್ಯೆ 6ರ ಮೂಲಕ ದಿನಾಂಕ: 11.3.2005 ರಿಂದ ಪ್ರತಿಯೋಜಿಸಲಾಗಿದೆ.
2. 2009ರ ಅಧಿನಿಯಮ ಸಂಖ್ಯೆ:5ರ ಮೂಲಕ ದಿನಾಂಕ: 1.4.2009ರಿಂದ ಸೇರಿಸಲಾಗಿದೆ

(ಸಿ) [1][ತಾನು ಹೋಗಬೇಕಾದ ಸ್ಥಳಕ್ಕೆ ಸರಕಿನ ಸಾಗಣೆಯು ರಾಜ್ಯದಲ್ಲಿನ ಯಾವ ಸ್ಥಳದಿಂದ ಪ್ರಾರಂಭವಾಗುತ್ತದೋ ಆ ಸ್ಥಳದಿಂದ ಸಾಧಾರಣವಾಗಿ ಸಾಗುವ ಮಾರ್ಗದಲ್ಲಿ ಇರುವಂಥ ಮೊದಲ ಚೆಕ್‌ಪೋಸ್ಟ್‌ನಲ್ಲಿ ಅಥವಾ ಸುಂಕದ ಕಟ್ಟೆಯಲ್ಲಿ ಸದರಿ ಚೆಕ್‌ಪೋಸ್ಟಿನ ಅಥವಾ ಸುಂಕದ ಕಟ್ಟೆಯ ಪ್ರಭಾರದಲ್ಲಿರುವ ಯಾವೊಬ್ಬ ಅಧಿಕಾರಿಯ ಅಥವಾ ಇದಕ್ಕಾಗಿಯೇ ರಾಜ್ಯ ಸರ್ಕಾರದಿಂದ [2][ಅಥವಾ ಆಯುಕ್ತರಿಂದ][2] ಪ್ರಾಧಿಕೃತನಾಗಬಹುದಾದ ಯಾವೊಬ್ಬ ಇತರ ಅಧಿಕಾರಿಯ ಎದುರಿಗೆ ವರದಿ ಮಾಡಿಕೊಳ್ಳತಕ್ಕದ್ದು ಮತ್ತು (ಎ) ಮತ್ತು (ಬಿ) ಖಂಡಗಳಲ್ಲಿ] ಉಲ್ಲೇಖಿಸಲಾದ ದಸ್ತಾವೇಜುಗಳನ್ನು ಹಾಜರುಪಡಿಸತಕ್ಕದ್ದು ಮತ್ತು ಅದರ ಮೇಲೆ ಅಂಥ ಅಧಿಕಾರಿಯ ಮೊಹರನ್ನು ಪಡೆಯತಕ್ಕದ್ದು ಮತ್ತು ಮಾರಾಟದ ಬಿಲ್ಲಿಗೆ ಸಂಬಂಧಪಟ್ಟಂತೆ ಅದರ ಒಂದು ಪ್ರತಿಯನ್ನು ನೀಡತಕ್ಕದ್ದು ಮತ್ತು ರವಾನೆ ಚೀಟಿಗೆ ಸಂಬಂಧಪಟ್ಟಂತೆ ಮೂಲಪ್ರತಿಯೆಂದು ಗುರುತಿಸಲಾದ ಒಂದು ಪ್ರತಿಯನ್ನು ಅಂಥ ಅಧಿಕಾರಿಗೆ ನೀಡತಕ್ಕದ್ದು ಮತ್ತು ಇನ್ನೊಂದು ಪ್ರತಿಯನ್ನು ಸರಕುಗಳ ಸಾಗಣೆಯು ಕೊನೆಗೊಳ್ಳುವವರೆಗೆ ತನ್ನಲ್ಲಿ ಉಳಿಸಿಕೊಳ್ಳತಕ್ಕದ್ದು; ಮತ್ತು

1. 2005ರ ಅಧಿನಿಯಮ ಸಂಖ್ಯೆ 6ರ ಮೂಲಕ ದಿನಾಂಕ: 19.3.2005 ರಿಂದ ಪ್ರತಿಯೋಜಿಸಲಾಗಿದೆ.
2. 2010ರಿಂದ ಅಧಿನಿಯಮ ಸಂಖ್ಯೆ 4ರ ಮೂಲಕ ದಿನಾಂಕ 1.4.2010ರಿಂದ ಸೇರಿಸಲಾಗಿದೆ.

(ಡಿ) ರಾಜ್ಯದ ಗಡಿಯನ್ನು ಪ್ರವೇಶಿಸಿದ ಮೇಲೆ, ಅಲ್ಲಿರುವ ಮೊದಲನೇ ಚೆಕ್‌ಪೋಸ್ಟ್ ಅಥವಾ ಸುಂಕದ ಕಟ್ಟೆಯಲ್ಲಿ ವರದಿ ಮಾಡಿಕೊಳ್ಳತಕ್ಕದ್ದು ಮತ್ತು ರಾಜ್ಯದ ಗಡಿಯನ್ನು ಬಿಡುವಾಗ ಕೊನೆಯಲ್ಲಿ ಸ್ಥಾಪನೆಗೊಂಡ ಚೆಕ್‌ಪೋಸ್ಟ್ ಅಥವಾ ಸುಂಕದ ಕಟ್ಟೆಯಲ್ಲಿ ವರದಿ ಮಾಡಿಕೊಳ್ಳತಕ್ಕದ್ದು ಮತ್ತು ಚೆಕ್‌ಪೋಸ್ಟ್‌ನ ಅಥವಾ ಸುಂಕದ ಕಟ್ಟೆಯ ಪ್ರಭಾರದಲ್ಲಿರುವ ಯಾವೊಬ್ಬ ಅಧಿಕಾರಿಯ ಅಥವಾ ಈ ಬಗ್ಗೆ ರಾಜ್ಯ ಸರ್ಕಾರದಿಂದ [1][ಅಥವಾ ಆಯುಕ್ತರಿಂದ][1] ಪ್ರಾಧಿಕೃತನಾಗಿರಬಹುದಾದ ಯಾವೊಬ್ಬ ಇತರೆ ಅಧಿಕಾರಿಯ ಎದುರಿಗೆ, ಸರಕುಗಳ ವಾಹನ ಅಥವಾ ನಾವೆ, ಹಡಗು ಅಥವಾ ಅಂಥದೇ ನೌಕೆಯಲ್ಲಿ ತೆಗೆದುಕೊಂಡು ಹೋಗುವ ಸರಕುಗಳಿಗೆ ಸಂಬಂಧಪಟ್ಟಂತೆ ನಿಯಮಿಸಬಹುದಾದಂತೆ ಅಂಥ ವಿವರಗಳನ್ನೊಳಗೊಂಡ ಒಂದು ಘೋಷಣಾ ಪತ್ರವನ್ನು ನೀಡತಕ್ಕದ್ದು; ಮತ್ತು

1. 2010ರಿಂದ ಅಧಿನಿಯಮ ಸಂಖ್ಯೆ 4ರ ಮೂಲಕ ದಿನಾಂಕ 1.4.2010ರಿಂದ ಸೇರಿಸಲಾಗಿದೆ.

(ಇ) ಚೆಕ್‌ಪೋಸ್ಟ್ ಅಥವಾ ಸುಂಕದ ಕಟ್ಟೆಯ ಪ್ರಭಾರದಲ್ಲಿರುವ ಅಧಿಕಾರಿಯು ಅಥವಾ ಮೇಲೆ ಹೇಳಲಾದಂತೆ ಪ್ರಾಧಿಕೃತನಾದ ಅಧಿಕಾರಿಯು ಅಗತ್ಯಪಡಿಸಬಹುದಾದಷ್ಟು ಸಮಯದವರೆಗೆ ವಾಹನ ಅಥವಾ ನಾವೆ, ಹಡಗು ಅಥವಾ ಅಂಥದೇ ನೌಕೆಯಲ್ಲಿನ ಸರಕುಗಳನ್ನು ಪರೀಕ್ಷಿಸಲು ಮತ್ತು ಸರಕುಗಳನ್ನು ತೆಗೆದುಕೊಂಡು ಹೋಗುತ್ತಿರುವುದಕ್ಕೆ ಸಂಬಂಧಪಟ್ಟಂತೆ ಅಂಥ ಚಾಲಕನ ಅಥವಾ ಪ್ರಭಾರದಲ್ಲಿರುವ ಇತರ ವ್ಯಕ್ತಿಯ ಸ್ವಾಧೀನದಲ್ಲಿರುವ ಎಲ್ಲ ದಾಖಲೆಗಳನ್ನು ಪರಿಶೀಲಿಸಲು ಸಂದರ್ಭಾನುಸಾರ ವಾಹನ ಅಥವಾ ನಾವೆ, ಹಡಗು ಅಥವಾ ಅಂಥದೇ ನೌಕೆಯನ್ನು ನಿಲ್ಲಿಸತಕ್ಕದ್ದು ಮತ್ತು ಹಾಗೆ ಅಗತ್ಯಪಡಿಸಲಾದಲ್ಲಿ, ತನ್ನ ಹೆಸರು ಮತ್ತು

ವಿಳಾಸ ಮತ್ತು ವಾಹನದ ಅಥವಾ ನಾವೆಯ, ಹಡಗಿನ ಅಥವಾ ಅಂಥದೇ ನೌಕೆಯ ಮಾಲೀಕನ ಹೆಸರು ಮತ್ತು ವಿಳಾಸವನ್ನು ನೀಡತಕ್ಕದ್ದು.

[1][**ವಿವರಣೆ:–** ಈ ಪ್ರಕರಣದ (4), (8), (10) ಮತ್ತು (12)ನೇ ಉಪ ಪ್ರಕರಣಗಳ ಉದ್ದೇಶಕ್ಕಾಗಿ, "ಸಾಗಾಣಿಕೆದಾರ" ಮತ್ತು "ಸರಕು ರಕ್ಷಕ" ಎಂಬ ಪದಾವಳಿಗಳು ಕೇಂದ್ರ ಸರ್ಕಾರವು ಅಥವಾ ಇತರರು ನಡೆಸುತ್ತಿರುವ ರೈಲ್ವೆಗಳನ್ನೂ ಒಳಗೊಳ್ಳತಕ್ಕದ್ದು ಮತ್ತು ಸಾಗಣೆಕಾರ ಅಥವಾ ಸರಕು ರಕ್ಷಕರಿಗೆ ಅನ್ವಯವಾಗುವಂಥ ಎಲ್ಲ ಉಪಬಂಧಗಳು ಯಥೋಚಿತ ಬದಲಾವಣೆಗಳೊಡನೆ ರೈಲ್ವೆಗೂ ಅನ್ವಯಿಸತಕ್ಕದ್ದು.][1]

5. 2006 ರ ಅಧಿನಿಯಮ ಸಂಖ್ಯೆ 4ರ ಮೂಲಕ ದಿನಾಂಕ: 1.4.2006 ರಿಂದ ಸೇರಿಸಲಾಗಿದೆ.

[1][ಪರಂತು, (ಡಿ) ಖಂಡದಡಿಯಲ್ಲಿ ನಿರ್ದಿಷ್ಟಪಡಿಸಿದ ಘೋಷಣೆಯಲ್ಲಿ ಒಳಗೊಳ್ಳಬೇಕೆಂದು ನಿಯಮಿಸಲಾದ ವಿವರಗಳನ್ನು, ಯಾವುದೇ ನಿರ್ದಿಷ್ಟಪಡಿಸಿದ ವರ್ಗದ ಸರಕುಗಳ ಅಥವಾ ಯಾವುದೇ ನಿರ್ದಿಷ್ಟಪಡಿಸಿದ ವರ್ಗದ ವ್ಯಾಪಾರಿಗಳ ಅಥವಾ ಯಾವುದೇ ನಿರ್ದಿಷ್ಟಪಡಿಸಿದ ವರ್ಗದ ಅನುಸಾರದ ವ್ಯವಹರಣೆಗಳನ್ನು ಯಾವ ವೆಬ್‌ಸೈಟಿನಲ್ಲಿ ನಮೂದಿಸಬೇಕೋ ಆ ವೆಬ್‌ಸೈಟನ್ನು ಆಯುಕ್ತನು ಅಧಿಸೂಚಿಸಬಹುದು. ಆಯುಕ್ತನು ವೆಬ್‌ಸೈಟನ್ನು ಹಾಗೆ ಅಧಿಸೂಚಿಸಿದಲ್ಲಿ, ಸರಕುಗಳ ವಾಹನ ಅಥವಾ ದೋಣಿ ಅಥವಾ ನೌಕೆ ಅಥವಾ ಅಂತಹುದೇ ಹಡಗಿನ ಮಾಲೀಕ ಅಥವಾ ಪ್ರಭಾರದಲ್ಲಿರುವ ಯಾವೊಬ್ಬ ವ್ಯಕ್ತಿಯು, ಅಧಿಸೂಚಿತ ವೆಬ್‌ಸೈಟ್‌ನಲ್ಲಿ ಮೇಲಿನ ವಿವರಗಳನ್ನು ನಮೂದಿಸತಕ್ಕದ್ದು ಮತ್ತು ಅಂಥ ವೈಬ್‌ಸೈಟಿನಲ್ಲಿ ವಿವರಗಳನ್ನು ನಮೂದಿಸಿರುವುದಕ್ಕೆ ರುಜುವಾತನ್ನು ಚೆಕ್‌ಪೋಸ್ಟ್‌ನ ಅಥವಾ ಸುಂಕದಕಟ್ಟೆಯ ಪ್ರಭಾರದಲ್ಲಿರುವ ಅಧಿಕಾರಿಯ ಅಥವಾ ಇನ್ನಾವುದೇ ಪ್ರಾಧಿಕೃತ ಅಧಿಕಾರಿಯ ಮುಂದೆ ಹಾಜರುಪಡಿಸತಕ್ಕದ್ದು.][1]

1. 2012 ರ ಅಧಿನಿಯಮ ಸಂಖ್ಯೆ 17ರ ಮೂಲಕ ದಿನಾಂಕ: 1.4.2012 ರಿಂದ ಸೇರಿಸಲಾಗಿದೆ.

[1][(2–ಎ) (2)ನೇ ಉಪ–ಪ್ರಕರಣದ (ಸಿ) ಖಂಡದಲ್ಲಿ ಏನೇ ಒಳಗೊಂಡಿದ್ದರೂ, ಆಯುಕ್ತರು ಅಧಿಸೂಚಿಸಬಹುದಾದಂತೆ ಯಾವುದೇ ನಿರ್ದಿಷ್ಟಪಡಿಸಿದ ವರ್ಗದ ಸರಕುಗಳು ಅಥವಾ ಯಾವುದೇ ನಿರ್ದಿಷ್ಟಪಡಿಸಿದ ವರ್ಗದ ವ್ಯಾಪಾರಿಗಳಿಗೆ ಸೇರಿದ ಸರಕುಗಳು ಅಥವಾ ಯಾವುದೇ ನಿರ್ದಿಷ್ಟಪಡಿಸಿದ ವ್ಯವಹಾರಗಳಿಂದಾಗಿ ಸರಕುಗಳನ್ನು ಸಾಗಿಸುತ್ತಿರುವ ಸರಕು ಸಾಗಣೆ ವಾಹನಗಳ ಮಾಲೀಕ ಅಥವಾ ಪ್ರಭಾರದಲ್ಲಿರುವ ಒಬ್ಬ ವ್ಯಕ್ತಿಯು,–

(ಎ) ಸರಕುಗಳ ಸಾಗಾಣೆಯು ಪ್ರಾರಂಭವಾಗುವ ಸ್ಥಳದಿಂದ ಅವುಗಳನ್ನು ತಲುಪಿಸಬೇಕಾದ ರಾಜ್ಯದಲ್ಲಿಯ ಸ್ಥಳಕ್ಕೆ ಸಾಮಾನ್ಯವಾಗಿ ತೆಗೆದುಕೊಂಡು ಹೋಗುವ ಮಾರ್ಗದಲ್ಲಿ ಇರುವ ಚೆಕ್‌ಪೋಸ್ಟ್ ಅಥವಾ ಸುಂಕದಕಟ್ಟೆಯಲ್ಲಿ ವರದಿ ಮಾಡಿಕೊಳ್ಳತಕ್ಕದ್ದು;

(ಬಿ) (2)ನೇ ಉಪ–ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಅಧಿಕಾರಿಯ ಮುಂದೆ, ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂತೆ ಸರಕು ಕಳುಹಿಸುವವನಿಂದ ಅಥವಾ ಸರಕು ಸ್ವೀಕರಿಸುವವನಿಂದ ಸಾಗಿಸುತ್ತಿರುವ ಸರಕುಗಳ ವಿವರಗಳನ್ನು ವೆಬ್‌ಸೈಟ್‌ನಲ್ಲಿ ನಮೂದು ಮಾಡಿರುವ ರುಜುವಾತನ್ನು ಸಲ್ಲಿಸತಕ್ಕದ್ದು; ಮತ್ತು

(ಸಿ) ಹಾಗೆ ಅದನ್ನು ಸಲ್ಲಿಸಿದ ತರುವಾಯ, ಅಧಿಕಾರಿಯು, ಸರಕು ವಾಹನವು ಮುಂದೆ ಸಾಗಲು ಅನುಮತಿಸಬಹುದು.

(2–ಬಿ) ಚೆಕ್‌ಪೋಸ್ಟ್ ಅಥವಾ ಸುಂಕದಕಟ್ಟೆಯ ಪ್ರಭಾರದಲ್ಲಿರುವ ಅಧಿಕಾರಿಗೆ ಅಥವಾ (2)ನೇ ಉಪ–ಪ್ರಕರಣದ ಅಡಿಯಲ್ಲಿ ಪ್ರಾಧಿಕೃತನಾದ ಅಧಿಕಾರಿಗೆ, (2–ಎ) ಉಪ–ಪ್ರಕರಣದ (ಎ) ಖಂಡದ ಉಪಬಂಧಗಳ ಯಾವುದೇ ಉಲ್ಲಂಘನೆಯಾಗಿದೆ ಎಂದು ಅಥವಾ ಅನುಸರಣೆಯಾಗಿಲ್ಲವೆಂದು ಅಥವಾ (2–ಎ) ಉಪ–ಪ್ರಕರಣದ (ಬಿ) ಖಂಡದಲ್ಲಿ ನಿರ್ದಿಷ್ಟಪಡಿಸಲಾಗಿರುವಂತೆ ವಿವರಗಳನ್ನು ನಮೂದಿಸಿಲ್ಲವೆಂದು ಅಥವಾ ನಮೂದಿಸಿರುವ ವಿವರಗಳು ಸರಿಯಾಗಿಲ್ಲವೆಂದು ಮತ್ತು ಅಪೂರ್ಣವಾಗಿವೆ ಎಂದು ಹಾಗೂ ಅದಕ್ಕೆ ಸಾಕಷ್ಟು ಕಾರಣಗಳನ್ನು ಒದಗಿಸಿಲ್ಲವೆಂದು ತಿಳಿದುಬಂದರೆ, (12)ನೇ ಉಪ–ಪ್ರಕರಣದ ಅಡಿಯಲ್ಲಿ ನಿರ್ದಿಷ್ಟಪಡಿಸಿದಂತೆ ದಂಡವನ್ನು ವಿಧಿಸಲು ಆತನು ಮುಂದುವರೆಯತಕ್ಕದ್ದು.][1]

1. 2010ರಿಂದ ಅಧಿನಿಯಮ ಸಂಖ್ಯೆ 4ರ ಮೂಲಕ ದಿನಾಂಕ 1.4.2010ರಿಂದ ಸೇರಿಸಲಾಗಿದೆ.

(3) ಚೆಕ್‌ಪೋಸ್ಟ್ ಅಥವಾ ಸುಂಕದ ಕಟ್ಟೆಯನ್ನು ಹೊರತುಪಡಿಸಿ ಇತರೆ ಯಾವುದೇ ಸ್ಥಳದಲ್ಲಿ, ಪ್ರಾಧಿಕೃತನಾದ ಅಧಿಕಾರಿಯು ಯಾವುದೇ ಸರಕು ವಾಹನವನ್ನು ತಡೆದು ನಿಲ್ಲಿಸಿದಾಗ, ಅಂಥ ಅಧಿಕಾರಿಯು, ಅವನು ಅವಶ್ಯಕವೆಂದು ಪರಿಗಣಿಸಿದಲ್ಲಿ, ಸರಕು ವಾಹನವನ್ನು [1][ಹತ್ತಿರದಲ್ಲಿರುವ ಚೆಕ್‌ಪೋಸ್ಟ್ ಅಥವಾ ವಾಣಿಜ್ಯ ತೆರಿಗೆಗಳ ಇಲಾಖೆಯ ಕಛೇರಿಗೆ ಅಥವಾ ಪೊಲೀಸ್ ಠಾಣೆಗೆ ಅಥವಾ ಆಯುಕ್ತರು ಅಧಿಸೂಚಿಸಬಹುದಾದಂಥ ಯಾವುದೇ ಇತರ ಸ್ಥಳಕ್ಕೆ][1] ತೆಗೆದುಕೊಂಡು ಹೋಗುವಂತೆ ಅದರ ಮಾಲೀಕ ಅಥವಾ ಅದರ ಪ್ರಭಾರದಲ್ಲಿರುವ ವ್ಯಕ್ತಿಗೆ ಆದೇಶಿಸಬಹುದು ಮತ್ತು ಸರಕು ವಾಹನದ ಅಂಥ ಮಾಲೀಕ ಅಥವಾ ಪ್ರಭಾರದಲ್ಲಿರುವ ವ್ಯಕ್ತಿಯು ಅಂಥ ನಿರ್ದೇಶನವನ್ನು ಪಾಲಿಸತಕ್ಕದ್ದು.

1. 2010ರಿಂದ ಅಧಿನಿಯಮ ಸಂಖ್ಯೆ 4ರ ಮೂಲಕ ದಿನಾಂಕ 1.4.2010ರಿಂದ ಪ್ರತಿಯೋಜಿಸಲಾಗಿದೆ.

(4) (ಎ) ರವಾನೆಗಾಗಿ ಸರಕುಗಳನ್ನು ಸಾಗಣೆದಾರನಿಗೆ ಅಥವಾ ಇತರೆ ಸರಕು ರಕ್ಷಕನಿಗೆ ಒಪ್ಪಿಸಿದಲ್ಲಿ, ಸರಕುಗಳ ಸಾಗಣೆಯು, ಅಂಥ ಒಪ್ಪಿಸುವಿಕೆಯ ಸಮಯದಲ್ಲಿ ಪ್ರಾರಂಭವಾಗಿದೆಯೆಂದು ಮತ್ತು ಒಪ್ಪಿಸಿದ ಸರಕುಗಳನ್ನು ಅಂಥ ಸಾಗಣೆದಾರ ಅಥವಾ ಸರಕು ರಕ್ಷಕನಿಂದ ವಶಕ್ಕೆ ತೆಗೆದುಕೊಂಡ ಸಮಯದಲ್ಲಿ ಕೊನೆಗೊಂಡಿದೆ ಎಂದು ಭಾವಿಸತಕ್ಕದ್ದು. ಅವನಿಂದ ಒಪ್ಪಿಸಲಾದ ಸರಕುಗಳನ್ನು ತೆಗೆದುಕೊಳ್ಳುವುದಕ್ಕೆ ಮೊದಲು, ಸಾಗಣೆಗಾಗಿ ಸರಕುಗಳನ್ನು ಪಡೆದ ಸಾಗಾಣಿಕೆದಾರ ಅಥವಾ ಸರಕು ರಕ್ಷಕನು ಸದರಿ ಸರಕುಗಳನ್ನು ಯಾವುದೇ ಕಚೇರಿ, ಅಂಗಡಿ, ಗೋದಾಮು, ನೌಕೆ, ವಾಹನ, ವ್ಯವಹಾರದ ಯಾವುದೇ ಇತರ ಸ್ಥಳ ಅಥವಾ ಯಾವುದೇ ಕಟ್ಟಡ ಅಥವಾ ಸ್ಥಳದಲ್ಲಿ ಇಟ್ಟಲ್ಲಿ, ಈ ಮೊದಲು ಹೇಳಿದಂತೆ ಯಾವೊಬ್ಬ ಪ್ರಾಧಿಕೃತ ಪ್ರಾಧಿಕಾರಿಯು, ಅಂಥ ಕಚೇರಿ, ಅಂಗಡಿ, ಗೋದಾಮು, ನೌಕೆ, ಧಾರಕ, ವಾಹನ, ವ್ಯಾಪಾರದ ಇತರ ಸ್ಥಳ ಅಥವಾ ಕಟ್ಟಡ ಅಥವಾ ಸ್ಥಳವನ್ನು ಪ್ರವೇಶಿಸುವ ಮತ್ತು ಪರಿಶೀಲಿಸುವ ಮತ್ತು ಸರಕುಗಳನ್ನು ಪರೀಕ್ಷಿಸುವ ಅಧಿಕಾರ ಹೊಂದಿರತಕ್ಕದ್ದು ಮತ್ತು [1][ಅಂಥ ಸರಕುಗಳಿಗೆ ಸಂಬಂಧಪಟ್ಟ ಎಲ್ಲಾ ದಸ್ತಾವೇಜುಗಳನ್ನು][1] ಪರಿಶೀಲಿಸತಕ್ಕದ್ದು.

1. 2006 ರ ಅಧಿನಿಯಮ ಸಂಖ್ಯೆ 4ರ ಮೂಲಕ ದಿನಾಂಕ: 11.3.2005 ರಿಂದ ಯಾವಗಲೂ ಪ್ರತಿಯೋಜಿಸಲಾಗಿದೆಯೆಂದು ಭಾವಿಸತಕ್ಕದ್ದು.

(ಬಿ) ಸಾಗಾಣಿಕೆದಾರನು ಅಥವಾ ಸರಕು ರಕ್ಷಕನು ಅಥವಾ ಸರಕುಗಳ ಮತ್ತು ದಾಖಲೆಗಳ ಪ್ರಭಾರದಲ್ಲಿರುವ ವ್ಯಕ್ತಿಯು, ಅಂಥ ಪರೀಕ್ಷೆ ಅಥವಾ ಪರಿಶೀಲನೆಗಾಗಿ ಎಲ್ಲಾ ಅನುಕೂಲತೆಗಳನ್ನು ನೀಡತಕ್ಕದ್ದು ಮತ್ತು ಹಾಗೆ ಅಗತ್ಯಪಡಿಸಿದಲ್ಲಿ (2)ನೇ ಉಪ-ಪ್ರಕರಣದಲ್ಲಿ ಉಲ್ಲೇಖಿಸಲಾದ ಮಾರಾಟದ ಬಿಲ್ ಅಥವಾ ರವಾನೆ ಚೀಟಿ ಅಥವಾ ಇತರ ದಸ್ತಾವೇಜುಗಳನ್ನು, ಸರಕುಗಳಿಗೆ ಸಂಬಂಧಪಟ್ಟಂತೆ ನಿಯಮಿಸಬಹುದಾದಂತೆ ಅಂಥ ವಿವರಗಳನ್ನು ಅವನ ಹೆಸರು ಮತ್ತು ವಿಳಾಸದೊಂದಿಗೆ ಮತ್ತು ಸಾಗಣಿಕೆದಾರ ಅಥವಾ ಸರಕು ರಕ್ಷಕ ಮತ್ತು ಸರಕು ಪಡೆಯುವವನ ಹೆಸರು ಮತ್ತು ವಿಳಾಸವನ್ನು ಒಳಗೊಂಡ ಒಂದು ಘೋಷಣಾ ಪತ್ರದೊಡನೆ ಹಾಜರುಪಡಿಸತಕ್ಕದ್ದು.

(ಸಿ) (ಎ) ಖಂಡದಿಂದ ಪ್ರದತ್ತವಾದ ಅಧಿಕಾರಗಳು ಈ ಮುಂದಿನವುಗಳನ್ನು ಸಹ ಒಳಗೊಂಡಿರತಕ್ಕದ್ದು, ಎಂದರೆ,-

[1][(i) ನಿಯಮಿಸಲಾದ ದಾಖಲೆಗಳನ್ನು ಒದಗಿಸದಿರುವುದರ ಸಂಬಂಧದಲ್ಲಿ ತೆರಿಗೆಗೆ ಗುರಿಯಾಗತಕ್ಕ ಯಾವುದೇ ಸರಕುಗಳನ್ನು (8)ನೇ ಅಥವಾ (12)ನೇ ಉಪ ಪ್ರಕರಣದ ಅಡಿಯಲ್ಲಿಯ ಯಾವುದೇ ವ್ಯವಹರಣೆಗಳು ಮುಗಿಯುವವರೆಗೆ ವಶಕ್ಕೆ ತೆಗೆದುಕೊಳ್ಳಲು;][1]

[2][(ii)][2] ಸಾಗಾಣಿಕೆದಾರ ಅಥವಾ ಸರಕು ರಕ್ಷಕ ಅಥವಾ ವ್ಯವಹಾರ ಸ್ಥಳದ ಪ್ರಭಾರದಲ್ಲಿರುವ ವ್ಯಕ್ತಿಯು, ಆವರಣವನ್ನು ಬಿಟ್ಟಿದ್ದಲ್ಲಿ ಅಥವಾ ಅವನು ಲಭ್ಯವಿರದಿದ್ದಲ್ಲಿ ಅಥವಾ ಯಾವುದೇ ಪೆಟ್ಟಿಗೆ ಅಥವಾ ಧಾರಕ, ಗೋದಾಮು ಅಥವಾ ಕಟ್ಟಡ ಅಥವಾ ಗೋದಾಮಿನ ಅಥವಾ ಕಟ್ಟಡದ ಯಾವುದೇ ಭಾಗವನ್ನು ಹಾಗೆ ತೆರೆಯುವಂತೆ ಕೇಳಿದಾಗ ತೆರೆಯಲು ತಪ್ಪಿದಲ್ಲಿ ಅಥವಾ ತಿರಸ್ಕರಿಸಿದಲ್ಲಿ, ಯಾವುದೇ ಪೆಟ್ಟಿಗೆ, ಧಾರಕ ಅಥವಾ ನೌಕೆ, ಗೋದಾಮು ಅಥವಾ ಕಟ್ಟಡ ಅಥವಾ ಗೋದಾಮಿನ ಅಥವಾ ಕಟ್ಟಡದ ಯಾವುದೇ ಭಾಗದಲ್ಲಿ ಲೆಕ್ಕಪತ್ರಗಳು ಅಥವಾ ತೆರಿಗೆಗೆ ಒಳಪಟ್ಟ ಸರಕುಗಳನ್ನು ಇಡಲಾಗಿದೆ ಅಥವಾ ಸಂಗ್ರಹಿಸಲಾಗಿದೆ ಎಂಬುದಾಗಿ ಸಂಶಯ ಉಂಟಾದಲ್ಲಿ ಅವುಗಳನ್ನು ಮೊಹರು ಮಾಡುವ ಅಧಿಕಾರ, ಮತ್ತು

[2][(iii)][2] ಸಾಗಣೆದಾರ ಅಥವಾ ಸರಕು ರಕ್ಷಕ ಅಥವಾ ವ್ಯವಹಾರ ಸ್ಥಳದ ಪ್ರಭಾರದಲ್ಲಿರುವ ವ್ಯಕ್ತಿಯು, ಆವರಣವನ್ನು ಬಿಟ್ಟಿದ್ದರೆ ಅಥವಾ ಅವನಿಗೆ ಯಾವುದೇ ಪೆಟ್ಟಿಗೆ ಅಥವಾ ಧಾರಕ, ಗೋದಾಮು ಅಥವಾ ಕಟ್ಟಡ ಅಥವಾ ಗೋದಾಮಿನ ಅಥವಾ ಕಟ್ಟಡದ ಭಾಗವನ್ನು ತೆರೆಯಲು ಅವಕಾಶವನ್ನು ಕೊಟ್ಟ ತರುವಾಯ, ಹಾಗೆ ತೆರೆಯಲು ವಿಫಲನಾದಲ್ಲಿ ಯಾವುದೇ ಪೆಟ್ಟಿಗೆ, ಧಾರಕ, ಗೋದಾಮು ಅಥವಾ ಕಟ್ಟಡದ ಅಥವಾ ಗೋದಾಮು ಅಥವಾ ಕಟ್ಟಡದ ಭಾಗವನ್ನು ಒಡೆದು ತೆರೆಯುವ ಅಧಿಕಾರ.

1. 2006 ರ ಅಧಿನಿಯಮ ಸಂಖ್ಯೆ 4ರ ಮೂಲಕ ದಿನಾಂಕ: 1.4.2006 ರಿಂದ ಸೇರಿಸಲಾಗಿದೆ.

2. 2006 ರ ಅಧಿನಿಯಮ ಸಂಖ್ಯೆ 4ರ ಮೂಲಕ ದಿನಾಂಕ: 1.4.2006 ರಿಂದ ಮರು ಸಂಖ್ಯೆ ನೀಡಲಾಗಿದೆ.

(ಡಿ) [1][(ಸಿ) ಖಂಡದ (ii)ನೇ ಉಪ ಖಂಡದ][1] ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಯು, ಅಂಥ ಪೆಟ್ಟಿಗೆ, ಧಾರಕ, ಗೋದಾಮು ಅಥವಾ ಕಟ್ಟಡ ಅಥವಾ ಗೋದಾಮಿನ ಅಥವಾ ಕಟ್ಟಡದ ಭಾಗದಲ್ಲಿ ಕಂಡುಬಂದ ಸರಕುಗಳ ಅಥವಾ ದಸ್ತಾವೇಜುಗಳ ಒಂದು ಪಟ್ಟಿಯನ್ನು ತಯಾರಿಸತಕ್ಕದ್ದು.

1. 2006 ರ ಅಧಿನಿಯಮ ಸಂಖ್ಯೆ 4ರ ಮೂಲಕ ದಿನಾಂಕ: 1.4.2006 ರಿಂದ ಪ್ರತಿಯೋಜಿಸಲಾಗಿದೆ.

(5) (ಎ) ಒಬ್ಬ ಸಾಗಾಣಿಕೆದಾರನು ಅಥವಾ ಸರಕು ರಕ್ಷಕನು ರವಾನೆಗಾಗಿ ಅವನಿಗೆ ನೀಡಲಾದ ಸರಕುಗಳನ್ನು ಇಡುವ ಯಾವುದೇ ಕಚೇರಿ, ಅಂಗಡಿ, ಗೋದಾಮು, ನೌಕೆ, ಧಾರಕ, ವಾಹನ, ವ್ಯವಹಾರದ ಯಾವುದೇ ಇತರೆ ಸ್ಥಳದಲ್ಲಿ ಅಥವಾ ಯಾವುದೇ ಕಟ್ಟಡ ಅಥವಾ ಸ್ಥಳವನ್ನು ಪ್ರವೇಶಿಸಲು ಮತ್ತು ಶೋಧಿಸಲು ಪ್ರಾಧಿಕೃತನಾದ ಯಾವೊಬ್ಬ ಅಧಿಕಾರಿಗೆ, ಯಾವುದೇ ತೆರಿಗೆಯ ಸಂದಾಯವನ್ನು ತಪ್ಪಿಸುವಲ್ಲಿ ಸರಕುಗಳ ಮಾಲೀಕನೊಂದಿಗೆ ಅಂಥ ಸಾಗಾಣಿಕೆದಾರನು ಅಥವಾ ಸರಕು ರಕ್ಷಕನು ಷಾಮೀಲಾಗಿದ್ದಾನೆಂದು ಸಂಶಯಪಡಲು ಕಾರಣಗಳಿದ್ದಲ್ಲಿ, ಅವನು ಕಾರಣಗಳನ್ನು ಲಿಖಿತದಲ್ಲಿ ದಾಖಲಿಸಿ, ತಾನು ಅವಶ್ಯಕವೆಂದು ಪರಿಗಣಿಸಬಹುದಾದಂತೆ ಸರಕು ರಕ್ಷಕ ಅಥವಾ ಸಾಗಾಣಿಕೆದಾರನ ಲೆಕ್ಕ ಪತ್ರಗಳನ್ನು, ರಿಜಿಸ್ಟರುಗಳನ್ನು ಅಥವಾ ಇತರೆ ದಾಖಲೆಗಳನ್ನು ವಶಕ್ಕೆ ತೆಗೆದುಕೊಳ್ಳತಕ್ಕದ್ದು ಮತ್ತು ಅದಕ್ಕಾಗಿ ರಸೀದಿಯೊಂದನ್ನು ನೀಡತಕ್ಕದ್ದು. ವಶಕ್ಕೆತೆಗೆದುಕೊಳ್ಳಲಾದ ಲೆಕ್ಕಪತ್ರಗಳು, ರಿಜಿಸ್ಟರುಗಳು, ದಾಖಲೆಗಳು ಮತ್ತು ಇತರ ದಸ್ತಾವೇಜುಗಳನ್ನು ಈ ಅಧಿನಿಯಮದ ಅಡಿಯಲ್ಲಿ ಅವುಗಳ ಪರೀಕ್ಷೆಗಾಗಿ ಮತ್ತು ಯಾವುದೇ ವಿಚಾರಣೆ ಅಥವಾ ವ್ಯವಹರಣೆಗಾಗಿ ಅವಶ್ಯಕವಿರಬಹುದಾದಷ್ಟು ಸಮಯದವರೆಗೆ ಮಾತ್ರ ಅಂಥ ಅಧಿಕಾರಿಯು ತನ್ನಲ್ಲಿ ಉಳಿಸಿಕೊಳ್ಳತಕ್ಕದ್ದು.

(ಬಿ) ಹಾಗೆ ವಶಕ್ಕೆ ತೆಗೆದುಕೊಳ್ಳಲಾದ ಲೆಕ್ಕಪತ್ರಗಳು, ರಿಜಿಸ್ಟರುಗಳು, ದಾಖಲೆಗಳು ಮತ್ತು ದಸ್ತಾವೇಜುಗಳನ್ನು ಅಂಥ ಅಧಿಕಾರಿಯು ವಶಕ್ಕೆ ತೆಗೆದುಕೊಂಡ ದಿನಾಂಕದಿಂದ ಒಂದು ನೂರಾ ಎಂಭತ್ತು ದಿನಗಳನ್ನು ಮೀರದ ಅವಧಿಗಾಗಿ, ಆದರೆ, ಸದರಿ ಅವಧಿಯನ್ನು ಮೀರಿ ಅದನ್ನು ತನ್ನಲ್ಲಿ ಉಳಿಸಿಕೊಳ್ಳುವುದಕ್ಕೆ ಕಾರಣಗಳನ್ನು ಅವನು ಲಿಖಿತದಲ್ಲಿ ದಾಖಲಿಸಿದ ಹೊರತು ಮತ್ತು ಅದಕ್ಕೆ ತನ್ನ ನಿಕಟ ಪೂರ್ವ ಹಿರಿಯ ಪ್ರಾಧಿಕಾರಿಯ ಅನುಮೋದನೆಯನ್ನು ಪಡೆದ ಹೊರತು, ತನ್ನಲ್ಲಿ ಇಟ್ಟುಕೊಳ್ಳತಕ್ಕದ್ದಲ್ಲ ಮತ್ತು ಯಾವುದೇ ಸಂದರ್ಭದಲ್ಲಿ ಅಂಥ ಅನುಮೋದನೆಯು ಒಂದು ಬಾರಿಗೆ ಅರವತ್ತು ದಿನಗಳನ್ನು ಮೀರತಕ್ಕದ್ದಲ್ಲ.

(ಸಿ) ಅಂಥ ಅಧಿಕಾರಿಯು, (ಎ) ಖಂಡದ ಅಡಿಯಲ್ಲಿ ವಶಕ್ಕೆ ತೆಗೆದುಕೊಂಡ ಲೆಕ್ಕಪತ್ರಗಳು, ರಿಜಿಸ್ಟರುಗಳು, ದಾಖಲೆಗಳು ಮತ್ತು ಇತರ ದಸ್ತಾವೇಜುಗಳನ್ನು ಪರೀಕ್ಷಿಸಿದ ತರುವಾಯ, ಯಾವೊಬ್ಬ ವ್ಯಾಪಾರಿಯು ತೆರಿಗೆಯ ಸಂದಾಯವನ್ನು ತಪ್ಪಿಸಲು ಪ್ರಯತ್ನಿಸಿರುವನೆಂದು ನಂಬಲು ಕಾರಣಗಳಿದ್ದಲ್ಲಿ, ಅವನು 38ನೇ ಪ್ರಕರಣದ (5)ನೇ ಉಪ-ಪ್ರಕರಣದ ಅನುಸಾರವಾಗಿ ಅಂಥ ವ್ಯಾಪಾರಿಯ ಮೇಲೆ ಒಂದು ರಕ್ಷಣಾತ್ಮಕ ತೆರಿಗೆ ನಿರ್ಧಾರಣೆಯನ್ನು ಜಾರಿಗೊಳಿಸಬಹುದು.

(6) ಮೇಲಿನ (4) ಅಥವಾ (5)ನೇ ಉಪ-ಪ್ರಕರಣದ ಅಡಿಯಲ್ಲಿನ ಎಲ್ಲಾ ಶೋಧನೆಗಳು ಮತ್ತು ವಶಕ್ಕೆ ತೆಗೆದುಕೊಳ್ಳುವಿಕೆಗಳನ್ನು ದಂಡ ಪ್ರಕ್ರಿಯಾ ಸಂಹಿತೆ, 1973ರ (1974ರ ಕೇಂದ್ರ ಅಧಿನಿಯಮ 2) ಉಪಬಂಧಗಳ ಅನುಸಾರವಾಗಿ ಮಾಡತಕ್ಕದ್ದು.

(7) ಯಾವೊಬ್ಬ ವ್ಯಕ್ತಿಯು, (4)ನೇ ಉಪ-ಪ್ರಕರಣದ (ಸಿ) ಖಂಡದ (i)ನೇ ಉಪಖಂಡದ ಅಡಿಯಲ್ಲಿ ಹಾಕಲಾದ ಯಾವುದೇ ಮೊಹರನ್ನು ಕೆಡಿಸತಕ್ಕದ್ದಲ್ಲ.

(8) ಚೆಕ್‌ಪೋಸ್ಟ್ ಅಥವಾ ಸುಂಕದಕಟ್ಟೆಯ ಪ್ರಭಾರದಲ್ಲಿರುವ ಅಧಿಕಾರಿಯು ಅಥವಾ ಈ ಹಿಂದೆ ಹೇಳಿದಂತೆ ಪ್ರಾಧಿಕೃತ ಅಧಿಕಾರಿಯು, ಸರಕು ವಾಹನವನ್ನು ತಡೆಹಿಡಿದ ಮೇಲೆ ಅಥವಾ ಯಾವುದೇ ಗೋದಾಮಿನ ಪರಿಶೀಲನೆಯನ್ನು ಮಾಡಿದ ಮೇಲೆ, ಸಾಗಣೆಯಲ್ಲಿರುವ ಅಥವಾ ರವಾನೆಯಲ್ಲಿರುವ ಸರಕುಗಳ ಜೊತೆಗಿರುವ ದಸ್ತಾವೇಜುಗಳಲ್ಲಿ ನೀಡಲಾದ ವಿವರಗಳು ಸರಿಯಾಗಿವೆ ಎಂಬುದಕ್ಕೆ ಅಥವಾ ಸಾಕಷ್ಟಿವೆ ಎಂಬುದಕ್ಕೆ ಮತ್ತು (2)ನೇ ಉಪ-ಪ್ರಕರಣದ ಯಾವುದೇ ಉಲ್ಲಂಘನೆಗೆ ಸಂಬಂಧಪಟ್ಟಂತೆ ಮುಂದಿಟ್ಟ ಕಾರಣಗಳಿಗೆ ಸಂಬಂಧಪಟ್ಟಂತೆ ಅವಶ್ಯಕವಾದ ಮತ್ತಷ್ಟು ಪರಿಶೀಲನೆ ನಡೆಸುವ ಅಗತ್ಯವಿದೆ ಎಂಬುದಾಗಿ ಅಭಿಪ್ರಾಯಪಟ್ಟಲ್ಲಿ, ಅವನು ವಿವರಗಳನ್ನು ತಾನೇ ಸ್ವತಃ ಪರಿಶೀಲಿಸಬಹುದು ಅಥವಾ ಯಾವೊಬ್ಬ ಇತರ ಅಧಿಕಾರಿಗೆ ವಿಷಯ ಉಲ್ಲೇಖದ ಮೂಲಕ ಪರಿಶೀಲಿಸಲು ಕಾರಣವಾಗತಕ್ಕದ್ದು ಮತ್ತು ಅಂಥ ಪರಿಶೀಲನೆಯನ್ನು ಸೂಕ್ತ ಸಮಯದಲ್ಲಿ ಪೂರ್ಣಗೊಳಿಸಲು ಸಾಧ್ಯವಾಗದಿದ್ದಲ್ಲಿ, ಅವನು ಲಿಖಿತದಲ್ಲಿ, ತನ್ನಿಂದ ಅಥವಾ ಪರಿಶೀಲನೆಗಾಗಿ ವಿಷಯವನ್ನು ಉಲ್ಲೇಖಿಸಿದ ಇತರೆ ಅಧಿಕಾರಿಯಿಂದ ಅನುಮತಿ ದೊರೆಯುವವರೆಗೆ ಸರಕು ವಾಹನದ ಅಥವಾ ಗೋದಾಮಿನ ಪ್ರಭಾರದಲ್ಲಿರುವ ಸಾಗಾಣಿಕೆದಾರನಿಗೆ ಅಥವಾ ವ್ಯಕ್ತಿಗೆ ಸರಕುಗಳನ್ನು ನೀಡತಕ್ಕದ್ದಲ್ಲ ಮತ್ತು ತಡೆದು ನಿಲ್ಲಿಸಿದ ವಾಹನ ಯಾವುದಾದರೂ ಇದ್ದಲ್ಲಿ ಅದು ಮುಂದಕ್ಕೆ ಹೋಗಲು ಅನುಮತಿ ನೀಡತಕ್ಕದ್ದು.

(9) ಮೇಲಿನ (8)ನೇ ಉಪ-ಪ್ರಕರಣದ ಅಡಿಯಲ್ಲಿ ಪರಿಶೀಲನೆಯನ್ನು, ಉಪ-ಪ್ರಕರಣದ ಅಡಿಯಲ್ಲಿ ನೀಡಲಾದ ನಿರ್ದೇಶನದ ದಿನಾಂಕದಿಂದ ಹದಿನೈದು ದಿನಗಳ ಅವಧಿಯೊಳಗೆ ಪೂರ್ಣಗೊಳಿಸತಕ್ಕದ್ದು ಮತ್ತು ಈ ಹಿಂದೆ ಹೇಳಿದ ಅವಧಿಯೊಳಗೆ ಅಂಥ ಪರಿಶೀಲನೆಯನ್ನು ಪೂರ್ಣಗೊಳಿಸದಿದ್ದಲ್ಲಿ, ಅಂಥ ನಿರ್ದೇಶನವನ್ನು ನೀಡಿದ ಅಧಿಕಾರಿಯು ಅಥವಾ ಸಂದರ್ಭಾನುಸಾರ ವಿಷಯವನ್ನು ಪರಿಶೀಲಿಸುವಂತೆ ಯಾರಿಗೆ ಉಲ್ಲೇಖಿಸಲಾಗಿದೆಯೋ ಆ ಅಧಿಕಾರಿಯು, ಪರಿಶೀಲನೆಯನ್ನು ಪೂರ್ಣಗೊಳಿಸುವುದಕ್ಕಾಗಿ ಅಂಥ ಅವಧಿಯ ವಿಸ್ತರಣೆಗೆ ನಿಕಟ ಹಿರಿಯ ಪ್ರಾಧಿಕಾರಿಯ ಲಿಖಿತ ಅನುಮತಿಯನ್ನು ಪಡೆಯತಕ್ಕದ್ದು. ಆದಾಗ್ಯೂ, ಅಂಥ ವಿಸ್ತರಣೆಯನ್ನು ಒಂದು ಸಲಕ್ಕೆ ಹದಿನೈದು ದಿನಗಳಿಗೆ ಮೀರಿದ ಅವಧಿಗಾಗಿ ಅನುಮತಿಸತಕ್ಕದ್ದಲ್ಲ.

(10) ಅಂಥ ಅಧಿಕಾರಿಯು ಅಥವಾ ವಿಷಯವನ್ನು ಯಾರಿಗೆ ಉಲ್ಲೇಖಿಸಲಾಗಿದೆಯೋ ಆ ಇತರ ಅಧಿಕಾರಿಯು, ಅಂಥ ಪರಿಶೀಲನೆಯ ಮೇಲೆ (2)ನೇ ಉಪ-ಪ್ರಕರಣದಲ್ಲಿರುವುದನ್ನು ಪಾಲಿಸದಿರುವುದು (12)ನೇ ಉಪಪ್ರಕರಣದ ಅಡಿಯಲ್ಲಿ ದಂಡನೀಯವಾಗುತ್ತದೆ ಎಂದು ಅಭಿಪ್ರಾಯಪಟ್ಟಲ್ಲಿ ಅವನು, ಈ ಪ್ರಕರಣದ (12) ಮತ್ತು (14)ನೇ ಉಪ-ಪ್ರಕರಣಗಳಲ್ಲಿ ಹೇಳಿರುವಂತೆ ವಾಹನ ಅಥವಾ ಗೋದಾಮಿನ ಪ್ರಭಾರದಲ್ಲಿರುವ ವ್ಯಕ್ತಿಯ ಅಭಿರಕ್ಷೆಯಲ್ಲಿರುವ ಅಂಥ ಸರಕುಗಳ ಸಂಬಂಧದಲ್ಲಿ ಮುಂದುವರಿಯಬಹುದು.

(11) ಈ ಪ್ರಕರಣದ ಯಾವುವೇ ಉಪಬಂಧಗಳ ಉಲ್ಲಂಘನೆಗಾಗಿ, ಚೆಕ್‌ಪೋಸ್ಟ್‌ನ ಪ್ರಭಾರದಲ್ಲಿರುವ ಅಧಿಕಾರಿ ಅಥವಾ ಯಾವೊಬ್ಬ ಪ್ರಾಧಿಕೃತ ಅಧಿಕಾರಿಯು ಒಂದು ನೋಟೀಸನ್ನು ಜಾರಿಗೊಳಿಸಿದಲ್ಲಿ, ಅಂಥ ನೋಟೀಸಿಗನುಸಾರವಾಗಿ ಹೆಚ್ಚಿನ ವ್ಯವಹರಣೆಗಳನ್ನು, ಅಂಥ ಷರತ್ತುಗಳಿಗೆ ಒಳಪಟ್ಟು ಮತ್ತು ನಿಯಮಿಸಬಹುದಾದಂತೆ ಅಂಥ ರೀತಿಯಲ್ಲಿ, ಆಯುಕ್ತನಿಂದ ಇದಕ್ಕಾಗಿಯೇ ಪ್ರಾಧಿಕೃತನಾದ ಯಾವೊಬ್ಬ ಇತರ ಅಧಿಕಾರಿಯು, ಅವು ಬಾಕಿ ಇರುವ ಹಂತದಿಂದ ಮುಂದುವರಿಸಬಹುದು.

(12) (ಎ) ಚೆಕ್‌ಪೋಸ್ಟ್‌ನ ಅಥವಾ ಸುಂಕದ ಕಟ್ಟೆಯ ಪ್ರಭಾರದಲ್ಲಿರುವ ಅಧಿಕಾರಿ ಅಥವಾ ಯಾವೊಬ್ಬ ಇತರ ಅಧಿಕಾರಿಯು (2)ನೇ ಉಪ-ಪ್ರಕರಣದ ಉಪಬಂಧಗಳ ಯಾವುದೇ ಉಲ್ಲಂಘನೆಗೆ ಅಥವಾ ಪಾಲಿಸದಿರುವುದಕ್ಕೆ ಸಂಬಂಧಪಟ್ಟಂತೆ, ಸಾಕಷ್ಟು ಕಾರಣಗಳನ್ನು ಒದಗಿಸದಿದ್ದಾಗ ಈ ಮುಂದಿನಂತೆ ದಂಡವನ್ನು ವಿಧಿಸಬಹುದು, ಅದು,-

(i) ಈ ಅಧಿನಿಯಮದ ಅಡಿಯಲ್ಲಿ ನೋಂದಾಯಿತನಾದ ಒಬ್ಬ ವ್ಯಾಪಾರಿಯು ತಾನು ಸರಕುಗಳನ್ನು ಕಳುಹಿಸುವವನು ಅಥವಾ ಸರಕುಗಳನ್ನು ಪಡೆಯುವವನು ಎಂಬುದಾಗಿ ಅವನು ಒಪ್ಪಿದಲ್ಲಿ, (2)ನೇ ಉಪ-ಪ್ರಕರಣದ [1][(ಸಿ) ಖಂಡದ ಅಥವಾ] (ಡಿ) ಖಂಡದ ಉಲ್ಲಂಘನೆಯಲ್ಲಿ ಸಾಗಣೆಯಲ್ಲಿರುವ ಸರಕುಗಳಿಗೆ ಸಂಬಂಧಪಟ್ಟಂತೆ ವಿಧಿಸಬಹುದಾದ ದಂಡವು ಅವುಗಳಿಗೆ ವಿಧಿಸಬಹುದಾದ ತೆರಿಗೆ ಮೊಬಲಗಿಗಿಂತ ಕಡಿಮೆ ಇರತಕ್ಕದ್ದಲ್ಲ ಆದರೆ, ಅಂಥ ತೆರಿಗೆಯ ಮೊಬಲಗಿನ ಒಂದೂವರೆ ಪಟ್ಟನ್ನು ಮೀರತಕ್ಕದ್ದಲ್ಲ;

1. 2005ರ ಅಧಿನಿಯಮ ಸಂಖ್ಯೆ 6ರ ಮೂಲಕ ದಿನಾಂಕ: 19.3.2005 ರಿಂದ ಪ್ರತಿಯೋಜಿಸಲಾಗಿದೆ.

(ii) (1)ನೇ ಬಾಬಿನ ಅಡಿಯಲ್ಲಿ ಬರುವವುಗಳ ಹೊರತಾದ ಸಂದರ್ಭಗಳಲ್ಲಿ, ಇತರ ಸಂದರ್ಭಗಳಲ್ಲಿ, ವಿಧಿಸಬಹುದಾದ ದಂಡವು, ಸಾಗಣೆಯಲ್ಲಿರುವ ಸರಕುಗಳ ಸಂಬಂಧದಲ್ಲಿ ವಿಧಿಸಬಹುದಾದ ತೆರಿಗೆಯ

ಮೊಬಲಗಿನ ಎರಡರಷ್ಟಕ್ಕೆ ಕಡಿಮೆ ಇರತಕ್ಕದ್ದಲ್ಲ, ಆದರೆ, ತೆರಿಗೆಯ ಮೊಬಲಗಿನ ಮೂರುಪಟ್ಟನ್ನು ಮೀರತಕ್ಕದ್ದಲ್ಲ.

[1][ಪರಂತು, ವಿಧಿಸಬಹುದಾದ ತೆರಿಗೆಯ ದರವು ಶೇಕಡಾ ನಾಲ್ಕಕ್ಕಿಂತ ಕಡಿಮೆ ಇರುವ ಯಾವುದೇ ಸರಕುಗಳ ಸಂಬಂಧದಲ್ಲಿ (ii) ನೇ ಉಪಖಂಡದ ಅಡಿಯಲ್ಲಿ ವಿಧಿಸಬಹುದಾದ ದಂಡವು, ವಿಧಿಸಬಹುದಾದ ತೆರಿಗೆಯ ಮೊಬಲಗಿನ ಐದರಷ್ಟಕ್ಕೆ ಸಮನಾಗಿರತಕ್ಕದ್ದು.][1]

1. 2011ರ ಅಧಿನಿಯಮ ಸಂಖ್ಯೆ 12ರ ಮೂಲಕ ದಿನಾಂಕ: 1.4.2011 ರಿಂದ ಸೇರಿಸಲಾಗಿದೆ.

(ಬಿ) ವಿಧಿಸಬಹುದಾದ ದಂಡದ ಮೊಬಲಗು, ಸರಕುಗಳ ಮೌಲ್ಯಕ್ಕಿಂತ ಹೆಚ್ಚಿನದ್ದಾಗಿದ್ದರೆ, ವಿಧಿಸಬಹುದಾದ ದಂಡದ ಮೊಬಲಗನ್ನು ಅಂಥ ಮೌಲ್ಯಕ್ಕೆ ಸೀಮಿತಗೊಳಿಸತಕ್ಕದ್ದು.

(ಸಿ) ಮೇಲಿನ (10)ನೇ ಉಪ-ಪ್ರಕರಣದ ಅಡಿಯಲ್ಲಿನ ವ್ಯವಹರಣೆಗಳಲ್ಲಿ, ವಿಧಿಸಲಾದ ದಂಡವನ್ನು ಸಂದಾಯ ಮಾಡದಿದ್ದಲ್ಲಿ, ಸಾಗಾಣಿಕೆದಾರ ಅಥವಾ ಸರಕು ರಕ್ಷಕ ಅಥವಾ ಸರಕು ವಾಹನಗಳ ಪ್ರಭಾರದಲ್ಲಿರುವ ವ್ಯಕ್ತಿಯು ಜಂಟಿಯಾಗಿ ಮತ್ತು ಪ್ರತ್ಯೇಕವಾಗಿ ಸಂದಾಯ ಮಾಡಲು ಬದ್ಧನಾಗತಕ್ಕದ್ದು.

(ಡಿ) ಈ ಉಪ-ಪ್ರಕರಣದ ಅಡಿಯಲ್ಲಿನ ಯಾವುದೇ ದಂಡವನ್ನು ವಿಧಿಸುವುದಕ್ಕೆ ಮೊದಲು, ಅಧಿಕಾರಿಯು, ಸರಕುಗಳ ವಾಹನ ಅಥವಾ ನಾವೆ, ಹಡಗು ಅಥವಾ ಅಂಥದೇ ನೌಕೆಯ ಪ್ರಭಾರದಲ್ಲಿರುವ ವ್ಯಕ್ತಿಗೆ, ಸಾಗಾಣಿಕೆದಾರನಿಗೆ, ಸರಕು ರಕ್ಷಕನಿಗೆ ಅಥವಾ ಸಂದರ್ಭಾನುಸಾರ, ಈ ಅಧಿನಿಯಮದ ಅಡಿಯಲ್ಲಿ ನೋಂದಾಯಿತವಾದ ವ್ಯಾಪಾರಿಗೆ, ಅಹವಾಲು ಹೇಳಿಕೊಳ್ಳಲು ಸೂಕ್ತ ಅವಕಾಶವನ್ನು ನೀಡತಕ್ಕದ್ದು.

(13) ರಾಜ್ಯದಲ್ಲಿ ಬಟವಾಡೆ ಮಾಡಲಾಗುವ ಸರಕುಗಳ ಗಮ್ಯ ಸ್ಥಾನವು, ಸರಕುಗಳ ವಾಹನ ಅಥವಾ ನಾವೆ, ಹಡಗು ಅಥವಾ ಅಂಥದೇ ನೌಕೆಯನ್ನು ತಡೆದು ನಿಲ್ಲಿಸಿದ ಸ್ಥಳವು ಚೆಕ್‌ಪೋಸ್ಟ್‌ನ ಅಥವಾ ಸುಂಕದ ಕಟ್ಟೆಯ ಅಥವಾ ಇತರೆ ಯಾವುದೇ ಸ್ಥಳದಿಂದ ಒಂದು ನೂರು ಕಿಲೋಮೀಟರಿಗೆ ಕಡಿಮೆ ಇರದಿದ್ದಲ್ಲಿ, (12)ನೇ ಉಪ-ಪ್ರಕರಣದ ಅಡಿಯಲ್ಲಿ ಪ್ರಾರಂಭಿಸಲಾದ ವ್ಯವಹರಣೆಗಳ ವಿರುದ್ಧ ಕಾರಣವನ್ನು ತೋರಿಸಲು ಸಂಬಂಧಪಟ್ಟ ವ್ಯಕ್ತಿಗೆ ಹತ್ತು ದಿನಗಳಿಗಿಂತ ಕಡಿಮೆಯಲ್ಲದ ಅವಧಿಯನ್ನು ನೀಡತಕ್ಕದ್ದು.

(14) (ಎ) ವಿಧಿಸಲಾದ ದಂಡವನ್ನು ಸಂದಾಯ ಮಾಡದಿದ್ದಲ್ಲಿ, ದಂಡವನ್ನು ವಿಧಿಸುವ ಅಧಿಕಾರಿಯು, ವಿಧಿಸಲಾದ ದಂಡದ ಮೊಬಲಗನ್ನು ಭರಿಸಲು ಸಾಕಷ್ಟು ಇದೆ ಎಂದು ಅವನು ಅಭಿಪ್ರಾಯಪಡುವಷ್ಟು ಪ್ರಮಾಣದ ಸರಕುಗಳನ್ನು ಸ್ವಾಧೀನಪಡಿಸಿಕೊಳ್ಳಲು ಮತ್ತು ವಿಧಿಸಲಾದ ದಂಡವನ್ನು ಸಂದಾಯ ಮಾಡುವವರೆಗೆ ಅಥವಾ ಹತ್ತು ದಿನಗಳವರೆಗೆ, ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಅದನ್ನು ತನ್ನಲ್ಲಿ ಇಟ್ಟುಕೊಳ್ಳಲು ಅಧಿಕಾರ ಹೊಂದಿರತಕ್ಕದ್ದು.

(ಬಿ) ಸರಕು ವಾಹನವು, ದ್ರವ ರೂಪದ ಅಥವಾ ಅನಿಲ ರೂಪದ ವಸ್ತುವನ್ನು ಸಾಗಿಸುತ್ತಿರುವ ಒಂದು ಟ್ಯಾಂಕರ್ ಆಗಿದ್ದಲ್ಲಿ ಅಥವಾ ಅದು ಏಕ ಘಟಕ ರೂಪದಲ್ಲಿರುವ ಭಾಗ ಅಥವಾ ಭಾಗಗಳನ್ನಾಗಿ ಪ್ರತ್ಯೇಕಿಸಲಾಗದಿರುವ ವಸ್ತು ರೂಪದಲ್ಲಿದ್ದ ಕಾರಣಗಳಿಗಾಗಿ ವಿಧಿಸಲಾದ ದಂಡದ ಮೊಬಲಗನ್ನು ಭರಿಸಲು ಸಾಕಷ್ಟಾಗುವ ಸರಕುಗಳನ್ನು ಮಾತ್ರ ಸ್ವಾಧೀನಕ್ಕೆ ತೆಗೆದುಕೊಳ್ಳುವುದು ವಾಸ್ತವವಾಗಿ ಕಾರ್ಯಸಾಧ್ಯವಾಗದಿದ್ದಲ್ಲಿ, ದಂಡವನ್ನು ವಿಧಿಸುವ ಅಧಿಕಾರಿಯು, ಸಂದರ್ಭಾನುಸಾರ ಸರಕುಗಳ ವಾಹನವನ್ನು ಅಥವಾ ಸಂಪೂರ್ಣ ಸರಕುಗಳನ್ನು ಸ್ವಾಧೀನಕ್ಕೆ ತೆಗೆದುಕೊಳ್ಳುವ ಅಧಿಕಾರ ಹೊಂದಿರತಕ್ಕದ್ದು ಮತ್ತು ವಿಧಿಸಲಾದ ದಂಡವನ್ನು ಸಂದಾಯ ಮಾಡುವವರೆಗೆ ಅಥವಾ ಹತ್ತು ದಿನಗಳವರೆಗೆ, ಇವೆರಡರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಅದನ್ನು ತನ್ನಲ್ಲಿ ಉಳಿಸಿಕೊಳ್ಳತಕ್ಕದ್ದು.

(ಸಿ) ಹತ್ತು ದಿನಗಳ ಅವಧಿಯು ಮುಕ್ತಾಯಗೊಂಡ ತರುವಾಯ, ದಂಡವನ್ನು ಸಂದಾಯ ಮಾಡದಿದ್ದಲ್ಲಿ, ಅಧಿಕಾರಿಯು, ಸರಕುಗಳನ್ನು ಸಾರ್ವಜನಿಕ ಹರಾಜಿನ ಮೂಲಕ ವಿಲೆ ಮಾಡತಕ್ಕದ್ದು ಮತ್ತು ಮಾರಾಟದಿಂದ ಬಂದ ಮೊಬಲಗನ್ನು ದಂಡಕ್ಕಾಗಿ ಹೊಂದಾಣಿಕೆ ಮಾಡತಕ್ಕದ್ದು ಮತ್ತು ಉಳಿದ ಹೆಚ್ಚುವರಿ ಮೊಬಲಗನ್ನು, ರಾಜ್ಯ ಸರ್ಕಾರವು ಭರಿಸಿದ ವೆಚ್ಚವನ್ನು ಕಳೆದ ತರುವಾಯ ನಿಯಮಿಸಲಾದ ರೀತಿಯಲ್ಲಿ ಮರು ಸಂದಾಯ ಮಾಡತಕ್ಕದ್ದು.

(ಡಿ) [1][ಸರಕುಗಳನ್ನು ಅಥವಾ ಸರಕು ವಾಹನವನ್ನು ಸ್ವಾಧೀನಕ್ಕೆ ತೆಗೆದುಕೊಳ್ಳುವುದಕ್ಕೆ ಮೊದಲು ಅಥವಾ ಸ್ವಾಧೀನಕ್ಕೆ ತೆಗೆದುಕೊಂಡ ತರುವಾಯ ಹತ್ತು ದಿನಗಳೊಳಗೆ ಮಾಲೀಕ ಅಥವಾ ಸರಕು ವಾಹನದ ಪ್ರಭಾರದಲ್ಲಿರುವ ವ್ಯಕ್ತಿಯು ಅಥವಾ ಈ ಅಧಿನಿಯಮದ ಅಡಿಯಲ್ಲಿ ನೋಂದಾಯಿಸಲ್ಪಟ್ಟ ವ್ಯಾಪಾರಿಯು, ವಿಧಿಸಿದ ದಂಡವನ್ನು ಸಂದಾಯ

ಮಾಡಿದರೆ ಅಂಥ ಸ್ವಾಧೀನವನ್ನು ತೆಗೆದುಕೊಂಡ ಅಧಿಕಾರಿಯು ಸರಕುಗಳನ್ನು ಅಥವಾ ಸರಕು ವಾಹನವನ್ನು ಹಾಗೆ ಸಂದಾಯವನ್ನು ಮಾಡುವ ವ್ಯಕ್ತಿಗೆ ಕೂಡಲೇ ಹಿಂದಿರುಗಿಸತಕ್ಕದ್ದು.]

1. 2005ರ ಅಧಿನಿಯಮ ಸಂಖ್ಯೆ 6ರ ಮೂಲಕ ದಿನಾಂಕ: 19.3.2005 ರಿಂದ ಪ್ರತಿಯೋಜಿಸಲಾಗಿದೆ.

(ಇ) ಕೆಟ್ಟು ಹೋಗುವ ಸರಕುಗಳ ಸಂಬಂಧದಲ್ಲಿ, ಅಧಿಕಾರಿಯು, ಹತ್ತು ದಿನಗಳ ಅವಧಿಯು ಮುಕ್ತಾಯವಾಗುವುದಕ್ಕೆ ಮೊದಲು, ಅಂಥ ವಿಲೆಯು ಅವಶ್ಯಕವೆಂದು ಅಭಿಪ್ರಾಯಪಟ್ಟಲ್ಲಿ ಅವುಗಳನ್ನು ವಿಲೆ ಮಾಡಬಹುದು.

(15) ಈ ಪ್ರಕರಣದ ಅಡಿಯಲ್ಲಿ ದಂಡ ವಿಧಿಸುವಿಕೆಯಿಂದ ಬಾಧಿತನಾದ ಯಾವೊಬ್ಬ ವ್ಯಕ್ತಿಯು, ತನ್ನ ಮೇಲೆ ಜಾರಿಗೊಳಿಸಿದ ದಂಡದ ಆದೇಶದ ದಿನಾಂಕದಿಂದ ಮೂವತ್ತು ದಿನಗಳೊಳಗೆ ನಿಯಮಿಸಲಾದ ಪ್ರಾಧಿಕಾರಕ್ಕೆ ಅಪೀಲು ಮಾಡಿಕೊಳ್ಳಬಹುದು.

**54. ರಾಜ್ಯದ ಮೂಲಕ ರಸ್ತೆ ಮಾರ್ಗವಾಗಿ ಸರಕುಗಳ ಸಾಗಣೆ ಮತ್ತು ಸಾಗಣೆ ಪಾಸ್ ನೀಡುವುದು.**– (1) [2][ಸರ್ಕಾರ ಅಥವಾ ಆಯುಕ್ತನು ಅಧಿಸೂಚಿಸಬಹುದಾದಂಥ ಸರಕುಗಳನ್ನು ಕೊಂಡೊಯ್ಯುತ್ತಿರುವ ಒಂದು ವಾಹನವು,][2]

(ಎ) ರಾಜ್ಯದ ಹೊರಗಿನ ಯಾವುದೇ ಸ್ಥಳದಿಂದ ಮತ್ತು ರಾಜ್ಯದ ಹೊರಗಿನ ಯಾವುದೇ ಸ್ಥಳಕ್ಕಾಗಿ ರಾಜ್ಯದ ಮೂಲಕ ಹಾದು ಹೋದರೆ; ಅಥವಾ

(ಬಿ) ದೇಶದ ಹೊರಗಿನ ಯಾವುದೇ ಸ್ಥಳದಿಂದ ರಾಜ್ಯಕ್ಕೆ ಆಮದು ಮಾಡಿಕೊಂಡರೆ ಮತ್ತು ಅಂಥ ಸರಕುಗಳನ್ನು ರಾಜ್ಯದ ಹೊರಗಿನ ಯಾವುದೇ ಸ್ಥಳಕ್ಕೆ ಕೊಂಡೊಯ್ದರೆ;

– ಅಂಥ ವಾಹನದ ಚಾಲಕ ಅಥವಾ ಅದರ ಪ್ರಭಾರದಲ್ಲಿರುವ ಯಾವೊಬ್ಬ ಇತರ ವ್ಯಕ್ತಿಯು ಅವಶ್ಯಕವಿರುವ ಮಾಹಿತಿಯನ್ನು ಒದಗಿಸತಕ್ಕದ್ದು ಮತ್ತು ನಿಯಮಿಸಬಹುದಾದ ಅಂಥ ವಿವರಗಳನ್ನು ಒಳಗೊಂಡ ಒಂದು ಸಾಗಣೆ ಪಾಸನ್ನು ದ್ವಿಪ್ರತಿಯಲ್ಲಿ, ಅವನು ರಾಜ್ಯದೊಳಗೆ ಪ್ರವೇಶಿಸಿದ ತರುವಾಯ ಅಥವಾ ಸಂದರ್ಭಾನುಸಾರ ರಾಜ್ಯದಿಂದ ಸಾಗಣೆಯು ಪ್ರಾರಂಭಗೊಂಡ ತರುವಾಯ ಮೊದಲನೇ ಚೆಕ್‌ಪೋಸ್ಟ್ ಅಥವಾ ಸುಂಕದ ಕಟ್ಟೆಯ ಅಥವಾ ಸರಕು ವಾಹನವು ರಾಜ್ಯದೊಳಕ್ಕೆ ಪ್ರವೇಶಿಸಿದ ತರುವಾಯ ತಡೆದು ನಿಲ್ಲಿಸಿದ ಮೇಲೆ ಅಥವಾ ಸಂದರ್ಭಾನುಸಾರ ಸಾಗಣೆ ಪ್ರಾರಂಭಗೊಂಡ ತರುವಾಯ, [1][53ನೇ ಪ್ರಕರಣದ][1] ಉದ್ದೇಶಗಳಿಗಾಗಿ ಪ್ರಾಧಿಕೃತನಾದ ಅಧಿಕಾರಿಯಿಂದ ಪಡೆದುಕೊಳ್ಳತಕ್ಕದ್ದು.

1. 2010ರ ಅಧಿನಿಯಮ ಸಂಖ್ಯೆ 4ರ ಮೂಲಕ ದಿನಾಂಕ: 11.03.2005 ರಿಂದ ಪ್ರತಿಯೋಜಿಸಲಾಗಿದೆ ಎಂದು ಭಾವಿಸತಕ್ಕದ್ದು.
2. 2012ರ ಅಧಿನಿಯಮ ಸಂಖ್ಯೆ 17ರ ಮೂಲಕ ದಿನಾಂಕ: 1.4.2012ರಿಂದ ಪ್ರತಿಯೋಜಿಸಲಾಗಿದೆ.

[1][ಪರಂತು, ರಾಜ್ಯದೊಳಗೆ ಅಂಥ ವಾಹನವು ಪ್ರವೇಶಿಸಿದ ತರುವಾಯ ಅಥವಾ ರಾಜ್ಯದಿಂದ ಅದರ ಸಾಗಣೆಯು ಆರಂಭಗೊಂಡ ತರುವಾಯ, ಸಾಗಣೆ ಪಾಸನ್ನು ನೀಡುವುದಕ್ಕಾಗಿ, ವಾಹನದ ಚಾಲಕ ಅಥವಾ ಅದರ ಪ್ರಭಾರದಲ್ಲಿರುವ ಯಾವೊಬ್ಬ ಇತರ ವ್ಯಕ್ತಿಯು ಒದಗಿಸತಕ್ಕ ಅವಶ್ಯಕ ಮಾಹಿತಿಯನ್ನು ಯಾವ ವೆಬ್‌ಸೈಟ್‌ನ ಮೂಲಕ ಒದಗಿಸಬೇಕೋ ಆ ವೆಬ್‌ಸೈಟ್‌ನ್ನು ಆಯುಕ್ತನು ಅಧಿಸೂಚಿಸಬಹುದು. ಆಯುಕ್ತನು ವೆಬ್‌ಸೈಟನ್ನು ಹಾಗೆ ಅಧಿಸೂಚಿಸಿದಲ್ಲಿ, ವಾಹನವು ರಾಜ್ಯದೊಳಗೆ ಪ್ರವೇಶಿಸಿದ ತರುವಾಯ ಅಥವಾ ರಾಜ್ಯದಿಂದ ಸಾಗಣೆಯನ್ನು ಪ್ರಾರಂಭಿಸಿದ ತರುವಾಯ ವಾಹನದ ಚಾಲಕ ಅಥವಾ ಯಾವೊಬ್ಬ ಇತರ ವ್ಯಕ್ತಿಯು ಸಾಗಣೆ ಪಾಸಿಗಾಗಿ ಮೇಲಿನ ಮಾಹಿತಿಯನ್ನು ಅಧಿಸೂಚಿತ ವೆಬ್‌ಸೈಟ್‌ನಲ್ಲಿ ನಮೂದಿಸತಕ್ಕದ್ದು.][1]

1. 2012ರ ಅಧಿನಿಯಮ ಸಂಖ್ಯೆ 17ರ ಮೂಲಕ ದಿನಾಂಕ: 1.4.2012ರಿಂದ ಪ್ರತಿಯೋಜಿಸಲಾಗಿದೆ.

(2) ಚಾಲಕ ಅಥವಾ ವಾಹನದ ಪ್ರಭಾರದಲ್ಲಿರುವ ವ್ಯಕ್ತಿಯು, ಅವನು ರಾಜ್ಯದಿಂದ ಹೊರಗೆ ಹೋಗುವುದಕ್ಕೆ ಮೊದಲು ಕೊನೆಯ ಚೆಕ್‌ಪೋಸ್ಟ್ ಅಥವಾ ಸುಂಕದ ಕಟ್ಟೆಯ ಪ್ರಭಾರದಲ್ಲಿರುವ ಅಧಿಕಾರಿಗೆ (1)ನೇ ಉಪ-ಪ್ರಕರಣದ ಅಡಿಯಲ್ಲಿ ಪಡೆದ ಸಾಗಣೆ ಪಾಸಿನ ಒಂದು ಪ್ರತಿಯನ್ನು ಗೊತ್ತುಪಡಿಸಿದ ಸಮಯದೊಳಗೆ ನೀಡತಕ್ಕದ್ದು.

[1][ಪರಂತು, ಚಾಲಕ ಅಥವಾ ವಾಹನದ ಪ್ರಭಾರದಲ್ಲಿರುವ ವ್ಯಕ್ತಿಯು ಚೆಕ್‌ಪೋಸ್ಟ್ ಅಥವಾ ಸುಂಕದಕಟ್ಟೆ ಇಲ್ಲದ ಮಾರ್ಗದ ಮೂಲಕ ರಾಜ್ಯದಿಂದ ಹೊರಗೆ ಹೋಗುವ ಮೊದಲು (1)ನೇ ಉಪ-ಪ್ರಕರಣದಡಿಯಲ್ಲಿ ಪಡೆದ ಸಾಗಣೆ ಪಾಸಿನ ವಿವರಗಳನ್ನು ನಮೂದಿಸತಕ್ಕಂಥ ವೆಬ್‌ಸೈಟ್‌ನ್ನು ಆಯುಕ್ತನು ಅಧಿಸೂಚಿಸಬಹುದು. ಆಯುಕ್ತನು ಹಾಗೆ ವೆಬ್‌ಸೈಟನ್ನು ಅಧಿಸೂಚಿಸಿದಲ್ಲಿ ವಾಹನದ ಚಾಲಕ ಅಥವಾ ಅದರ ಪ್ರಭಾರದಲ್ಲಿರುವ ಇತರ ಯಾವೊಬ್ಬ ವ್ಯಕ್ತಿಯು, (1)ನೇ ಉಪಪ್ರಕರಣದ ಅಡಿಯಲ್ಲಿ ಪಡೆದ ಸಾಗಣೆ ಪಾಸಿನ ವಿವರಗಳನ್ನು ಅಧಿಸೂಚಿತ ವೆಬ್‌ಸೈಟಿನಲ್ಲಿ ನಮೂದಿಸತಕ್ಕದ್ದು.][1]

1. 2012ರ ಅಧಿನಿಯಮ ಸಂಖ್ಯೆ 17ರ ಮೂಲಕ ದಿನಾಂಕ: 1.4.2012ರಿಂದ ಸೇರಿಸಲಾಗಿದೆ.

(3) (ಎ) ಯಾವುದೇ ಕಾರಣಕ್ಕಾಗಿ ಸರಕು ವಾಹನದಲ್ಲಿ ಸಾಗಿಸುತ್ತಿರುವ ಸರಕುಗಳನ್ನು ರಾಜ್ಯದೊಳಗೆ ಪ್ರವೇಶಿಸಿದ ತರುವಾಯ ಅಥವಾ ಸಂದರ್ಭಾನುಸಾರ ಸಾಗಣೆಯು ಮುಂದುವರೆಯಲು ಪ್ರಾರಂಭವಾದ ತರುವಾಯ, ಸಾಗಣೆ ಪಾಸಿನಲ್ಲಿ ಗೊತ್ತುಪಡಿಸಲಾದ ಸಮಯದೊಳಗೆ ರಾಜ್ಯದಿಂದ ಹೊರಕ್ಕೆ ಸಾಗಿಸದಿದ್ದರೆ, ಸರಕುಗಳ ವಾಹನದ ಮಾಲೀಕನು, ಈ ಸಂಬಂಧದಲ್ಲಿ ಪ್ರಾಧಿಕೃತನಾದ ಅಧಿಕಾರಿಗೆ ಅಂಥ ವಿಳಂಬಕ್ಕೆ ಕಾರಣಗಳನ್ನು ಮತ್ತು ಅದಕ್ಕೆ ಸಂಬಂಧಪಟ್ಟಂತೆ ಯಾವುವಾದರೂ ಇತರೆ ವಿವರಗಳು ಇದ್ದಲ್ಲಿ ಅವುಗಳನ್ನು ನೀಡತಕ್ಕದ್ದು ಮತ್ತು ಅಂಥ ಅಧಿಕಾರಿಯು, ಸೂಕ್ತ ವಿಚಾರಣೆಯ ತರುವಾಯ, ಸಾಗಣೆ ಪಾಸನ್ನು ಸೂಕ್ತ ತಿದ್ದುಪಡಿ ಮಾಡುವ ಮೂಲಕ, ಹೊರಕ್ಕೆ ಹೋಗಬಹುದಾದ ಕಾಲಾವಧಿಯನ್ನು ವಿಸ್ತರಿಸತಕ್ಕದ್ದು.

(ಬಿ) ಒಂದು ವಾಹನದ ಮೂಲಕ ಸರಕುಗಳನ್ನು ಒಯ್ಯುತ್ತಿರುವಲ್ಲಿ, ಅವುಗಳು ರಾಜ್ಯದೊಳಗೆ ಪ್ರವೇಶಿಸಿದ ತರುವಾಯ ಅಥವಾ ಸಾಗಣೆಯು ಪ್ರಾರಂಭಗೊಂಡ ತರುವಾಯ, ಸಂದರ್ಭಾನುಸಾರ ಇತರ ಯಾವುದೇ ವಾಹನ ಅಥವಾ ಸಾರಿಗೆಯ ಮೂಲಕ ರಾಜ್ಯದಿಂದ ಹೊರಕ್ಕೆ ಸರಕು ವರ್ಗಾವಣೆಯನ್ನು ಮಾಡುತ್ತಿರುವಲ್ಲಿ, ಆ ಸರಕುಗಳು ವಾಸ್ತವವಾಗಿ ರಾಜ್ಯದಿಂದ ಹೊರಕ್ಕೆ ಹೋಗಿವೆ ಎಂದು ರುಜುವಾತುಪಡಿಸುವ ಹೊಣೆಯು, ಪ್ರಾರಂಭದಲ್ಲಿ ಸರಕುಗಳನ್ನು ರಾಜ್ಯದೊಳಕ್ಕೆ ತಂದಿರುವ ವಾಹನದ ಮಾಲೀಕನ ಮೇಲಿರತಕ್ಕದ್ದು.

(4) ಚಾಲಕ ಅಥವಾ ವಾಹನದ ಪ್ರಭಾರದಲ್ಲಿರುವ ಇತರ ಯಾವೊಬ್ಬ ವ್ಯಕ್ತಿಯು, (2)ನೇ ಉಪ-ಪ್ರಕರಣವನ್ನು ಪಾಲಿಸದಿದ್ದಲ್ಲಿ, ಆ ಮೂಲಕ ಸಾಗಣೆ ಮಾಡಲಾದ ಸರಕುಗಳನ್ನು ವಾಹನದ ಮಾಲೀಕನು ರಾಜ್ಯದೊಳಗೆ ಮಾರಾಟ ಮಾಡಿರುವನೆಂದು ಪೂರ್ವಭಾವನೆ ಮಾಡತಕ್ಕದ್ದು ಮತ್ತು ಅವನು ತೆರಿಗೆ ನೀಡುವ ವ್ಯಕ್ತಿಯಾಗಿರಲಿ ಅಥವಾ ಆಗಿಲ್ಲದಿರಲಿ, ನಿಯಮಿಸಬಹುದಾದ ರೀತಿಯಲ್ಲಿ ಈ ಸಂಬಂಧದಲ್ಲಿ ಪ್ರಾಧಿಕೃತನಾದ ಅಧಿಕಾರಿಯು ಅವನನ್ನು ತೆರಿಗೆ ನಿರ್ಧರಣೆಗೆ ಗುರಿಪಡಿಸತಕ್ಕದ್ದು.

(5) ವಾಹನದ ಮಾಲೀಕನು, (1)ನೇ ಉಪ-ಪ್ರಕರಣದ ಅಡಿಯಲ್ಲಿ ಉಪಬಂಧಿಸಲಾದಂತೆ ಸಾಗಣೆ ಪಾಸ್ ಪಡೆದಿದ್ದು, ಅದನ್ನು (2)ನೇ ಉಪ-ಪ್ರಕರಣದ ಅಡಿಯಲ್ಲಿ ಉಪಬಂಧಿಸಲಾದಂತೆ ಒಪ್ಪಿಸಲು ವಿಫಲನಾದಲ್ಲಿ, ಅವನು ಸಾಗಣೆ ಮಾಡಿದ ಸರಕುಗಳ ಮೇಲೆ ಸಂದಾಯ ಮಾಡಲಾಗುವ ತೆರಿಗೆ ಮೊಬಲಗಿನ ಎರಡರಷ್ಟನ್ನು ಮೀರದ ಒಂದು ಮೊತ್ತವನ್ನು ದಂಡದ ರೂಪದಲ್ಲಿ ಸಂದಾಯ ಮಾಡಲು ಬದ್ಧನಾಗಿರತಕ್ಕದ್ದು.

(6) ಈ ಪ್ರಕರಣದ ಅಡಿಯಲ್ಲಿ ವಿಧಿಸಲಾದ ತೆರಿಗೆ ಮೊಬಲಗು ಮತ್ತು ದಂಡವನ್ನು ನಿಯಮಿಸಲಾದ ರೀತಿಯಲ್ಲಿ ವಸೂಲಿ ಮಾಡತಕ್ಕದ್ದು.

(7) ಮೇಲಿನ (4)ನೇ ಉಪ-ಪ್ರಕರಣದ ಅಡಿಯಲ್ಲಿ ತೆರಿಗೆ ನಿರ್ಧರಣೆಗೆ ಗುರಿಯಾದ ವಾಹನದ ಮಾಲೀಕನು, ಅಂಥ ತೆರಿಗೆ ನಿರ್ಧರಣೆಯ ತರುವಾಯ ರಾಜ್ಯದ ಹೊರಗಿನ ಯಾವುದೇ ಸ್ಥಳದಿಂದ ಅಥವಾ ಸಂದರ್ಭಾನುಸಾರ ರಾಜ್ಯದ ಒಳಗಿನಿಂದ ಸರಕು ವಾಹನದಲ್ಲಿ ಈ ಅಧಿನಿಯಮದ ಅಡಿಯಲ್ಲಿ ತೆರಿಗೆಗೆ ಗುರಿಯಾದ ಯಾವುವೇ ಸರಕುಗಳನ್ನು ಸಾಗಿಸುತ್ತಿದ್ದಲ್ಲಿ ಮತ್ತು ರಾಜ್ಯದ ಹೊರಗಿನ ಯಾವುದೇ ಇತರ ಸ್ಥಳಕ್ಕೆ ಹೋಗುತ್ತಿದ್ದಲ್ಲಿ ಮತ್ತು ರಾಜ್ಯದ ಮೂಲಕ ಹಾದುಹೋಗುತ್ತಿದ್ದಲ್ಲಿ, ನಿಯಮಿಸಲಾದ ಪ್ರಾಧಿಕಾರವು, ಈ ಅಧಿನಿಯಮದ ಅಡಿಯಲ್ಲಿ ಅಂಥ ಸರಕುಗಳ ಮೇಲೆ ವಿಧಿಸಲಾಗುವ ತೆರಿಗೆಯ ಎರಡು ಪಟ್ಟಿಗೆ ಸಮನಾದ ಮೊಬಲಗನ್ನು ಅಂಥ ಮಾಲೀಕನಿಂದ ಭದ್ರತೆಯಾಗಿ ಕೇಳಬಹುದು.

(8) ಮೇಲಿನ (7)ನೇ ಉಪ-ಪ್ರಕರಣದ ಅಡಿಯಲ್ಲಿ ಯಾವ ಸರಕು ವಾಹನದಲ್ಲಿ ಸರಕುಗಳನ್ನು ಕೊಂಡೊಯ್ಯಲು ಭದ್ರತಾ ಮೊಬಲಗನ್ನು ಸಂಗ್ರಹಿಸಲಾಗಿತ್ತೋ ಅದು ರಾಜ್ಯದ ಮೂಲಕ ಹಾದು ಹೋಗಿತ್ತು ಎಂಬುದರ ಬಗ್ಗೆ ನಿಯಮಿಸಲಾದ ಪ್ರಾಧಿಕಾರಕ್ಕೆ, ಮನವರಿಕೆಯಾದ ತರುವಾಯ, ಅದು ಅಂಥ ಭದ್ರತಾ ಮೊಬಲಗನ್ನು ಮಾಲೀಕನಿಗೆ ಮರುಪಾವತಿ ಮಾಡತಕ್ಕದ್ದು.

(9) ನಿಯಮಿಸಲಾದ ಪ್ರಾಧಿಕಾರವು, ಆದೇಶದ ಮೂಲಕ, ಅಂಥ ಮಾಲೀಕನು ಈ ಪ್ರಕರಣದ ಅಡಿಯಲ್ಲಿ ಸಂದಾಯ ಮಾಡಬೇಕಾದ ತೆರಿಗೆ ಅಥವಾ ದಂಡದ ಯಾವುದೇ ಮೊಬಲಗಿಗೆ, ಭದ್ರತಾ ಮೊಬಲಗಿನ ಪೂರ್ಣ ಅಥವಾ ಯಾವುದೇ ಭಾಗವನ್ನು ಹೊಂದಾಣಿಕೆ ಮಾಡಬಹುದು.

(10) [1][ಒಬ್ಬ ವ್ಯಕ್ತಿಯ ಮಾಲೀಕತ್ವದಲ್ಲಿರುವ ಒಂದು ವಾಹನವನ್ನು ಸಾಗಾಣಿಕೆ ಅಥವಾ ಅದೇ ಬಗೆಯ ಇತರ ಏಜನ್ಸಿಯೂ ಸೇರಿದಂತೆ ಇನ್ನೊಬ್ಬ ವ್ಯಕ್ತಿಯು ಸರಕು ಸಾಗಾಣಿಕೆಗಾಗಿ ಬಾಡಿಗೆಗಾಗಿ ತೆಗೆದುಕೊಂಡಿದ್ದರೆ ಇಬ್ಬರೂ ವ್ಯಕ್ತಿಗಳನ್ನು ಈ ಪ್ರಕರಣದ ಉದ್ದೇಶಕ್ಕಾಗಿ ವಾಹನದ ಮಾಲೀಕರೆಂದು ಭಾವಿಸತಕ್ಕದ್ದು ಮತ್ತು ಅವರು ಸಂದಾಯ ಮಾಡತಕ್ಕ ತೆರಿಗೆ ಅಥವಾ ದಂಡದ ಯಾವುದೇ ಮೊಬಲಗನ್ನು ಸಂದಾಯ ಮಾಡಲು ಜಂಟಿಯಾಗಿ ಮತ್ತು ವೈಯಕ್ತಿಕವಾಗಿ ಹೊಣೆಗಾರರಾಗಿರತಕ್ಕದ್ದು.][1]

1. 2005ರ ಅಧಿನಿಯಮ ಸಂಖ್ಯೆ 6ರ ಮೂಲಕ ದಿನಾಂಕ: 19.3.2005 ರಿಂದ ಪ್ರತಿಯೋಜಿಸಲಾಗಿದೆ.

**55. ಸರಕುಗಳ ಕಡಿಮೆ ಮೌಲ್ಯಮಾಪನ ಮಾಡಿದ ಸಂದರ್ಭದಲ್ಲಿ ದಂಡ.-** (1) ಈ ಅಧಿನಿಯಮದ ಅಡಿಯಲ್ಲಿ ತೆರಿಗೆಗೆ ಬದ್ಧವಾದ ಸರಕುಗಳಿಗೆ ಸಂಬಂಧಪಟ್ಟಂತೆ, ಅವುಗಳನ್ನು ಸರಕು ವಾಹನ ಅಥವಾ ದೋಣಿ, ಹಡಗು ಅಥವಾ ಅಂಥದೇ ನೌಕೆಯಲ್ಲಿ ಕೊಂಡೊಯ್ಯುತ್ತಿದ್ದರೆ ಅಥವಾ ಯಾವೊಬ್ಬ ವ್ಯಾಪಾರಿಯು ಅಥವಾ ಅವನ ಪರವಾಗಿ ಇತರ ಯಾವೊಬ್ಬ ವ್ಯಕ್ತಿಯು ದಾಸ್ತಾನು ಹೊಂದಿದ್ದರೆ ಅಥವಾ ಯಾವೊಬ್ಬ ಸಾರಿಗೆದಾರನ ಅಭಿರಕ್ಷೆಯಲ್ಲಿದ್ದರೆ, ನಿಯಮಿಸಲಾದ ಪ್ರಾಧಿಕಾರ ಅಥವಾ 53ನೇ ಪ್ರಕರಣದ ಅಡಿಯಲ್ಲಿ ಪ್ರಾಧಿಕೃತನಾದ ಅಧಿಕಾರಿಯು, ಸಾಗಣೆಯಲ್ಲಿನ ಸರಕುಗಳ ಜೊತೆ ಇರುವ ದಸ್ತಾವೇಜಿನಲ್ಲಿ ಅಥವಾ ಖರೀದಿ ಬಿಲೆಪಟ್ಟಿಯಲ್ಲಿ ತೋರಿಸಿದ ಮೌಲ್ಯವು ಪ್ರಸಕ್ತ ಮಾರುಕಟ್ಟೆ ಬೆಲೆಗಿಂತ ಅಥವಾ ಗರಿಷ್ಠ ಚಿಲ್ಲರೆ ಬೆಲೆಗಿಂತ ಶೇಕಡಾ ಮೂವತ್ತು ಅಥವಾ ಅದಕ್ಕಿಂತ ಹೆಚ್ಚಿಗೆ ವ್ಯತ್ಯಾಸದಷ್ಟು [1][ಮತ್ತು ಅಂಥ ವ್ಯತ್ಯಾಸವು ಮಾರಾಟಗಾರನ ವಾಡಿಕೆಯ ವ್ಯಾಪಾರ ಕ್ರಮಕ್ಕೆ ಅನುಸಾರವಾಗಿ ನೀಡಿದ ಯಾವುದೇ ವಿನಾಯಿತಿಯು ಅಥವಾ ಮಾರ್ಜಿನಿನ ಕಾರಣದಿಂದ ಅಥವಾ ಮಾರಾಟಗಾರನು ನೀಡಿದ ಯಾವುದೇ ವಿಶೇಷ ವಿನಾಯಿತಿ ಅಥವಾ ಮಾರ್ಜಿನಿನ ಕಾರಣದಿಂದ ಅಥವಾ ವ್ಯಾಪಾರಿ ಗುರುತು ಅಥವಾ ಬ್ರಾಂಡ್ ಹೊಂದಿರುವಾತನಿಗೆ ಸರಕನ್ನು ತಯಾಸಿದ ತರುವಾಯ ಮಾರಾಟಗಾರನು ಮಾಡಿದ ಮಾರಾಟದ ಕಾರಣದಿಂದಾಗಿ ಅಲ್ಲದೆ.][1] ಕಡಿಮೆ ಇದೆ ಎಂದು ನಂಬಲು ಕಾರಣವಿದ್ದಲ್ಲಿ ಅಂಥ ಪ್ರಾಧಿಕಾರ ಅಥವಾ ಅಧಿಕಾರಿಗಳು ಕಾರಣಗಳನ್ನು ಲಿಖಿತದಲ್ಲಿ ದಾಖಲಿಸಿ ಮತ್ತು ಆ ವ್ಯಕ್ತಿಗೆ ಅಥವಾ ವ್ಯಾಪಾರಿಗೆ ತನ್ನ ಅಹವಾಲನ್ನು ಹೇಳಿಕೊಳ್ಳಲು ಸೂಕ್ತ ಅವಕಾಶವನ್ನು ಕೊಟ್ಟ ತರುವಾಯ, ಅಂಥ ಸರಕುಗಳ ಮೇಲೆ ಬಾಕಿ ಇರುವ ತೆರಿಗೆ ಮೊಬಲಗಿನ ಎರಡರಷ್ಟನ್ನು ಮೀರತಕ್ಕದ್ದಲ್ಲದ ಮೊಬಲಗನ್ನು ದಂಡವಾಗಿ ವಿಧಿಸಬಹುದು.

1. 2006 ರ ಅಧಿನಿಯಮ ಸಂಖ್ಯೆ 4ರ ಮೂಲಕ ದಿನಾಂಕ: 1.4.2006 ರಿಂದ ಸೇರಿಸಲಾಗಿದೆ.

(2) ಈ ಪ್ರಕರಣದ ಅಡಿಯಲ್ಲಿ ವಿಧಿಸಲಾದ ತೆರಿಗೆಯ ಮತ್ತು ದಂಡದ ಮೊಬಲಗನ್ನು, 53ನೇ ಪ್ರಕರಣದ (14)ನೇ ಉಪ-ಪ್ರಕರಣದ ಅಡಿಯಲ್ಲಿ ನಿರ್ದಿಷ್ಟಪಡಿಸಿದ ರೀತಿಯಲ್ಲಿ ವಸೂಲಿ ಮಾಡತಕ್ಕದ್ದು.

(3) ಸಾಗಣೆಯಲ್ಲಿನ ಸರಕುಗಳ ಮೌಲ್ಯವು, ಅದನ್ನು ತಡೆದು ನಿಲ್ಲಿಸಿದ ಸಮಯದವರೆಗೆ ಭರಿಸಲಾದ ಸರಕುಗಳ ಸಾಗಣೆಯ ವೆಚ್ಚವೂ ಸೇರಿದಂತೆ, ಬೆಲೆಪಟ್ಟಿ, ಚಲನ್, ರವಾನೆ ಚೀಟಿ ಅಥವಾ ಸಂಬಂಧಪಟ್ಟ ಯಾವುದೇ ಇತರ ದಸ್ತಾವೇಜಿನಲ್ಲಿ ನಮೂದಿಸಿದಂತೆ ಒಟ್ಟು ಬೆಲೆಯಾಗಿರತಕ್ಕದ್ದು.

(4) ಬೆಲೆಪಟ್ಟಿ, ಚಲನ್, ರವಾನೆ ಚೀಟಿ ಅಥವಾ ಸಂಬಂಧಪಟ್ಟ ಇತರ ಯಾವುದೇ ದಸ್ತಾವೇಜಿನಲ್ಲಿ ತೋರಿಸಲಾದ ಬೆಲೆಯ ಸಂಬಂಧದಲ್ಲಿ ಕಡಿಮೆ ಮೌಲ್ಯಮಾಪನವಾಗಿದೆಯೇ ಅಥವಾ ಆಗಿಲ್ಲವೇ ಎಂದು ನಿರ್ಧರಿಸುವಲ್ಲಿ, (1)ನೇ ಉಪ-ಪ್ರಕರಣದ ಅಡಿಯಲ್ಲಿ ಅಧಿಕಾರವನ್ನು ಚಲಾಯಿಸುವ ಪ್ರಾಧಿಕಾರವು, ಪ್ಯಾಕ್ ಮಾಡಿದ ಸರಕುಗಳ ವ್ಯವಹಾರ ನಡೆಸುತ್ತಿರುವ ಮಾಲೀಕನ ಹೊರತಾದ, ಸರಕುಗಳ ಮಾಲೀಕನ ಸಂದರ್ಭದಲ್ಲಿ ಪ್ರಸ್ತುತ ಇರುವ ಮಾರುಕಟ್ಟೆ ದರವನ್ನು ಅಥವಾ ಯೋಗ್ಯ ಮಾರುಕಟ್ಟೆ ಮೌಲ್ಯವನ್ನು ಅನ್ವಯಿಸತಕ್ಕದ್ದು ಮತ್ತು ಪ್ಯಾಕ್ ಮಾಡಿದ ಸರಕುಗಳ ವ್ಯವಹಾರವನ್ನು ನಡೆಸುವ ಒಬ್ಬ ಮಾಲೀಕನ ಸಂಬಂಧದಲ್ಲಿ ಗರಿಷ್ಠ ಚಿಲ್ಲರೆ ಬೆಲೆಯನ್ನು ಅನ್ವಯಿಸತಕ್ಕದ್ದು.

(5) ಈ ಪ್ರಕರಣದ ಅಡಿಯಲ್ಲಿ ತನ್ನನ್ನು ಬಾಧಿಸುವ ಒಂದು ಆದೇಶವನ್ನು ಆಕ್ಷೇಪಿಸುವ ಯಾವೊಬ್ಬ ವ್ಯಕ್ತಿಯು, ನಿಯಮಿಸಲಾದ ಪ್ರಾಧಿಕಾರಕ್ಕೆ ಅಪೀಲು ಮಾಡಿಕೊಳ್ಳಬಹುದು.

(6) ಅಂಥ ಅಪೀಲಿನ ಬಗ್ಗೆ, ಸಂದರ್ಭಾನುಸಾರ 62ನೇ ಪ್ರಕರಣದ ಅಥವಾ 64ನೇ ಪ್ರಕರಣದ ಅಡಿಯಲ್ಲಿ ಮಾಡಿದ ಒಂದು ಅಪೀಲು ಎಂಬಂತೆ ವ್ಯವಹರಿಸತಕ್ಕದ್ದು ಮತ್ತು ಆ ಪ್ರಕರಣದ ಎಲ್ಲಾ ಉಪಬಂಧಗಳು, ಅಂಥ ಅಪೀಲಿಗೆ ಯಥೋಚಿತ ವ್ಯತ್ಯಾಸಗಳೊಂದಿಗೆ ಅನ್ವಯವಾಗತಕ್ಕದ್ದು.

**56. ಕೆಲವು ಏಜೆಂಟರು ಮಾಹಿತಿ ಒದಗಿಸಲು ಬದ್ಧತೆ.-** (1) ರಾಜ್ಯದಲ್ಲಿ ತೆರಿಗೆ ವಿಧಿಸಬಹುದಾದ ಸರಕುಗಳ ಸಾಗಣೆಯ ವ್ಯವಹಾರದಲ್ಲಿ ತೊಡಗಿರುವ ಪ್ರತಿಯೊಬ್ಬ ವ್ಯಕ್ತಿ ಅಥವಾ ಒಂದು ಕ್ಲಿಯರಿಂಗ್ ಹೌಸ್ ಅಥವಾ ರವಾನೆ ಮಾಡುವ ಏಜೆನ್ಸಿ, ಅಥವಾ ಏಜೆನ್ಸಿ, [1][ಕೇಂದ್ರ ಸರ್ಕಾರವು ಅಥವಾ ಇತರರು ನಡೆಸುತ್ತಿರುವ ರೈಲ್ವೆಯೂ ಒಳಗೊಂಡಂತೆ][1] ಸಾಗಣೆ ಏಜೆನ್ಸಿ, ಶಿಪ್ಪಿಂಗ್ ಏಜೆನ್ಸಿ, ಶಿಪ್ಪಿಂಗ್-ಔಟ್ ಏಜೆನ್ಸಿ ಅಥವಾ ಸ್ಟೀಮರ್ ಏಜೆನ್ಸಿ ಅಥವಾ ಏರ್‌ಕಾರ್ಗೋ ಏಜೆನ್ಸಿ ಅಥವಾ ಕೊರಿಯರ್ ಏಜೆನ್ಸಿಯು, ಅವನಿಂದ ಅಥವಾ ಅದರಿಂದ ಕ್ಲಿಯರಿಂಗ್ ಮಾಡಲಾದ, ರವಾನಿಸಲಾದ, ಸಾಗಣೆ ಮಾಡಿದ ಅಥವಾ ಹಡಗಿನಲ್ಲಿ ಸಾಗಿಸಿದ, ಯಾವುವೇ ತೆರಿಗೆ ಸಂದಾಯ ಮಾಡಬೇಕಾದ ಸರಕುಗಳಿಗೆ ಸಂಬಂಧಿಸಿದ ಮಾಹಿತಿಯನ್ನು ನಿಯಮಿಸಲಾದ ಪ್ರಾಧಿಕಾರವು ಅಗತ್ಯಪಡಿಸಬಹುದಾದಂತೆ ಯಾವುದೇ ಅವಧಿಯಲ್ಲಿ ಅಥವಾ ಯಾವೊಬ್ಬ ವ್ಯಾಪಾರಿಗೆ ಸಂಬಂಧಪಟ್ಟಂತೆ ನಿಯಮಿಸಲಾದ ಪ್ರಾಧಿಕಾರಕ್ಕೆ ಒದಗಿಸತಕ್ಕದ್ದು.

1. 2006 ರ ಅಧಿನಿಯಮ ಸಂಖ್ಯೆ 4ರ ಮೂಲಕ ದಿನಾಂಕ: 1.4.2006 ರಿಂದ ಸೇರಿಸಲಾಗಿದೆ.

(2) ಈ ಸಂಬಂಧದಲ್ಲಿ ನಿಯಮಿಸಲಾದ ಪ್ರಾಧಿಕಾರವು, ಮೇಲ್ಕಂಡ (1)ನೇ ಉಪ-ಪ್ರಕರಣದ ಅಡಿಯಲ್ಲಿ ಒದಗಿಸಲಾದ ಮಾಹಿತಿಯ ಖಚಿತತೆಯನ್ನು ಪರಿಶೀಲಿಸುವ ದೃಷ್ಟಿಯಿಂದ ಅಂಥ ವ್ಯಕ್ತಿ ಅಥವಾ ಏಜೆನ್ಸಿಯ ಸ್ವಾಧೀನದಲ್ಲಿನ ಲೆಕ್ಕಪುಸ್ತಕಗಳನ್ನು ಅಥವಾ ಇತರೆ ದಸ್ತಾವೇಜುಗಳನ್ನು ಕೇಳುವ ಮತ್ತು ಪರೀಕ್ಷಿಸುವ ಅಧಿಕಾರ ಹೊಂದಿರತಕ್ಕದ್ದು.

(3) ಯಾವುದೇ ಸಮಂಜಸ ಕಾರಣವಿಲ್ಲದೆ (1) ಮತ್ತು (2)ನೇ ಉಪ-ಪ್ರಕರಣಗಳ ಉಪಬಂಧಗಳನ್ನು ಪಾಲಿಸಲು ತಪ್ಪುವ ಯಾವೊಬ್ಬ ವ್ಯಕ್ತಿಯು 75ನೇ ಪ್ರಕರಣದ ಅಡಿಯಲ್ಲಿ ದಂಡಕ್ಕೆ ಬದ್ಧನಾಗಿರತಕ್ಕದ್ದು.

**57. ಬ್ಯಾಂಕುಗಳಿಗೆ ಸಂಬಂಧಪಟ್ಟಂತೆ ವಿಶೇಷ ಸಾಕ್ಷ್ಯದ ಅಗತ್ಯತೆಗಳು.-** ನಿಯಮಿಸಲಾದ ಪ್ರಾಧಿಕಾರವು, ಈ ಅಧಿನಿಯಮದ ಅಡಿಯಲ್ಲಿನ ಯಾವುವೇ ವ್ಯವಹರಣೆಗಳ ಉದ್ದೇಶಕ್ಕಾಗಿ ಯಾವುದೇ ಬ್ಯಾಂಕು ಅಥವಾ ಅದರ ಯಾವೊಬ್ಬ ಅಧಿಕಾರಿಯನ್ನು ಅಂಥ ಮಾಹಿತಿ, ದಸ್ತಾವೇಜು ಅಥವಾ ವಿವರಗಳನ್ನು ಒದಗಿಸುವಂತೆ ಅಗತ್ಯಪಡಿಸಬಹುದು ಮತ್ತು ಯಾವುದೇ ಸಮಂಜಸ ಕಾರಣವಿಲ್ಲದೇ ಅಂಥ ಅಗತ್ಯತೆಯನ್ನು ಪಾಲಿಸಲು ತಪ್ಪುವ ಯಾವೊಬ್ಬ ವ್ಯಕ್ತಿಯು 75ನೇ ಪ್ರಕರಣದ ಅಡಿಯಲ್ಲಿ ದಂಡಕ್ಕೆ ಬದ್ಧನಾಗಿರತಕ್ಕದ್ದು.

## ಅಧ್ಯಾಯ - VI

## ಪ್ರಾಧಿಕಾರಗಳು ಮತ್ತು ಅಪೀಲು ನ್ಯಾಯಾಧಿಕರಣ

**58. ಆಯುಕ್ತ, ಅಪರ ಆಯುಕ್ತರು, ಜಂಟಿ ಆಯುಕ್ತರು, ಉಪ ಆಯುಕ್ತರು, ಸಹಾಯಕ ಆಯುಕ್ತರು, ರಾಜ್ಯ ಪ್ರತಿನಿಧಿಗಳು ಮತ್ತು ವಾಣಿಜ್ಯ ತೆರಿಗೆ ಅಧಿಕಾರಿಗಳು.-** (1) ರಾಜ್ಯ ಸರ್ಕಾರವು, ಈ ಅಧಿನಿಯಮದ ಮೂಲಕ ಅಥವಾ ಅದರ ಅಡಿಯಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಇತರೆ ಯಾವುದೇ ಕಾನೂನಿನ ಮೂಲಕ ಅಥವಾ ಅದರ ಅಡಿಯಲ್ಲಿ ಅವು ಕ್ರಮವಾಗಿ ತಮಗೆ ಪ್ರದತ್ತವಾದ ಪ್ರಕಾರ್ಯಗಳನ್ನು ನಿರ್ವಹಿಸುವ ಉದ್ದೇಶಕ್ಕಾಗಿ ವಾಣಿಜ್ಯ ತೆರಿಗೆಗಳ ಒಬ್ಬ ಆಯುಕ್ತನನ್ನು ಮತ್ತು ತಾನು ಸೂಕ್ತವೆಂದು ಪರಿಗಣಿಸಬಹುದಾದಷ್ಟು ಸಂಖ್ಯೆಯ ಅಪರ ಆಯುಕ್ತರು, ಜಂಟಿ ಆಯುಕ್ತರು, ಉಪ-ಆಯುಕ್ತರು, ಸಹಾಯಕ ಆಯುಕ್ತರು, ರಾಜ್ಯ ಪ್ರತಿನಿಧಿಗಳು ಮತ್ತು ವಾಣಿಜ್ಯ ತೆರಿಗೆ ಅಧಿಕಾರಿಗಳನ್ನು ನೇಮಕಮಾಡಬಹುದು.

(2) ಆಯುಕ್ತನು, ರಾಜ್ಯ ಪ್ರತಿನಿಧಿಯ ಪ್ರಕಾರ್ಯಗಳನ್ನು ನಿರ್ವಹಿಸುವುದಕ್ಕೆ, ಸಹಾಯಕ ಆಯುಕ್ತನ ದರ್ಜೆಗೆ ಕಡಿಮೆಯಲ್ಲದ ದರ್ಜೆಯ ಒಬ್ಬ ಅಧಿಕಾರಿಯನ್ನು ಅಥವಾ ಒಬ್ಬ ನ್ಯಾಯವಾದಿ ಅಥವಾ ಒಬ್ಬ ಚಾರ್ಟರ್ಡ್ ಅಕೌಂಟೆಂಟ್ [1][ಅಥವಾ ಒಬ್ಬ ಕಾಸ್ಟ್ ಅಕೌಂಟೆಂಟ್][1] ಅಥವಾ ನಿಯಮಿಸಬಹುದಾದ ವಿಧಾನದಲ್ಲಿ, ಪಟ್ಟಿಯಲ್ಲಿ ಸೇರಿಸಲಾದ ಒಬ್ಬ ತೆರಿಗೆ ವೃತ್ತಿದಾರನನ್ನು ಪ್ರಾಧಿಕೃತಗೊಳಿಸಬಹುದು.

1. 2007 ರ ಅಧಿನಿಯಮ ಸಂಖ್ಯೆ 6ರ ಮೂಲಕ ದಿನಾಂಕ: 1.4.2007 ರಿಂದ ಸೇರಿಸಲಾಗಿದೆ.

(3) ಅಪೀಲು ನ್ಯಾಯಾಧಿಕರಣದ ಮುಂದೆ ಇರುವ ವ್ಯವಹರಣೆಗಳಲ್ಲಿ, ರಾಜ್ಯ ಪ್ರತಿನಿಧಿಯು,-

(ಎ) ಅರ್ಜಿಗಳು, ಅಪೀಲುಗಳು ಮತ್ತು ಇತರ ದಸ್ತಾವೇಜುಗಳನ್ನು ತಯಾರಿಸಲು ಮತ್ತು ಸಹಿ ಮಾಡಲು;

(ಬಿ) ನ್ಯಾಯಾಧಿಕರಣದ ಮುಂದೆ ಹಾಜರಾಗಲು, ಪ್ರತಿನಿಧಿಸಲು, ಕಾರ್ಯನಿರ್ವಹಿಸಲು ಮತ್ತು ವಾದಿಸಲು;

(ಸಿ) ನೋಟೀಸುಗಳು ಮತ್ತು ಇತರ ವ್ಯವಹರಣೆಗಳನ್ನು ಸ್ವೀಕರಿಸಲು; ಮತ್ತು

(ಡಿ) ಸರ್ಕಾರದ ಪರವಾಗಿ ಅಥವಾ ಈ ಅಧಿನಿಯಮದ ಅಡಿಯಲ್ಲಿ ನೇಮಕಗೊಂಡ ಯಾವೊಬ್ಬ ಅಧಿಕಾರಿಯು, ಅಂಥ ವ್ಯವಹರಣೆಗಳಿಗೆ ಸಂಬಂಧಪಟ್ಟ ಇತರ ಎಲ್ಲಾ ಕಾರ್ಯಗಳನ್ನು ಮಾಡಲು

- ಸಕ್ಷಮನಾಗಿರತಕ್ಕದ್ದು.

**59. ಅಧೀನ ಪ್ರಾಧಿಕಾರಗಳಿಗೆ ಸೂಚನೆಗಳು.-** (1) ಸರ್ಕಾರ ಮತ್ತು ಆಯುಕ್ತನು, ಕಾಲಕಾಲಕ್ಕೆ, ಈ ಅಧಿನಿಯಮದ ನಿರ್ವಹಣೆಗಾಗಿ ತಾವು ಯುಕ್ತವೆಂದು ಭಾವಿಸಬಹುದಾದಂತೆ ಈ ಅಧಿನಿಯಮವನ್ನು ಜಾರಿಗೊಳಿಸುವಲ್ಲಿ ನಿಯೋಜಿತರಾದ [1][ವಾಣಿಜ್ಯ ತೆರಿಗೆ ಇನ್ಸ್‌ಪೆಕ್ಟರುಗಳೂ ಸೇರಿದಂತೆ][1] ಎಲ್ಲಾ ಅಧಿಕಾರಿಗಳಿಗೆ ಹಾಗೂ ವ್ಯಕ್ತಿಗಳಿಗೆ ಅಂಥ ಆದೇಶಗಳು, ಸೂಚನೆಗಳು ಮತ್ತು ನಿರ್ದೇಶನಗಳನ್ನು ಹೊರಡಿಸಬಹುದು ಹಾಗೂ ಅಂಥ ಅಧಿಕಾರಿಗಳು ಮತ್ತು ವ್ಯಕ್ತಿಗಳು ಸರ್ಕಾರದ ಹಾಗೂ ಆಯುಕ್ತನ ಅಂಥ ಆದೇಶಗಳನ್ನು, ಸೂಚನೆಗಳನ್ನು ಹಾಗೂ ನಿರ್ದೇಶನಗಳನ್ನು ಪಾಲಿಸತಕ್ಕದ್ದು ಮತ್ತು ಅನುಸರಿಸತಕ್ಕದ್ದು.

1. 2006 ರ ಅಧಿನಿಯಮ ಸಂಖ್ಯೆ 4ರ ಮೂಲಕ ದಿನಾಂಕ: 1.4.2006 ರಿಂದ ಸೇರಿಸಲಾಗಿದೆ.

(2) ತನ್ನ ಅಪೀಲು ಪ್ರಕಾರ್ಯಗಳನ್ನು ಚಲಾಯಿಸುವಲ್ಲಿ ಯಾವುದೇ ಅಪೀಲು ಪ್ರಾಧಿಕಾರದ ವಿವೇಚನೆಯಲ್ಲಿ ಹಸ್ತಕ್ಷೇಪ ಮಾಡುವ ಅಂಥ ಆದೇಶಗಳು, ಸೂಚನೆಗಳು ಅಥವಾ ನಿರ್ದೇಶನಗಳನ್ನು (1)ನೇ ಉಪಪ್ರಕರಣದ ಅಡಿಯಲ್ಲಿ ಹೊರಡಿಸತಕ್ಕದ್ದಲ್ಲ.

(3) ಈ ಅಧಿನಿಯಮವನ್ನು ಜಾರಿಗೊಳಿಸುವಲ್ಲಿ ನಿಯೋಜಿತರಾದ ಎಲ್ಲಾ ಅಧಿಕಾರಿಗಳು ಹಾಗೂ ವ್ಯಕ್ತಿಗಳು, ಯಾವ ಅಪರ ಆಯುಕ್ತರ ಅಥವಾ ಜಂಟಿ ಆಯುಕ್ತರ ಅಧಿಕಾರ ವ್ಯಾಪ್ತಿಯಲ್ಲಿ ತಮ್ಮ ಪ್ರಕಾರ್ಯಗಳನ್ನು ನಿರ್ವಹಿಸುತ್ತಿರುವರೋ ಅವರು, ಆ ಅಧಿಕಾರಿಗಳ ಮತ್ತು ವ್ಯಕ್ತಿಗಳ ಮಾರ್ಗದರ್ಶನಕ್ಕಾಗಿ ಹೊರಡಿಸಬಹುದಾದ ಅಂಥ ಆಡಳಿತಾತ್ಮಕ ಸೂಚನೆಗಳನ್ನು ಪಾಲಿಸತಕ್ಕದ್ದು ಮತ್ತು ಅನುಸರಿಸತಕ್ಕದ್ದು.

(4) ಹಿಂದೆ ಹೇಳಿದ ಅಧಿಕಾರಗಳ ಸಾಮಾನ್ಯತೆಗೆ ಪ್ರತಿಕೂಲ ಪ್ರಭಾವ ಬೀರದಂತೆ, ಆಯುಕ್ತನು ತಾನಾಗಿಯೇ ಆಗಲಿ ಅಥವಾ ಅಧಿನಿಯಮದ ಅಡಿಯಲ್ಲಿ ತೆರಿಗೆಯನ್ನು ಸಂದಾಯ ಮಾಡಲು ಬದ್ಧನಾದ ಒಬ್ಬ ನೋಂದಾಯಿತ ವ್ಯಾಪಾರಿಯ ಅರ್ಜಿಯ ಮೇಲಾಗಲಿ, ತೆರಿಗೆಯ ನಿರ್ಧರಣೆ ಹಾಗೂ ರಾಜಸ್ವದ ಸಂಗ್ರಹಣೆ ಕಾರ್ಯದಲ್ಲಿ ಏಕರೂಪತೆಯನ್ನು ತರುವ ಉದ್ದೇಶಕ್ಕಾಗಿ, ಈ ಅಧಿನಿಯಮದ ಅಡಿಯಲ್ಲಿ ತೆರಿಗೆಗೆ ಗುರಿಯಾಗತಕ್ಕ ಸರಕುಗಳ ಸಂಬಂಧದಲ್ಲಿ, ಈ ಅಧಿನಿಯಮದ ಅಡಿಯಲ್ಲಿ ಸಂದಾಯ ಮಾಡತಕ್ಕ ತೆರಿಗೆಯ ದರವನ್ನು ಸ್ಪಷ್ಟಪಡಿಸುವುದು ಅವಶ್ಯವೆಂದು ಅಥವಾ ಯುಕ್ತವೆಂದು ಭಾವಿಸಿದರೆ ಹಾಗೆ ಮಾಡಬಹುದು ಮತ್ತು ಈ ಅಧಿನಿಯಮವನ್ನು ಜಾರಿಗೊಳಿಸುವಲ್ಲಿ ನಿಯೋಜಿತರಾದ ಎಲ್ಲಾ ಅಧಿಕಾರಿಗಳು ಹಾಗೂ ವ್ಯಕ್ತಿಗಳು ಅಂಥ ಸ್ಪಷ್ಟೀಕರಣವನ್ನು ಪಾಲಿಸತಕ್ಕದ್ದು ಮತ್ತು ಅನುಸರಿಸತಕ್ಕದ್ದು.

(5) ಮೇಲಿನ (4)ನೇ ಉಪ ಪ್ರಕರಣದ ಅಡಿಯಲ್ಲಿನ ಅಂಥ ಅರ್ಜಿಯ ಜೊತೆಗೆ ನಿಯಮಿಸಬಹುದಾದ ಅಂಥ ರೀತಿಯಲ್ಲಿ ಅಂಥ ಶುಲ್ಕವನ್ನು ಸಂದಾಯ ಮಾಡಿದ ರುಜುವಾತು ಇದ್ದ ಹೊರತು ಅದನ್ನು ಪರಿಗಣಿಸತಕ್ಕದ್ದಲ್ಲ.

[2][[1][**60. ಸ್ಪಷ್ಟೀಕರಣ ಹಾಗೂ ಪೂರ್ವಭಾವಿ ನಿರ್ಣಯಗಳು.–** (1) ಆಯುಕ್ತನು, ಅಧಿನಿಯಮದ ಅಡಿಯಲ್ಲಿ ನಿರ್ದಿಷ್ಟಪಡಿಸಬಹುದಾದಂತೆ ಯಾವುದೇ ಪ್ರಕರಣ ಅಥವಾ ವರ್ಗಗಳ ಪ್ರಕರಣಗಳಲ್ಲಿ ಯಾವುವೇ ಸರಕುಗಳ ಸಂಬಂಧದಲ್ಲಿ ತೆರಿಗೆಯ ದರದ ಬಗ್ಗೆ ಅಥವಾ ಯಾವುದೇ ವ್ಯವಹರಣೆಯ ತೆರಿಗೆ ಬದ್ಧತೆಯ ಬಗ್ಗೆ ಅಥವಾ ಹೂಡುವಳಿ ತೆರಿಗೆಯ ಕಡಿತದ ಅರ್ಹತೆ ಬಗ್ಗೆ ಅಥವಾ ಅಧಿನಿಯಮದ ಅಡಿಯಲ್ಲಿ ಮೂಲದಲ್ಲಿಯೇ ತೆರಿಗೆ ಕಟಾಯಿಸುವ ಬದ್ಧತೆಯ ಬಗ್ಗೆ ಸ್ಪಷ್ಟೀಕರಣ ನೀಡಲು ಕನಿಷ್ಠ ಮೂವರು ಅಪರ ಆಯುಕ್ತರುಗಳನ್ನು ಒಳಗೊಂಡ "ಸ್ಪಷ್ಟೀಕರಣ ಹಾಗೂ ಪೂರ್ವಭಾವಿ ನಿರ್ಣಯಗಳ ಪ್ರಾಧಿಕಾರ" ವನ್ನು ರಚಿಸಬಹುದು.

(2) ಈ ಅಧಿನಿಯಮದ ಅಡಿಯಲ್ಲಿ ಸ್ಪಷ್ಟೀಕರಣ ಅಥವಾ ಪೂರ್ವಭಾವಿ ನಿರ್ಣಯವನ್ನು ಕೋರುವ ಯಾವೊಬ್ಬ ನೋಂದಾಯಿತ ವ್ಯಾಪಾರಿಯು ನಿಯಮಿಸಬಹುದಾದ ಅಂಥ ರೀತಿಯಲ್ಲಿ ಅಂಥ ಶುಲ್ಕವನ್ನು ಸಂದಾಯ ಮಾಡಿದ ಬಗ್ಗೆ ರುಜುವಾತನ್ನು ಒಳಗೊಂಡಂತೆ ಅಂಥ ನಮೂನೆಯಲ್ಲಿ ಪ್ರಾಧಿಕಾರಕ್ಕೆ ಅರ್ಜಿಯನ್ನು ಸಲ್ಲಿಸತಕ್ಕದ್ದು.

[3][(2ಎ) ಅರ್ಜಿಯನ್ನು ಸ್ವೀಕರಿಸಿದ ಮೇಲೆ, ಪ್ರಾಧಿಕಾರವು, ಸಂಬಂಧಪಟ್ಟ ನಿರ್ಧರಣಾ ಅಥವಾ ನೋಂದಣಿ ಪ್ರಾಧಿಕಾರಕ್ಕೆ ಅದರ ಪ್ರತಿಯನ್ನು ಕಳುಹಿಸುವಂತೆ ಮಾಡತಕ್ಕದ್ದು ಮತ್ತು ಕೋರಲಾದ

ಸ್ಪಷ್ಟೀಕರಣ ಅಥವಾ ಎತ್ತಲಾದ ಪ್ರಶ್ನೆ ಬಗ್ಗೆ ಅದರ ನಿರ್ಣಯವನ್ನು ಹಾಗೂ ಯಾವುದೇ ಮಾಹಿತಿ ಅಥವಾ ದಾಖಲೆಗಳನ್ನು ಕೂಡ ತರಿಸಿಕೊಳ್ಳತಕ್ಕದ್ದು.

(2ಬಿ) ಪ್ರಾಧಿಕಾರವು, ಅರ್ಜಿಯನ್ನು ಮತ್ತು ತರಿಸಿಕೊಂಡ ಯಾವುದೇ ದಾಖಲೆಗಳನ್ನು ಪರೀಕ್ಷಿಸಿದ ತರುವಾಯ, ಆದೇಶದ ಮೂಲಕ ಅರ್ಜಿಯನ್ನು ಅಂಗೀಕರಿಸಬಹುದು ಅಥವಾ ತಿರಸ್ಕರಿಸಬಹುದು:

ಪರಂತು, ಅರ್ಜಿಯಲ್ಲಿ ಎತ್ತಲಾದ ಪ್ರಶ್ನೆಯು,

(i) ಇಲಾಖೆಯ ಯಾವೊಬ್ಬ ಅಧಿಕಾರಿಯ ಅಥವಾ ಪ್ರಾಧಿಕಾರದ ಅಥವಾ ಮೇಲ್ಮನವಿ ಪ್ರಾಧಿಕಾರದ ಅಥವಾ ಯಾವುದೇ ನ್ಯಾಯಾಲಯದ ಮುಂದೆ ಈಗಾಗಲೇ ಬಾಕಿ ಇದ್ದಲ್ಲಿ;

(ii) ತೆರಿಗೆಯನ್ನು ತಪ್ಪಿಸುವುದಕ್ಕಾಗಿ ಸ್ಪಷ್ಟವಾಗಿ ರೂಪಿಸಲಾಗಿರುವ ವ್ಯವಹರಣೆ ಅಥವಾ ವಿಷಯಕ್ಕೆ ಸಂಬಂಧಪಟ್ಟಿದ್ದರೆ,

– ಪ್ರಾಧಿಕಾರವು ಆ ಅರ್ಜಿಯನ್ನು ಅಂಗೀಕರಿಸತಕ್ಕದ್ದಲ್ಲ:

ಮತ್ತು ಪರಂತು, ಅರ್ಜಿದಾರನಿಗೆ ತನ್ನ ಅಹವಾಲನ್ನು ಹೇಳಿಕೊಳ್ಳಲು ಒಂದು ಅವಕಾಶವನ್ನು ನೀಡಿದ್ದ ಹೊರತು, ಈ ಉಪಪ್ರಕರಣದ ಅಡಿಯಲ್ಲಿ ಅರ್ಜಿಯನ್ನು ತಿರಸ್ಕರಿಸತಕ್ಕದ್ದಲ್ಲ ಮತ್ತು ಅರ್ಜಿಯನ್ನು ತಿರಸ್ಕರಿಸಿದಲ್ಲಿ, ಅಂಥ ತಿರಸ್ಕರಣೆಗೆ ಕಾರಣಗಳನ್ನು ಆದೇಶದಲ್ಲಿ ದಾಖಲಿಸತಕ್ಕದ್ದು.

(2ಸಿ) (2ಬಿ)ನೇ ಉಪಪ್ರಕರಣದ ಅಡಿಯಲ್ಲಿ ಮಾಡಲಾದ ಪ್ರತಿಯೊಂದು ಆದೇಶದ ಪ್ರತಿಯನ್ನು ಅರ್ಜಿದಾರನಿಗೆ ಮತ್ತು ಸಂಬಂಧಪಟ್ಟ ಅಧಿಕಾರಿಗೆ ಕಳುಹಿಸತಕ್ಕದ್ದು.

(2ಡಿ) (2ಬಿ)ನೇ ಉಪಪ್ರಕರಣದ ಅಡಿಯಲ್ಲಿ ಅರ್ಜಿಯನ್ನು ಅಂಗೀಕರಿಸಿದಲ್ಲಿ, ಪ್ರಾಧಿಕಾರವು ಅರ್ಜಿದಾರನು ತನ್ನ ಮುಂದೆ ಇಡಬಹುದಾದ ಅಥವಾ ಪ್ರಾಧಿಕಾರವು ಪಡೆದುಕೊಂಡ ಹೆಚ್ಚಿನ ವಿಷಯಗಳನ್ನು ಪರೀಕ್ಷಿಸಿದ ತರುವಾಯ ಅವನು ಹಾಗೆ ಇಚ್ಛಿಸಿದರೆ, ಅರ್ಜಿದಾರನಿಗೆ ಹಾಗೂ ಸಂಬಂಧಪಟ್ಟ ನಿರ್ಧರಣಾ ಪ್ರಾಧಿಕಾರಕ್ಕೆ ಅಥವಾ ನೋಂದಣಿ ಪ್ರಾಧಿಕಾರಕ್ಕೆ ಅಹವಾಲನ್ನು ಹೇಳಿಕೊಳ್ಳಲು ಒಂದು ಅವಕಾಶವನ್ನು ನೀಡಿದ ತರುವಾಯ, ಅರ್ಜಿಯಲ್ಲಿ ನಿರ್ದಿಷ್ಟಪಡಿಸಲಾದ ಪ್ರಶ್ನೆಗಳಿಗೆ ಸೂಕ್ತವೆಂದು ಭಾವಿಸಬಹುದಾದಂತಹ ಆದೇಶವನ್ನು ಹೊರಡಿಸತಕ್ಕದ್ದು. ಪ್ರಾಧಿಕಾರವು, ಯಾವುದೇ ಅರ್ಜಿಯನ್ನು ಸ್ವೀಕರಿಸಿದ ತೊಂಭತ್ತು ದಿನಗಳೊಳಗೆ ಆದೇಶವನ್ನು ಹೊರಡಿಸತಕ್ಕದ್ದು ಮತ್ತು ಅಂಥ ಆದೇಶದ ಪ್ರತಿಯನ್ನು ಅರ್ಜಿದಾರನಿಗೆ ಮತ್ತು ಸಂಬಂಧಪಟ್ಟ ಅಧಿಕಾರಿಗೆ ಕಳುಹಿಸತಕ್ಕದ್ದು.][3]

(3) ಯಾವೊಬ್ಬ ಅಧಿಕಾರಿ ಅಥವಾ ಇಲಾಖೆಯ ಯಾವುದೇ ಇತರ ಪ್ರಾಧಿಕಾರ ಅಥವಾ ಅಪೀಲು ನ್ಯಾಯಾಧೀಕರಣವು, ಈ ಅಧಿನಿಯಮದ ಅಡಿಯಲ್ಲಿ ಯಾವ ಪ್ರಕರಣದ ಸಂಬಂಧದಲ್ಲಿ ಅರ್ಜಿದಾರನು ಅರ್ಜಿಯನ್ನು ಹಾಕಿಕೊಂಡಿರುವನೋ ಅದರ ಬಗ್ಗೆ ತೀರ್ಮಾನವನ್ನು ಕೈಗೊಳ್ಳಲು ಮುಂದುವರೆಯತಕ್ಕದ್ದಲ್ಲ.

(4) ಪ್ರಾಧಿಕಾರದ ಆದೇಶವು, ಸ್ಪಷ್ಟೀಕರಣವನ್ನು ಕೋರಿದ ಅರ್ಜಿದಾರನಿಗೆ ಮಾತ್ರ ಬಂಧಕವಾಗಿರತಕ್ಕದ್ದು ಮತ್ತು ಸ್ಪಷ್ಟೀಕರಣ ಕೋರಿರುವ ಸರಕುಗಳ ಅಥವಾ ವ್ಯವಹಾರದ ಸಂಬಂಧದಲ್ಲಿ ಮಾತ್ರ ಹಾಗೂ ಅಂಥ ಅರ್ಜಿದಾರನಿಗೆ ಸಂಬಂಧಿಸಿದಂತೆ ಆಯುಕ್ತರನ್ನು ಹೊರತುಪಡಿಸಿದಂತೆ ಇಲಾಖೆಯ ಅಧಿಕಾರಿಗಳ ಮತ್ತು ಅಪೀಲು ನ್ಯಾಯಾಧೀಕರಣದ ಮುಂದಿರುವ ನಡವಳಿಗಳಲ್ಲಿ ಮಾತ್ರ ಬಂಧಕವಾಗಿರತಕ್ಕದ್ದು.

(5) ಈ ಪ್ರಕರಣದ ಅಡಿಯಲ್ಲಿ ಪ್ರಾಧಿಕಾರದ ಆದೇಶವು, ಕಾನೂನಿನಲ್ಲಿ ಅಥವಾ ಆದೇಶವನ್ನು ಹೊರಡಿಸಿದ ಸಂಗತಿಗಳ ಹಿನ್ನೆಲೆಯಲ್ಲಿ ಬದಲಾವಣೆಯಾಗದ ಹೊರತು, ಈ ಹಿಂದೆ ಹೇಳಿದಂತೆ ಬಂಧಕವಾಗಿರತಕ್ಕದ್ದು.

(6) ಪ್ರಾಧಿಕಾರಕ್ಕೆ ಯಾವೊಬ್ಬ ಅಧಿಕಾರಿಯು ಸಲ್ಲಿಸಿದ ಮನವಿಯ ಮೇಲೆ ಅಥವಾ ಅನ್ಯಥಾ, ತಾನು ಹೊರಡಿಸಿದ ಆದೇಶವನ್ನು, ಅರ್ಜಿದಾರನು ಮೋಸದಿಂದ ಅಥವಾ ಸಂಗತಿಗಳನ್ನು ತಪ್ಪಾಗಿ ನಿರೂಪಿಸುವ ಮೂಲಕ ಪಡೆದಿದ್ದಾನೆಂದು ಅದಕ್ಕೆ ಕಂಡುಬಂದರೆ, ಅದು ಆದೇಶದ ಮೂಲಕ, ಅಂಥ ಆದೇಶವನ್ನು ಆರಂಭದಿಂದಲೇ, ಶೂನ್ಯವಾದುದೆಂದು ಘೋಷಿಸಬಹುದು ಮತ್ತು ತದನಂತರ ಈ ಅಧಿನಿಯಮದ ಎಲ್ಲ ಉಪಬಂಧಗಳು, ಅಂಥ ಆದೇಶವನ್ನು ಎಂದೂ ಹೊರಡಿಸದಿದ್ದರೆ ಹೇಗೋ ಹಾಗೆ ಅರ್ಜಿದಾರನಿಗೆ ಅನ್ವಯಿಸತಕ್ಕದ್ದು.

(7) [3]["59ನೇ ಪ್ರಕರಣದ (4)ನೇ ಉಪಪ್ರಕರಣ"][3], "64ನೇ ಪ್ರಕರಣದ (2)ನೇ ಉಪ-ಪ್ರಕರಣ ಮತ್ತು 66ನೇ ಪ್ರಕರಣದ ಉಪಬಂಧಗಳಿಗೆ ಒಳಪಟ್ಟು ಈ ಪ್ರಕರಣದ ಅಡಿಯಲ್ಲಿ ಹೊರಡಿಸಿದ ಪ್ರತಿಯೊಂದು ಆದೇಶವು ಅಂತಿಮವಾಗಿರತಕ್ಕದ್ದು.][1]][2]

[3][(8) ಯಾವುದೇ ನಿರ್ದಿಷ್ಟ ಸರಕುಗಳಿಗೆ ಸಂಬಂಧಿಸಿದಂತೆ (2ಡಿ)ನೇ ಉಪಪ್ರಕರಣದ ಅಡಿಯಲ್ಲಿ 'ಸ್ಪಷ್ಟೀಕರಣ ಮತ್ತು ಪೂರ್ವಾಭಾವಿ ನಿರ್ಣಯಗಳ ಪ್ರಾಧಿಕಾರವು' ನೀಡಿದ ಯಾವುದೇ ಸ್ಪಷ್ಟೀಕರಣ ಅಥವಾ ನಿರ್ಣಯದಲ್ಲಿ ಏನೇ ಇದ್ದರೂ, ಅರ್ಜಿದಾರನು ಅಂಥ ಸರಕುಗಳಿಗೆ ಸಂಬಂಧಿಸಿದಂತೆ ಸಂದಾಯ ಮಾಡಬೇಕಾದ ತೆರಿಗೆಯ ದರವು, ಆಯುಕ್ತನು 59ನೇ ಪ್ರಕರಣದ (4)ನೇ ಉಪಪ್ರಕರಣದ ಅಡಿಯಲ್ಲಿ ಸ್ಪಷ್ಟೀಕರಿಸಬಹುದಾದಂತಹ ದರದಲ್ಲಿ, ಸರ್ಕಾರಿ ರಾಜ್ಯಪತ್ರದಲ್ಲಿ ಅದನ್ನು ಪ್ರಕಟಿಸಿದ ದಿನಾಂಕದಿಂದ, ಇರತಕ್ಕದ್ದು.][3]

1. 2007ರ ಅಧಿನಿಯಮ ಸಂಖ್ಯೆ.6ರ ಮೂಲಕ ದಿನಾಂಕ:1.4.2007ರಿಂದ ಬಿಟ್ಟುಬಿಡಲಾಗಿದೆ.
2. 2010ರ ಅಧಿನಿಯಮ ಸಂಖ್ಯೆ 4ರ ಮೂಲಕ ದಿನಾಂಕ: 1.4.2010ರಿಂದ ಸೇರಿಸಲಾಗಿದೆ.
3. 2013 ರ ಅಧಿನಿಯಮ ಸಂಖ್ಯೆ 54ರ ಮೂಲಕ ದಿನಾಂಕ: 1.8.2013 ರಿಂದ ಸೇರಿಸಲಾಗಿದೆ.

**61. ಅಧಿಕಾರಿಗಳ ಅಧಿಕಾರವ್ಯಾಪ್ತಿ ಮತ್ತು ಪದಧಾರಕನ ಬದಲಾವಣೆ.-** (1) ಅಪರ ಆಯುಕ್ತರು, ಜಂಟಿ ಆಯುಕ್ತರು, ಉಪ ಆಯುಕ್ತರು, ಸಹಾಯಕ ಆಯುಕ್ತರು ಮತ್ತು ವಾಣಿಜ್ಯ ತೆರಿಗೆ ಅಧಿಕಾರಿಗಳು, ಆಯುಕ್ತನು ನಿರ್ದೇಶಿಸಬಹುದಾದ ಅಂಥ ಪ್ರದೇಶಗಳ ಅಥವಾ ಅಂಥ ವ್ಯಾಪಾರಿಗಳ ಅಥವಾ ವ್ಯಾಪಾರಿಗಳ ವರ್ಗಗಳ ಅಥವಾ ಅಂಥ ಪ್ರಕರಣಗಳ ಅಥವಾ ಪ್ರಕರಣಗಳ ವರ್ಗಗಳ ಸಂಬಂಧದಲ್ಲಿ ತಮ್ಮ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು.

(2) ಯಾವುದೇ ಆದೇಶ ಅಥವಾ ಅದರ ಅಡಿಯಲ್ಲಿ ಹೊರಡಿಸಿ ನಿರ್ದೇಶನದ ಅಡಿಯಲ್ಲಿ ನಿರ್ದಿಷ್ಟಪಡಿಸಿದ ಯಾವೊಬ್ಬ ವ್ಯಾಪಾರಿಯ ಸಂಬಂಧದಲ್ಲಿ 'ಪ್ರಕರಣ' ಎಂದರೆ, ಯಾವುದೇ ವರ್ಷಕ್ಕೆ ಸಂಬಂಧಿಸಿದಂತೆ ಅಂಥ ಆದೇಶ ಅಥವಾ ನಿರ್ದೇಶನದ ದಿನಾಂಕದಂದು ಬಾಕಿ ಇದ್ದಿರಬಹುದಾದ ಅಥವಾ ಅಂಥ ದಿನಾಂಕದಂದು ಅಥವಾ ಪೂರ್ವದಲ್ಲಿ ಮುಕ್ತಾಯಗೊಂಡಿರಬಹುದಾದ ಈ ಅಧಿನಿಯಮದ ಅಡಿಯಲ್ಲಿಯ ಎಲ್ಲ ವ್ಯವಹರಣೆಗಳು ಮತ್ತು ಅದು, ಯಾವುದೇ ವರ್ಷಕ್ಕೆ ಸಂಬಂಧಿಸಿದಂತೆ ಅಂಥ ಆದೇಶ ಅಥವಾ ನಿರ್ದೇಶನದ ದಿನಾಂಕದ ತರುವಾಯ ಪ್ರಾರಂಭವಾಗಬಹುದಾದ ಈ ಅಧಿನಿಯಮದ ಅಡಿಯ ಎಲ್ಲಾ ವ್ಯವಹರಣೆಗಳನ್ನು ಸಹ ಒಳಗೊಳ್ಳುತ್ತದೆ.

(3) ಈ ಅಧಿನಿಯಮದ ಅಡಿಯಲ್ಲಿ ಯಾವುದೇ ವ್ಯವಹರಣೆಗೆ ಸಂಬಂಧಪಟ್ಟಂತೆ ಯಾವೊಬ್ಬ ನಿಯಮಿಸಲಾದ ಪ್ರಾಧಿಕಾರಿಯು ಅಧಿಕಾರ ವ್ಯಾಪ್ತಿಯನ್ನು ಚಲಾಯಿಸುವುದು ನಿಂತು ಹೋದಾಗಲೆಲ್ಲ ಮತ್ತು ಆ ಅಧಿಕಾರ ವ್ಯಾಪ್ತಿಯನ್ನು ಚಲಾಯಿಸಬಹುದಾದ ಇನ್ನೊಬ್ಬ ಉತ್ತರಾಧಿಕಾರಿಯಾದಾಗಲೆಲ್ಲ ಹಾಗೆ ಉತ್ತರಾಧಿಕಾರಿಯಾಗುವ ಪ್ರಾಧಿಕಾರಿ ಅಥವಾ ಅಧಿಕಾರಿಯು, ತನ್ನ ಪೂರ್ವಾಧಿಕಾರಿಯು ಬಿಟ್ಟುಹೋದ ಹಂತದಿಂದ ವ್ಯವಹರಣೆಯನ್ನು ಮುಂದುವರೆಸಬಹುದು.

(4) ಸಂಬಂಧಪಟ್ಟ ವ್ಯಕ್ತಿಯು, (3)ನೇ ಉಪಪ್ರಕರಣದ ಅಡಿಯಲ್ಲಿ ವ್ಯವಹರಣೆಯನ್ನು ಹಾಗೆ ಮುಂದುವರೆಸುವ ಮೊದಲು ಹಿಂದಿನ ವ್ಯವಹರಣೆಯನ್ನು ಅಥವಾ ಅದರ ಯಾವುದೇ ಭಾಗವನ್ನು ಪುನಃ ಪ್ರಾರಂಭಿಸುವಂತೆ ಅಥವಾ ತನ್ನ ವಿರುದ್ಧ ಯಾವುದೇ ಆದೇಶವನ್ನು ಹೊರಡಿಸುವ ಮೊದಲು ಪುನಃ ಅಹವಾಲನ್ನು ಹೇಳಿಕೊಳ್ಳಲು ಅವಕಾಶ ನೀಡುವಂತೆ ಕೋರಿಕೊಳ್ಳಬಹುದು.

## ಅಧ್ಯಾಯ - VII

### ಅಪೀಲುಗಳು ಮತ್ತು ಪುನರೀಕ್ಷಣೆಗಳು

**62. ಅಪೀಲುಗಳು.-** (1) ನಿಯಮಿಸಲಾದ ಪ್ರಾಧಿಕಾರವು ಈ ಅಧಿನಿಯಮದ ಉಪಬಂಧಗಳ ಅಡಿಯಲ್ಲಿ ಹೊರಡಿಸಿದ ಯಾವುದೇ ಆದೇಶದಿಂದ ಅಥವಾ ವ್ಯವಹರಣೆಗಳಿಂದ ಬಾಧಿತನಾದ ಯಾವೊಬ್ಬ ವ್ಯಕ್ತಿಯು, ಅವುಗಳನ್ನು ಆಕ್ಷೇಪಿಸಿ ಅಪೀಲು ಪ್ರಾಧಿಕಾರಕ್ಕೆ ಅಪೀಲು ಮಾಡಿಕೊಳ್ಳಬಹುದು.

(2) ಅಪೀಲನ್ನು,-

(ಎ) ತೆರಿಗೆ ನಿರ್ಧರಣೆಯ ಒಂದು ಆದೇಶಕ್ಕೆ ಸಂಬಂಧಿಸಿದಂತೆ ಅಪೀಲುದಾರನಿಗೆ ತೆರಿಗೆ ನಿರ್ಧರಣೆಯ ನೋಟೀಸನ್ನು ಜಾರಿ ಮಾಡಿದ ದಿನಾಂಕದಿಂದ ಮೂವತ್ತು ದಿನಗಳೊಳಗೆ, ಮತ್ತು

(ಬಿ) [1][ಯಾವುದೇ ಇತರ ಆದೇಶಕ್ಕೆ ಅಥವಾ ವ್ಯವಹರಣೆಗಳಿಗೆ][1] ಸಂಬಂಧಿಸಿದಂತೆ, ಅರ್ಜಿದಾರನಿಗೆ ಆದೇಶವನ್ನು ತಿಳಿಸಿದಂಥ ದಿನಾಂಕದಿಂದ ಮೂವತ್ತು ದಿನಗಳೊಳಗೆ,

- ಹೂಡತಕ್ಕದ್ದು.

1. 2007 ರ ಅಧಿನಿಯಮ ಸಂಖ್ಯೆ 6ರ ಮೂಲಕ ದಿನಾಂಕ: 1.4.2007 ರಿಂದ ಪ್ರತಿಯೋಜಿಸಲಾಗಿದೆ.

(3) ಅಪೀಲು ಪ್ರಾಧಿಕಾರವು ಈ ಹಿಂದೆ ಹೇಳಿದ ಅವಧಿಯ ತರುವಾಯ ಆದರೆ, ಒಂದು ನೂರಾ ಎಂಬತ್ತು ದಿನಗಳ ಮತ್ತಷ್ಟು ಅವಧಿಯೊಳಗೆ ಹೂಡಿದ ಅಪೀಲನ್ನು, ಆ ಅವಧಿಯೊಳಗೆ ಅಪೀಲನ್ನು ಹೂಡದೇ ಇರುವುದಕ್ಕೆ ಅಪೀಲುದಾರನಿಗೆ ಸಾಕಷ್ಟು ಕಾರಣವಿತ್ತೆಂದು ಅದಕ್ಕೆ ಮನದಟ್ಟಾದರೆ ಅಪೀಲನ್ನು ಅಂಗೀಕರಿಸಬಹುದು.

(4)(ಎ) ತೆರಿಗೆ ನಿರ್ಧರಣೆಯ ಆದೇಶದ ವಿರುದ್ಧ ಯಾವುದೇ ಅಪೀಲನ್ನು ಅದರೊಂದಿಗೆ ಅಪೀಲಿನಲ್ಲಿ ವಿವಾದಿಸದೇ ಇರುವ [2][ತೆರಿಗೆ ಮತ್ತು ಇತರ ಮೊಬಲಗಿನ ಸಂದಾಯದ][2] ಬಗ್ಗೆ ತೃಪ್ತಿಕರ ರುಜುವಾತು ಇದ್ದ ಹೊರತು ಅಪೀಲು ಪ್ರಾಧಿಕಾರಿಯು ಪುರಸ್ಕರಿಸತಕ್ಕದ್ದಲ್ಲ;

(ಬಿ) ಯಾವ ಆದೇಶದ [1][ಅಥವಾ ವ್ಯವಹರಣೆಗಳ][1] ವಿರುದ್ಧ ಅಪೀಲನ್ನು ಸಲ್ಲಿಸಲಾಗಿದೆಯೋ ಆ ಆದೇಶಕ್ಕೆ [1][ಅಥವಾ ವ್ಯವಹರಣೆಗಳಿಗೆ][1] ಅನುಸಾರವಾಗಿ ತೆರಿಗೆ ಅಥವಾ ಇತರ ಮೊಬಲಗನ್ನು ಸಂದಾಯ ಮಾಡತಕ್ಕದ್ದು;

6. 2007 ರ ಅಧಿನಿಯಮ ಸಂಖ್ಯೆ 6ರ ಮೂಲಕ ದಿನಾಂಕ: 1.4.2007 ರಿಂದ ಸೇರಿಸಲಾಗಿದೆ.

7. 2012 ರ ಅಧಿನಿಯಮ ಸಂಖ್ಯೆ 17ರ ಮೂಲಕ ದಿನಾಂಕ: 1.4.2012 ರಿಂದ ಪ್ರತಿಯೋಜಿಸಲಾಗಿದೆ.

(ಸಿ) [2][[1][(i) ಅಪೀಲು ಪ್ರಾಧಿಕಾರಿಯು ತನ್ನ ವಿವೇಚನಾನುಸಾರ, ಅಪೀಲುದಾರನು ನಿಯಮಿಸಲಾದ ಅಪೀಲಿನ ನಮೂನೆಯ ಜೊತೆಯಲ್ಲಿ ತೆರಿಗೆಯ ಮತ್ತು ಇತರ [3][ಮೊಬಲಗಿನ ಶೇಕಡಾ ಮೂವತ್ತರಷ್ಟನ್ನು][3] ಸಂದಾಯ ಮಾಡಿದ್ದರೆ, [3][ಇನ್ನುಳಿದ ಶೇಕಡಾ ಎಪ್ಪತ್ತರಷು][3] ತೆರಿಗೆಯ ಮತ್ತು ಇತರ ಮೊಬಲಗಿನ ಸಂದಾಯಕ್ಕೆ ತಡೆ ನೀಡಬಹುದು.

(ii) ಯಾವುದೇ ತೆರಿಗೆಯ ಅಥವಾ ಇತರ ಮೊಬಲಗಿನ ವಸೂಲಿಯ ವ್ಯವಹರಣೆಗಳನ್ನು ತಡೆಯುವುದಕ್ಕಾಗಿ ಅರ್ಜಿದಾರನು ಸಲ್ಲಿಸಿದ ಅರ್ಜಿಯನ್ನು ಅಪೀಲು ಪ್ರಾಧಿಕಾರವು ಅಂಥ ಅರ್ಜಿಯ ದಿನಾಂಕದಿಂದ ಮೂವತ್ತು ದಿನಗಳ ಅವಧಿಯೊಳಗೆ ವಿಲೆ ಮಾಡದಿದ್ದಲ್ಲಿ, ಅಂಥ ತೆರಿಗೆಯ ಅಥವಾ ಇತರ ಮೊಬಲಗಿನ ವಸೂಲಿಯ ವ್ಯವಹರಣೆಗಳನ್ನು ತಡೆಯುವ ಆದೇಶವನ್ನು [2][ವಿವಾದಿತ ತೆರಿಗೆಯ ಮತ್ತು ಇತರ [3][ಮೊಬಲಗಿನ ಶೇಕಡಾ ಮೂವತ್ತರಷ್ಟನ್ನು][3] ಸಂದಾಯ ಮಾಡುವ][2] ಮತ್ತು ಅಂಥ [3][ತೆರಿಗೆಯ ಅಥವಾ ಇತರ ಮೊಬಲಗಿನ ಇನ್ನುಳಿದ ಶೇಕಡಾ ಎಪ್ಪತ್ತರಷ್ಟನ್ನು][3] ಮುಂದಿನ ಹದಿನೈದು ದಿನಗಳ ಅವಧಿಯೊಳಗೆ ಸಲ್ಲಿಸುವ ಬಗ್ಗೆ ತೆರಿಗೆ ನಿರ್ಧರಣಾ ಪ್ರಾಧಿಕಾರಕ್ಕೆ ತೃಪ್ತಿಕರವಾಗುವಂತೆ ಸಾಕಷ್ಟು ಭದ್ರತೆ ನೀಡುವ ಷರತ್ತಿಗೆ ಒಳಪಟ್ಟು ಅಪೀಲು ಪ್ರಾಧಿಕಾರವು ತಡೆಯಾಜ್ಞೆ ನೀಡಿದೆಯೆಂದು ಭಾವಿಸತಕ್ಕದ್ದು.][2]

1. 2005ರ ಅಧಿನಿಯಮ ಸಂಖ್ಯೆ 6ರ ಮೂಲಕ ದಿನಾಂಕ: 19.3.2005 ರಿಂದ ಪ್ರತಿಯೋಜಿಸಲಾಗಿದೆ.

2. 2012ರ ಅಧಿನಿಯಮ ಸಂಖ್ಯೆ 17ರ ಮೂಲಕ ದಿನಾಂಕ: 1.4.2012 ರಿಂದ ಪ್ರತಿಯೋಜಿಸಲಾಗಿದೆ.

3. 2013ರ ಅಧಿನಿಯಮ ಸಂಖ್ಯೆ 32ರ ಮೂಲಕ ದಿನಾಂಕ: 1.4.2013 ರಿಂದ ಪ್ರತಿಯೋಜಿಸಲಾಗಿದೆ.

(ಡಿ) ಮೇಲಿನ (1)ನೇ ಉಪ ಪ್ರಕರಣದ ಅಡಿಯಲ್ಲಿಯ ಅಪೀಲಿನ ಸಂಬಂಧದಲ್ಲಿಯ ಯಾವುದೇ ವ್ಯವಹರಣೆಯಲ್ಲಿಯ ಯಾವುದೇ ತೆರಿಗೆ ಅಥವಾ ಇತರ ಮೊಬಲಗಿನ ವಸೂಲಾತಿಯ ವ್ಯವಹರಣೆಯನ್ನು ತಡೆಯುವ ಆಜ್ಞೆಯನ್ನು ಹೊರಡಿಸಲಾಗಿದ್ದರೆ ಅಪೀಲು ಪ್ರಾಧಿಕಾರವು ಅಂಥ ಆದೇಶದ ದಿನಾಂಕದಿಂದ [1][ಎರಡುನೂರಾ ನಲವತ್ತು ದಿನಗಳ][1] ಅವಧಿಯ ಒಳಗೆ ಅಪೀಲನ್ನು ವಿಲೆ ಮಾಡತಕ್ಕದ್ದು.

1.2011ರ ಅಧಿನಿಯಮ ಸಂಖ್ಯೆ 12ರ ಮೂಲಕ ದಿನಾಂಕ: 1.4.2011 ರಿಂದ ಪ್ರತಿಯೋಜಿಸಲಾಗಿದೆ.

[1][(ಇ) xxx][1]

1.2012ರ ಅಧಿನಿಯಮ ಸಂಖ್ಯೆ 17ರ ಮೂಲಕ ದಿನಾಂಕ: 1.4.2012 ರಿಂದ ಬಿಟ್ಟುಬಿಡಲಾಗಿದೆ.

(5) ಅಪೀಲು, ನಿಯಮಿಸಲಾದ ನಮೂನೆಯಲ್ಲಿ ಇರತಕ್ಕದ್ದು ಮತ್ತು ನಿಯಮಿಸಲಾದ ರೀತಿಯಲ್ಲಿ ಸತ್ಯಾಪನೆ ಮಾಡತಕ್ಕದ್ದು.

[1][ಪರಂತು, ಯಾವ ಜಾಲತಾಣದಲ್ಲಿ ಅಪೀಲನ್ನು ವಿದ್ಯುನ್ಮಾನದ ಮೂಲಕ ಸಲ್ಲಿಸಬೇಕೋ ಆ ಜಾಲತಾಣವನ್ನು ಆಯುಕ್ತರು ಅಧಿಸೂಚಿಸಬಹುದು:

ಮತ್ತು ಪರಂತು, ಯಾವುದೇ ಹಣಕಾಸು ವರ್ಷದ ಒಂದಕ್ಕಿಂತ ಹೆಚ್ಚಿನ ತೆರಿಗೆ ಅವಧಿಯ ಸಂಬಂಧದಲ್ಲಿ ಕರನಿರ್ಧರಣೆ ಅಥವಾ ಮರುಕರನಿರ್ಧರಣೆ ಅಥವಾ ಯಾವುದೇ ಇತರ ಆದೇಶಗಳು ಅಥವಾ ನಡವಳಿಗಳ ವಿರುದ್ಧ ಒಂದೇ ಅಪೀಲನ್ನು ಹೂಡಬಹುದು.][1]

1. 2015ರ ಅಧಿನಿಯಮ ಸಂಖ್ಯೆ 15ರ ಮೂಲಕ ದಿನಾಂಕ: 1.4.2015ರಿಂದ ಸೇರಿಸಲಾಗಿದೆ.

(6) ಅಪೀಲನ್ನು ವಿಲೇ ಮಾಡುವಲ್ಲಿ, ಅಪೀಲು ಪ್ರಾಧಿಕಾರವು, ಅಪೀಲುದಾರನಿಗೆ ಅಹವಾಲನ್ನು ಹೇಳಿಕೊಳ್ಳಲು ಒಂದು ಯುಕ್ತ ಅವಕಾಶವನ್ನು ಕೊಟ್ಟ ತರುವಾಯ,

(ಎ) ತೆರಿಗೆ ನಿರ್ಧರಣೆ ಅಥವಾ ದಂಡಕ್ಕೆ ಸಂಬಂಧಿಸಿದ ಆದೇಶದ ಸಂದರ್ಭದಲ್ಲಿ,

(i) ತೆರಿಗೆ ನಿರ್ಧರಣೆಯ ಯಾವುದೇ ಭಾಗಕ್ಕೆ ಅಪೀಲಿನಲ್ಲಿ ಆಕ್ಷೇಪಣೆ ಮಾಡಿರಲಿ ಅಥವಾ ಇಲ್ಲದಿರಲಿ, ಅಂಥ ಯಾವುದೇ ಭಾಗವು ಸೇರಿದಂತೆ ತೆರಿಗೆ ನಿರ್ಧರಣೆಯನ್ನು ಸ್ಥಿರೀಕರಿಸಬಹುದು, ಕಡಿಮೆಗೊಳಿಸಬಹುದು ಅಥವಾ ಹೆಚ್ಚಿಸಬಹುದು;

(ii) ತಾನು ಸೂಕ್ತವೆಂದು ಭಾವಿಸಬಹುದಾದ ಅಂಥ ಇತರ ಆದೇಶಗಳನ್ನು ಮಾಡಬಹುದು, ಮತ್ತು

(ಬಿ) ಇತರ ಯಾವುದೇ ಆದೇಶದ [1][ಅಥವಾ ವ್ಯವಹರಣೆಗಳ][1] ಸಂದರ್ಭದಲ್ಲಿ ಅಂಥ ಆದೇಶವನ್ನು ಸ್ಥಿರೀಕರಿಸಬಹುದು, ರದ್ದುಗೊಳಿಸಬಹುದು ಅಥವಾ ವ್ಯತ್ಯಾಸಗೊಳಿಸಬಹುದು.

1. 2007 ರ ಅಧಿನಿಯಮ ಸಂಖ್ಯೆ 6ರ ಮೂಲಕ ದಿನಾಂಕ: 1.4.2007 ರಿಂದ ಸೇರಿಸಲಾಗಿದೆ.

[1][(6-ಎ) (i) ಅಪೀಲು ಪ್ರಾಧಿಕಾರವು, ತನ್ನ ಮುಂದಿರುವ ಅಪೀಲನ್ನು ವಿಲೆ ಮಾಡುವಾಗ ತೆರಿಗೆ ನಿರ್ಧರಣೆ ಮಾಡಲು ಅಥವಾ ಹೊಸದಾಗಿ ಆದೇಶವನ್ನು ಮಾಡಲು ಪುನರ್ ವಿಚಾರಣೆಗಾಗಿ ಪ್ರಕರಣವನ್ನು ವಾಪಸು ಕಳುಹಿಸತಕ್ಕದ್ದಲ್ಲ. ಆದರೆ, ಅಪೀಲನ್ನು ಅದರ ಗುಣ-ದೋಷಗಳ ಮೇಲೆ, ಹೆಚ್ಚಿನ ಸಾಕ್ಷ್ಯವನ್ನು ತೆಗೆದುಕೊಳ್ಳುವುದು ಅವಶ್ಯಕವಾಗಿದ್ದರೆ ಅದನ್ನು ತೆಗೆದುಕೊಂಡು ತಾನು ಸೂಕ್ತವೆಂದು ಭಾವಿಸುವಂತೆ ವಿಲೆ ಮಾಡಲು ಮುಂದುವರಿಯತಕ್ಕದ್ದು.

[2][(ii) ಅಪೀಲು ಪ್ರಾಧಿಕಾರವು ಪ್ರಕರಣದ ಸುನಾವಣೆಯು ಮುಕ್ತಾಯವಾದ ದಿನಾಂಕದಿಂದ ತೊಂಬತ್ತು ದಿನಗಳೊಳಗೆ ಅಪೀಲಿನ ವಿಲೆಯ ಆದೇಶವನ್ನು ಹೊರಡಿಸತಕ್ಕದ್ದು.][2]

1.2005ರ ಅಧಿನಿಯಮ ಸಂಖ್ಯೆ 6ರ ಮೂಲಕ ದಿನಾಂಕ: 19.3.2005 ರಿಂದ ಸೇರಿಸಲಾಗಿದೆ.

2. 2009ರ ಅಧಿನಿಯಮ ಸಂಖ್ಯೆ:5ರ ಮೂಲಕ ದಿನಾಂಕ:1.4.2009ರಿಂದ ಪ್ರತಿಯೋಜಿಸಲಾಗಿದೆ.

(7) ಈ ಪ್ರಕರಣದ ಮೇರೆಗೆ ಅಪೀಲಿನಲ್ಲಿ ಮಾಡಿದ ಪ್ರತಿಯೊಂದು ಆದೇಶವು 63 ರಿಂದ 67 ರವರೆಗಿನ ಪ್ರಕರಣಗಳ ಉಪಬಂಧಗಳಿಗೆ ಒಳಪಟ್ಟು ಅಂತಿಮವಾಗಿರತಕ್ಕದ್ದು.

**63. ಅಪೀಲು ನ್ಯಾಯಾಧಿಕರಣಕ್ಕೆ ಅಪೀಲು.-** (1) [1][ರಾಜ್ಯ ಸರ್ಕಾರದಿಂದ ಅಥವಾ ಆಯುಕ್ತರಿಂದ ಈ ಸಂಬಂಧದಲ್ಲಿ ಪ್ರಾಧಿಕೃತನಾದ][1] ಯಾವೊಬ್ಬ ಅಧಿಕಾರಿ ಅಥವಾ 62ನೇ ಪ್ರಕರಣದ ಅಡಿಯಲ್ಲಿ ಅಪೀಲು ಪ್ರಾಧಿಕಾರವು [2][ಅಥವಾ 63-ಎ ಪ್ರಕರಣದ ಅಡಿಯಲ್ಲಿ ಜಂಟಿ ಆಯುಕ್ತನು][2] ಮಾಡಿದ ಆದೇಶವನ್ನು ಆಕ್ಷೇಪಿಸುವ ಯಾವೊಬ್ಬ ಇತರ ವ್ಯಕ್ತಿಯು, ಅವನಿಗೆ ಆದೇಶವನ್ನು ತಿಳಿಸಿದ ದಿನಾಂಕದಿಂದ ಅರವತ್ತು ದಿನಗಳ ಅವಧಿಯ ಒಳಗೆ ಅಪೀಲು ನ್ಯಾಯಾಧಿಕರಣಕ್ಕೆ ಅಪೀಲನ್ನು ಮಾಡಿಕೊಳ್ಳಬಹುದು.

1. 2007 ರ ಅಧಿನಿಯಮ ಸಂಖ್ಯೆ 6ರ ಮೂಲಕ ದಿನಾಂಕ: 1.4.2007 ರಿಂದ ಪ್ರತಿಯೋಜಿಸಲಾಗಿದೆ.
2. 2008 ರ ಅಧಿನಿಯಮ ಸಂಖ್ಯೆ 5ರ ಮೂಲಕ ದಿನಾಂಕ: 1.8.2008 ರಿಂದ ಸೇರಿಸಲಾಗಿದೆ.

(2) ಅಪೀಲು ನ್ಯಾಯಾಧಿಕರಣವು, (1)ನೇ ಉಪ ಪ್ರಕರಣದಲ್ಲಿ ಉಲ್ಲೇಖಿಸಿದ ಅರವತ್ತು ದಿನಗಳ ಅವಧಿಯ ತರುವಾಯ, ಆದರೆ ಒಂದು ನೂರಾ ಎಂಬತ್ತು ದಿನಗಳ ಹೆಚ್ಚಿನ ಅವಧಿಯೊಳಗೆ ಸಲ್ಲಿಸಿದ ಅಪೀಲನ್ನು ಆ ಅವಧಿಯೊಳಗೆ ಅಪೀಲನ್ನು ಸಲ್ಲಿಸದೇ ಇರುವುದಕ್ಕಾಗಿ ಅಪೀಲುದಾರನಿಗೆ ಸಾಕಷ್ಟು ಕಾರಣವಿತ್ತೆಂದು ಹೊಂದಿದ್ದನೆಂದು ಅದಕ್ಕೆ ಮನದಟ್ಟಾದರೆ, ಮನವಿಯನ್ನು ಅಂಗೀಕರಿಸಬಹುದು.

(3) ಮೇಲಿನ (1)ನೇ ಉಪಪ್ರಕರಣದ ಅಡಿಯಲ್ಲಿ ಪ್ರಾಧಿಕೃತನಾದ ಅಧಿಕಾರಿಯು ಅಥವಾ ಸಂದರ್ಭಾನುಸಾರ ಯಾವ ವ್ಯಕ್ತಿಯ ವಿರುದ್ಧ ಅಪೀಲನ್ನು ಹೂಡಲಾಗಿದೆಯೋ ಆ ವ್ಯಕ್ತಿಯು, ಇತರ ಪಕ್ಷಕಾರನು (1)ನೆ ಉಪಪ್ರಕರಣದ ಅಡಿಯಲ್ಲಿ ಅಪೀಲು ಪ್ರಾಧಿಕಾರದ ಆದೇಶದ ವಿರುದ್ಧ ಅಪೀಲನ್ನು ಸಲ್ಲಿಸಲಾಗಿರುವ ಬಗ್ಗೆ ನೋಟೀಸನ್ನು ಸ್ವೀಕರಿಸಿದ ಮೇಲೆ ಅಂಥ ಆದೇಶದ ಅಥವಾ ಅದರ ಯಾವುದೇ ಭಾಗದ ವಿರುದ್ಧ ಅವನು ಅಪೀಲನ್ನು ಹೂಡದೇ ಇದ್ದಾಗ್ಯೂ, ಆ ಅಪೀಲಿನ ಅಂತಿಮ ಸುನಾವಣೆಗೆ ಮೊದಲು, ಯಾವುದೇ ಸಮಯದಲ್ಲಿ ಅಪೀಲು ಪ್ರಾಧಿಕಾರದ ಅದೇಶದ ಯಾವುದೇ ಭಾಗದ ವಿರುದ್ಧ, ನಿಯಮಿಸಲಾದ ರೀತಿಯಲ್ಲಿ ಸತ್ಯಾಪನೆ ಮಾಡಲಾದ ಎದುರು ಆಕ್ಷೇಪಣೆಗಳ ವಿವರಣ ಪತ್ರವನ್ನು ದಾಖಲ್ಮಾಡಬಹುದು ಮತ್ತು ಅಂಥ ವಿವರಣ ಪತ್ರವನ್ನು ಅಪೀಲು ನ್ಯಾಯಾಧಿಕರಣವು (1)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಸಮಯದೊಳಗೆ ಸಲ್ಲಿಸಿದ ಅಪೀಲು ಆಗಿದ್ದರೆ ಹೇಗೋ ಹಾಗೆ ವಿಲೆ ಮಾಡತಕ್ಕದ್ದು.

(4) ಅಪೀಲು ಅಥವಾ ಎದುರು ಆಕ್ಷೇಪಣೆಗಳ ವಿವರಣ ಪತ್ರವು ನಿಯಮಿಸಲಾದ ನಮೂನೆಯಲ್ಲಿ ಇರತಕ್ಕದ್ದು, ನಿಯಮಿಸಲಾದ ರೀತಿಯಲ್ಲಿ ಸತ್ಯಾಪನೆ ಮಾಡಿರತಕ್ಕದ್ದು ಮತ್ತು (1)ನೇ ಉಪಪ್ರಕರಣದ ಅಡಿಯಲ್ಲಿ [1][ರಾಜ್ಯ ಸರ್ಕಾರದಿಂದ ಅಥವಾ ಆಯುಕ್ತರಿಂದ ಪ್ರಾಧಿಕೃತನಾದ][1] ಅಧಿಕಾರಿಯ ಹೊರತಾಗಿ ಯಾವೊಬ್ಬ ವ್ಯಕ್ತಿಯು, ಅಪೀಲು ಸಲ್ಲಿಸಿದ ಸಂದರ್ಭದಲ್ಲಿ, [2][ತೆರಿಗೆಯ ಅಥವಾ ವಿವಾದಿತ ಇತರೆ [3][ಮೊಬಲಗಿನ ಶೇಕಡಾ ಮೂವತ್ತರಷ್ಟನ್ನು][3] ಸಂದಾಯ ಮಾಡಿದ ಬಗ್ಗೆ ರುಜುವಾತಿನೊಡನೆ ಮತ್ತು][2] ಆಕ್ಷೇಪಿಸಲಾದ ತೆರಿಗೆ ನಿರ್ಧರಣಾ ಮೊಬಲಗಿನ ಶೇಕಡಾ ಎರಡರಷ್ಟಕ್ಕೆ ಸಮನಾದ ಶುಲ್ಕದೊಂದಿಗೆ ಇರತಕ್ಕದ್ದು. ಪರಂತು, ಸಂದಾಯ ಮಾಡಬೇಕಾದ ಮೊಬಲಗು ಯಾವ ಸಂದರ್ಭದಲ್ಲಿಯೂ ಎರಡುನೂರು ರೂಪಾಯಿಗಳಿಗಿಂತ ಕಡಿಮೆ ಇರತಕ್ಕದ್ದಲ್ಲ ಅಥವಾ ಒಂದು ಸಾವಿರ ರೂಪಾಯಿಗಳಿಗಿಂತ ಹೆಚ್ಚಿಗೆ ಇರತಕ್ಕದ್ದಲ್ಲ.

[4][ಪರಂತು, ಯಾವುದೇ ಒಂದು ವರ್ಷದಲ್ಲಿ ಒಂದಕ್ಕಿಂತ ಹೆಚ್ಚಿನ ತೆರಿಗೆಯ ಅವಧಿಗಳ ಸಂಬಂಧದಲ್ಲಿ ತೆರಿಗೆ ನಿರ್ಧರಣ ಅಥವಾ ತೆರಿಗೆ ಪುನರ್ ನಿರ್ಧರಣ ಆದೇಶಗಳ ಅಥವಾ ಯಾವುದೇ ಇತರ ಆದೇಶಗಳ ಅಥವಾ ನಡವಳಿಗಳ ವಿರುದ್ಧ ಒಂದೇ ಅಪೀಲನ್ನು ಸಲ್ಲಿಸಬಹುದು.][4]

1. 2007 ರ ಅಧಿನಿಯಮ ಸಂಖ್ಯೆ 6ರ ಮೂಲಕ ದಿನಾಂಕ: 1.4.2007 ರಿಂದ ಪ್ರತಿಯೋಜಿಸಲಾಗಿದೆ.
2. 2005ರ ಅಧಿನಿಯಮ ಸಂಖ್ಯೆ 6ರ ಮೂಲಕ ದಿನಾಂಕ: 19.3.2005 ರಿಂದ ಸೇರಿಸಲಾಗಿದೆ.
3. 2013ರ ಅಧಿನಿಯಮ ಸಂಖ್ಯೆ 32ರ ಮೂಲಕ ದಿನಾಂಕ: 1.4.2013 ರಿಂದ ಪ್ರತಿಯೋಜಿಸಲಾಗಿದೆ.
4. 2014ರ ಅಧಿನಿಯಮ ಸಂಖ್ಯೆ 15ರ ಮೂಲಕ ದಿನಾಂಕ: 1.3.2014 ರಿಂದ ಸೇರಿಸಲಾಗಿದೆ.

(5) (ಎ) ಅಪೀಲು ನ್ಯಾಯಾಧಿಕರಣವು, ಅಪೀಲಿನ ಉಭಯ ಪಕ್ಷಕಾರರಿಗೆ ಅಹವಾಲನ್ನು ಹೇಳಿಕೊಳ್ಳಲು ಒಂದು ಸೂಕ್ತ ಅವಕಾಶವನ್ನು ಕೊಟ್ಟ ತರುವಾಯ, ಅದರ ಬಗ್ಗೆ ತಾನು ಸೂಕ್ತವೆಂದು ಭಾವಿಸಬಹುದಾದ ಅಂಥ ಆದೇಶವನ್ನು ಮಾಡತಕ್ಕದ್ದು.

(ಬಿ) ಒಂದು ಅಪೀಲು, ಅಪೀಲು ನ್ಯಾಯಾಧಿಕರಣವು ಈ ಹಿಂದೆ ಬೇರೊಂದು ಅಪೀಲಿನಲ್ಲಿ ತನ್ನ ತೀರ್ಮಾನವನ್ನು ಕೊಟ್ಟಿರುವ ಕಾನೂನಿನ ಪ್ರಶ್ನೆಯನ್ನು ಒಳಗೊಂಡಿದ್ದು ಮತ್ತು ಅಂಥ ತೀರ್ಮಾನದ ವಿರುದ್ಧ ಉಚ್ಚ ನ್ಯಾಯಾಲಯದಲ್ಲಿ ಪುನರೀಕ್ಷಣಾ ಅರ್ಜಿಯಾಗಲಿ ಅಥವಾ ಉಚ್ಚ ನ್ಯಾಯಾಲಯದ ಆದೇಶದ ವಿರುದ್ಧ ಸರ್ವೋಚ್ಚ ನ್ಯಾಯಾಲಯದಲ್ಲಿ ಅಪೀಲಾಗಲೀ ಇತ್ಯರ್ಥದಲ್ಲಿದ್ದರೆ, ಅಪೀಲು ನ್ಯಾಯಾಧಿಕರಣವು ಉಚ್ಚ ನ್ಯಾಯಾಲಯದಲ್ಲಿರುವ ಪುನರೀಕ್ಷಣಾ ಅರ್ಜಿಯು ಅಥವಾ ಸರ್ವೋಚ್ಚ ನ್ಯಾಯಾಲಯದಲ್ಲಿರುವ ಅಪೀಲು ವಿಲೆಯಾಗುವವರೆಗೆ ತನ್ನ ಮುಂದಿರುವ ಅಪೀಲಿನ ವಿಚಾರಣೆಯನ್ನು ಮುಂದೂಡಬಹುದು.

(ಸಿ) ಅಪೀಲಿನ ಪರಿಣಾಮವಾಗಿ, ಅಪೀಲಿನ ವ್ಯಾಜ್ಯ ವಿಷಯವಾಗಿರುವ ತೆರಿಗೆ ನಿರ್ಧರಣೆಯಲ್ಲಿ ಯಾವುದೇ ಬದಲಾವಣೆಯನ್ನು ಮಾಡುವುದು ಅವಶ್ಯವಾಗಿದ್ದರೆ, ಅಪೀಲು ನ್ಯಾಯಾಧಿಕರಣವು ತೆರಿಗೆ ನಿರ್ಧರಣೆಯನ್ನು ತಿದ್ದುಪಡಿ ಮಾಡಲು ನಿಯಮಿಸಲಾದ ಪ್ರಾಧಿಕಾರಕ್ಕೆ ಅಧಿಕಾರ ನೀಡಬಹುದು ಮತ್ತು ನಿಯಮಿಸಲಾದ ಪ್ರಾಧಿಕಾರವು ತದನುಸಾರವಾಗಿ ತೆರಿಗೆ ನಿರ್ಧರಣೆಯ ತಿದ್ದುಪಡಿ ಮಾಡತಕ್ಕದ್ದು ಮತ್ತು ಆ ತರುವಾಯ ವ್ಯಾಪಾರಿಯು ಹೆಚ್ಚಿಗೆ ಸಂದಾಯ ಮಾಡಿದ ಯಾವುದೇ ಮೊಬಲಗನ್ನು ಬಡ್ಡಿ ಇಲ್ಲದೆ ಮರುಪಾವತಿ ಮಾಡತಕ್ಕದ್ದು ಅಥವಾ ಸಂದರ್ಭಾನುಸಾರ ಅವನಿಂದ ಬಾಕಿ ಇರತಕ್ಕ ಯಾವುದೇ ಹೆಚ್ಚಿನ ತೆರಿಗೆ ಮೊಬಲಗನ್ನು ಈ ಅಧಿನಿಯಮದ ಉಪಬಂಧಗಳಿಗೆ ಅನುಸಾರವಾಗಿ ವಸೂಲ್ಮಾಡತಕ್ಕದ್ದು.

(6)(ಎ) ಮೇಲಿನ (1)ನೇ ಉಪಪ್ರಕರಣದ ಅಡಿಯಲ್ಲಿ ಅಪೀಲನ್ನು ಸಲ್ಲಿಸಿದ್ದಾಗ್ಯೂ ತೆರಿಗೆಯನ್ನು ಈ ಸಂಬಂಧದಲ್ಲಿ ಮಾಡಿದ ತೆರಿಗೆ ನಿರ್ಧರಣೆಗೆ ಅನುಸಾರವಾಗಿ ಸಂದಾಯ ಮಾಡತಕ್ಕದ್ದು.

(ಬಿ) [1][xxx]

1. 2005ರ ಅಧಿನಿಯಮ ಸಂಖ್ಯೆ 6ರ ಮೂಲಕ ದಿನಾಂಕ: 19.3.2005 ರಿಂದ ಬಿಟ್ಟುಬಿಡಲಾಗಿದೆ.

(7) (ಎ) [1][ಅಪೀಲುದಾರನು, ನಿಯಮಿಸಲಾದ ಅಪೀಲು ನಮೂನೆಯೊಡನೆ ತೆರಿಗೆಯ ಅಥವಾ ವಿವಾದಿತ ಇತರ [2][ಮೊಬಲಗಿನ ಶೇಕಡಾ ಮೂವತ್ತರಷ್ಟನ್ನು][2] ಸಂದಾಯ ಮಾಡಿದರೆ ಅಪೀಲು ನ್ಯಾಯಾಧಿಕರಣವು ತನ್ನ ವಿವೇಚನಾನುಸಾರ ತೆರಿಗೆಯ ಅಥವಾ ವಿವಾದಿತ ಇತರ ಮೊಬಲಗಿನ [2][ಇನ್ನುಳಿದ ಶೇಕಡಾ ಎಪ್ಪತ್ತರಷ್ಟು ಸಂದಾಯಕ್ಕೆ][2] ತಡೆ ನೀಡಬಹುದು.

(ಬಿ) ಅಪೀಲು ಪ್ರಾಧಿಕಾರವು ಎರಡನೇ ಪರಂತುಕದ ಅಡಿ ಬರುವಂಥ ಅಪೀಲುಗಳನ್ನು ತೆರಿಗೆಯ ಅಥವಾ [2][ಇತರ ಮೊಬಲಗಿನ ಶೇಕಡಾ ಎಪ್ಪತ್ತರಷ್ಟು ವಸೂಲಿಯ][2] ವ್ಯವಹರಣೆಗಳ ತಡೆಯಾಜ್ಞೆ ದಿನಾಂಕದಿಂದ [3][ಮೂರು ನೂರ ಅರವತ್ತೈದು ದಿನಗಳೊಳಗೆ][3] ವಿಲೆ ಮಾಡತಕ್ಕದ್ದು ಮತ್ತು ನಿರ್ದಿಷ್ಟಪಡಿಸಿದ ಅವಧಿಯೊಳಗೆ ಅಂಥ ಅಪೀಲನ್ನು ವಿಲೆ ಮಾಡದಿದ್ದರೆ ಸದರಿ ಅವಧಿಯ ತರುವಾಯ ಅಂಥ ಅಪೀಲು ತೆರವಾಗತಕ್ಕದ್ದು ಮತ್ತು ಅಪೀಲು ಪ್ರಾಧಿಕಾರವು ಸದರಿ ತೆರಿಗೆಯ ಅಥವಾ ಅಂಥ ಮೊಬಲಗಿನ ವಸೂಲಿಯ ವ್ಯವಹರಣೆಗಳನ್ನು ತಡೆಯುವ ಯಾವುದೇ ಆದೇಶವನ್ನು ಮತ್ತೆ ಮಾಡತಕ್ಕದ್ದಲ್ಲ.]

1.2005ರ ಅಧಿನಿಯಮ ಸಂಖ್ಯೆ 6ರ ಮೂಲಕ ದಿನಾಂಕ: 19.3.2005 ರಿಂದ ಪ್ರತಿಯೋಜಿಸಲಾಗಿದೆ.

2. 2013ರ ಅಧಿನಿಯಮ ಸಂಖ್ಯೆ 32ರ ಮೂಲಕ ದಿನಾಂಕ: 1.4.2013 ರಿಂದ ಪ್ರತಿಯೋಜಿಸಲಾಗಿದೆ.

3. 2015ರ ಅಧಿನಿಯಮ ಸಂಖ್ಯೆ 15ರ ಮೂಲಕ ದಿನಾಂಕ: 1.4.2015 ರಿಂದ ಪ್ರತಿಯೋಜಿಸಲಾಗಿದೆ.

(8) (ಎ) ಅಪೀಲು ಪ್ರಾಧಿಕಾರವು, ಅಪೀಲುದಾರನ ಅಥವಾ ಪ್ರತಿವಾದಿಯ ಅರ್ಜಿಯ ಮೇಲೆ, (5)ನೇ ಉಪಪ್ರಕರಣದ ಅಡಿಯಲ್ಲಿ ತಾನು ಮಾಡಿದ ಯಾವುದೇ ಆದೇಶವನ್ನು, ಅದು ಆ ಆದೇಶವನ್ನು ಮಾಡಿದಾಗ ಅದರ ಮುಂದೆ ಇದ್ದಿರದ್ದಂಥ ಸಂಗತಿಗಳ ಆಧಾರದ ಮೇಲೆ ಪುನರವಲೋಕಿಸಬಹುದು.

(ಬಿ) ಮೇಲಿನ (ಎ) ಖಂಡದ ಅಡಿಯಲ್ಲಿ ಅಂಥ ಯಾವುದೇ ಅರ್ಜಿಯನ್ನು ಒಂದೇ ಆದೇಶಕ್ಕೆ ಸಂಬಂಧಿಸಿದಂತೆ ಒಂದಕ್ಕಿಂತ ಹೆಚ್ಚು ಸಲ ಸಲ್ಲಿಸತಕ್ಕದ್ದಲ್ಲ.

(ಸಿ) ಪುನರವಲೋಕನಕ್ಕಾಗಿ ಅರ್ಜಿಯನ್ನು, ಆ ಅರ್ಜಿಯು ಯಾವ ಆದೇಶಕ್ಕೆ ಸಂಬಂಧಿಸಿದೆಯೋ ಅಂಥ ಆದೇಶವನ್ನು ಅರ್ಜಿದಾರನಿಗೆ ತಿಳಿಸಿದ ದಿನಾಂಕದಿಂದ ಆರು ತಿಂಗಳುಗಳೊಳಗೆ, ನಿಯಮಿಸಲಾದ ರೀತಿಯಲ್ಲಿ ಸಲ್ಲಿಸತಕ್ಕದ್ದು ಮತ್ತು (1)ನೇ ಉಪ ಪ್ರಕರಣದ ಅಡಿಯಲ್ಲಿ ಸರ್ಕಾರದಿಂದ ಪ್ರಾಧಿಕೃತನಾದ ಅಧಿಕಾರಿಯ ಹೊರತಾಗಿ ಇತರ ಯಾವೊಬ್ಬ ವ್ಯಕ್ತಿಯು ಅರ್ಜಿಯನ್ನು ಸಲ್ಲಿಸಿರುವಲ್ಲಿ, ಅಪೀಲಿನ ಸಂಬಂಧದಲ್ಲಿ ಸಂದಾಯ ಮಾಡಿರುವುದಕ್ಕೆ ಸಮನಾದಷ್ಟು ಶುಲ್ಕ ಅದರೊಂದಿಗೆ ಇರತಕ್ಕದ್ದು.

(ಡಿ) ಅರ್ಜಿಯು ಯಾವ ಆದೇಶಕ್ಕೆ ಸಂಬಂಧಿಸಿದೆಯೋ ಅಂಥ ಆದೇಶವನ್ನು ಅರ್ಜಿದಾರನಿಗೆ ತಿಳಿಸಿದ ದಿನಾಂಕದಿಂದ ತೊಂಬತ್ತು ದಿನಗಳೊಳಗೆ ಪುನರಾವಲೋಕನಕ್ಕಾಗಿ ಅರ್ಜಿಯನ್ನು ಸಲ್ಲಿಸಲಾಗಿದ್ದರೆ, ಅಪೀಲಿನ ಸಂಬಂಧದಲ್ಲಿ ಸಂದಾಯ ಮಾಡಿದ ಅರ್ಧದಷ್ಟು ಶುಲ್ಕವು ಅರ್ಜಿಯ ಜೊತೆಗೆ ಇರತಕ್ಕದ್ದು.

(9) (ಎ) ದಾಖಲೆಯಿಂದ ಕಂಡುಬರುವ ಯಾವುದೇ ತಪ್ಪನ್ನು ಸರಿಪಡಿಸುವ ದೃಷ್ಟಿಯಿಂದ, ಅಪೀಲು ನ್ಯಾಯಾಧಿಕರಣವು (5)ನೇ ಉಪಪ್ರಕರಣ ಅಥವಾ (8)ನೇ ಉಪಪ್ರಕರಣದ ಅಡಿಯಲ್ಲಿ ಅದು ಮಾಡಿದ ಯಾವುದೇ ಆದೇಶದ ದಿನಾಂಕದಿಂದ ಐದು ವರ್ಷಗಳೊಳಗೆ ಯಾವುದೇ ಕಾಲದಲ್ಲಿ ಅಂಥ ಆದೇಶವನ್ನು ತಿದ್ದುಪಡಿ ಮಾಡಬಹುದು.

(ಬಿ) ಈ ಉಪಪ್ರಕರಣದ ಅಡಿಯಲ್ಲಿ ಯಾವುದೇ ಆದೇಶವನ್ನು, ಆ ಆದೇಶದಿಂದ ಬಾಧಿತರಾದ ಉಭಯ ಪಕ್ಷಕಾರರಿಗೂ ಅಹವಾಲನ್ನು ಹೇಳಿಕೊಳ್ಳಲು ಸೂಕ್ತ ಅವಕಾಶವನ್ನು ಕೊಡದ ಹೊರತು ಮಾಡತಕ್ಕದ್ದಲ್ಲ.

(10) ನಿಯಮಗಳಲ್ಲಿ ಉಪಬಂಧಿಸಿರುವುದರ ಹೊರತಾಗಿ, ಅಪೀಲು ನ್ಯಾಯಾಧಿಕರಣವು, ಅಪೀಲಿನ ಅಥವಾ ಪುನರವಲೋಕನದ ಸಂಬಂಧದಲ್ಲಿ ಯಾವೊಬ್ಬ ಪಕ್ಷಕಾರನಿಗೂ ಖರ್ಚುಗಳ ಬಗ್ಗೆ ಆದೇಶಿಸಲು ಅಧಿಕಾರವನ್ನು ಹೊಂದಿರತಕ್ಕದ್ದಲ್ಲ.

(11) ಮೇಲಿನ (5) ಅಥವಾ (8) ಅಥವಾ (9)ನೇ ಉಪಪ್ರಕರಣಗಳ ಅಡಿಯಲ್ಲಿ ಅಪೀಲು ನ್ಯಾಯಾಧಿಕರಣವು ಮಾಡಿದ ಪ್ರತಿಯೊಂದು ಆದೇಶವನ್ನು, ಅಪೀಲುದಾರ, ಪ್ರತಿವಾದಿ, ಯಾರ ಆದೇಶದ ಮೇಲೆ ಅಪೀಲನ್ನು ಸಲ್ಲಿಸಲಾಯಿತೋ ಆ ಅಪೀಲು ಪ್ರಾಧಿಕಾರ ಮತ್ತು ಆಯುಕ್ತನು, ಇವರುಗಳಿಗೆ ತಿಳಿಸತಕ್ಕದ್ದು.

(12) ಮೇಲಿನ (5)ನೇ ಉಪ ಪ್ರಕರಣದ ಅಡಿಯಲ್ಲಿ ಅಪೀಲು ನ್ಯಾಯಾಧಿಕರಣವು ಮಾಡಿದ ಪ್ರತಿಯೊಂದು ಆದೇಶವು, (8)ನೇ ಉಪ ಪ್ರಕರಣ, (9)ನೇ ಉಪ ಪ್ರಕರಣ ಮತ್ತು 65ನೇ ಪ್ರಕರಣದ ಉಪಬಂಧಗಳಿಗೆ ಒಳಪಟ್ಟು ಅಂತಿಮವಾಗಿರತಕ್ಕದ್ದು ಮತ್ತು (8)ನೇ ಉಪ ಪ್ರಕರಣದ ಅಡಿಯಲ್ಲಿ ಅದು ಮಾಡಿದ ಪ್ರತಿಯೊಂದು ಆದೇಶವು (9)ನೇ ಉಪ ಪ್ರಕರಣ ಮತ್ತು 65ನೇ ಪ್ರಕರಣದ ಉಪಬಂಧಗಳಿಗೆ ಒಳಪಟ್ಟು ಅಂತಿಮವಾಗಿರತಕ್ಕದ್ದು.

[1][**63ಎ. ಜಂಟಿ ಆಯುಕ್ತರ ಪುನರೀಕ್ಷಣಾ ಅಧಿಕಾರಿಗಳು.**- (1) ಜಂಟಿ ಆಯುಕ್ತನು ಈ ಅಧಿನಿಯಮದ ಅಡಿಯಲ್ಲಿ ಮಾಡಿದ ಯಾವುವೇ ಆದೇಶಗಳ ದಾಖಲೆಗಳನ್ನು ಅಥವಾ ದಾಖಲು ಮಾಡಿದ ವ್ಯವಹರಣೆಗಳನ್ನು ತಾನೇ ಸ್ವತಃ ತರಿಸಿಕೊಳ್ಳಬಹುದು ಮತ್ತು ಪರೀಕ್ಷಿಸಬಹುದು ಮತ್ತು ಅದರಲ್ಲಿ ಉಪ ಆಯುಕ್ತರ ದರ್ಜೆಗಿಂತ ಮೇಲಿನದಲ್ಲದ ದರ್ಜೆಯ ಯಾವೊಬ್ಬ ಅಧಿಕಾರಿಯು ಮಾಡಿದ ಯಾವುದೇ ಆದೇಶವು ರಾಜಸ್ವದ ಹಿತಾಸಕ್ತಿಗೆ ಪ್ರತಿಕೂಲವಾಗಿರುವಷ್ಟರ ಮಟ್ಟಿಗೆ ದೋಷಪೂರ್ಣವಾಗಿದೆಯೆಂದು ಆತನು ಪರಿಗಣಿಸಿದರೆ, ಆತನು ಅವಶ್ಯವಿದ್ದಲ್ಲಿ ತಾನು ಸೂಕ್ತವೆಂದು ಭಾವಿಸಬಹುದಾದಂಥ ಅವಧಿಯವರೆಗೆ ಅಂಥ ಆದೇಶದ ಜಾರಿಯನ್ನು ತಡೆಹಿಡಿಯಬಹುದು ಮತ್ತು ಸಂಬಂಧಪಟ್ಟ ವ್ಯಕ್ತಿಗೆ ಅಹವಾಲು ಹೇಳಿಕೊಳ್ಳಲು ಒಂದು ಅವಕಾಶವನ್ನು ಕೊಟ್ಟ ತರುವಾಯ ಮತ್ತು ತಾನು ಸೂಕ್ತವೆಂದು ಭಾವಿಸಬಹುದಾದಂಥ ವಿಚಾರಣೆಯನ್ನು ಮಾಡಿದ ತರುವಾಯ ಅಥವಾ ಮಾಡಿಸಿದ ತರುವಾಯ ತೆರಿಗೆಯ ನಿರ್ಧರಣೆಯನ್ನು ಹೆಚ್ಚಿಸುವ ಅಥವಾ ಮಾರ್ಪಡಿಸುವ ಅಥವಾ [1][ತೆರಿಗೆಯ ನಿರ್ಧರಣೆಯನ್ನು ರದ್ದುಗೊಳಿಸುವ ಮತ್ತು ಹೊಸದಾಗಿ ತೆರಿಗೆಯ ನಿರ್ಧರಣೆಯನ್ನು ನಿರ್ದೇಶಿಸುವ][1] ಆದೇಶವೂ ಒಳಗೊಂಡಂತೆ ಆ ಪ್ರಕರಣದ ಸನ್ನಿವೇಶಗಳಿಗೆ ಸಮರ್ಥನೀಯವಾಗುವಂಥ ಆದೇಶವನ್ನು ಅದರ ಬಗ್ಗೆ ಹೊರಡಿಸಬಹುದು.

1.2013ರ ಅಧಿನಿಯಮ ಸಂಖ್ಯೆ 32ರ ಮೂಲಕ ದಿನಾಂಕ: 1.4.2013 ರಿಂದ ಪ್ರತಿಯೋಜಿಸಲಾಗಿದೆ.

(2) ಜಂಟಿ ಆಯುಕ್ತನು ಈ ಪ್ರಕರಣದ ಅಡಿಯಲ್ಲಿ,

(ಎ) ಆದೇಶದ ವಿರುದ್ಧ ಅಪೀಲು ಮಾಡಲು ಅವಧಿ ಮುಕ್ತಾಯವಾಗಿರದಿದ್ದರೆ;

(ಬಿ) ಪುನರೀಕ್ಷಿಸಬೇಕೆಂದು ಕೋರಲಾದ ಆದೇಶವನ್ನು ಹೊರಡಿಸಿದ ತರುವಾಯ ನಾಲ್ಕು ವರ್ಷಗಳಿಗೂ ಹೆಚ್ಚಿನ ಅವಧಿಯು ಮುಕ್ತಾಯವಾಗಿದ್ದರೆ,

- ಯಾವುದೇ ಅಧಿಕಾರವನ್ನು ಚಲಾಯಿಸತಕ್ಕದ್ದಲ್ಲ.

(3) ಜಂಟಿ ಆಯುಕ್ತನು ಈ ಪ್ರಕರಣದ ಅಡಿಯಲ್ಲಿ ವ್ಯವಹರಣೆಯನ್ನು ಪ್ರಾರಂಭಿಸಿದ ಅಥವಾ ಸಂದರ್ಭಾನುಸಾರ ದಾಖಲೆಗಳನ್ನು ಕೋರಿದ ದಿನಾಂಕದಿಂದ ಒಂದು ವರ್ಷದ ಅವಧಿಯೊಳಗೆ ಈ ಪ್ರಕರಣದ ಅಡಿಯಲ್ಲಿ ಒಂದು ಆದೇಶವನ್ನು ಹೊರಡಿಸತಕ್ಕದ್ದು.

(4) ಈ ಪ್ರಕರಣದ ಅಡಿಯಲ್ಲಿ ಪುನರೀಕ್ಷಣೆ ಮಾಡಿ ಹೊರಡಿಸಿದ ಪ್ರತಿಯೊಂದು ಆದೇಶವು 63 ಮತ್ತು 64ನೇ ಪ್ರಕರಣಗಳ ಉಪ ಬಂಧಗಳಿಗೆ ಒಳಪಟ್ಟು ಅಂತಿಮವಾಗಿರತಕ್ಕದ್ದು.

(5) ಮೇಲಿನ (2)ನೇ ಉಪ ಪ್ರಕರಣದ ಉದ್ದೇಶಕ್ಕಾಗಿ ಕಾಲ ಪರಿಮಿತಿಯನ್ನು ಲೆಕ್ಕ ಹಾಕುವಾಗ, ಈ ಪ್ರಕರಣದ ಅಡಿಯಲ್ಲಿ ಯಾವುದೇ ವ್ಯವಹರಣೆಯ ಕಾಲದಲ್ಲಿ ಯಾವುದೇ ನ್ಯಾಯಾಲಯದ ಆದೇಶ ಅಥವಾ ನಿರ್ಬಂಧಕಾಜ್ಞೆಯ ಮೂಲಕ ವ್ಯವಹರಣೆಯನ್ನು ತಡೆಹಿಡಿಯಲಾಗಿದ್ದ ಅವಧಿಯನ್ನು ಹೊರತುಪಡಿಸತಕ್ಕದ್ದು.

(6) ಈ ಪ್ರಕರಣದ ಉದ್ದೇಶಗಳಿಗಾಗಿ 'ದಾಖಲೆ' ಎನ್ನುವುದರಲ್ಲಿ ಜಂಟಿ ಆಯುಕ್ತನು ಪರಿಶೀಲನೆ ನಡೆಸುವ ಸಮಯದಲ್ಲಿ ಲಭ್ಯವಿರುವ ಈ ಅಧಿನಿಯಮದ ಅಡಿಯಲ್ಲಿಯ ಯಾವುವೇ ವ್ಯವಹರಣೆಗಳಿಗೆ ಸಂಬಂಧಪಟ್ಟ ಎಲ್ಲ ದಾಖಲೆಗಳೂ ಒಳಗೊಳ್ಳತಕ್ಕದ್ದು.][1]

1. 2006ರ ಅಧಿನಿಯಮ ಸಂಖ್ಯೆ 4ರ ಮೂಲಕ ದಿನಾಂಕ: 1.4.2006 ರಿಂದ ಸೇರಿಸಲಾಗಿದೆ.

**64. ಅಪರ ಆಯುಕ್ತರ ಮತ್ತು ಆಯುಕ್ತನ ಪುನರೀಕ್ಷಣಾ ಅಧಿಕಾರಗಳು.-** (1) ಅಪರ ಆಯುಕ್ತನು, ಈ ಅಧಿನಿಯಮದ ಅಡಿಯಲ್ಲಿ ಮಾಡಿದ ಯಾವುವೇ ಆದೇಶಗಳ ದಾಖಲೆಗಳನ್ನು ಅಥವಾ ದಾಖಲು ಮಾಡಿದ ವ್ಯವಹರಣೆಗಳನ್ನು ತಾನೇ ಸ್ವತಃ ತರಿಸಿಕೊಳ್ಳಬಹುದು ಮತ್ತು ಪರೀಕ್ಷಿಸಬಹುದು ಮತ್ತು ಅದರಲ್ಲಿ ಜಂಟಿ ಆಯುಕ್ತರ ದರ್ಜೆಗೆ ಮೇಲಿನದಲ್ಲದ ದರ್ಜೆಯ ಯಾವೊಬ್ಬ ಅಧಿಕಾರಿಯು ಮಾಡಿದ ಯಾವುದೇ ಆದೇಶವು ರಾಜಸ್ವದ ಹಿತಾಸಕ್ತಿಗೆ ಪ್ರತಿಕೂಲವಾಗಿರುವಷ್ಟರ ಮಟ್ಟಿಗೆ ದೋಷಪೂರ್ಣವಾಗಿದೆಯೆಂದು ಆತನು ಪರಿಗಣಿಸಿದರೆ, ಆತನು ಅವಶ್ಯವಿದ್ದಲ್ಲಿ ತಾನು ಸೂಕ್ತವೆಂದು ಭಾವಿಸಬಹುದಾದ ಅಂಥ ಅವಧಿಯವರೆಗೆ ಅಂಥ ಆದೇಶದ ಜಾರಿಯನ್ನು ತಡೆಹಿಡಿಯಬಹುದು ಮತ್ತು ಸಂಬಂಧಪಟ್ಟ ವ್ಯಕ್ತಿಗೆ ಅಹವಾಲು ಹೇಳಿಕೊಳ್ಳಲು ಒಂದು ಅವಕಾಶವನ್ನು ಕೊಟ್ಟ ತರುವಾಯ ಮತ್ತು ತಾನು ಸೂಕ್ತವೆಂದು ಭಾವಿಸಬಹುದಾದ ಅಂಥ ವಿಚಾರಣೆಯನ್ನು ಮಾಡಿದ ತರುವಾಯ ಅಥವಾ ಮಾಡಿಸಿದ ತರುವಾಯ ತೆರಿಗೆಯ ನಿರ್ಧರಣೆಯನ್ನು ಹೆಚ್ಚಿಸುವ ಅಥವಾ ಮಾರ್ಪಡಿಸುವ ಅಥವಾ ತೆರಿಗೆ ನಿರ್ಧರಣೆಯನ್ನು ರದ್ದುಗೊಳಿಸುವ ಅಥವಾ ಹೊಸದಾಗಿ ತೆರಿಗೆ ನಿರ್ಧರಣೆಯನ್ನು ನಿರ್ದೇಶಿಸುವ ಆದೇಶವೂ ಒಳಗೊಂಡಂತೆ ಆ ಪ್ರಕರಣದ ಸನ್ನಿವೇಶಗಳಿಗೆ ಸಮರ್ಥನೀಯವಾಗುವಂತೆ ಅದರ ಬಗ್ಗೆ ಅಂಥ ಆದೇಶವನ್ನು ಹೊರಡಿಸಬಹುದು.

(2) ಆಯುಕ್ತನು, ಈ ಅಧಿನಿಯಮದ ಅಡಿಯಲ್ಲಿನ ಯಾವುದೇ ವ್ಯವಹರಣೆಯ ದಾಖಲೆಯನ್ನು ತಾನೇ ಸ್ವತಃ ತರಿಸಿಕೊಳ್ಳಬಹುದು ಮತ್ತು ಪರೀಕ್ಷಿಸಬಹುದು ಹಾಗೂ ತನಗೆ ಅಧೀನನಾದ ಯಾವೊಬ್ಬ ಅಧಿಕಾರಿಯು, [1][ಅಥವಾ 60ನೇ ಪ್ರಕರಣದ ಅಡಿಯಲ್ಲಿ ರಚಿತವಾದ ಸ್ಪಷ್ಟೀಕರಣ ಮತ್ತು ಪೂರ್ವಭಾವಿ ನಿರ್ಣಯಗಳ ಪ್ರಾಧಿಕಾರವು] ಆ ಬಗ್ಗೆ ಹೊರಡಿಸಿದ ಯಾವುದೇ ಆದೇಶವು ರಾಜಸ್ವದ ಹಿತಾಸಕ್ತಿಗಳಿಗೆ ಪ್ರತಿಕೂಲವಾಗಿರುವಷ್ಟರ ಮಟ್ಟಿಗೆ ದೋಷಪೂರ್ಣವಾಗಿದೆಯೆಂದು ಆತನು ಪರಿಗಣಿಸಿದರೆ, ಆತನು ಅವಶ್ಯವಿದ್ದಲ್ಲಿ, ತಾನು ಸೂಕ್ತವೆಂದು ಭಾವಿಸಬಹುದಾದ ಅಂಥ ಅವಧಿಯವರೆಗೆ, ಅಂಥ ಆದೇಶದ ಜಾರಿಯನ್ನು ತಡೆಹಿಡಿಯಬಹುದು ಮತ್ತು ಸಂಬಂಧಪಟ್ಟ ವ್ಯಕ್ತಿಗೆ ಅಹವಾಲನ್ನು ಹೇಳಿಕೊಳ್ಳಲು ಒಂದು ಅವಕಾಶವನ್ನು ಕೊಟ್ಟತರುವಾಯ ಮತ್ತು ತಾನು ಸೂಕ್ತವೆಂದು ಭಾವಿಸಬಹುದಾದ ಅಂಥ ವಿಚಾರಣೆಯನ್ನು ಮಾಡಿದ ತರುವಾಯ ಅಥವಾ ಮಾಡಿಸಿದ ತರುವಾಯ ತೆರಿಗೆಯ ನಿರ್ಧರಣೆಯನ್ನು ಹೆಚ್ಚಿಸುವ ಅಥವಾ ಮಾರ್ಪಡಿಸುವ ಅಥವಾ ತೆರಿಗೆ ನಿರ್ಧರಣೆಯನ್ನು ರದ್ದುಗೊಳಿಸುವ ಅಥವಾ ಹೊಸದಾಗಿ ತೆರಿಗೆ ನಿರ್ಧರಣೆಯನ್ನು ನಿರ್ದೇಶಿಸುವ ಆದೇಶವೂ ಒಳಗೊಂಡಂತೆ ಆ ಪ್ರಕರಣದ ಸನ್ನಿವೇಶಗಳಿಗೆ ಸಮರ್ಥನೀಯವಾಗುವಂತೆ ಅದರ ಬಗ್ಗೆ ಅಂಥ ಆದೇಶವನ್ನು ಹೊರಡಿಸಬಹುದು.

1. 2005ರ ಅಧಿನಿಯಮ ಸಂಖ್ಯೆ 6ರ ಮೂಲಕ ದಿನಾಂಕ: 19.3.2005 ರಿಂದ ಪ್ರತಿಯೋಜಿಸಲಾಗಿದೆ.

(3) ಅಪರ ಆಯುಕ್ತನು ಅಥವಾ ಆಯುಕ್ತನು, ಸಂದರ್ಭಾನುಸಾರ (1)ನೇ ಉಪ ಪ್ರಕರಣದ ಅಥವಾ (2)ನೇ ಉಪಪ್ರಕರಣದ ಅಡಿಯಲ್ಲಿ,

(ಎ) ಆದೇಶದ ವಿರುದ್ಧ ಅಪೀಲು ಮಾಡಲು ಅವಧಿ ಮುಕ್ತಾಯವಾಗಿರದಿದ್ದರೆ;

(ಬಿ) ವಿಷಯವು 63ನೇ ಪ್ರಕರಣದ ಅಡಿಯಲ್ಲಿ ಒಂದು ಅಪೀಲಿಗೆ ಅಥವಾ ಉಚ್ಚ ನ್ಯಾಯಾಲಯದಲ್ಲಿ ಪುನರೀಕ್ಷಣೆಗೆ ಒಳಪಟ್ಟಿದ್ದರೆ; ಅಥವಾ

(ಸಿ) ಪರಿಷ್ಕರಿಸಬೇಕೆಂದು ಕೋರಲಾದ ಆದೇಶವನ್ನು ಹೊರಡಿಸಿದ ತರುವಾಯ ನಾಲ್ಕು ವರ್ಷಗಳಿಗೂ ಹೆಚ್ಚಿನ ಅವಧಿಯು ಮುಕ್ತಾಯವಾಗಿದ್ದರೆ,

– ಯಾವುದೇ ಅಧಿಕಾರವನ್ನು ಚಲಾಯಿಸತಕ್ಕದ್ದಲ್ಲ.

[1][ಪರಂತು, 62ನೇ ಪ್ರಕರಣದ ಅಡಿಯಲ್ಲಿ ಅಪೀಲು ಪ್ರಾಧಿಕಾರವು ಕೋರಿದ ಅಪೀಲನ್ನು ಪೂರ್ಣವಾಗಿ ಅನುಮತಿಸಿದ ಆದೇಶವನ್ನು ಹೊರಡಿಸಿದ ಸಂದರ್ಭದಲ್ಲಿ (ಎ) ಖಂಡದಲ್ಲಿ ನಿರ್ದಿಷ್ಟಪಡಿಸಿದ ಷರತ್ತುಗಳು ಅನ್ವಯವಾಗತಕ್ಕದ್ದಲ್ಲ.][1]

1. 2009ರ ಅಧಿನಿಯಮ ಸಂಖ್ಯೆ 5ರ ಮೂಲಕ ದಿನಾಂಕ: 1.4.2009 ರಿಂದ ಸೇರಿಸಲಾಗಿದೆ.

(4) ಮೇಲಿನ (3)ನೇ ಉಪ ಪ್ರಕರಣದಲ್ಲಿ ಏನೇ ಒಳಗೊಂಡಿದ್ದಾಗ್ಯೂ, ಅಪರ ಆಯುಕ್ತನು ಅಥವಾ ಆಯುಕ್ತನು ಸಂದರ್ಭಾನುಸಾರ (1) ಅಥವಾ (2)ನೇ ಉಪ ಪ್ರಕರಣದ ಅಡಿಯಲ್ಲಿ, ಆದೇಶದ ದಿನಾಂಕದಿಂದ ಒಂದು ವರ್ಷದ ಅವಧಿಯ ಮುಕ್ತಾಯಕ್ಕೆ ಮೊದಲು ಅಥವಾ ಆ ಉಪ ಪ್ರಕರಣದ (ಸಿ) ಖಂಡದಲ್ಲಿ ಉಲ್ಲೇಖಿಸಲಾದ ನಾಲ್ಕು ವರ್ಷಗಳ ಅವಧಿಯು ಮುಕ್ತಾಯವಾಗುವುದಕ್ಕೆ ಮೊದಲು, ಇವುಗಳಲ್ಲಿ ಯಾವುದು ನಂತರವೋ ಅದಕ್ಕೆ ಮೊದಲು ಅಪೀಲು ಮಾಡಲಾದ ಅಥವಾ (3)ನೇ ಉಪ ಪ್ರಕರಣದ (ಬಿ) ಖಂಡದಲ್ಲಿ ಉಲ್ಲೇಖಿಸಿದ ಪುನರೀಕ್ಷಣೆಗಾಗಿ ಕೋರಲಾದ ಅಂಥ ಅಪೀಲಿನಲ್ಲಿ ಅಥವಾ ಪುನರೀಕ್ಷಣೆಯಲ್ಲಿ ಎತ್ತಿರದಿದ್ದ ಮತ್ತು ತೀರ್ಮಾನಿಸಿರದಿದ್ದ ಯಾವುದೇ ಅಂಶದ ಬಗ್ಗೆ ಆದೇಶವನ್ನು ಹೊರಡಿಸಬಹುದು.

(5) ಮೇಲಿನ (1)ನೇ ಉಪ ಪ್ರಕರಣದ ಅಡಿಯಲ್ಲಿ ಪುನರೀಕ್ಷಣೆಯಲ್ಲಿಯ ಪ್ರತಿಯೊಂದು ಆದೇಶವು, ಈ ಪ್ರಕರಣದ (2)ನೇ ಉಪ ಪ್ರಕರಣ ಮತ್ತು 66 ಮತ್ತು 67ನೇ ಪ್ರಕರಣಗಳ ಉಪಬಂಧಗಳಿಗೆ ಒಳಪಟ್ಟು ಅಂತಿಮವಾಗಿರತಕ್ಕದ್ದು.

(6) ಮೇಲಿನ (2)ನೇ ಉಪ ಪ್ರಕರಣದ ಅಡಿಯಲ್ಲಿ ಪುನರೀಕ್ಷಣೆಯಲ್ಲಿಯ ಪ್ರತಿಯೊಂದು ಆದೇಶವು 65 ಮತ್ತು 66ನೇ ಪ್ರಕರಣಗಳ ಉಪ ಬಂಧಗಳಿಗೆ ಒಳಪಟ್ಟು ಅಂತಿಮವಾಗಿರತಕ್ಕದ್ದು.

(7) ಮೇಲಿನ (1) ಅಥವಾ (2)ನೇ ಉಪ ಪ್ರಕರಣದಲ್ಲಿ ಉಲ್ಲೇಖಿಸಿದ ಸೂಕ್ತ ಪ್ರಾಧಿಕಾರವು ಮಾಡಿದ ಆದೇಶವು ಅಥವಾ ದಾಖಲ್ಮಾಡಿದ ವ್ಯವಹರಣೆಗಳು ಯಾವ ವಿವಾದಾಂಶದ ಮೇಲೆ ಉಚ್ಚ ನ್ಯಾಯಾಲಯವು ಇತರ ಕೆಲವು ವ್ಯವಹರಣೆಗಳಲ್ಲಿ ರಾಜಸ್ವಕ್ಕೆ ಪ್ರತಿಕೂಲವಾದ ತೀರ್ಪನ್ನು ನೀಡಿದೆಯೋ ಆ ವಿವಾದಾಂಶವನ್ನು ಒಳಗೊಂಡಿದ್ದರೆ ಮತ್ತು ಅಂಥ ತೀರ್ಪಿನ ವಿರುದ್ಧ ಸರ್ವೋಚ್ಚ ನ್ಯಾಯಾಲಯಕ್ಕೆ ಸಲ್ಲಿಸಿದ ಅಪೀಲು ಇತ್ಯರ್ಥದಲ್ಲಿದ್ದರೆ, (3)ನೇ ಉಪ ಪ್ರಕರಣದ (ಸಿ) ಖಂಡದಲ್ಲಿ ಉಲ್ಲೇಖಿಸಿದ ಅವಧಿಯನ್ನು ಲೆಕ್ಕ ಹಾಕುವಾಗ ಉಚ್ಚನ್ಯಾಯಾಲಯದ ತೀರ್ಪಿನ ದಿನಾಂಕ ಮತ್ತು ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ದಿನಾಂಕದ ನಡುವಿನ ಅವಧಿಯನ್ನು ಹೊರತುಪಡಿಸತಕ್ಕದ್ದು.

(8) ಮೇಲಿನ (3)ನೇ ಉಪ ಪ್ರಕರಣದ ಉದ್ದೇಶಕ್ಕಾಗಿ ಅವಧಿ ಪರಿಮಿತಿಯನ್ನು ಲೆಕ್ಕ ಹಾಕುವಾಗ, ಈ ಪ್ರಕರಣದ ಅಡಿಯಲ್ಲಿ ಯಾವುದೇ ವ್ಯವಹರಣೆಯ ಕಾಲದಲ್ಲಿ ಯಾವುದೇ ನ್ಯಾಯಾಲಯದ ಆದೇಶದ ಅಥವಾ ನಿರ್ಬಂಧಕಾಜ್ಞೆಯ ಮೂಲಕ ವ್ಯವಹರಣೆಯನ್ನು ತಡೆಹಿಡಿಯಲಾಗಿದ್ದ ಅವಧಿಯನ್ನು ಹೊರತುಪಡಿಸತಕ್ಕದ್ದು.

(9) ಈ ಪ್ರಕರಣದ ಉದ್ದೇಶಗಳಿಗಾಗಿ 'ದಾಖಲೆ' ಎನ್ನುವುದರಲ್ಲಿ ಅಪರ ಆಯುಕ್ತನು ಅಥವಾ ಆಯುಕ್ತನು ಪರೀಕ್ಷೆ ನಡೆಸುವ ಸಮಯದಲ್ಲಿ ಲಭ್ಯವಿರುವ ಈ ಅಧಿನಿಯಮದ ಅಡಿಯಲ್ಲಿಯ ಯಾವುವೇ ವ್ಯವಹರಣೆಗಳಿಗೆ ಸಂಬಂಧಪಟ್ಟ ಎಲ್ಲ ದಾಖಲೆಗಳೂ ಒಳಗೊಳ್ಳತಕ್ಕದ್ದು.

**65. ಕೆಲವು ಪ್ರಕರಣಗಳಲ್ಲಿ ಉಚ್ಚ ನ್ಯಾಯಾಲಯದಿಂದ ಪುನರೀಕ್ಷಣೆ.**– (1) 63ನೇ ಪ್ರಕರಣದ (5) ಅಥವಾ (8) ಅಥವಾ (9)ನೇ ಉಪ ಪ್ರಕರಣದ ಅಡಿಯಲ್ಲಿನ ಆದೇಶವನ್ನು ಅವನಿಗೆ ತಿಳಿಸಿದ ದಿನಾಂಕದಿಂದ [1][ಒಂದುನೂರಾ ಎಂಭತ್ತು ದಿನಗಳೊಳಗೆ] ಅಪೀಲುದಾರನು ಅಥವಾ ಪ್ರತಿವಾದಿಯು ಆ ಆದೇಶದ ವಿರುದ್ಧ, ಅಪೀಲು ನ್ಯಾಯಾಧಿಕರಣವು

ಕಾನೂನಿನ ಪ್ರಶ್ನೆಯನ್ನು ತೀರ್ಮಾನಿಸಲು ವಿಫಲವಾಗಿದೆ ಅಥವಾ ದೋಷಪೂರ್ಣವಾಗಿ ತೀರ್ಮಾನಿಸಿದೆ ಎಂಬ ಆಧಾರದ ಮೇಲೆ ಉಚ್ಚ ನ್ಯಾಯಾಲಯಕ್ಕೆ ಪುನರೀಕ್ಷಣಾ ಅರ್ಜಿ ಸಲ್ಲಿಸಬಹುದು.

1. 2005 ರ ಅಧಿನಿಯಮ ಸಂಖ್ಯೆ 11 ರ ಮೂಲಕ ದಿನಾಂಕ: 1.4.2005 ರಿಂದ ಪ್ರತಿಯೋಜಿಸಲಾಗಿದೆ.

(2) ಆ ಅವಧಿಯೊಳಗೆ ಅರ್ಜಿದಾರನು ಅರ್ಜಿಯನ್ನು ಸಲ್ಲಿಸದಿರುವುದಕ್ಕೆ ಸಾಕಷ್ಟು ಕಾರಣ ಇತ್ತೆಂದು ಉಚ್ಚ ನ್ಯಾಯಾಲಯಕ್ಕೆ ಮನವರಿಕೆಯಾದರೆ, ಹಿಂದೆ ಹೇಳಿದ [1][ಒಂದುನೂರಾ ಎಂಭತ್ತು ದಿನಗಳ] ಅವಧಿಯ ತರುವಾಯ ಸಲ್ಲಿಸಿದ ಅರ್ಜಿಯನ್ನು ಅದು ಅಂಗೀಕರಿಸಬಹುದು.

1. 2005 ರ ಅಧಿನಿಯಮ ಸಂಖ್ಯೆ 11 ರ ಮೂಲಕ ದಿನಾಂಕ: 1.4.2005 ರಿಂದ ಪ್ರತಿಯೋಜಿಸಲಾಗಿದೆ.

(3) ಅರ್ಜಿಯು, ನಿಯಮಿಸಲಾದ ನಮೂನೆಯಲ್ಲಿ ಇರತಕ್ಕದ್ದು, ನಿಯಮಿಸಲಾದ ರೀತಿಯಲ್ಲಿ ಅದನ್ನು ಸತ್ಯಾಪನೆ ಮಾಡತಕ್ಕದ್ದು ಮತ್ತು 63ನೇ ಪ್ರಕರಣದ (1)ನೇ ಉಪಪ್ರಕರಣದ ಅಡಿಯಲ್ಲಿ ಸರ್ಕಾರವು ಪ್ರಾಧಿಕೃತಗೊಳಿಸಿದ ಅಧಿಕಾರಿಯಲ್ಲದ ಯಾವೊಬ್ಬ ವ್ಯಕ್ತಿಯು ಅದನ್ನು ಸಲ್ಲಿಸಿದಾಗ, ಒಂದುನೂರು ರೂಪಾಯಿಗಳ ಶುಲ್ಕವು ಅದರ ಜೊತೆಗೆ ಇರತಕ್ಕದ್ದು.

(4) ಉಚ್ಚ ನ್ಯಾಯಾಲಯವು ಅರ್ಜಿಯನ್ನು ಪರಿಶೀಲಿಸಿದ ಮೇಲೆ, ಮಧ್ಯ ಪ್ರವೇಶಿಸಲು ಸಾಕಷ್ಟು ಕಾರಣಗಳು ಇಲ್ಲವೆಂದು ಪರಿಗಣಿಸಿದರೆ, ಅದು ಆ ಅರ್ಜಿಯನ್ನು ಕ್ಷಿಪ್ರವಾಗಿ ವಜಾ ಮಾಡಬಹುದು.

(5) ಉಚ್ಚ ನ್ಯಾಯಾಲಯವು, ಅರ್ಜಿದಾರನಿಗೆ ಯಾವುದೇ ಅರ್ಜಿಯ ಸಮರ್ಥನೆಯಲ್ಲಿ ಅಹವಾಲನ್ನು ಹೇಳಿಕೊಳ್ಳಲು ಸೂಕ್ತ ಅವಕಾಶವನ್ನು ಕೊಟ್ಟ ಹೊರತು ಅದನ್ನು ವಜಾ ಮಾಡತಕ್ಕದ್ದಲ್ಲ.

(6) (ಎ) ಉಚ್ಚನ್ಯಾಯಾಲಯವು ಆ ಅರ್ಜಿಯನ್ನು ಕ್ಷಿಪ್ರವಾಗಿ ವಜಾ ಮಾಡದಿದ್ದರೆ, ಆ ಅರ್ಜಿಯ ಉಭಯ ಪಕ್ಷಕಾರರಿಗೆ ಅಹವಾಲನ್ನು ಹೇಳಿಕೊಳ್ಳಲು ಸೂಕ್ತ ಅವಕಾಶವನ್ನು ಕೊಟ್ಟ ತರುವಾಯ, ಎತ್ತಲಾದ ಕಾನೂನಿನ ಪ್ರಶ್ನೆ ಅಥವಾ ಪ್ರಶ್ನೆಗಳನ್ನು ಅದು ನಿರ್ಧರಿಸತಕ್ಕದ್ದು ಮತ್ತು ಯಾವ ಆದೇಶದ ವಿರುದ್ಧ ಅರ್ಜಿಯನ್ನು ಸಲ್ಲಿಸಲಾಗಿತ್ತೋ ಆ ಆದೇಶವನ್ನು ವಿಪರ್ಯಯಗೊಳಿಸತಕ್ಕದ್ದು, ಸ್ಥಿರೀಕರಿಸತಕ್ಕದ್ದು ಅಥವಾ ತಿದ್ದುಪಡಿ ಮಾಡತಕ್ಕದ್ದು ಅಥವಾ ಎತ್ತಲಾದ ಕಾನೂನಿನ ಪ್ರಶ್ನೆ ಅಥವಾ ಪ್ರಶ್ನೆಗಳ ಮೇಲೆ ಉಚ್ಚ ನ್ಯಾಯಾಲಯದ ಅಭಿಪ್ರಾಯದೊಂದಿಗೆ ಅಪೀಲು ನ್ಯಾಯಾಧಿಕರಣಕ್ಕೆ ಹಿಂದಕ್ಕೆ ಕಳುಹಿಸತಕ್ಕದ್ದು ಅಥವಾ ಉಚ್ಚ ನ್ಯಾಯಾಲಯವು ಸೂಕ್ತವೆಂದು ಭಾವಿಸುವಂತೆ ವಿಷಯಕ್ಕೆ ಸಂಬಂಧಿಸಿದಂತೆ ಅಂಥ ಇತರ ಆದೇಶವನ್ನು ಮಾಡತಕ್ಕದ್ದು.

(ಬಿ) ಎತ್ತಲಾದ ಕಾನೂನಿನ ಪ್ರಶ್ನೆಗಳ ಮೇಲೆ ಅದರ ಅಭಿಪ್ರಾಯಗಳೊಂದಿಗೆ ವಿಷಯವನ್ನು ಉಚ್ಚ ನ್ಯಾಯಾಲಯವು (ಎ) ಖಂಡದ ಅಡಿಯಲ್ಲಿ ಅಪೀಲು ನ್ಯಾಯಾಧಿಕರಣಕ್ಕೆ ಹಿಂದಕ್ಕೆ ಕಳುಹಿಸಿದ್ದರೆ, ಅದು ಅಂಥ ಅಭಿಪ್ರಾಯಕ್ಕೆ ಸುಸಂಗತವಾಗಿ ತಾನು ಮಾಡಿದ ಆದೇಶವನ್ನು ತಿದ್ದುಪಡಿ ಮಾಡತಕ್ಕದ್ದು.

(7) ಮೇಲಿನ (6)ನೇ ಉಪ ಪ್ರಕರಣದ ಅಡಿಯಲ್ಲಿ ಆದೇಶವನ್ನು ಮಾಡುವುದಕ್ಕೆ ಮೊದಲು, ಉಚ್ಚ ನ್ಯಾಯಾಲಯವು ಅರ್ಜಿಯನ್ನು ಅಪೀಲು ನ್ಯಾಯಾಧಿಕರಣಕ್ಕೆ ಹಿಂದಕ್ಕೆ ಕಳುಹಿಸುವುದು ಅವಶ್ಯವೆಂದು ಭಾವಿಸಿದರೆ ಅದು ಹಾಗೆ ಮಾಡಬಹುದು ಮತ್ತು ಯಾವುದೇ ನಿರ್ದಿಷ್ಟ ಪ್ರಶ್ನೆ ಅಥವಾ ವಿವಾದಾಂಶದ ಮೇಲೆ ತನ್ನ ನಿರ್ಣಯದೊಂದಿಗೆ ಅರ್ಜಿಯನ್ನು ಹಿಂದಿರುಗಿಸುವಂತೆ ಅದನ್ನು ನಿರ್ದೇಶಿಸಬಹುದು.

(8) ಮೇಲಿನ (1)ನೇ ಉಪ ಪ್ರಕರಣದ ಅಡಿಯಲ್ಲಿ ಅರ್ಜಿಯನ್ನು ಸಲ್ಲಿಸಿದ್ದಾಗ್ಯೂ ಆ ಸಂಬಂಧದಲ್ಲಿ ಮಾಡಿದ ತೆರಿಗೆ ನಿರ್ಧರಣೆಗೆ ಅನುಸಾರವಾಗಿ ತೆರಿಗೆಯನ್ನು ಸಂದಾಯ ಮಾಡತಕ್ಕದ್ದು.

(9) ಅರ್ಜಿಯ ಪರಿಣಾಮವಾಗಿ ಅಂಥ ತೆರಿಗೆ ನಿರ್ಧರಣೆಯಲ್ಲಿ ಯಾವುದೇ ಬದಲಾವಣೆಯು ಅವಶ್ಯವಾದರೆ, ಉಚ್ಚನ್ಯಾಯಾಲಯವು ತೆರಿಗೆ ನಿರ್ಧರಣೆಯನ್ನು ತಿದ್ದುಪಡಿ ಮಾಡಲು ನಿಯಮಿಸಲಾದ ಪ್ರಾಧಿಕಾರವನ್ನು ಪ್ರಾಧಿಕೃತಗೊಳಿಸಬಹುದು ಮತ್ತು ನಿಯಮಿಸಲಾದ ಪ್ರಾಧಿಕಾರವು, ತದನುಸಾರವಾಗಿ ತೆರಿಗೆ ನಿರ್ಧರಣೆಯನ್ನು ತಿದ್ದುಪಡಿ ಮಾಡತಕ್ಕದ್ದು ಮತ್ತು ಆ ತರುವಾಯ ಸಂಬಂಧಪಟ್ಟ ವ್ಯಕ್ತಿಯು ಹೆಚ್ಚಿಗೆಯಾಗಿ ಸಂದಾಯ ಮಾಡಿದ್ದ ಮೊಬಲಗನ್ನು ಅವನಿಗೆ ಬಡ್ಡಿ ಇಲ್ಲದೆ ಮರು ಪಾವತಿ ಮಾಡತಕ್ಕದ್ದು ಅಥವಾ ಸಂದರ್ಭಾನುಸಾರ ಅವನಿಂದ ಬಾಕಿ ಇರುವ ತೆರಿಗೆಯ ಹೆಚ್ಚಿನ ಮೊಬಲಗನ್ನು ಈ ಅಧಿನಿಯಮದ ಉಪಬಂಧಗಳಿಗೆ ಅನುಸಾರವಾಗಿ ಸಂಗ್ರಹಿಸತಕ್ಕದ್ದು.

(10) (ಎ) ಉಚ್ಚ ನ್ಯಾಯಾಲಯವು, ಅರ್ಜಿಯ ಯಾರೇ ಪಕ್ಷಕಾರನ ಅರ್ಜಿಯ ಮೇಲೆ (6)ನೇ ಉಪ ಪ್ರಕರಣದ ಅಡಿಯಲ್ಲಿ ತಾನು ಮಾಡಿದ ಯಾವುದೇ ಆದೇಶವನ್ನು, ಆ ಆದೇಶವನ್ನು ಮಾಡಿದಾಗ ತನ್ನ ಮುಂದೆ ಇದ್ದಿರದಂಥ ಸಂಗತಿಗಳ ಆಧಾರದ ಮೇಲೆ ಪುನರಾವಲೋಕಿಸಬಹುದು.

(ಬಿ) ಪುನರಾವಲೋಕನೆಗಾಗಿನ ಅರ್ಜಿಯನ್ನು ನಿಯಮಿಸಬಹುದಾದ ಅಂಥ ಸಮಯದೊಳಗೆ ಮತ್ತು ಅಂಥ ರೀತಿಯಲ್ಲಿ ಸಲ್ಲಿಸತಕ್ಕದ್ದು, ಮತ್ತು 63ನೇ ಪ್ರಕರಣದ (1)ನೇ ಉಪಪ್ರಕರಣದ ಅಡಿಯಲ್ಲಿ ಸರ್ಕಾರವು, ಅಧಿಕಾರ ನೀಡಿದ ಅಧಿಕಾರಿಯಲ್ಲದ ಯಾವೊಬ್ಬ ವ್ಯಕ್ತಿಯು ಅದನ್ನು ಸಲ್ಲಿಸಿರುವಲ್ಲಿ ಅದರೊಡನೆ ಒಂದುನೂರು ರೂಪಾಯಿಗಳ ಶುಲ್ಕ ಇರತಕ್ಕದ್ದು.

(11) (ಎ) ದಾಖಲೆಯಿಂದ ಕಂಡುಬರುವ ಯಾವುದೇ ತಪ್ಪನ್ನು ಸರಿಪಡಿಸುವ ದೃಷ್ಟಿಯಿಂದ ಉಚ್ಚ ನ್ಯಾಯಾಲಯವು (6)ನೇ ಉಪ ಪ್ರಕರಣದ ಅಡಿಯಲ್ಲಿ ತಾನು ಹೊರಡಿಸಿದ ಆದೇಶದ ದಿನಾಂಕದಿಂದ ಐದು ವರ್ಷಗಳೊಳಗೆ ಯಾವುದೇ ಕಾಲದಲ್ಲಿ ಅಂಥ ಆದೇಶವನ್ನು ತಿದ್ದುಪಡಿ ಮಾಡಬಹುದು.

(ಬಿ) ಉಚ್ಚನ್ಯಾಯಾಲಯವು, ಆದೇಶದಿಂದ ಬಾಧಿತರಾದ ಉಭಯ ಪಕ್ಷಕಾರರಿಗೆ ಅಹವಾಲನ್ನು ಹೇಳಿಕೊಳ್ಳಲು ಸೂಕ್ತ ಅವಕಾಶವನ್ನು ಕೊಟ್ಟ ಹೊರತು ಈ ಉಪಪ್ರಕರಣದ ಅಡಿಯಲ್ಲಿ ಯಾವುದೇ ಆದೇಶವನ್ನು ಮಾಡತಕ್ಕದ್ದಲ್ಲ.

(12) ಮೇಲಿನ (1)ನೇ ಅಥವಾ (10)ನೇ ಉಪಪ್ರಕರಣದ ಅಡಿಯಲ್ಲಿ ಸಲ್ಲಿಸಿದ ಪ್ರತಿಯೊಂದು ಅರ್ಜಿಗೆ ಸಂಬಂಧಿಸಿದ ಖರ್ಚುಗಳು ಉಚ್ಚನ್ಯಾಯಾಲಯದ ವಿವೇಚನಾನುಸಾರವಾಗಿರತಕ್ಕದ್ದು.

**66. ಉಚ್ಚನ್ಯಾಯಾಲಯಕ್ಕೆ ಅಪೀಲು.–** (1) 64ನೇ ಪ್ರಕರಣದ ಅಡಿಯಲ್ಲಿ ಆಯುಕ್ತನು ಅಥವಾ ಅಪರ ಆಯುಕ್ತನು ಮಾಡಿದ ಆದೇಶವನ್ನು ಆಕ್ಷೇಪಿಸುವ ಯಾವೊಬ್ಬ ವ್ಯಕ್ತಿಯು [1][ಅಥವಾ 60ನೇ ಪ್ರಕರಣದ ಅಡಿಯಲ್ಲಿನ ಪ್ರಾಧಿಕಾರಿಯ ಆದೇಶದಿಂದ ಬಾಧಿತನಾದ ಯಾವೊಬ್ಬ ವ್ಯಾಪಾರಿಯು], ಅವನಿಗೆ ಆ ಆದೇಶವನ್ನು ತಿಳಿಸಿದಂಥ ದಿನಾಂಕದಿಂದ ಅರವತ್ತು ದಿನಗಳೊಳಗೆ ಉಚ್ಚನ್ಯಾಯಾಲಯಕ್ಕೆ ಅಪೀಲು ಸಲ್ಲಿಸಬಹುದು.

1. 2005 ರ ಅಧಿನಿಯಮ ಸಂಖ್ಯೆ 11 ರ ಮೂಲಕ ದಿನಾಂಕ: 1.4.2005 ರಿಂದ ಸೇರಿಸಲಾಗಿದೆ.

(2) ಉಚ್ಚ ನ್ಯಾಯಾಲಯವು, ಆ ಅಪೀಲನ್ನು ಈ ಹಿಂದೆ ಹೇಳಿದ ಅರವತ್ತು ದಿನಗಳ ಅವಧಿಯ ಒಳಗೆ ಸಲ್ಲಿಸದಿರಲು ಆ ವ್ಯಕ್ತಿಗೆ ಸಾಕಷ್ಟು ಕಾರಣವಿತ್ತೆಂದು ಅದಕ್ಕೆ ಮನವರಿಕೆಯಾದರೆ ಆ ಅವಧಿಯ ತರುವಾಯ ಸಲ್ಲಿಸಿದ ಅಪೀಲನ್ನು ಅಂಗೀಕರಿಸಬಹುದು.

(3) ಅಪೀಲು ನಿಯಮಿಸಲಾದ ನಮೂನೆಯಲ್ಲಿ ಇರತಕ್ಕದ್ದು, ನಿಯಮಿಸಲಾದ ರೀತಿಯಲ್ಲಿ ಅದನ್ನು ಸತ್ಯಾಪನೆ ಮಾಡತಕ್ಕದ್ದು ಮತ್ತು ಐದುನೂರು ರೂಪಾಯಿಗಳ ಶುಲ್ಕವು ಅದರ ಜೊತೆಗೆ ಇರತಕ್ಕದ್ದು.

(4) ಉಚ್ಚ ನ್ಯಾಯಾಲಯವು, ಅಪೀಲಿನ ಉಭಯ ಪಕ್ಷಕಾರರಿಗೆ ಅಹವಾಲನ್ನು ಹೇಳಿಕೊಳ್ಳಲು ಸೂಕ್ತ ಅವಕಾಶವನ್ನು ಕೊಟ್ಟ ತರುವಾಯ ಅದು ಸೂಕ್ತವೆಂದು ಭಾವಿಸಬಹುದಾದ ಅಂಥ ಆದೇಶವನ್ನು ಮಾಡತಕ್ಕದ್ದು.

(5) 65ನೇ ಪ್ರಕರಣದ (6) ರಿಂದ (12) ರವರೆಗಿನ ಉಪಪ್ರಕರಣಗಳ ಉಪಬಂಧಗಳು, 65ನೇ ಪ್ರಕರಣದ (1)ನೇ ಉಪಪ್ರಕರಣದ ಅಡಿಯಲ್ಲಿ ಸಲ್ಲಿಸಿದ ಅರ್ಜಿಗಳ ಸಂಬಂಧದಲ್ಲಿ ಅವು ಅನ್ವಯವಾಗುವಂತೆಯೇ (1)ನೇ ಉಪಪ್ರಕರಣದ ಅಡಿಯಲ್ಲಿ ಸಲ್ಲಿಸಿದ ಅಪೀಲುಗಳಿಗೆ ಸಂಬಂಧಿಸಿದಂತೆ ಅನ್ವಯವಾಗತಕ್ಕದ್ದು.

**67. ಅಧಿಕಾರವ್ಯಾಪ್ತಿಗೆ ಆಕ್ಷೇಪಗಳು.–** ಯಾವುದೇ ನಿಯಮಿಸಲಾದ ಪ್ರಾಧಿಕಾರದ ಪ್ರಾದೇಶಿಕ ಅಥವಾ ಹಣಕಾಸಿಗೆ ಸಂಬಂಧಿಸಿದ ಅಧಿಕಾರವ್ಯಾಪ್ತಿಯ ಸಂಬಂಧದಲ್ಲಿಯ ಯಾವುದೇ ಆಕ್ಷೇಪಣೆಯನ್ನು, ಅಂಥ ಆಕ್ಷೇಪಣೆಯನ್ನು ನಿಯಮಿಸಲಾದ ಪ್ರಾಧಿಕಾರದ ಮುಂದೆ ಆದಷ್ಟು ಶೀಘ್ರವಾಗಿ ತಂದ ಹೊರತು, ಅಪೀಲು ಅಥವಾ ಪುನರೀಕ್ಷಣೆಯಲ್ಲಿ ಯಾವುದೇ ನ್ಯಾಯಾಲಯ, ನ್ಯಾಯಾಧಿಕರಣ ಅಥವಾ ಪ್ರಾಧಿಕಾರವು ಸ್ವೀಕರಿಸತಕ್ಕದ್ದಲ್ಲ ಅಥವಾ ಪುರಸ್ಕರಿಸತಕ್ಕದ್ದಲ್ಲ.

**68. ಉಚ್ಚನ್ಯಾಯಾಲಯಕ್ಕೆ ಸಲ್ಲಿಸಿದ ಮನವಿಗಳು, ಅರ್ಜಿಗಳು ಮತ್ತು ಅಪೀಲುಗಳನ್ನು ಇಬ್ಬರು ನ್ಯಾಯಾಧೀಶರಿಗಿಂತ ಕಡಿಮೆ ಇಲ್ಲದ ನ್ಯಾಯಪೀಠವು ವಿಚಾರಣೆ ಮಾಡತಕ್ಕದ್ದು.–** 65 ಅಥವಾ 66ನೇ ಪ್ರಕರಣದ ಅಡಿಯಲ್ಲಿ ಉಚ್ಚ ನ್ಯಾಯಾಲಯಕ್ಕೆ ಸಲ್ಲಿಸಿದ ಪ್ರತಿಯೊಂದು ಮನವಿ, ಅರ್ಜಿ ಅಥವಾ ಅಪೀಲನ್ನು ಇಬ್ಬರು ನ್ಯಾಯಾಧೀಶರಿಗಿಂತ ಕಡಿಮೆ ಇಲ್ಲದ ನ್ಯಾಯಪೀಠವು ವಿಚಾರಣೆ ಮಾಡತಕ್ಕದ್ದು ಮತ್ತು ಅಂಥ ಮನವಿ, ಅರ್ಜಿ ಅಥವಾ ಅಪೀಲಿಗೆ ಸಂಬಂಧಿಸಿದಂತೆ

ಸಿವಿಲ್ ಪ್ರಕ್ರಿಯಾ ಸಂಹಿತೆ 1908ರ (1908ರ ಕೇಂದ್ರ ಅಧಿನಿಯಮ V) 98ನೇ ಪ್ರಕರಣದ ಉಪಬಂಧಗಳು ಅನ್ವಯವಾಗತಕ್ಕದ್ದು.

**69. ತಪ್ಪುಗಳ ಸರಿಪಡಿಸುವಿಕೆ.-** (1) ದಾಖಲೆಯಿಂದ ಕಂಡುಬರುವ ಯಾವುದೇ ತಪ್ಪನ್ನು ಸರಿಪಡಿಸುವ ದೃಷ್ಟಿಯಿಂದ ನಿಯಮಿಸಲಾದ ಪ್ರಾಧಿಕಾರವು, ಅಪೀಲು ಪ್ರಾಧಿಕಾರವು ಅಥವಾ ಪುನರೀಕ್ಷಣಾ ಪ್ರಾಧಿಕಾರವು, ತಾನು ಮಾಡಿದ ಆದೇಶದ ದಿನಾಂಕದಿಂದ ಐದು ವರ್ಷಗಳೊಳಗೆ ಯಾವುದೇ ಕಾಲದಲ್ಲಿ ಅಂಥ ತಿದ್ದುಪಡಿ ಮಾಡಬಹುದು.

(2) ತೆರಿಗೆ ನಿರ್ಧರಣೆಯನ್ನು ಹೆಚ್ಚಿಸುವ ಅಥವಾ ಅನ್ಯಥಾ ಸಂಬಂಧಪಟ್ಟ ವ್ಯಕ್ತಿಯ ಬದ್ಧತೆಯನ್ನು ಹೆಚ್ಚಿಸುವ ಪರಿಣಾಮ ಉಳ್ಳಂಥ ತಿದ್ದುಪಡಿಯನ್ನು ನಿಯಮಿಸಲಾದ ಪ್ರಾಧಿಕಾರ, ಅಪೀಲು ಪ್ರಾಧಿಕಾರ ಅಥವಾ ಸಂದರ್ಭಾನುಸಾರವಾಗಿ ಪುನರೀಕ್ಷಣಾ ಪ್ರಾಧಿಕಾರವು, ಹಾಗೆ ಮಾಡುವ ತನ್ನ ಉದ್ದೇಶದ ಬಗ್ಗೆ ನೋಟೀಸನ್ನು ಸಂಬಂಧಪಟ್ಟ ವ್ಯಕ್ತಿಗೆ ಕೊಟ್ಟಿದ್ದ ಹೊರತು ಮತ್ತು ಸಂಬಂಧಪಟ್ಟ ವ್ಯಕ್ತಿಗೆ ಅಂಥ ತಿದ್ದುಪಡಿಯ ವಿರುದ್ಧ ಲಿಖಿತದಲ್ಲಿ ಅಹವಾಲನ್ನು ಹೇಳಿಕೊಳ್ಳಲು ಅವಕಾಶವನ್ನು ಕೊಟ್ಟಿದ್ದ ಹೊರತು ಮಾಡತಕ್ಕದ್ದಲ್ಲ.

[1][(2-ಎ) xxx][1]

1. 2012ರ ಅಧಿನಿಯಮ ಸಂಖ್ಯೆ 17ರ ಮೂಲಕ ದಿನಾಂಕ: 1.4.2012 ರಿಂದ ಬಿಟ್ಟುಬಿಡಲಾಗಿದೆ.

(3) ಮೇಲಿನ (1)ನೇ ಉಪ ಪ್ರಕರಣದಲ್ಲಿ ಉಲ್ಲೇಖಿಸಿದ ಆದೇಶಕ್ಕೆ ಸಂಬಂಧಪಟ್ಟಂತೆ ಅಪೀಲು ಅಥವಾ ಪುನರೀಕ್ಷಣೆಯ ರೂಪದಲ್ಲಿ ಯಾವುದೇ ವ್ಯವಹರಣೆಯಲ್ಲಿಯ ಒಂದು ಆದೇಶವನ್ನು ಪರಿಗಣಿಸಿರುವಲ್ಲಿ ಮತ್ತು ತೀರ್ಮಾನಿಸಿರುವಲ್ಲಿ ಅಂಥ ಆದೇಶವನ್ನು ಮಾಡಿದ ಪ್ರಾಧಿಕಾರವು, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ಏನೇ ಒಳಗೊಂಡಿದ್ದಾಗ್ಯೂ ಹಾಗೆ ಪರಿಗಣಿಸಲಾದ ಮತ್ತು ತೀರ್ಮಾನಿಸಲಾದ ವಿಷಯವನ್ನು ಹೊರತುಪಡಿಸಿ ಯಾವುದೇ ಇತರ ವಿಷಯಕ್ಕೆ ಸಂಬಂಧಪಟ್ಟಂತೆ ಆ ಉಪಪ್ರಕರಣದ ಅಡಿಯಲ್ಲಿಯ ಆದೇಶವನ್ನು ತಿದ್ದುಪಡಿ ಮಾಡಬಹುದು.

(4) ಮೇಲಿನ (1)ನೇ ಉಪಪ್ರಕರಣದ ಅಡಿಯಲ್ಲಿ ಮಾಡಿದ ಯಾವುದೇ ಆದೇಶವನ್ನು, ಯಾವ ಮೂಲ ಆದೇಶದಲ್ಲಿ ತಪ್ಪನ್ನು ಸರಿಪಡಿಸಲಾಗಿದೆಯೋ ಆ ಮೂಲ ಆದೇಶವನ್ನು ಯಾವ ಕಾನೂನಿನ ಅಡಿಯಲ್ಲಿ ಮಾಡಲಾಗಿತ್ತೋ ಆ ಕಾನೂನಿನ ಅದೇ ಉಪಬಂಧದ ಅಡಿಯಲ್ಲಿ ಮಾಡಿದ ಆದೇಶವೆಂಬುದಾಗಿ ಭಾವಿಸತಕ್ಕದ್ದು.

**70. ರುಜುವಾತಿನ ಹೊಣೆ.-** (1) ಈ ಅಧಿನಿಯಮದ ಅಡಿಯಲ್ಲಿ ತೆರಿಗೆ ಸಂದಾಯದ ಅಥವಾ ತೆರಿಗೆಯ ನಿರ್ಧರಣೆಯ ಅಥವಾ ಹೂಡುವಳಿ ತೆರಿಗೆಯ ಯಾವುದೇ ಕ್ಲೇಮಿನ ಉದ್ದೇಶಕ್ಕಾಗಿ, ಒಬ್ಬ ವ್ಯಾಪಾರಿಯ ಯಾವುದೇ ವ್ಯವಹಾರವು ತೆರಿಗೆಗೆ ಬದ್ಧವಾಗತಕ್ಕದ್ದಲ್ಲವೆಂದು ಅಥವಾ ಹೂಡುವಳಿ ತೆರಿಗೆಯ ಕಡಿತಕ್ಕಾಗಿ ಮಾಡಿದ ಯಾವುದೇ ಕ್ಲೇಮು ಸರಿಯಾಗಿದೆ ಎಂದು ರುಜುವಾತುಪಡಿಸುವ ಹೊಣೆಯು ಅಂಥ ವ್ಯಾಪಾರಿಯ ಮೇಲೆ ಇರತಕ್ಕದ್ದು.

(2) ಒಬ್ಬ ವ್ಯಾಪಾರಿಯು ಗೊತ್ತಿದ್ದೂ ಒಂದು ಸುಳ್ಳು ತೆರಿಗೆ ಬೆಲೆಪಟ್ಟಿ, ಜಮಾ ಅಥವಾ ಖರ್ಚು ಚೀಟಿ, ಘೋಷಣೆ, ಪ್ರಮಾಣಪತ್ರ, ಅಥವಾ ಇತರ ದಸ್ತಾವೇಜು ನೀಡಿದ್ದರೆ ಅಥವಾ ಒದಗಿಸಿದ್ದರೆ ಅವನು ಅಥವಾ ಯಾವೊಬ್ಬ ಇತರ ವ್ಯಾಪಾರಿಯಿಂದ ಮಾಡಿದ ವ್ಯಾಪಾರದ ಅಥವಾ ಖರೀದಿಯ ವ್ಯವಹಾರವು ತೆರಿಗೆಗೆ ಗುರಿಯಾಗತಕ್ಕದ್ದಲ್ಲ ಅಥವಾ ಕಡಿಮೆ ದರದಲ್ಲಿ ಗುರಿಯಾಗತಕ್ಕದ್ದು ಅಥವಾ ಲಭ್ಯವಿರುವ ಹೂಡುವಳಿ ತೆರಿಗೆಯ ಕಡಿತವು ಲಭ್ಯವಾಗಿದೆ ಎಂದು ಸಮರ್ಥಿಸುವ ಅಥವಾ ಕ್ಲೇಮು ಮಾಡುವ ದೃಷ್ಟಿಯಿಂದ ಹಾಗೆ ನೀಡಿದುದನ್ನು ಅಥವಾ ಒದಗಿಸಿದುದನ್ನು ನಿಯಮಿಸಲಾದ ಪ್ರಾಧಿಕಾರಿಯು ಪತ್ತೆ ಹಚ್ಚಿದ ಮೇಲೆ,

(ಎ) ಮೊದಲ ಸಲ ಅಪರಾಧ ಪತ್ತೆಯಾದ ಸಂದರ್ಭದಲ್ಲಿ, ಅಂಥ ವ್ಯವಹರಣೆ ಅಥವಾ ಕ್ಲೇಮಿನ ಸಂಬಂಧದಲ್ಲಿ ಬಾಕಿ ಇರುವ ತೆರಿಗೆಯ ಮೂರು ಪಟ್ಟು, ಮತ್ತು

(ಬಿ) ಎರಡನೆಯ ಸಲ ಅಥವಾ ತರುವಾಯದ ಅಪರಾಧ ಪತ್ತೆ ಮಾಡಲಾದ ಸಂದರ್ಭದಲ್ಲಿ ಅಂಥ ವ್ಯವಹರಣೆ ಅಥವಾ ಕ್ಲೇಮಿನ ಸಂಬಂಧದಲ್ಲಿ ಬಾಕಿ ಇರುವ ತೆರಿಗೆಯ ಐದು ಪಟ್ಟು,

- ದಂಡವನ್ನು ಸಂದಾಯ ಮಾಡುವಂತೆ ಅಂಥ ದಸ್ತಾವೇಜನ್ನು ನೀಡುವ ಅಥವಾ ಒದಗಿಸುವ ವ್ಯಾಪಾರಿಗೆ ನಿರ್ದೇಶನ ನೀಡತಕ್ಕದ್ದು.

(3) ಈ ಪ್ರಕರಣದ ಅಡಿಯಲ್ಲಿ ದಂಡದ ಸಂದಾಯಕ್ಕಾಗಿ ಯಾವುದೇ ನಿರ್ದೇಶನವನ್ನು ನೀಡುವುದಕ್ಕೆ ಮೊದಲು, ನಿಯಮಿಸಲಾದ ಪ್ರಾಧಿಕಾರವು, ಅಂಥ ದಂಡನೆಯನ್ನು ವಿಧಿಸುವುದರ ವಿರುದ್ಧ ಲಿಖಿತದಲ್ಲಿ ಕಾರಣತೋರಿಸಲು ವ್ಯಾಪಾರಿಗೆ ಅವಕಾಶವನ್ನು ನೀಡತಕ್ಕದ್ದು.

## ಅಧ್ಯಾಯ – VIII

### ದಂಡಗಳು, ಅಪರಾಧಗಳು ಮತ್ತು ನಿಯಮಗಳ ರಚನಾಧಿಕಾರ

**71. ನೋಂದಣಿಗೆ ಸಂಬಂಧಿಸಿದ ದಂಡಗಳು.–** [1][(1) ಒಬ್ಬ ವ್ಯಾಪಾರಿಯು, ಸೂಕ್ತ ಕಾರಣಗಳಿಲ್ಲದೆ, 22ನೇ ಪ್ರಕರಣದ (1) ಅಥವಾ (5) ರಿಂದ (9)ರ ವರೆಗಿನ ಉಪ ಪ್ರಕರಣಗಳಲ್ಲಿ ನಿಯಮಿಸಲಾದ ಕಾಲದೊಳಗೆ ನೋಂದಣಿಗಾಗಿ ಅರ್ಜಿ ಸಲ್ಲಿಸಲು ತಪ್ಪಿದಲ್ಲಿ, ಅವನು 37ನೇ ಪ್ರಕರಣದ ಅಡಿಯಲ್ಲಿ ಉಪಬಂಧಿಸಲಾದ ದರದಲ್ಲಿ ಸಂದಾಯ ಮಾಡಬೇಕಾದ ತೆರಿಗೆಯ ಮೇಲೆ ವಿಧಿಸಬಹುದಾದ ಬಡ್ಡಿ ಹಾಗೂ ಎರಡು ಸಾವಿರ ರೂಪಾಯಿಗಳ ದಂಡ ನೀಡಲು ಬದ್ಧನಾಗಿರತಕ್ಕದ್ದು.][1]

1. 2006ರ ಅಧಿನಿಯಮ ಸಂಖ್ಯೆ 4ರ ಮೂಲಕ ದಿನಾಂಕ: 1.4.2006 ರಿಂದ ಪ್ರತಿಯೋಜಿಸಲಾಗಿದೆ.

(2) ಒಬ್ಬ ವ್ಯಾಪಾರಿಯು, 28ನೇ ಪ್ರಕರಣದ ಮೂಲಕ ಅಗತ್ಯಪಡಿಸಲಾದಂತೆ, ಸನ್ನಿವೇಶಗಳಲ್ಲಿಯ ಬದಲಾವಣೆಯ ಬಗ್ಗೆ ನಿಯಮಿಸಲಾದ ಪ್ರಾಧಿಕಾರಕ್ಕೆ ವರದಿ ಸಲ್ಲಿಸಲು ತಪ್ಪಿದರೆ, ಅವನು, [1][ಐದು ಸಾವಿರ ರೂಪಾಯಿಗಳಿಗೆ ಮೀರದ] ದಂಡ ನೀಡಲು ಬದ್ಧನಾಗಿರತಕ್ಕದ್ದು.

1. 2005ರ ಅಧಿನಿಯಮ ಸಂಖ್ಯೆ 6ರ ಮೂಲಕ ದಿನಾಂಕ: 19.3.2005 ರಿಂದ ಪ್ರತಿಯೋಜಿಸಲಾಗಿದೆ.

(3) ದಂಡಗಳನ್ನು ವಿಧಿಸುವ ಅಧಿಕಾರವು, ನಿಯಮಿಸಲಾದಂತೆ ನೋಂದಣಿ ಪ್ರಾಧಿಕಾರದಲ್ಲಿ ನಿಹಿತವಾಗಿರತಕ್ಕದ್ದು.

**72. ವಿವರ ಪಟ್ಟಿಗಳಿಗೆ [1][ಮತ್ತು ತೆರಿಗೆ ನಿರ್ಧಾರಣಕ್ಕೆ][1] ಸಂಬಂಧಿಸಿದ ದಂಡಗಳು.–** [2][(1) ಅಧಿನಿಯಮದ ಅಡಿಯಲ್ಲಿ ಅಗತ್ಯಪಡಿಸಿದಂತೆ ಒಂದು ವಿವರಪಟ್ಟಿ ಸಲ್ಲಿಸಲು ತಪ್ಪಿದ ಅಥವಾ ಸಲ್ಲಿಸಿದ ಯಾವುದೇ ವಿವರ ಪಟ್ಟಿಯಂತೆ ಬಾಕಿ ಇರುವ ತೆರಿಗೆಯನ್ನು ಸಂದಾಯಮಾಡಲು ವಿಫಲನಾದ ಒಬ್ಬ ವ್ಯಾಪಾರಿಯು ಬಾಕಿ ಇರುವ ಯಾವುದೇ ತೆರಿಗೆ ಅಥವಾ ಬಡ್ಡಿಯ ಜೊತೆಗೆ,–

[3][(ಎ) ಸಂದಾಯಮಾಡಲು ತಪ್ಪಿದ ಪ್ರತಿಯೊಂದು ದಿನಕ್ಕಾಗಿ ಐವತ್ತು ರೂಪಾಯಿಗಳ ದಂಡವನ್ನು ಮತ್ತು ಹಾಗೆ ಸಂದಾಯಮಾಡಲು ತಪ್ಪಿರುವುದು ಐದು ದಿನಗಳಿಗಿಂತ ಹೆಚ್ಚಾಗಿರುವಲ್ಲಿ,

(i) ತೆರಿಗೆ ಬಾಕಿಯು ಇನ್ನೂರೈವತ್ತು ರೂಪಾಯಿಗಳಿಗಿಂತ ಕಡಿಮೆ ಇದ್ದರೆ, ಅಂಥ ದಂಡವು ಇನ್ನೂರಐವತ್ತು ರೂಪಾಯಿಗಳನ್ನು ಮೀರತಕ್ಕದ್ದಲ್ಲ;

(ii) ತೆರಿಗೆ ಬಾಕಿಯು ಇನ್ನೂರಐವತ್ತು ರೂಪಾಯಿಗಳಿಗಿಂತ ಹೆಚ್ಚಾಗಿದ್ದರೆ, ಅಂಥ ದಂಡವನ್ನು ಪ್ರತಿ ದಿನಕ್ಕೆ ಐವತ್ತು ರೂಪಾಯಿಗಳಂತೆ, ಬಾಕಿ ಇರುವ ತೆರಿಗೆಯ ಮೊಬಲಗನ್ನು ಮೀರದಂತೆ ಲೆಕ್ಕಹಾಕತಕ್ಕದ್ದು; ಮತ್ತು][3]

[4][(ಬಿ) (i) ಸಂದಾಯಮಾಡಲು ತಪ್ಪಿರುವುದು, ಹತ್ತು ದಿನಗಳಿಗಿಂತ ಹೆಚ್ಚಾಗಿಲ್ಲದಿದ್ದರೆ ಬಾಕಿ ಇರುವ ತೆರಿಗೆ ಮೊಬಲಗಿನ ಶೇಕಡಾ ಐದರಷ್ಟು ಅಥವಾ ಐವತ್ತು ರೂಪಾಯಿಗಳು ಇವುಗಳಲ್ಲಿ ಯಾವುದು ಹೆಚ್ಚೋ ಅಷ್ಟಕ್ಕೆ ಸಮನಾದ ಹೆಚ್ಚಿನ ದಂಡವನ್ನು ;

(ii) ಸಂದಾಯ ಮಾಡಲು ತಪ್ಪಿರುವುದು ಹತ್ತು ದಿನಗಳಿಗಿಂತ ಹೆಚ್ಚಾಗಿದ್ದರೆ, ಬಾಕಿ ಇರುವ ತೆರಿಗೆಯ ಶೇಕಡಾ ಹತ್ತಕ್ಕೆ, ಸಮನಾದ ಹೆಚ್ಚಿನ ದಂಡವನ್ನು][4]

– ಸಂದಾಯಮಾಡಲು ಹೊಣೆಗಾರನಾಗತಕ್ಕದ್ದು.][2]

[5][ಪರಂತು, 22ನೇ ಪ್ರಕರಣದ ಅಡಿಯಲ್ಲಿ ನೋಂದಾಯಿತನಾಗಲು ಹೊಣೆಗಾರನಾಗಿರದ ಮತ್ತು ಅಂಥ ತೆರಿಗೆಯ ಅವಧಿಗೆ ಯಾವುದೇ ತೆರಿಗೆಯನ್ನು ಸಂದಾಯ ಮಾಡಲು ಹೊಣೆಗಾರನಾಗಿರದ ವ್ಯಾಪಾರಿಯು, ಆತನು ತನ್ನ ನೋಂದಾವಣೆಯ ಪ್ರಮಾಣ ಪತ್ರವನ್ನು ರದ್ದುಗೊಳಿಸುವುದಕ್ಕಾಗಿ ಒಂದು ಅರ್ಜಿಯನ್ನು ಸಲ್ಲಿಸಿದ್ದರೆ, ಈ ಉಪಪ್ರಕರಣದ ಅಡಿಯಲ್ಲಿ ವರ್ಷದ ಯಾವುದೇ ತೆರಿಗೆಯ ಅವಧಿಗಾಗಿ ವಿವರಪಟ್ಟಿಯನ್ನು ಸಲ್ಲಿಸಲು ವಿಫಲನಾಗಿದ್ದಲ್ಲಿ ಯಾವುದೇ ದಂಡವನ್ನು ಸಂದಾಯ ಮಾಡತಕ್ಕದ್ದಲ್ಲ.][5]

1. 2007ರ ಅಧಿನಿಯಮ ಸಂಖ್ಯೆ 6ರ ಮೂಲಕ ದಿನಾಂಕ: 1.4.2007 ರಿಂದ ಸೇರಿಸಲಾಗಿದೆ.
2. 2007ರ ಅಧಿನಿಯಮ ಸಂಖ್ಯೆ 6ರ ಮೂಲಕ ದಿನಾಂಕ: 1.4.2007 ರಿಂದ ಪ್ರತಿಯೋಜಿಸಲಾಗಿದೆ.
3. 2008ರ ಅಧಿನಿಯಮ ಸಂಖ್ಯೆ 5ರ ಮೂಲಕ ದಿನಾಂಕ: 1.4.2007 ರಿಂದ ಪ್ರತಿಯೋಜಿಸಲಾಗಿದೆ ಎಂದು ಭಾವಿಸತಕ್ಕದ್ದು.
4. 2008ರ ಅಧಿನಿಯಮ ಸಂಖ್ಯೆ 5ರ ಮೂಲಕ ದಿನಾಂಕ: 1.8.2008 ರಿಂದ ಪ್ರತಿಯೋಜಿಸಲಾಗಿದೆ.
5. 2014ರ ಅಧಿನಿಯಮ ಸಂಖ್ಯೆ 15ರ ಮೂಲಕ ದಿನಾಂಕ: 1.3.2014 ರಿಂದ ಸೇರಿಸಲಾಗಿದೆ.

(2) ಒಬ್ಬ ವ್ಯಾಪಾರಿಯು, ಯಾವುದೇ ನಿಯಮಿಸಲಾದ ತೆರಿಗೆ ಅವಧಿಗಾಗಿ ಒಂದು ವಿವರ ಪಟ್ಟಿಯನ್ನು [1][ಅಥವಾ ಒಂದು ವಿವರ ಪಟ್ಟಿಯ ತಯಾರಿಕೆಗಾಗಿ ಯಾವುದೇ ವಿವರಗಳನ್ನು][1] ಸಲ್ಲಿಸಿದ್ದು, ಅದು ಅವನ ತೆರಿಗೆ ಬದ್ಧತೆಯನ್ನು ಕಡಿಮೆ ತೋರಿಸಿದರೆ ಅಥವಾ ಅವನ ವಾಸ್ತವಿಕ ತೆರಿಗೆ ಬದ್ಧತೆಯ [2][ಅಥವಾ ಸಂದರ್ಭಾನುಸಾರ ಅವನ ವಾಸ್ತವಿಕ ತೆರಿಗೆ ಜಮೆಯ][2] ಶೇಕಡ ಐದಕ್ಕಿಂತ ಹೆಚ್ಚು ತೆರಿಗೆ ಜಮೆಗೆ ಅವನ ಹಕ್ಕುದಾರಿಕೆಯನ್ನು ಹೆಚ್ಚಿಗೆ ತೋರಿಸಿದರೆ, ಅವನಿಗೆ ದಂಡ ವಿಧಿಸುವಿಕೆಯ ವಿರುದ್ಧ ಲಿಖಿತದಲ್ಲಿ ಕಾರಣ ತೋರಿಸಲು ಅವಕಾಶ ನೀಡಲಾದ ತರುವಾಯ, ಕಡಿಮೆ ಅಥವಾ ಹೆಚ್ಚಿಗೆ ತೋರಿಸಿದ ಅಂಥ ತೆರಿಗೆ ಮೊಬಲಗಿನ [3][ಶೇಕಡಾ ಹತ್ತಕ್ಕೆ][3] ಸಮನಾದ ದಂಡಕ್ಕೆ ಬದ್ಧನಾಗಿರತಕ್ಕದ್ದು.

1. 2010ರ ಅಧಿನಿಯಮ ಸಂಖ್ಯೆ 4ರ ಮೂಲಕ ದಿನಾಂಕ:1.4.2010ರಿಂದ ಸೇರಿಸಲಾಗಿದೆ.
2. 2008ರ ಅಧಿನಿಯಮ ಸಂಖ್ಯೆ 5ರ ಮೂಲಕ ದಿನಾಂಕ: 1.8.2008 ರಿಂದ ಸೇರಿಸಲಾಗಿದೆ.
3. 2006ರ ಅಧಿನಿಯಮ ಸಂಖ್ಯೆ 4ರ ಮೂಲಕ ದಿನಾಂಕ: 1.4.2006 ರಿಂದ ಪ್ರತಿಯೋಜಿಸಲಾಗಿದೆ.

[1][(2–ಎ) ಒಬ್ಬ ವ್ಯಾಪಾರಿಯು, ಯಾವುದೇ ನಿಯಮಿಸಲಾದ ತೆರಿಗೆ ಅವಧಿಗಾಗಿ ಒಂದು ಪರಿಷ್ಕೃತ ವಿವರ ಪಟ್ಟಿಯನ್ನು ಸಲ್ಲಿಸಿದ್ದು, ಅದು ಅವನ ತೆರಿಗೆ ಬದ್ಧತೆಯನ್ನು ಕಡಿಮೆ ತೋರಿಸಿದರೆ ಅಥವಾ ಅವನ ವಾಸ್ತವಿಕ ತೆರಿಗೆ ಬದ್ಧತೆಯ ಅಥವಾ ಸಂದರ್ಭಾನುಸಾರ ಅವನ ವಾಸ್ತವಿಕ ತೆರಿಗೆ ಜಮೆಯ ಶೇಕಡ ಐದಕ್ಕಿಂತ ಹೆಚ್ಚು ತೆರಿಗೆ ಜಮೆಗೆ ಅವನ ಹಕ್ಕುದಾರಿಕೆಯನ್ನು ಹೆಚ್ಚಿಗೆ ತೋರಿಸಿದರೆ, ಅವನಿಗೆ ದಂಡ ವಿಧಿಸುವಿಕೆಯ ವಿರುದ್ಧ ಲಿಖಿತದಲ್ಲಿ ಕಾರಣ ತೋರಿಸಲು ಅವಕಾಶ ನೀಡಿದ ತರುವಾಯ, ಕಡಿಮೆ ಅಥವಾ ಹೆಚ್ಚಿಗೆ ತೋರಿಸಿದ ಅಂಥ ತೆರಿಗೆ ಮೊಬಲಗಿನ ಶೇಕಡಾ ಹತ್ತಕ್ಕೆ ಸಮನಾದ ದಂಡಕ್ಕೆ ಬದ್ಧನಾಗಿರತಕ್ಕದ್ದು.

**ವಿವರಣೆ:** ಈ ಅಧಿನಿಯಮದಲ್ಲಿ ಏನೇ ಇದ್ದರೂ, ಈ ಪ್ರಕರಣದ ಉದ್ದೇಶಕ್ಕಾಗಿ, ಪರಿಷ್ಕೃತ ವಿವರಪಟ್ಟಿ ಎಂದರೆ, 35ನೇ ಪ್ರಕರಣದ (4)ನೇ ಉಪಪ್ರಕರಣದ (ಎ) ಮತ್ತು (ಬಿ) ಖಂಡಗಳ ಅಡಿಯಲ್ಲಿ ಸಲ್ಲಿಸಿದ ಒಂದು ವಿವರಪಟ್ಟಿ.][1]

1. 2016ರ ಅಧಿನಿಯಮ ಸಂಖ್ಯೆ 6ರ ಮೂಲಕ ದಿನಾಂಕ:1.4.2016ರಿಂದ ಸೇರಿಸಲಾಗಿದೆ.

(3) [1][ಆತನಿಗೆ ನೀಡಿದ ನೋಟೀಸಿನಲ್ಲಿ ತಿಳಿಸಲಾದಂತೆ][1] ಅಪೂರ್ಣವಾಗಿದ್ದ ಅಥವಾ ಯಾವುದೇ ಮುಖ್ಯ ವಿವರಗಳಲ್ಲಿ ತಪ್ಪಾಗಿರುವ ಒಂದು ವಿವರ ಪಟ್ಟಿಯನ್ನು ಸಲ್ಲಿಸಿದ್ದ ಒಬ್ಬ ವ್ಯಾಪಾರಿಯು, ವಿವರ ಪಟ್ಟಿಯು ಅಪೂರ್ಣವಾಗಿ ಅಥವಾ ತಪ್ಪಾಗಿ ಉಳಿಯುವ ಪ್ರತಿದಿನಕ್ಕಾಗಿ [2][ಐವತ್ತು ರೂಪಾಯಿಗಳ][2] ದಂಡಕ್ಕೆ [3][ಗುರಿಯಾಗತಕ್ಕದ್ದು][3].

1. 2007ರ ಅಧಿನಿಯಮ ಸಂಖ್ಯೆ 6ರ ಮೂಲಕ ದಿನಾಂಕ: 1.4.2007 ರಿಂದ ಸೇರಿಸಲಾಗಿದೆ.
2. 2006ರ ಅಧಿನಿಯಮ ಸಂಖ್ಯೆ 4ರ ಮೂಲಕ ದಿನಾಂಕ: 1.4.2006 ರಿಂದ ಪ್ರತಿಯೋಜಿಸಲಾಗಿದೆ.
3. 2008ರ ಅಧಿನಿಯಮ ಸಂಖ್ಯೆ 5ರ ಮೂಲಕ ದಿನಾಂಕ: 1.4.2006 ರಿಂದ ಪ್ರತಿಯೋಜಿಸಲಾಗಿದೆ ಎಂದು ಭಾವಿಸತಕ್ಕದ್ದು.

[1][(3–ಎ) 35ನೇ ಪ್ರಕರಣದ (1)ನೇ ಉಪಪ್ರಕರಣದ ಪರಂತುಕದ ಅಡಿಯಲ್ಲಿ ಅಧಿಸೂಚಿಸಿದಂತೆ, ಯಾವೊಬ್ಬ ವ್ಯಾಪಾರಿಯು, ವಿವರಪಟ್ಟಿಯ ತಯಾರಿಕೆಗಾಗಿ ವಿವರಗಳನ್ನು ಸಲ್ಲಿಸಲು ವಿಫಲನಾದಲ್ಲಿ ಅಥವಾ ಅಪೂರ್ಣವಾಗಿ ಅಥವಾ ತಪ್ಪಾಗಿ ಸಲ್ಲಿಸಿದಲ್ಲಿ ಆತನಿಗೆ ನೀಡಿದ ನೋಟೀಸಿನಲ್ಲಿ ತಿಳಿಸಲಾದಂತೆ ವಿವರ ಪಟ್ಟಿಯು ಅಪೂರ್ಣವಾಗಿ ಅಥವಾ ತಪ್ಪಾಗಿ ಉಳಿಯುವ ಪ್ರತಿದಿನಕ್ಕಾಗಿ ಐವತ್ತು ರೂಪಾಯಿಗಳ ದಂಡಕ್ಕೆ ಗುರಿಯಾಗತಕ್ಕದ್ದು.][1]

1. 2015ರ ಅಧಿನಿಯಮ ಸಂಖ್ಯೆ 15ರ ಮೂಲಕ ದಿನಾಂಕ: 1.4.2015ರಿಂದ ಸೇರಿಸಲಾಗಿದೆ.

[1][(3–ಬಿ) 31ನೇ ಪ್ರಕರಣದ (4)ನೇ ಉಪಪ್ರಕರಣದ ಪರಂತುಕದಲ್ಲಿ ನಿಯಮಿಸಲಾದಂತೆ, ಯಾವೊಬ್ಬ ವ್ಯಾಪಾರಿಯು, ಆತನಿಗೆ ನೀಡಿದ ನೋಟೀಸಿನಲ್ಲಿ ತಿಳಿಸಲಾದಂತೆ ಲೆಕ್ಕಪರಿಶೋಧನೆ ಮಾಡಲಾದ ಲೆಕ್ಕಪತ್ರಗಳನ್ನು ಮತ್ತು ನಿಯಮಿಸಲಾದ ದಸ್ತಾವೇಜುಗಳನ್ನು ಸಲ್ಲಿಸಲು ವಿಫಲನಾದಲ್ಲಿ, ತಪ್ಪಿತನಾಗುವ ಪ್ರತಿದಿನಕ್ಕಾಗಿ ಐವತ್ತು ರೂಪಾಯಿಗಳ ದಂಡಕ್ಕೆ ಗುರಿಯಾಗತಕ್ಕದ್ದು.][1]

1. 2016ರ ಅಧಿನಿಯಮ ಸಂಖ್ಯೆ 06ರ ಮೂಲಕ ದಿನಾಂಕ: 1.4.2016ರಿಂದ ಸೇರಿಸಲಾಗಿದೆ.

(4) ವಿವರ ಪಟ್ಟಿಯನ್ನು ಸಲ್ಲಿಸಲು ವಿಫಲನಾದ ಒಬ್ಬ ವ್ಯಾಪಾರಿಗೆ, ಅವನು ವಾಸ್ತವವಾಗಿ ತೆರಿಗೆಗೆ ಬದ್ಧನಾಗಿದ್ದಕ್ಕಿಂತ ಕಡಿಮೆ ತೋರಿಸುವ ತೆರಿಗೆ ನಿರ್ಧಾರಣೆಯೊಂದನ್ನು ನೀಡಲಾಗಿದ್ದ ಸಂದರ್ಭದಲ್ಲಿ ಮತ್ತು ಅವನು ಅಂಥ ತೆರಿಗೆಯನ್ನು ತೆರಿಗೆ ನಿರ್ಧಾರಣೆಯಂತೆ ಸಂದಾಯ ಮಾಡಿದ್ದಲ್ಲಿ, ಅಂಥ ವ್ಯಾಪಾರಿಗೆ ದಂಡ ವಿಧಿಸುವುದರ ವಿರುದ್ಧ ಲಿಖಿತ ಕಾರಣಗಳನ್ನು ತೋರಿಸಲು ಅವಕಾಶ ನೀಡಿದ ತರುವಾಯ, ಕಡಿಮೆಯಾಗಿ ತೆರಿಗೆ ನಿರ್ಧಾರಣೆ ಮಾಡಿದ ತೆರಿಗೆ ಮೊಬಲಗಿನ [1][ಶೇಕಡಾ ಹತ್ತರಷ್ಟು][1] ದಂಡಕ್ಕೆ ಬದ್ಧನಾಗತಕ್ಕದ್ದು.

1. 2006ರ ಅಧಿನಿಯಮ ಸಂಖ್ಯೆ 4ರ ಮೂಲಕ ದಿನಾಂಕ: 1.4.2006 ರಿಂದ ಪ್ರತಿಯೋಜಿಸಲಾಗಿದೆ.

[1][(5) ನೋಂದಾಯಿತನಾಗಲು ಬದ್ಧನಾಗಿದ್ದಾಗ್ಯೂ ನಿರ್ದಿಷ್ಟಪಡಿಸಿದ ಅವಧಿಯೊಳಗೆ ಹಾಗೆ ಮಾಡಲು ತಪ್ಪಿದ ಒಬ್ಬ ವ್ಯಾಪಾರಿಯು ದಂಡನೆಯನ್ನು ಏಕೆ ವಿಧಿಸಬಾರದೆಂಬ ಬಗ್ಗೆ ಲಿಖಿತದಲ್ಲಿ ಕಾರಣಗಳನ್ನು ತೋರಿಸುವ ಹೇಳಿಕೆಯನ್ನು ನೀಡಲು ಅವಕಾಶವನ್ನು ಕೊಟ್ಟ ತರುವಾಯ ಆತ ಸಂದಾಯಮಾಡಬೇಕಾದ 38ನೇ ಪ್ರಕರಣದ ಅಡಿಯಲ್ಲಿ ನಿರ್ಧರಿಸಿದ ತೆರಿಗೆಯ ಅಥವಾ 39ನೇ ಪ್ರಕರಣದ ಅಡಿಯಲ್ಲಿ ಮರು ನಿರ್ಧರಿಸಿದ ತೆರಿಗೆ ಮೊಬಲಗಿನ ಶೇಕಡ ಮೂವತ್ತರ ದರದಲ್ಲಿ ದಂಡವನ್ನು ಸಂದಾಯಮಾಡಲು ಬದ್ಧನಾಗಿರತಕ್ಕದ್ದು.][1]

1. 2007ರ ಅಧಿನಿಯಮ ಸಂಖ್ಯೆ 6ರ ಮೂಲಕ ದಿನಾಂಕ: 1.4.2007 ರಿಂದ ಸೇರಿಸಲಾಗಿದೆ.

[1][(6)][1] ಮೇಲ್ಕಂಡ ದಂಡಗಳನ್ನು ವಿಧಿಸುವ ಅಧಿಕಾರವು, ವಿವರ ಪಟ್ಟಿಗಳನ್ನು ಸ್ವೀಕರಿಸಲು ಅಗತ್ಯಪಡಿಸಲಾದ ನಿಯಮಿಸಲಾದ ಪ್ರಾಧಿಕಾರದಲ್ಲಿ [1][ಅಥವಾ ತೆರಿಗೆ ನಿರ್ಧಾರಣೆ ಅಥವಾ ತೆರಿಗೆ ಪುನರ್ ನಿರ್ಧಾರಣೆ ಮಾಡಲು ನಿಯಮಿಸಲಾದ ಪ್ರಾಧಿಕಾರದಲ್ಲಿ][1] ನಿಹಿತವಾಗಿರತಕ್ಕದ್ದು.

1. 2007ರ ಅಧಿನಿಯಮ ಸಂಖ್ಯೆ 6ರ ಮೂಲಕ ದಿನಾಂಕ: 1.4.2007 ರಿಂದ ಮರುಸಂಖ್ಯೆ ನೀಡಲಾಗಿದೆ.
2. 2006ರ ಅಧಿನಿಯಮ ಸಂಖ್ಯೆ 4ರ ಮೂಲಕ ದಿನಾಂಕ: 1.4.2006 ರಿಂದ ಸೇರಿಸಲಾಗಿದೆ.

[1][(7) ಅಧಿನಿಯಮದ ಉಪಬಂಧಗಳ ಮೂಲಕ ಅಗತ್ಯಪಡಿಸಿದಂಥ ವಿವರ ಪಟ್ಟಿಗಳನ್ನು ನಿರಂತರವಾಗಿ ಮೂರು ತಿಂಗಳು ಅಥವಾ ಸಂದರ್ಭಾನುಸಾರ ಎರಡು ತ್ರೈಮಾಸಿಕಗಳ ಅವಧಿಗೆ ಸಲ್ಲಿಸುವುದಕ್ಕೆ ವಿಫಲನಾದಂಥ ಯಾವೊಬ್ಬ ವ್ಯಾಪಾರಿಯು, ಅಪರಾಧ ನಿರ್ಣಯವಾದ ತರುವಾಯ, ಯಾವುದೇ ತೆರಿಗೆ ಅಥವಾ ದಂಡ ಅಥವಾ ಬಡ್ಡಿ ಅಥವಾ ಆತನಿಂದ ಬರಬೇಕಾದ ಅಥವಾ ಆತನ ಮೇಲೆ ವಿಧಿಸಿದ ಇತರ ಮೊಬಲಗಿನ ಜೊತೆಗೆ, ಆರು ತಿಂಗಳುಗಳಿಗೆ ವಿಸ್ತರಿಸಬಹುದಾದಂಥ ಸಾದಾ ಕಾರಾವಾಸದೊಂದಿಗೆ ಅಥವಾ ಐದು ಸಾವಿರ ರೂಪಾಯಿಗಳಿಗೆ ಕಡಿಮೆ ಇರದ ಆದರೆ ಇಪ್ಪತ್ತೈದು ಸಾವಿರ ರೂಪಾಯಿಗಳಿಗೆ ವಿಸ್ತರಿಸಬಹುದಾದ ಅಂಥ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ಮತ್ತು ಅಪರಾಧವು ಮುಂದುವರೆಯುತ್ತಿರುವಾಗ, ಅಪರಾಧವು ಮುಂದುವರೆದ ಅವಧಿಗೆ ಪ್ರತಿದಿನ ಎರಡು ನೂರು ರೂಪಾಯಿಗಳನ್ನು ಮೀರದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.][1]

1. 2012ರ ಅಧಿನಿಯಮ ಸಂಖ್ಯೆ 17ರ ಮೂಲಕ ದಿನಾಂಕ: 1.4.2012 ರಿಂದ ಸೇರಿಸಲಾಗಿದೆ.

**73. ಅನಧಿಕೃತ ತೆರಿಗೆ ಸಂಗ್ರಹಣೆಗೆ ಸಂಬಂಧಿಸಿದ ದಂಡಗಳು.-** (1) ಈ ಅಧಿನಿಯಮದ ಅಡಿಯಲ್ಲಿ ನೋಂದಾಯಿತನಾಗಿರದ ಯಾವೊಬ್ಬ ವ್ಯಾಪಾರಿಯು, ಈ ಅಧಿನಿಯಮದ ಅಡಿಯಲ್ಲಿ ತೆರಿಗೆಯ ರೂಪದಲ್ಲಿ ಅಥವಾ ತೆರಿಗೆ ರೂಪದಲ್ಲಿ ಎಂದು ತಾತ್ಪರ್ಯವಾಗುವ ಯಾವುದೇ ಮೊಬಲಗನ್ನು ಸಂಗ್ರಹಿಸಿದರೆ, ಆ ಮೊಬಲಗನ್ನು ಈ ಅಧಿನಿಯಮದ ಉಪಬಂಧಗಳ ಅಡಿಯಲ್ಲಿ ಸಂದಾಯಮಾಡಬೇಕಾದುದಾಗಿರಲಿ ಅಥವಾ ಸಂದಾಯ ಮಾಡಬೇಕಾಗಿಲ್ಲದಿರಲಿ, ಅವನು ಅಂಥ ಮೊಬಲಗನ್ನು ನಿಯಮಿಸಲಾದ ಪ್ರಾಧಿಕಾರಕ್ಕೆ [1][ಅಥವಾ ತೆರಿಗೆ ನಿರ್ಧರಣೆ ಅಥವಾ ತೆರಿಗೆ ಪುನರ್ ನಿರ್ಧರಣೆ ಮಾಡಲು ನಿಯಮಿಸಲಾದ ಪ್ರಾಧಿಕಾರದಲ್ಲಿ][1]ಸಂದಾಯ ಮಾಡಲು ಬದ್ಧನಾಗಿರತಕ್ಕದ್ದು ಮತ್ತು ತೆರಿಗೆಯ ಮರು ಸಂದಾಯದ ಮತ್ತು ಅಂಥ ದಂಡವನ್ನು ವಿಧಿಸಿದ್ದರ ವಿರುದ್ಧ ಲಿಖಿತದಲ್ಲಿ ಕಾರಣಗಳನ್ನು ತಿಳಿಸಲು ಅವಕಾಶವನ್ನು ನೀಡಿದ ತರುವಾಯ ಹಾಗೆ ಸಂಗ್ರಹಿಸಲಾದ ಮೊಬಲಗಿಗೆ [2][[3][ಸಮನಾದ][3] ದಂಡಕ್ಕೂ][2] ಸಹ ಬದ್ಧನಾಗಿರತಕ್ಕದ್ದು.

1. 2006ರ ಅಧಿನಿಯಮ ಸಂಖ್ಯೆ 4ರ ಮೂಲಕ ದಿನಾಂಕ: 1.4.2006 ರಿಂದ ಸೇರಿಸಲಾಗಿದೆ.
2. 2005ರ ಅಧಿನಿಯಮ ಸಂಖ್ಯೆ 6ರ ಮೂಲಕ ದಿನಾಂಕ: 19.3.2005 ರಿಂದ ಪ್ರತಿಯೋಜಿಸಲಾಗಿದೆ.
3. 2007ರ ಅಧಿನಿಯಮ ಸಂಖ್ಯೆ 6ರ ಮೂಲಕ ದಿನಾಂಕ: 1.4.2007 ರಿಂದ ಪ್ರತಿಯೋಜಿಸಲಾಗಿದೆ.

(2) ಮೇಲ್ಕಂಡ ದಂಡ ವಿಧಿಸುವಿಕೆಯ ಅಧಿಕಾರವು ನಿಯಮಿಸಲಾದ ತೆರಿಗೆ ನಿರ್ಧರಣಾ ಪ್ರಾಧಿಕಾರದಲ್ಲಿ ನಿಹಿತವಾಗಿರತಕ್ಕದ್ದು.

**74. ದಾಖಲೆಗಳನ್ನು ಇಡುವುದಕ್ಕೆ [1][ಮತ್ತು ಪರಿಶೋಧಿತ ಲೆಕ್ಕ ಪತ್ರಗಳ [7][ಹಾಗೂ ವಹಿವಾಟು ಪತ್ರಗಳ][7] ವಿವರ ಪತ್ರವನ್ನು ಸಲ್ಲಿಸುವುದಕ್ಕೆ][1] ಸಂಬಂಧಿಸಿದ ದಂಡಗಳು.-** (1) ಯಾವೊಬ್ಬ ವ್ಯಾಪಾರಿಯು, 31ನೇ ಪ್ರಕರಣಕ್ಕೆ ಅನುಸಾರವಾಗಿ ಅಥವಾ ನಿಯಮಿಸಲಾದ ಪ್ರಾಧಿಕಾರದ ಆದೇಶದ ಮೂಲಕ, ಸೂಕ್ತ ದಾಖಲೆಗಳನ್ನು ಇಡಲು ಮತ್ತು ನಿರ್ವಹಿಸಲು [6][[2][XXX][2]][6] ತಪ್ಪಿದಲ್ಲಿ ಅವನು [3][ಯಾವುದೇ ಒಂದು ವರ್ಷದ ಅವಧಿಯಲ್ಲಿ ಹಾಗೆ ತಪ್ಪಿರುವುದು ಮೊದಲ ಬಾರಿಯಾಗಿದ್ದರೆ [5][ಐದು ಸಾವಿರ ರೂಪಾಯಿಗಳಿಗೆ][5] ಅಥವಾ ಆ ವರ್ಷದಲ್ಲಿ ಎರಡನೇ ಬಾರಿಗೆ ಅಥವಾ ಅದರ ನಂತರ ತಪ್ಪಿದ್ದರೆ [5][ಹತ್ತು ಸಾವಿರ ರೂಪಾಯಿಗಳಿಗೆ][3]][5] ದಂಡಕ್ಕೆ ಮತ್ತು ಅಂಥ ದಂಡ ವಿಧಿಸಿದ್ದರ ವಿರುದ್ಧ ಕಾರಣಗಳನ್ನು ತೋರಿಸಲು ಅವಕಾಶವನ್ನು ನೀಡಿದ ತರುವಾಯ, ದಂಡ ನೀಡಲು ತಪ್ಪುವುದು ಮುಂದುವರಿಯುತ್ತಿರುವವರೆಗೆ ಪ್ರತಿದಿನಕ್ಕೆ [4][ಎರಡು ನೂರು ರೂಪಾಯಿಗಳಿಗೆ ಮೀರದ ಹೆಚ್ಚಿನ][4] ದಂಡವನ್ನು ಸಹ ನೀಡಲು ಬದ್ಧನಾಗಿರತಕ್ಕದ್ದು.

1. 2008ರ ಅಧಿನಿಯಮ ಸಂಖ್ಯೆ 5ರ ಮೂಲಕ ದಿನಾಂಕ: 1.8.2008 ರಿಂದ ಸೇರಿಸಲಾಗಿದೆ.
2. 2007ರ ಅಧಿನಿಯಮ ಸಂಖ್ಯೆ 6ರ ಮೂಲಕ ದಿನಾಂಕ: 1.4.2007 ರಿಂದ ಸೇರಿಸಲಾಗಿದೆ.
3. 2007ರ ಅಧಿನಿಯಮ ಸಂಖ್ಯೆ 6ರ ಮೂಲಕ ದಿನಾಂಕ: 1.4.2007 ರಿಂದ ಪ್ರತಿಯೋಜಿಸಲಾಗಿದೆ.
4. 2005ರ ಅಧಿನಿಯಮ ಸಂಖ್ಯೆ 6ರ ಮೂಲಕ ದಿನಾಂಕ: 19.3.2005 ರಿಂದ ಪ್ರತಿಯೋಜಿಸಲಾಗಿದೆ.
5. 2012ರ ಅಧಿನಿಯಮ ಸಂಖ್ಯೆ 17ರ ಮೂಲಕ ದಿನಾಂಕ: 1.4.2012 ರಿಂದ ಪ್ರತಿಯೋಜಿಸಲಾಗಿದೆ.
6. 2013ರ ಅಧಿನಿಯಮ ಸಂಖ್ಯೆ 32ರ ಮೂಲಕ ದಿನಾಂಕ: 1.4.2013 ರಿಂದ ಬಿಟ್ಟುಬಿಡಲಾಗಿದೆ.
7. 2014ರ ಅಧಿನಿಯಮ ಸಂಖ್ಯೆ 15ರ ಮೂಲಕ ದಿನಾಂಕ: 1.3.2014ರಿಂದ ಸೇರಿಸಲಾಗಿದೆ.

(2) ಯಾವೊಬ್ಬ ವ್ಯಾಪಾರಿಯು, 32 ಮತ್ತು 33ನೇ ಪ್ರಕರಣಗಳಿಗೆ ಅನುಸಾರವಾಗಿ ದಾಖಲೆಗಳನ್ನು ಮತ್ತು ಲೆಕ್ಕಪತ್ರಗಳನ್ನು ಇಡಲು ವಿಫಲನಾದಲ್ಲಿ, ದಂಡ ವಿಧಿಸುವಿಕೆಯ ವಿರುದ್ಧ ಲಿಖಿತದಲ್ಲಿ ಕಾರಣಗಳನ್ನು ತೋರಿಸಲು ಅವಕಾಶವನ್ನು ನೀಡಿದ ತರುವಾಯ, ಹತ್ತು ಸಾವಿರ ರೂಪಾಯಿಗಳ ದಂಡಕ್ಕೆ ಬದ್ಧನಾಗಿರತಕ್ಕದ್ದು.

(3) ಮೇಲ್ಕಂಡ ದಂಡವನ್ನು ವಿಧಿಸುವ ಅಧಿಕಾರವು 52ನೇ ಪ್ರಕರಣದ ಅಡಿಯಲ್ಲಿ ಪ್ರಾಧಿಕೃತನಾದ ಅಧಿಕಾರಿಯಲ್ಲಿ ನಿಹಿತವಾಗಿರತಕ್ಕದ್ದು.

[1][(4) ಪರಿಶೋಧಿತ ಲೆಕ್ಕಪತ್ರಗಳ ವಿವರ ಪತ್ರದ [3][ಅಥವಾ ಸಂದರ್ಭಾನುಸಾರವಾಗಿ ಅಧಿನಿಯಮದ 31ನೇ ಪ್ರಕರಣದ (5)ನೇ ಉಪಪ್ರಕರಣದ ಅಡಿಯಲ್ಲಿ ಅಗತ್ಯಪಡಿಸಲಾದಂತೆ ವಿವರಪತ್ರದ][3] ಒಂದು ಪ್ರತಿಯನ್ನು ನಿಯಮಿಸಿದ ಕಾಲದೊಳಗಾಗಿ ಸಲ್ಲಿಸಲು ವಿಫಲನಾದ ಯಾವೊಬ್ಬ ವ್ಯಾಪಾರಿಗೆ ನಿಯಮಿಸಲಾದ ಪ್ರಾಧಿಕಾರವು ಹಾಗೆ ದಂಡ ವಿಧಿಸುವುದರ ವಿರುದ್ಧ ಲಿಖಿತದಲ್ಲಿ ಕಾರಣ ತೋರಿಸಲು ಒಂದು ಅವಕಾಶವನ್ನು ನೀಡಿದ ತರುವಾಯ, ಐದು ಸಾವಿರ ರೂಪಾಯಿಗಳ ದಂಡವನ್ನು ಮತ್ತು [2][ಪರಿಶೋಧಿತ ಲೆಕ್ಕ ಪತ್ರಗಳ ವಿವರ ಪತ್ರವನ್ನು [3][ಅಥವಾ ಸಂದರ್ಭಾನುಸಾರವಾಗಿ ಅಧಿನಿಯಮದ 31ನೇ ಪ್ರಕರಣದ (5)ನೇ ಉಪಪ್ರಕರಣದ ಅಡಿಯಲ್ಲಿ ಅಗತ್ಯಪಡಿಸಲಾದಂತೆ ವಿವರಪತ್ರವನ್ನು][3] ಸಲ್ಲಿಸುವ

ವಿಫಲತೆಯು][2] ಮುಂದುವರೆಯುತ್ತಿರವವರೆಗೆ ಪ್ರತಿದಿನಕ್ಕೆ ಐವತ್ತು ರೂಪಾಯಿಗಳ ಹೆಚ್ಚಿನ ದಂಡವನ್ನು ಸಂದಾಯಮಾಡುವುದಕ್ಕೆ ಗುರಿಯಾತಗತಕ್ಕದ್ದು.][1]

1. 2008ರ ಅಧಿನಿಯಮ ಸಂಖ್ಯೆ 5ರ ಮೂಲಕ ದಿನಾಂಕ: 1.8.2008 ರಿಂದ ಸೇರಿಸಲಾಗಿದೆ.
2. 2009ರ ಅಧಿನಿಯಮ ಸಂಖ್ಯೆ 5ರ ಮೂಲಕ ದಿನಾಂಕ: 1.4.2009ರಿಂದ ಪ್ರತಿಯೋಜಿಸಲಾಗಿದೆ ಎಂದು ಭಾವಿಸತಕ್ಕದ್ದು..
3. 2014ರ ಅಧಿನಿಯಮ ಸಂಖ್ಯೆ 15ರ ಮೂಲಕ ದಿನಾಂಕ: 1.3.2014ರಿಂದ ಸೇರಿಸಲಾಗಿದೆ.

**75. ದಾಖಲೆಗಳನ್ನು ಹಾಜರುಪಡಿಸುವುದಕ್ಕೆ ಮತ್ತು ಮಾಹಿತಿಯನ್ನು ಒದಗಿಸುವುದಕ್ಕೆ ಸಂಬಂಧಿಸಿದ ದಂಡಗಳು.–** ಯಾವೊಬ್ಬ ವ್ಯಾಪಾರಿ ಅಥವಾ ವ್ಯಕ್ತಿಯು, ನಿಯಮಿಸಲಾದ ಪ್ರಾಧಿಕಾರಿಯು ಕೋರಿದಾಗ ಈ ಅಧಿನಿಯಮದ ಅಗತ್ಯತೆಗಳಿಗೆ ಅನುಸಾರವಾಗಿ ಯಾವುವೇ ದಾಖಲೆಗಳನ್ನು ಹಾಜರುಪಡಿಸಲು ಅಥವಾ ಯಾವುದೇ ಮಾಹಿತಿಯನ್ನು ಒದಗಿಸಲು ತಪ್ಪಿದಲ್ಲಿ, ದಂಡನೆಯನ್ನು ವಿಧಿಸುವುದರ ವಿರುದ್ಧ ಲಿಖಿತದಲ್ಲಿ ಕಾರಣಗಳನ್ನು ತೋರಿಸಲು ಅವಕಾಶವನ್ನು ನೀಡಿದ ತರುವಾಯ, [2][[1][ಹತ್ತು ಸಾವಿರ ರೂಪಾಯಿಗಳಿಗೆ][2] ಮೀರದ][1] ದಂಡಕ್ಕೆ ಮತ್ತು ಹಾಗೆ ದಂಡವನ್ನು ನೀಡಲು ತಪ್ಪುವುದು ಮುಂದುವರಿಯುತ್ತಿರುವವರೆಗೆ ಒಂದು ದಿನಕ್ಕೆ ಎರಡು ನೂರು ರೂಪಾಯಿಗಳ ಹೆಚ್ಚಿನ ದಂಡವನ್ನು ಸಹ ನೀಡಲು ಬದ್ಧನಾಗಿರತಕ್ಕದ್ದು.

1. 2005ರ ಅಧಿನಿಯಮ ಸಂಖ್ಯೆ 6ರ ಮೂಲಕ ದಿನಾಂಕ: 19.3.2005 ರಿಂದ ಪ್ರತಿಯೋಜಿಸಲಾಗಿದೆ.
2. 2012ರ ಅಧಿನಿಯಮ ಸಂಖ್ಯೆ 17ರ ಮೂಲಕ ದಿನಾಂಕ: 01.04.2012 ರಿಂದ ಪ್ರತಿಯೋಜಿಸಲಾಗಿದೆ.

[1][**76. ತೆರಿಗೆ ಬೆಲೆ ಪಟ್ಟಿಗಳಿಗೆ, ಮಾರಾಟದ ಬಿಲ್ಲುಗಳಿಗೆ ಜಮಾ ಚೀಟಿಗಳು ಮತ್ತು ಖರ್ಚು ಚೀಟಿಗಳಿಗೆ ಸಂಬಂಧಿಸಿದಂತೆ ದಂಡಗಳು.–** (1) ಒಬ್ಬ ನೋಂದಾಯಿತ ವ್ಯಾಪಾರಿಯು, ಅವನು,–

(ಎ) 29ನೇ ಪ್ರಕರಣದ (1)ನೇ ಉಪ ಪ್ರಕರಣದ ಮೂಲಕ ಅಗತ್ಯಪಡಿಸಲಾದಂತೆ ತೆರಿಗೆ ಬೆಲೆ ಪಟ್ಟಿಯನ್ನು [1][XXX][1] ನೀಡಲು ತಪ್ಪಿದಲ್ಲಿ ಅಥವಾ

(ಬಿ) 29ನೇ ಪ್ರಕರಣದ ಉಪಬಂಧಗಳಿಗೆ ಅನುಸಾರವಾಗಿ ಅಲ್ಲದೆ ಒಂದು ತೆರಿಗೆ ಬೆಲೆ ಪಟ್ಟಿಯನ್ನು [1][XXX][1] ಒದಗಿಸಿದರೆ,

– ಆರ್ಥಿಕ ವರ್ಷದಲ್ಲಿ ಅಂಥ ಮೊದಲನೇ ಅಪರಾಧಕ್ಕೆ ಎರಡು ಸಾವಿರ ರೂಪಾಯಿಗಳು ಅಥವಾ ವ್ಯವಹಾರದ ಮೇಲೆ ಸಂದಾಯ ಮಾಡಬೇಕಾದ ತೆರಿಗೆಗೆ ಸಮನಾದ ಮೊಬಲಗು ಇವುಗಳಲ್ಲಿ ಯಾವುದು ಹೆಚ್ಚಿನದೋ ಆ ದಂಡಕ್ಕೆ ಮತ್ತು ಎಸಗಿದ ಅಪರಾಧವು ಆರ್ಥಿಕ ವರ್ಷದಲ್ಲಿ ಮೊದಲನೇ ಅಪರಾಧವಾಗಿರದಿದ್ದಲ್ಲಿ ಐದು ಸಾವಿರ ರೂಪಾಯಿಗಳು ಅಥವಾ ವ್ಯವಹಾರದ ಮೇಲೆ ಸಂದಾಯ ಮಾಡಬೇಕಾದ ತೆರಿಗೆಗೆ ಸಮನಾದ ಮೊಬಲಗು, ಇವುಗಳಲ್ಲಿ ಯಾವುದು ಹೆಚ್ಚಿನದೋ ಆ ದಂಡಕ್ಕೆ ಬದ್ಧನಾಗಿರತಕ್ಕದ್ದು.

1. 2013ರ ಅಧಿನಿಯಮ ಸಂಖ್ಯೆ 32ರ ಮೂಲಕ ದಿನಾಂಕ: 1.4.2013 ರಿಂದ ಬಿಟ್ಟುಬಿಡಲಾಗಿದೆ.

(2) 29ನೇ ಪ್ರಕರಣದ (1)ನೇ ಉಪ ಪ್ರಕರಣದಲ್ಲಿ [1][ಅಗತ್ಯಪಡಿಸಿರುವಂತೆ][1] ಮಾರಾಟದ ಬಿಲ್ಲನ್ನು ನೀಡಲು ತಪ್ಪಿದ ನೋಂದಾಯಿತ ವ್ಯಾಪಾರಿಯು, ಆರ್ಥಿಕ ವರ್ಷದಲ್ಲಿ ಅಂಥ ಮೊದಲನೇ ಅಪರಾಧಕ್ಕೆ ಒಂದು ಸಾವಿರ ರೂಪಾಯಿಗಳ ದಂಡಕ್ಕೆ ಬದ್ಧನಾಗಿರತಕ್ಕದ್ದು ಮತ್ತು ಅಪರಾಧವು ಆರ್ಥಿಕ ವರ್ಷದಲ್ಲಿ ಮೊದಲನೇಯದಾಗಿರದಿದ್ದಲ್ಲಿ ಎರಡುಸಾವಿರ ರೂಪಾಯಿಗಳ ದಂಡಕ್ಕೆ ಬದ್ಧನಾಗಿರತಕ್ಕದ್ದು.

1. 2008ರ ಅಧಿನಿಯಮ ಸಂಖ್ಯೆ 5ರ ಮೂಲಕ ದಿನಾಂಕ: 1..42006 ರಿಂದ ಪ್ರತಿಯೋಜಿಸಲಾಗಿದೆ ಎಂದು ಭಾವಿಸತಕ್ಕದ್ದು.

(3) ಈ ಪ್ರಕರಣದ ಅಡಿಯಲ್ಲಿ ದಂಡವನ್ನು ವಿಧಿಸುವ ಅಧಿಕಾರವು 52ನೇ ಪ್ರಕರಣದ ಅಡಿಯಲ್ಲಿ ಪ್ರಾಧಿಕೃತನಾದ ಅಧಿಕಾರಿಯಲ್ಲಿ ನಿಹಿತವಾಗತಕ್ಕದ್ದು.][1]

1. 2006ರ ಅಧಿನಿಯಮ ಸಂಖ್ಯೆ 4ರ ಮೂಲಕ ದಿನಾಂಕ: 1.4.2006 ರಿಂದ ಪ್ರತಿಯೋಜಿಸಲಾಗಿದೆ.

**77. ಮೊಹರುಗಳಿಗೆ [1][ವಿದ್ಯುನ್ಮಾನ ತೆರಿಗೆ ರಿಜಿಸ್ಟರುಗಳಿಗೆ][1] ಮತ್ತು ಲೆಕ್ಕ ನೀಡದಿರುವ ದಾಸ್ತಾನುಗಳಿಗೆ ಸಂಬಂಧಿಸಿದ ದಂಡಗಳು.–** (1) ಯಾವೊಬ್ಬ ವ್ಯಕ್ತಿಯು, ಅವನು, 52ನೇ ಪ್ರಕರಣದ (1)ನೇ ಉಪ-ಪ್ರಕರಣದ (ಎಫ್) ಖಂಡದ ಮತ್ತು 53ನೇ ಪ್ರಕರಣದ (4)ನೇ ಉಪ-ಪ್ರಕರಣದ ಉಪಬಂಧಗಳ ಅಡಿಯಲ್ಲಿ ಹಾಕಲಾದ ಒಂದು ಮೊಹರನ್ನು ತೆಗೆದರೆ ಅಥವಾ ಯಾವುದೇ ಬಗೆಯಲ್ಲಿ ಕೆಡಿಸಿದರೆ, ಅವನು, ಪ್ರಥಮ ದರ್ಜೆಯ ಮ್ಯಾಜಿಸ್ಟ್ರೇಟರ ನ್ಯಾಯಾಲಯಕ್ಕೆ ಕಡಿಮೆಯಲ್ಲದ ದರ್ಜೆಯ ಒಂದು ನ್ಯಾಯಾಲಯದಿಂದ ಅಪರಾಧ ನಿರ್ಣಯವಾದ ಮೇಲೆ ಐದು ಸಾವಿರ

ರೂಪಾಯಿಗಳಿಗೆ ಕಡಿಮೆಯಿಲ್ಲದ ಆದರೆ, [2][ಇಪ್ಪತ್ತೈದು ಸಾವಿರ ರೂಪಾಯಿಗಳನ್ನು] ಮೀರದ ಜುಲ್ಮಾನೆಯಿಂದ ಮತ್ತು [3][xxx], ಒಂದು ವರ್ಷಕ್ಕೆ ಮೀರದ ಅವಧಿಯ ಕಾರಾವಾಸ ಶಿಕ್ಷೆಗೆ ಬದ್ಧನಾಗಿರತಕ್ಕದ್ದು.

[1][(1–ಎ) 31ನೇ ಪ್ರಕರಣದ (2–ಎ) ಉಪ ಪ್ರಕರಣದ ಅಡಿಯಲ್ಲಿ ಬರುವ ಯಾವೊಬ್ಬ ನೋಂದಾಯಿತ ವ್ಯಾಪಾರಿಯು,–

(ಎ) ವಿದ್ಯುನ್ಮಾನ ತೆರಿಗೆ ರಿಜಿಸ್ಟರನ್ನು ಸ್ಥಾಪಿಸಲು ನಿರಾಕರಿಸಿದಲ್ಲಿ; ಅಥವಾ

(ಬಿ) ಸ್ಥಾಪಿತ ವಿದ್ಯುನ್ಮಾನ ರಿಜಿಸ್ಟರನ್ನು ಬಳಸಲು ನಿರಾಕರಿಸಿದರೆ ಅಥವಾ ವಿಫಲನಾದರೆ ; ಅಥವಾ

(ಸಿ) ಸ್ಥಾಪಿತವಾದ ಯಾವುದೇ ವಿದ್ಯುನ್ಮಾನ ತೆರಿಗೆ ರಿಜಿಸ್ಟರಿನ ಭದ್ರತೆಗಾಗಿ ಬಳಸಲಾದ ಮೊಹರನ್ನು ತೆಗೆದುಹಾಕಿದರೆ ಅಥವಾ ಯಾವುದೇ ರೀತಿಯಲ್ಲಿ ಹಸ್ತಕ್ಷೇಪ ಮಾಡಿದರೆ ಅಥವಾ ಸ್ಥಾಪಿತವಾದ ಯಾವುದೇ ವಿದ್ಯುನ್ಮಾನ ತೆರಿಗೆ ರಿಜಿಸ್ಟರನ್ನು ನಾಶಗೊಳಿಸಿದರೆ ಅಥವಾ ನಾಶಗೊಳಿಸಲು ಪ್ರಯತ್ನಿಸಿದರೆ,

–ಅಂಥ ವ್ಯಾಪಾರಿಯು, ಮೊದಲನೆ ದರ್ಜೆಯ ಮ್ಯಾಜಿಸ್ಟ್ರೇಟ್‌ರ ದರ್ಜೆಯ ನ್ಯಾಯಾಲಯಕ್ಕಿಂತ ಕಡಿಮೆಯಲ್ಲದ ದರ್ಜೆಯ ನ್ಯಾಯಾಲಯದಿಂದ ಅಪರಾಧ ನಿರ್ಣಯಕ್ಕೆ ಒಳಗಾದರೆ ಐದು ಸಾವಿರ ರೂಪಾಯಿಗಳಿಗೆ ಕಡಿಮೆಯಲ್ಲದ ಆದರೆ ಇಪ್ಪತ್ತೈದು ಸಾವಿರ ರೂಪಾಯಿಗಳಿಗೆ ಮೀರದ ಜುಲ್ಮಾನೆಗೆ ಮತ್ತು ಒಂದು ವರ್ಷಕ್ಕೆ ಮೀರದ ಅವಧಿಯ ಕಾರಾವಾಸಕ್ಕೆ ಒಳಗಾಗಲು ಬದ್ಧನಾಗಿರತಕ್ಕದ್ದು].[1]

1. 2009ರ ಅಧಿನಿಯಮ ಸಂಖ್ಯೆ 5ರ ಮೂಲಕ ದಿನಾಂಕ: 1.4.2009 ರಿಂದ ಸೇರಿಸಲಾಗಿದೆ.
2. 2005ರ ಅಧಿನಿಯಮ ಸಂಖ್ಯೆ 6ರ ಮೂಲಕ ದಿನಾಂಕ: 19.3.2005 ರಿಂದ ಪ್ರತಿಯೋಜಿಸಲಾಗಿದೆ.
3. 2005ರ ಅಧಿನಿಯಮ ಸಂಖ್ಯೆ 6ರ ಮೂಲಕ ದಿನಾಂಕ: 19.3.2005 ರಿಂದ ಬಿಟ್ಟುಬಿಡಲಾಗಿದೆ.

(2) ಯಾವೊಬ್ಬ ವ್ಯಕ್ತಿ ಅಥವಾ ವ್ಯಾಪಾರಿಯು, 52ನೇ ಪ್ರಕರಣದ (1)ನೇ ಉಪ–ಪ್ರಕರಣದ (ಜೆ) ಖಂಡದ ಉಪ–ಬಂಧಗಳ ಅಡಿಯಲ್ಲಿ ತೆರಿಗೆಗೆ ಗುರಿಯಾಗತಕ್ಕ ಯಾವುವೇ ಸರಕುಗಳ ಲೆಕ್ಕವಿಡದ ದಾಸ್ತಾನುಗಳನ್ನು ಹೊಂದಿರುವುದು ಕಂಡು ಬಂದರೆ, ದಂಡ ವಿಧಿಸುವಿಕೆಯ ವಿರುದ್ಧ ಲಿಖಿತದಲ್ಲಿ ಕಾರಣಗಳನ್ನು ತೋರಿಸಲು ಅವನಿಗೆ ಅವಕಾಶವನ್ನು ನೀಡಿದ ತರುವಾಯ, [1][ವಿಧಿಸಬಹುದಾದ ತೆರಿಗೆಯ ಮೊಬಲಗಿಂತ ಅಥವಾ ಒಂದು ಸಾವಿರ ರೂಪಾಯಿಗಳು ಇವುಗಳಲ್ಲಿ ಯಾವುದು ಹೆಚ್ಚಿನದೋ ಅದು ಆದರೆ, ಅದು ವಿಧಿಸಬಹುದಾದ ತೆರಿಗೆಯ ಮೊಬಲಗಿನ ಎರಡರಷ್ಟನ್ನು ಅಥವಾ ಐದು ಸಾವಿರ ರೂಪಾಯಿಗಳು ಇದರಲ್ಲಿ ಯಾವುದು ಹೆಚ್ಚಿನದೋ ಅದನ್ನು ಮೀರತಕ್ಕದ್ದಲ್ಲ][1] ದಂಡಕ್ಕೆ ಅವನು ಬದ್ಧನಾಗಿರತಕ್ಕದ್ದು.

1. 2006ರ ಅಧಿನಿಯಮ ಸಂಖ್ಯೆ 4ರ ಮೂಲಕ ದಿನಾಂಕ: 1.4.2006 ರಿಂದ ಪ್ರತಿಯೋಜಿಸಲಾಗಿದೆ.

(3) ಮೇಲಿನ (2)ನೇ ಉಪ-ಪ್ರಕರಣದ ಅಡಿಯಲ್ಲಿ ದಂಡವನ್ನು ವಿಧಿಸುವ ಅಧಿಕಾರವು 52ನೇ ಪ್ರಕರಣದ ಅಡಿಯಲ್ಲಿ ಪ್ರಾಧಿಕೃತನಾದ ಅಧಿಕಾರಿಯಲ್ಲಿ ನಿಹಿತವಾಗಿರತಕ್ಕದ್ದು.

**78. ಅಧಿಕಾರಿಗಳ ವಿರುದ್ಧ ಅಪರಾಧಗಳು.–** ಯಾವೊಬ್ಬ ವ್ಯಕ್ತಿಯು, ಈ ಅಧಿನಿಯಮದ ಅಡಿಯಲ್ಲಿ ಪ್ರಾಧಿಕೃತನಾದ ಅಧಿಕಾರಿಗೆ ಅಥವಾ ಆತನ ಕರ್ತವ್ಯಗಳ ನಿರ್ವಹಣೆಯಲ್ಲಿ ಆತನಿಗೆ ನೆರವಾಗುತ್ತಿರುವ ಇತರ ಯಾವೊಬ್ಬ ಸಾರ್ವಜನಿಕ ನೌಕರನಿಗೆ ಅಡ್ಡಿಯುಂಟು ಮಾಡಿದರೆ, ಆತಂಕ ಉಂಟು ಮಾಡಿದರೆ, ಉಪದ್ರವ ನೀಡಿದರೆ ಅಥವಾ ಹಲ್ಲೆ ಮಾಡಿದರೆ ಅಥವಾ ಯಾವುದೇ ಸಾಕ್ಷ್ಯದ ಶೋಧನೆಗೆ ಅಥವಾ ಹಾಜರುಪಡಿಸುವಿಕೆಗೆ ತಡೆಯುಂಟು ಮಾಡುವ ಅಥವಾ ಅಡ್ಡಿಯುಂಟು ಮಾಡುವ ಸಂಭವವಿರುವ ಯಾವುದೇ ಕೃತ್ಯವನ್ನು ಮಾಡಿದರೆ, ಅವನು ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್ ನ್ಯಾಯಾಲಯಕ್ಕಿಂತ ಕಡಿಮೆಯಲ್ಲದ ದರ್ಜೆಯ ನ್ಯಾಯಾಲಯದಿಂದ ಅಪರಾಧ ನಿರ್ಣಯವಾದ ಮೇಲೆ ಐದು ಸಾವಿರ ರೂಪಾಯಿಗಳಿಗಿಂತ ಕಡಿಮೆ ಇಲ್ಲದ ಆದರೆ, [1][ಇಪ್ಪತ್ತೈದು ಸಾವಿರ ರೂಪಾಯಿಗಳ ಜುಲ್ಮಾನೆಗೆ ಅಥವಾ ಒಂದು ವರ್ಷಕ್ಕೆ ಮೀರದ ಅವಧಿಯ ಕಾರಾವಾಸ ಶಿಕ್ಷೆಗೆ ಅಥವಾ ಅವೆರಡಕ್ಕೆ] ಬದ್ಧನಾಗತಕ್ಕದ್ದು.

1. 2005ರ ಅಧಿನಿಯಮ ಸಂಖ್ಯೆ 6ರ ಮೂಲಕ ದಿನಾಂಕ: 19.3.2005 ರಿಂದ ಪ್ರತಿಯೋಜಿಸಲಾಗಿದೆ.

**79. ಮೋಸದಿಂದ ತೆರಿಗೆಯನ್ನು ತಪ್ಪಿಸುವುದು.–** 71 ರಿಂದ 77ನೇ ಪ್ರಕರಣಗಳ ಉಪಬಂಧಗಳಿಗೆ ಬಾಧಕವಾಗದಂತೆ, ಯಾವೊಬ್ಬ ವ್ಯಕ್ತಿಯು ತಿಳಿದೂ ತಾನು ಅಥವಾ ಇತರ ಯಾವೊಬ್ಬ ವ್ಯಕ್ತಿಯು ತೆರಿಗೆಯನ್ನು

ಮೋಸದಿಂದ ತಪ್ಪಿಸುವುದಕ್ಕೆ ಸಂಬಂಧಿಸಿದಂತೆ ಅಥವಾ ಆ ಉದ್ದೇಶದಿಂದ ಕ್ರಮವನ್ನು ಕೈಗೊಂಡಿದ್ದರೆ, ಅವನು ಒಂದು ಲಕ್ಷ ರೂಪಾಯಿಗಳ ಅಥವಾ ತಪ್ಪಿಸಿಕೊಳ್ಳಲಾದ ತೆರಿಗೆಯ ಎರಡರಷ್ಟು ಮೊಬಲಗು, ಇವುಗಳಲ್ಲಿ ಯಾವುದು ಹೆಚ್ಚಿನದೋ ಅಷ್ಟು ಮೊಬಲಗಿನ ಜುಲ್ಮಾನೆಗೆ ಅಥವಾ ಕನಿಷ್ಠ ಆರು ತಿಂಗಳ ಅವಧಿಯ ಆದರೆ, ಐದು ವರ್ಷಗಳನ್ನು ಮೀರದ ಅವಧಿಯ ಕಾರಾವಾಸಕ್ಕೆ ಅಥವಾ ಇವೆರಡಕ್ಕೂ ಬದ್ಧವಾಗಿರತಕ್ಕದ್ದು.

**80. ಅಪರಾಧಗಳ ಸಂಜ್ಞೇಯತೆ.-** (1) ಯಾವುದೇ ನ್ಯಾಯಾಲಯವು, ಜಂಟಿ ಆಯುಕ್ತರ ಪೂರ್ವ ಮಂಜೂರಾತಿ ಪಡೆಯದೇ, [1][72 ಅಥವಾ 79ನೇ ಪ್ರಕರಣದ ಅಡಿಯಲ್ಲಿ][1] ದಂಡನೀಯವಾದ ಯಾವುದೇ ಅಪರಾಧದ ಸಂಜ್ಞೇಯತೆಯನ್ನು ತೆಗೆದುಕೊಳ್ಳತಕ್ಕದ್ದಲ್ಲ. ಮತ್ತು ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟನಿಗಿಂತ ಕಡಿಮೆಯಲ್ಲದ ದರ್ಜೆಯ ಯಾವುದೇ ನ್ಯಾಯಾಲಯವು ಅಂಥ ಯಾವುದೇ ಅಪರಾಧದ ಅಧಿವಿಚಾರಣೆಯನ್ನು ನಡೆಸತಕ್ಕದ್ದಲ್ಲ.

(2) ದಂಡ ಪ್ರಕ್ರಿಯಾ ಸಂಹಿತೆ, 1973ರಲ್ಲಿ (1974ರ ಕೇಂದ್ರ ಅಧಿನಿಯಮ 2) ಏನೇ ಒಳಗೊಂಡಿದ್ದರೂ, [1][72 ಅಥವಾ 79ನೇ ಪ್ರಕರಣದ ಅಡಿಯಲ್ಲಿ][1] ದಂಡನೀಯವಾದ ಎಲ್ಲಾ ಅಪರಾಧಗಳು ಸಂಜ್ಞೇಯ ಮತ್ತು ಜಾಮೀನೀಯವಾಗಿರತಕ್ಕದ್ದು.

1. 2012ರ ಅಧಿನಿಯಮ ಸಂಖ್ಯೆ 17ರ ಮೂಲಕ ದಿನಾಂಕ: 1.4.2012 ರಿಂದ ಪ್ರತಿಯೋಜಿಸಲಾಗಿದೆ.

**81. ಮಾಹಿತಿಯನ್ನು ಬಹಿರಂಗಪಡಿಸುವುದು.-** (1) ಕ್ರಿಮಿನಲ್ ನ್ಯಾಯಾಲಯದ ಮುಂದೆ ಇರುವ ವ್ಯವಹರಣೆಗಳನ್ನು ಹೊರತುಪಡಿಸಿ, ಈ ಅಧಿನಿಯಮಕ್ಕನುಸಾರವಾಗಿ ನೀಡಿದ ಯಾವುದೇ ವಿವರಣೆ ಒದಗಿಸಲಾದ ವಿವರ ಪಟ್ಟಿಗಳು ಅಥವಾ ಲೆಕ್ಕಪತ್ರಗಳು ಅಥವಾ ಹಾಜರುಪಡಿಸಿದ ದಸ್ತಾವೇಜುಗಳಲ್ಲಿ ಒಳಗೊಂಡ ಎಲ್ಲ ವಿವರಗಳನ್ನು, (2)ನೇ ಉಪ-ಪ್ರಕರಣದಲ್ಲಿ ಉಪಬಂಧಿಸಿದುದನ್ನುಳಿದು, ರಹಸ್ಯವೆಂಬಂತೆ ಪರಿಗಣಿಸತಕ್ಕದ್ದು ಮತ್ತು ಭಾರತೀಯ ಸಾಕ್ಷ್ಯ ಅಧಿನಿಯಮ, 1872 ರಲ್ಲಿ ಏನೇ ಒಳಗೊಂಡಿದ್ದರೂ, ಯಾವುದೇ ನ್ಯಾಯಾಲಯವು, ಹೇಳಿದಂತೆ, ಅಂಥ ಯಾವುದೇ ವಿವರಣೆ, ವಿವರ ಪಟ್ಟಿ, ಲೆಕ್ಕಪತ್ರ, ದಸ್ತಾವೇಜು ಅಥವಾ ದಾಖಲೆ ಅಥವಾ ಅದರ ಯಾವುದೇ ಭಾಗವನ್ನು ಅವುಗಳ ಸಂಬಂಧದಲ್ಲಿ ತನ್ನ ಮುಂದೆ ಹಾಜರುಪಡಿಸುವಂತೆ ಸರ್ಕಾರದ ಯಾವೊಬ್ಬ ಅಧಿಕಾರಿಯನ್ನು ಅಗತ್ಯಪಡಿಸತಕ್ಕದ್ದಲ್ಲ.

(2) ಆಯುಕ್ತನು,-

(ಎ) ಯಾವುದೇ ತೆರಿಗೆ, ಸುಂಕ, ಉಪಕರ ಅಥವಾ ಶುಲ್ಕ ವಿಧಿಸುವಿಕೆಗೆ ಸಂಬಂಧಪಡುವ ಯಾವುದೇ ಕಾನೂನಿನ ಅಡಿಯಲ್ಲಿ ಯಾವುದೇ ಪ್ರಕಾರ್ಯವನ್ನು ನೆರವೇರಿಸುವ ಯಾವೊಬ್ಬ ಅಧಿಕಾರಿಗೆ, ಪ್ರಾಧಿಕಾರಕ್ಕೆ ಅಥವಾ ನಿಕಾಯಕ್ಕೆ; ಅಥವಾ

(ಬಿ) ರಾಜ್ಯ ಸರ್ಕಾರವು, ಸಾರ್ವಜನಿಕ ಹಿತಾಸಕ್ತಿಯಲ್ಲಿ ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸುವಂತೆ ಯಾವುದೇ ಇತರೆ ಕಾನೂನಿನ ಅಡಿಯಲ್ಲಿ, ಯಾವುದೇ ಪ್ರಕಾರ್ಯವನ್ನು ನೆರವೇರಿಸುವ ಯಾವೊಬ್ಬ ಅಂಥ ಅಧಿಕಾರಿಗೆ, ಪ್ರಾಧಿಕಾರಕ್ಕೆ ಅಥವಾ ನಿಕಾಯಕ್ಕೆ,

- ಆಯುಕ್ತನ ಅಭಿಪ್ರಾಯದಲ್ಲಿ, ಆ ಕಾನೂನಿನ ಅಡಿಯಲ್ಲಿ ಅಧಿಕಾರಿ, ಪ್ರಾಧಿಕಾರ ಅಥವಾ ನಿಕಾಯವು ತನ್ನ ಅಥವಾ ಅದರ ಪ್ರಕಾರ್ಯವನ್ನು ನೆರವೇರಿಸಲು ಸಮರ್ಥಗೊಳಿಸುವ ಉದ್ದೇಶಕ್ಕಾಗಿ ಅವಶ್ಯಕವಾಗಬಹುದಾದಂತೆ ಈ ಅಧಿನಿಯಮದ ಮೇರೆಗೆ ಮಾಡಿದ ಯಾವುದೇ ತೆರಿಗೆ ನಿರ್ಧರಣೆಯ ಸಂಬಂಧದಲ್ಲಿ ಯಾವೊಬ್ಬ ವ್ಯಕ್ತಿಗೆ ಸಂಬಂಧಪಟ್ಟ ಯಾವುದೇ ಮಾಹಿತಿಯನ್ನು ಒದಗಿಸಬಹುದು ಅಥವಾ ಒದಗಿಸುವಂತೆ ಮಾಡಬಹುದು.

(3) ರಾಜ್ಯ ಸರ್ಕಾರವು ಅಥವಾ ಆಯುಕ್ತನು ಸಾರ್ವಜನಿಕ ಹಿತಾಸಕ್ತಿಯಲ್ಲಿ ಯಾವೊಬ್ಬ ವ್ಯಕ್ತಿಯ ಹೆಸರನ್ನು ಆತನ ಭಾವಚಿತ್ರದ ಜೊತೆಗೆ ಅಥವಾ ಅಂಥ ವ್ಯಕ್ತಿಗೆ ಸಂಬಂಧಿಸಿದಂತೆ ಈ ಅಧಿನಿಯಮದ ಅಡಿಯಲ್ಲಿನ ಯಾವುದೇ ವ್ಯವಹರಣೆಗೆ ಸಂಬಂಧಪಟ್ಟ ಯಾವುವೇ ಇತರ ವಿವರಗಳನ್ನು ಪ್ರಕಟಿಸುವುದು ಅವಶ್ಯಕ ಅಥವಾ ಯುಕ್ತವೆಂದು ಅಭಿಪ್ರಾಯಪಟ್ಟರೆ ಅವನ ಭಾವಚಿತ್ರದ ಜೊತೆಗೆ ಅಂಥ ಹೆಸರನ್ನು ಮತ್ತು ವಿವರಗಳನ್ನು ತಾನು ಸೂಕ್ತವೆಂದು ಭಾವಿಸುವಂಥ ರೀತಿಯಲ್ಲಿ ಪ್ರಕಟಿಸುವಂತೆ ಮಾಡಬಹುದು.

(4) ಈ ಪ್ರಕರಣದ ಅಡಿಯಲ್ಲಿ ಯಾವುದೇ ಪ್ರಕಟಣೆಯನ್ನು, ಈ ಅಧಿನಿಯಮದ ಅಡಿಯಲ್ಲಿ ಯಾವುದೇ ವ್ಯವಹರಣೆಗೆ ಸಂಬಂಧಿಸಿದಂತೆ, ವಿಧಿಸಿದ ಯಾವುದೇ ದಂಡಕ್ಕೆ ಅಥವಾ ಯಾವುದೇ ಅಪರಾಧಕ್ಕಾಗಿನ ಯಾವುದೇ ಅಪರಾಧ ನಿರ್ಣಯಕ್ಕೆ ಸಂಬಂಧಪಟ್ಟ ಯಾವುದೇ ಅಪೀಲನ್ನು, ಅಪೀಲು ಪ್ರಾಧಿಕಾರಕ್ಕೆ ಸಲ್ಲಿಸುವುದಕ್ಕಾಗಿನ ಕಾಲವು ಮುಕ್ತಾಯವಾಗುವವರೆಗಿನ ಅಥವಾ ಅಪೀಲನ್ನು ಸಲ್ಲಿಸಲಾಗಿದ್ದರೆ ಅದನ್ನು ವಿಲೆ ಮಾಡುವವರೆಗೆ ಮಾಡತಕ್ಕದ್ದಲ್ಲ.

**82. ಅಪರಾಧಗಳ ರಾಜಿ.–** (1) ಯಾವೊಬ್ಬ ವ್ಯಾಪಾರಿಯು, 77ನೇ ಪ್ರಕರಣದ (1)ನೇ ಉಪ-ಪ್ರಕರಣದ ಅಥವಾ 79ನೇ ಪ್ರಕರಣದ ಅಡಿಯಲ್ಲಿ ಒಂದು ಅಪರಾಧ ಮಾಡಿದ್ದರೆ, ನಿಯಮಿಸಲಾದ ಪ್ರಾಧಿಕಾರವು, ಅಂಥ ವ್ಯಾಪಾರಿಯು ಲಿಖಿತದಲ್ಲಿ ತಪ್ಪೊಪ್ಪಿಗೆ ನೀಡಿದ ಮೇಲೆ ಮತ್ತು ಅದಕ್ಕೆ ಸಂಬಂಧಿಸಿದ ನ್ಯಾಯಾಲಯ ವ್ಯವಹರಣೆಗಳು ಪ್ರಾರಂಭವಾಗುವುದಕ್ಕೆ ಮೊದಲು ಯಾವುದೇ ಸಮಯದಲ್ಲಿ ರಾಜಿಗೆ ತನ್ನ ಒಪ್ಪಿಗೆ ನೀಡಿದ ತರುವಾಯ ಅಂಥ ಅಪರಾಧದ ಬಗ್ಗೆ ರಾಜಿ ಮಾಡಿಕೊಳ್ಳಬಹುದು ಮತ್ತು ನಿಯಮಿಸಲಾದ ಪ್ರಾಧಿಕಾರವು ನಿರ್ದಿಷ್ಟಪಡಿಸಬಹುದಾದಂತೆ ಹಣದ ಅಂಥ ಮೊಬಲಗನ್ನು ಸಂದಾಯ ಮಾಡಲು ವ್ಯಾಪಾರಿಗೆ ಆದೇಶಿಸಬಹುದು, ಪರಂತು, ಬಾಕಿ ಇರುವ ಯಾವುದೇ ತೆರಿಗೆ ಮತ್ತು ಬಡ್ಡಿಯ ಸಂದಾಯವೂ ಸೇರಿದಂತೆ ಆ ಮೊಬಲಗು, ಅಪರಾಧಕ್ಕಾಗಿ ನಿಯಮಿಸಲಾದ ಜುಲ್ಮಾನೆಯ ಮೊಬಲಗನ್ನು ಮೀರತಕ್ಕದ್ದಲ್ಲ.

(2) ಯಾವೊಬ್ಬ ಅಂಥ ವ್ಯಾಪಾರಿಯು ಒಂದು ಮೊತ್ತದ ಸಂದಾಯಕ್ಕೆ ಸಂಬಂಧಪಟ್ಟಂತೆ ಚೆಕ್ ಅಥವಾ ಇತರ ಯಾವುದೇ ಲಿಖಿತ ಪತ್ರವನ್ನು ಒದಗಿಸುವುದು ಅಪರಾಧದ ರಾಜಿಗಾಗಿನ ಒಂದು ಅರ್ಜಿ ಎಂದು ಭಾವಿಸತಕ್ಕದ್ದು.

(3) ಈ ಪ್ರಕರಣದ ಅಡಿಯಲ್ಲಿ ನಿಯಮಿಸಲಾದ ಪ್ರಾಧಿಕಾರವು ಅಪರಾಧದ ಸಂಬಂಧದಲ್ಲಿ ರಾಜಿಮಾಡಿಕೊಂಡಿರುವಲ್ಲಿ, (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಆದೇಶವು,-

(ಎ) ಲಿಖಿತದಲ್ಲಿರತಕ್ಕದ್ದು ಮತ್ತು ಮಾಡಲಾದ ಅಪರಾಧವನ್ನು, ಸಂದಾಯ ಮಾಡಲಾಗುವ ಹಣದ ಮೊತ್ತ ಮತ್ತು ಸಂದಾಯ ಮಾಡುವುದಕ್ಕಾಗಿನ ನಿಗದಿತ ದಿನಾಂಕವನ್ನು ಅದರಲ್ಲಿ ನಿರ್ದಿಷ್ಟಪಡಿಸತಕ್ಕದ್ದು; ಮತ್ತು

(ಬಿ) ಅಪರಾಧವನ್ನು ಮಾಡಿದ ವ್ಯಾಪಾರಿಗೆ ಜಾರಿ ಮಾಡತಕ್ಕದ್ದು; ಮತ್ತು

(ಸಿ) ಅಂತಿಮವಾಗಿರತಕ್ಕದ್ದು ಮತ್ತು ಯಾವುದೇ ಅಪೀಲಿಗೆ ಒಳಪಟ್ಟಿರತಕ್ಕದ್ದಲ್ಲ; ಮತ್ತು

(ಡಿ) ಆದೇಶದಲ್ಲಿ ಹೇಳಲಾದ ಮೊಬಲಗಿನ ಸಂದಾಯಕ್ಕಾಗಿ ಒಂದು ನ್ಯಾಯಾಲಯದ ಡಿಕ್ರಿ ಎಂಬಂತೆ ಅದೇ ರೀತಿಯಲ್ಲಿ ಜಾರಿಗೊಳಿಸತಕ್ಕದ್ದು.

(4) ನಿಯಮಿಸಲಾದ ಪ್ರಾಧಿಕಾರವು, ಈ ಪ್ರಕರಣದ ಅಡಿಯಲ್ಲಿ ಅಪರಾಧದ ಸಂಬಂಧದಲ್ಲಿ ರಾಜಿ ಮಾಡಿಕೊಂಡಿರುವಾಗ, ಸಂಬಂಧಪಟ್ಟ ವ್ಯಾಪಾರಿಯು, ಅಂಥ ಅಪರಾಧದ ಸಂಬಂಧದಲ್ಲಿ ಪ್ರಾಸಿಕ್ಯೂಷನ್‌ಗೆ ಅಥವಾ ಈ ಪ್ರಕರಣದ ಅಡಿಯಲ್ಲಿ ಯಾವುದೇ ಮತ್ತಷ್ಟು ದಂಡಕ್ಕೆ ಬದ್ಧನಾಗಿರತಕ್ಕದ್ದಲ್ಲ ಮತ್ತು ಅಂಥ ವ್ಯಾಪಾರಿಯು, ಸದರಿ ವ್ಯವಹರಣೆಗಳ ವಿರುದ್ಧ ಅಪೀಲು ಮಾಡತಕ್ಕದ್ದಲ್ಲ.

**83. ಪ್ರಾಸಿಕ್ಯೂಷನ್‌ನಲ್ಲಿ ತೆರಿಗೆ ನಿರ್ಧರಣೆಗಳನ್ನು ಪ್ರಶ್ನಿಸತಕ್ಕದ್ದಲ್ಲ ಎಂಬುದರ ಸಿಂಧುತ್ವ.–** ಈ ಅಧಿನಿಯಮದ ಅಡಿಯಲ್ಲಿ ಮಾಡಿದ ಯಾವುದೇ ತೆರಿಗೆ ನಿರ್ಧರಣೆಯ ಅಥವಾ ಯಾವುದೇ ಶುಲ್ಕ ಅಥವಾ ಇತರ ಮೊಬಲಗನ್ನು ವಿಧಿಸುವುದರ ಸಿಂಧುತ್ವವನ್ನು ಅಥವಾ ಹಾಗೆ ನಿರ್ದೇಶಿಸಿದ ಅಥವಾ ವಿಧಿಸಿದ ಯಾವುದೇ ತೆರಿಗೆ, ಶುಲ್ಕ ಅಥವಾ ಇತರ ಮೊಬಲಗನ್ನು ಸಂದಾಯ ಮಾಡಲು ಯಾವೊಬ್ಬ ವ್ಯಕ್ತಿಯ ಬದ್ಧತೆಯನ್ನು ಈ ಅಧಿನಿಯಮದ ಅಡಿಯಲ್ಲಿ ಅಥವಾ ಅನ್ಯಥಾ ಯಾವುದೇ ಕ್ರಿಮಿನಲ್ ನ್ಯಾಯಾಲಯದಲ್ಲಿನ ಯಾವುದೇ ಅಭಿಯೋಜನೆ ಅಥವಾ ಇತರೆ ವ್ಯವಹರಣೆಯಲ್ಲಿ ಪ್ರಶ್ನಿಸತಕ್ಕದ್ದಲ್ಲ.

**84. ಕೆಲವು ವ್ಯವಹರಣೆಗಳ ಸಂಬಂಧದಲ್ಲಿ ಪ್ರತಿಷೇಧ ಮತ್ತು ಕಾಲ ಪರಿಮಿತಿ.–** (1) ರಾಜ್ಯ ಸರ್ಕಾರದ ಪೂರ್ವ ಮಂಜೂರಾತಿ ಇಲ್ಲದೆ, ರಾಜ್ಯ ಸರ್ಕಾರದ ಯಾವೊಬ್ಬ ಅಧಿಕಾರಿ ಅಥವಾ ನೌಕರನ ವಿರುದ್ಧ ಈ ಅಧಿನಿಯಮದ ಅಡಿಯಲ್ಲಿ ಮಾಡಿದ ಅಥವಾ ಮಾಡಲಾಗಿದೆ ಎಂದು ತಾತ್ಪರ್ಯವಾಗುವ ಯಾವುದೇ ಕಾರ್ಯಕ್ಕಾಗಿ ಯಾವುದೇ ದಾವೆ, ಅಭಿಯೋಜನೆ ಅಥವಾ ಇತರ ವ್ಯವಹರಣೆಯನ್ನು ಹೂಡತಕ್ಕದ್ದಲ್ಲ.

(2) ಯಾವುದೇ ಸಿವಿಲ್ ಅಥವಾ ಕ್ರಿಮಿನಲ್ ವ್ಯವಹರಣೆಯಲ್ಲಿ ಅಂಥ ಯಾವುದೇ ಕಾರ್ಯಕ್ಕೆ ಸಂಬಂಧಿಸಿದಂತೆ ರಾಜ್ಯ ಸರ್ಕಾರದ ಯಾವೊಬ್ಬ ಅಧಿಕಾರಿ ಅಥವಾ ನೌಕರನು, ಈ ಅಧಿನಿಯಮದ ಮೂಲಕ ಅಥವಾ ಅದರ ಅಡಿಯಲ್ಲಿ ವಿಧಿಸಿದ ಕರ್ತವ್ಯಗಳ ನಿರ್ವಹಣೆ ಅಥವಾ ಪ್ರಕಾರ್ಯಗಳನ್ನು ನೆರವೇರಿಸುವ ಕ್ರಮದಲ್ಲಿ ಈ ಕಾರ್ಯವನ್ನು ಸದ್ಭಾವನೆಯಿಂದ ಮಾಡಿದ್ದರೆ ಗುರಿಯಾಗತಕ್ಕದ್ದಲ್ಲ.

(3) ಈ ಅಧಿನಿಯಮದ ಅಡಿಯಲ್ಲಿ ಮಾಡಿದ ಅಥವಾ ಮಾಡಲಾಗಿದೆ ಎಂದು ತಾತ್ಪರ್ಯವಾಗುವ ಯಾವುದೇ ಕಾರ್ಯದ ಸಂಬಂಧದಲ್ಲಿ ಫಿರ್ಯಾದು ನೀಡಲಾದ ಯಾವುದೇ ಕಾರ್ಯದ ದಿನಾಂಕದಿಂದ ಆರು ತಿಂಗಳುಗಳ ಒಳಗೆ ದಾವೆ, ಅಭಿಯೋಜನೆ ಅಥವಾ ಇತರೆ ವ್ಯವಹರಣೆಗಳನ್ನು ಮಾಡಿದ್ದ ಹೊರತು, ರಾಜ್ಯ ಸರ್ಕಾರದ ವಿರುದ್ಧ ಯಾವುದೇ

ದಾವೆಯನ್ನು ಹೂಡತಕ್ಕದ್ದಲ್ಲ ಮತ್ತು ರಾಜ್ಯ ಸರ್ಕಾರದ ಯಾವೊಬ್ಬ ಅಧಿಕಾರಿ ಅಥವಾ ನೌಕರನ ವಿರುದ್ಧ ಯಾವುದೇ ದಾವೆ, ಅಭಿಯೋಜನೆ ಅಥವಾ ಇತರ ಯಾವುದೇ ವ್ಯವಹರಣೆಯನ್ನು ಹೂಡತಕ್ಕದ್ದಲ್ಲ.

**85. ಈ ಅಧಿನಿಯಮದ ಅಡಿಯಲ್ಲಿ ಉಪಬಂಧಿಸಲಾದಂತೆ ಹೊರತು, ತೆರಿಗೆ ನಿರ್ಧಾರಣೆಗಳನ್ನು ರದ್ದುಗೊಳಿಸತಕ್ಕದ್ದಲ್ಲ ಅಥವಾ ಮಾರ್ಪಾಟುಗೊಳಿಸತಕ್ಕದ್ದಲ್ಲ.**- ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ, ಈ ಅಧಿನಿಯಮದಲ್ಲಿ ಸ್ಪಷ್ಟವಾಗಿ ಉಪಬಂಧಿಸಿದಂತೆ ಹೊರತು, ಈ ಅಧಿನಿಯಮದ ಉಪಬಂಧಗಳ ಬಲದಿಂದ ಪ್ರಾರಂಭಿಸಲಾದ ಯಾವುದೇ ತೆರಿಗೆ ನಿರ್ಧಾರಣೆಯನ್ನು ಅಥವಾ ಇತರ ವ್ಯವಹರಣೆಗಳನ್ನು ರದ್ದುಗೊಳಿಸಲು ಅಥವಾ ಮಾರ್ಪಾಟು ಮಾಡಲು ಯಾವುದೇ ನ್ಯಾಯಾಲಯವು ಯಾವುದೇ ದಾವೆ ಅಥವಾ ಇತರ ವ್ಯವಹರಣೆಗಳನ್ನು, ಪುರಸ್ಕರಿಸತಕ್ಕದ್ದಲ್ಲ ಮತ್ತು ಅಂಥ ಯಾವುದೇ ನ್ಯಾಯಾಲಯವು, ಈ ಅಧಿನಿಯಮದ ಅಡಿಯಲ್ಲಿ, ಯಾವುದೇ ತೆರಿಗೆ ನಿರ್ಧಾರಣೆ, ದಂಡ ಅಥವಾ ಬಡ್ಡಿ ವಿಧಿಸುವಿಕೆ, ಇಲ್ಲವೇ ವ್ಯವಹರಣೆಗಳ ಯಾವುದೇ ತಡೆಹಿಡಿಯುವಿಕೆಯ ಮಂಜೂರಾತಿಯ ಅಥವಾ ಬಾಕಿ ಇರುವ ಯಾವುದೇ ಮೊಬಲಗಿನ ವಸೂಲಿಯ ಸಿಂಧುತ್ವವನ್ನು ಪ್ರಶ್ನಿಸತಕ್ಕದ್ದಲ್ಲ.

**86. ವ್ಯವಹರಣೆಗಳ ಸಂಬಂಧದಲ್ಲಿ ಯಾವುದೇ ಪ್ರಾಧಿಕಾರದ ಮುಂದೆ ಹಾಜರಾಗುವುದು.**- ಈ ಅಧಿನಿಯಮದ ಅಡಿಯಲ್ಲಿ ಯಾವುದೇ ವ್ಯವಹರಣೆಗೆ ಸಂಬಂಧಿಸಿದಂತೆ ಉಚ್ಚ ನ್ಯಾಯಾಲಯವನ್ನು ಹೊರತುಪಡಿಸಿ, ಯಾವುದೇ ಪ್ರಾಧಿಕಾರದ ಮುಂದೆ ಹಾಜರಾಗಲು ಹಕ್ಕುಳ್ಳ ಯಾವೊಬ್ಬ ವ್ಯಕ್ತಿಯು ಅಂಥ ಪ್ರಾಧಿಕಾರದ ಮುಂದೆ,-

(ಎ) ಈ ಸಂಬಂಧದಲ್ಲಿ ಲಿಖಿತವಾಗಿ, ಅವನ ಸಂಬಂಧಿ ಅಥವಾ ವ್ಯಕ್ತಿಯನ್ನು ಕ್ರಮಬದ್ಧವಾಗಿ ಪ್ರಾಧಿಕೃತಗೊಳಿಸಿದ್ದರೆ, ಅವನ ಅಂಥ ಸಂಬಂಧಿ ಅಥವಾ ಅವನು ನಿಯತವಾಗಿ ನಿಯೋಜಿಸಿರುವ ವ್ಯಕ್ತಿಯ ಮೂಲಕ;

(ಬಿ) ಒಬ್ಬ ಕಾನೂನು ವೃತ್ತಿಗಾರನ ಮೂಲಕ; ಅಥವಾ

(ಸಿ) ನಿಯಮಿಸಬಹುದಾದಂಥ ಷರತ್ತುಗಳಿಗೆ ಒಳಪಟ್ಟು, ಆಯುಕ್ತನಿಂದ ತೆರಿಗೆ ವೃತ್ತಿಗಾರನೆಂದು ನಿಯಮಿಸಿದ ರೀತಿಯಲ್ಲಿ ಪಟ್ಟಿಯಲ್ಲಿ ಸೇರಿಸಲಾದ ಮತ್ತು ಅವನು ಯಾರನ್ನು ಪ್ರತಿನಿಧಿಸುವನೋ ಆ ವ್ಯಕ್ತಿಯಿಂದ ಕ್ರಮಬದ್ಧವಾಗಿ ಪ್ರಾಧಿಕೃತನಾದ ಲೆಕ್ಕಿಗನ (ಅಕೌಂಟೆಂಟ್‌ನ) ಮೂಲಕ ಅಥವಾ ವ್ಯಕ್ತಿಯ ಮೂಲಕ,

- ಪ್ರತಿನಿಧಿಸಲ್ಪಡಬಹುದು.

**87. ಸಾಕ್ಷ್ಯ ನೀಡುವುದಕ್ಕಾಗಿ ವ್ಯಕ್ತಿಗಳನ್ನು ಸಮನು ಮಾಡುವ ಅಧಿಕಾರ.**- (1) ಈ ಸಂಬಂಧದಲ್ಲಿ ರಚಿಸಲಾದ ನಿಯಮಗಳ ಮೂಲಕ ಅಧಿಕಾರ ಪಡೆದ ಅಧಿಕಾರಿಗಳು, ಈ ಅಧಿನಿಯಮದ ಅಡಿಯಲ್ಲಿ ಯಾವುದೇ ವಿಚಾರಣೆಯಲ್ಲಿ ವ್ಯಕ್ತಿಗಳ ಹಾಜರಾತಿಯನ್ನು ಅಥವಾ ದಸ್ತಾವೇಜುಗಳನ್ನು ಹಾಜರುಪಡಿಸುವುದನ್ನು ಖಚಿತಪಡಿಸಿಕೊಳ್ಳುವ ಉದ್ದೇಶಕ್ಕಾಗಿ ಸಿವಿಲ್ ಪ್ರಕ್ರಿಯಾ ಸಂಹಿತೆ, 1908ರ (1908ರ ಕೇಂದ್ರ ಅಧಿನಿಯಮ V) ಮೂಲಕ ಒಂದು ನ್ಯಾಯಾಲಯಕ್ಕೆ ಪ್ರದತ್ತವಾದ ಎಲ್ಲಾ ಅಧಿಕಾರಗಳನ್ನು ಹೊಂದಿರತಕ್ಕದ್ದು.

(2) ಆಯುಕ್ತನು ಅಥವಾ ತೆರಿಗೆ ನಿರ್ಧಾರಣೆ ಪ್ರಾಧಿಕಾರವು, ಅಪೀಲು ಪ್ರಾಧಿಕಾರವು ಅಥವಾ ಪುನರೀಕ್ಷಣಾ ಪ್ರಾಧಿಕಾರವು, ನ್ಯಾಯಾಧಿಕರಣ ಅಥವಾ ಉಚ್ಚ ನ್ಯಾಯಾಲಯದ ಮುಂದೆ ಒಬ್ಬ ಸಾಕ್ಷಿದಾರನಾಗಿ ಯಾವೊಬ್ಬ ವ್ಯಾಪಾರಿಯ ಹಾಜರಾತಿಯನ್ನು ಪಡೆಯುವಲ್ಲಿ ಈ ಅಧಿನಿಯಮದ ಉದ್ದೇಶಗಳಿಗಾಗಿ ಅಂಥ ವ್ಯವಹರಣೆಗಳ ಸಂಬಂಧದಲ್ಲಿ ಯಾವುದೇ ದಸ್ತಾವೇಜನ್ನು ಹಾಜರುಪಡಿಸುವುದಕ್ಕಾಗಿ ಸಿವಿಲ್ ಪ್ರಕ್ರಿಯಾ ಸಂಹಿತೆ 1908ರ (1908ರ ಕೇಂದ್ರ ಅಧಿನಿಯಮ 5) ಉಪಬಂಧಗಳ ಅಡಿಯಲ್ಲಿ ಒಂದು ಸಿವಿಲ್ ನ್ಯಾಯಾಲಯಕ್ಕೆ ಕೊಡಲಾದ ಅಧಿಕಾರಗಳನ್ನು ಹೊಂದಿರತಕ್ಕದ್ದು.

**88. ನಿಯಮಗಳ ರಚನಾಧಿಕಾರ.**- (1) ರಾಜ್ಯ ಸರ್ಕಾರವು, ಪೂರ್ವ ಪ್ರಕಟಣೆಯ ಷರತ್ತಿಗೊಳಪಟ್ಟು, ಅಧಿಸೂಚನೆಯ ಮೂಲಕ, ಈ ಅಧಿನಿಯಮದ ಉದ್ದೇಶಗಳನ್ನು ಈಡೇರಿಸುವುದಕ್ಕಾಗಿ ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಹಿಂದೆ ಹೇಳಿದ ಅಧಿಕಾರದ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ, ಅಂಥ ನಿಯಮಗಳು,-

(ಎ) ನಿಯಮಿಸಬೇಕೆಂದು ಈ ಅಧಿನಿಯಮವು ಸ್ಪಷ್ಟವಾಗಿ ಅಗತ್ಯಪಡಿಸಿದ ಅಥವಾ ಅನುಮತಿಸಿದ ಎಲ್ಲಾ ವಿಷಯಗಳು;

(ಬಿ) ಪರಿಶೀಲನೆಯ ಸಮಯದಲ್ಲಿ ಅಥವಾ ಸಮೀಕ್ಷೆಯ ಕಾಲದಲ್ಲಿ ಕಂಡುಬಂದ ಸರಕುಗಳ ವಿವರಪಟ್ಟಿಯ ಆಧಾರದ ಮೇಲೆ ನೋಂದಣಿಯ ಉದ್ದೇಶಕ್ಕಾಗಿ ವಹಿವಾಟುಗಳ ಅಂದಾಜು;

(ಸಿ) ನಿಲ್ಲಿಸಿಬಿಟ್ಟಂಥ ಅಥವಾ ಯಾವುದರ ಒಡೆತನವು ಬದಲಾವಣೆಯಾಗಿದೆಯೋ ಆ ವ್ಯವಹಾರದ ಸಂಬಂಧದಲ್ಲಿ ಈ ಅಧಿನಿಯಮದ ಅಡಿಯಲ್ಲಿಯ ತೆರಿಗೆ ನಿರ್ಧಾರಣೆ;

(ಡಿ) ಕೇಂದ್ರ ಮತ್ತು ರಾಜ್ಯ ಸರ್ಕಾರಿ ಇಲಾಖೆಗಳ, ಶಾಸನಬದ್ಧ ನಿಕಾಯಗಳ ಮತ್ತು ಸ್ಥಳೀಯ ಪ್ರಾಧಿಕಾರಗಳ ತೆರಿಗೆ ನಿರ್ಧಾರಣೆಗಾಗಿ ಕಾರ್ಯವಿಧಾನ;

(ಇ) ಅಪ್ರಾಪ್ತ ವಯಸ್ಕರು ಮತ್ತು ಅಸಮರ್ಥರಾದ ಇತರ ವ್ಯಕ್ತಿಗಳು ಅಥವಾ ರಾಜ್ಯದ ಹೊರಗೆ ವಾಸಿಸುತ್ತಿರುವ ವ್ಯಕ್ತಿಗಳ ಒಡೆತನದಲ್ಲಿರುವ ವ್ಯವಹಾರದ ಸಂಬಂಧದಲ್ಲಿ ಈ ಅಧಿನಿಯಮದ ಅಡಿಯಲ್ಲಿಯ ತೆರಿಗೆ ನಿರ್ಧಾರಣೆ;

(ಎಫ್) ಯಾವ ಆಸ್ತಿಯು ಅಥವಾ ಯಾವ ಆಸ್ತಿಯ ಯಾವುದೇ ಭಾಗವು ಪ್ರತಿಪಾಲಿತರ ನ್ಯಾಯಾಲಯದ, ಅಡ್ಮಿನಿಸ್ಟ್ರೇಟರ್ ಜನರಲ್‌ನ, ಸರ್ಕಾರಿ ನ್ಯಾಸಧಾರಿಯ (ಟ್ರಸ್ಟೀ) ಅಥವಾ ನ್ಯಾಯಾಲಯದ ಯಾವುದೇ ಆದೇಶದ ಮೂಲಕ ಅಥವಾ ಅದರ ಅಡಿಯಲ್ಲಿ ನೇಮಕಗೊಂಡ ಯಾವೊಬ್ಬ ರಿಸೀವರ್ ಅಥವಾ ವ್ಯವಸ್ಥಾಪಕನನ್ನು ಒಳಗೊಂಡಂತೆ, ಅವನ ಪದನಾಮ ಏನೇ ಇರಲಿ, ಇನ್ನೊಬ್ಬರ ಪರವಾಗಿ ಸ್ವತ್ತಿನ ಆಡಳಿತ ನಡೆಸುತ್ತಿರುವ ಯಾವೊಬ್ಬ ವ್ಯಕ್ತಿಯ ನಿಯಂತ್ರಣದಲ್ಲಿರುವ, ಯಾವೊಬ್ಬ ವ್ಯಕ್ತಿಯ ಒಡೆತನದಲ್ಲಿರುವ ವ್ಯವಹಾರದ ತೆರಿಗೆ ನಿರ್ಧಾರಣೆ;

(ಜಿ) ಈ ಅಧಿನಿಯಮದ ಅಡಿಯಲ್ಲಿ ಸ್ಥಾಪಿಸಿದ ಚೆಕ್ ಪೋಸ್ಟ್‌ಗಳ ಮತ್ತು ನಿರ್ಮಿಸಿದ ಸುಂಕದ ಕಟ್ಟೆಗಳ ಆಡಳಿತ ಮತ್ತು ಅಲ್ಲಿನ ಕಾರ್ಯದ ನಿಯಂತ್ರಣ;

(ಹೆಚ್) ತೆರಿಗೆ ನಿರ್ಧಾರಣೆಯಿಂದ ತಪ್ಪಿಸಿಕೊಂಡ ಯಾವುದೇ ವಹಿವಾಟಿನ ಮೇಲೆ ಈ ಅಧಿನಿಯಮದ ಅಡಿಯಲ್ಲಿ ತೆರಿಗೆ ನಿರ್ಧಾರಣೆ;

(ಐ) ವಿವರ ಪಟ್ಟಿಗಳ ಒಪ್ಪಿಸುವಿಕೆ ಮತ್ತು ದಸ್ತಾವೇಜುಗಳ ಹಾಜರುಪಡಿಸುವಿಕೆಯನ್ನು ಒತ್ತಾಯಿಸುವುದು ಮತ್ತು ವ್ಯಕ್ತಿಗಳ ಹಾಜರಾತಿಯನ್ನು ಒತ್ತಾಯಪಡಿಸುವುದು ಹಾಗೂ ಅವರನ್ನು ಪ್ರಮಾಣ ಅಥವಾ ದೃಢೀಕರಣದ ಮೇಲೆ ಪರೀಕ್ಷಿಸುವುದು;

(ಜೆ) ಈ ಅಧಿನಿಯಮದ ಅಡಿಯಲ್ಲಿ ಯಾವುದೇ ನಿಯಮಿಸಲಾದ ಪ್ರಾಧಿಕಾರದ ಮುಂದೆ ಅಥವಾ ಅಂಥ ಪ್ರಾಧಿಕಾರದ ಯಾವುದೇ ತೀರ್ಮಾನದ ಮೇಲಿನ ಅಪೀಲು ಅಥವಾ ಪುನರೀಕ್ಷಣೆಯಲ್ಲಿ ಒದಗಿಸಿದ ವಿವರ ಪಟ್ಟಿಗಳು ಅಥವಾ ಹಾಜರುಪಡಿಸಿದ ಲೆಕ್ಕ ಪತ್ರಗಳು ಅಥವಾ ದಸ್ತಾವೇಜುಗಳು ಅಥವಾ ಕೊಟ್ಟ ಯಾವುದೇ ಬಗೆಯ ಸಾಕ್ಷ್ಯವನ್ನು ರಹಸ್ಯವಾಗಿಡುವಂತೆ ಖಚಿತ ಪಡಿಸಿಕೊಳ್ಳುವುದು;

(ಕೆ) 42ನೇ ಪ್ರಕರಣದ ಅಡಿಯಲ್ಲಿ ವಸೂಲಿಗಾಗಿನ ವ್ಯವಹರಣೆಗಳಲ್ಲಿ ಪಾಲಿಸಬೇಕಾದ ಕಾರ್ಯವಿಧಾನ ಮತ್ತು ಚಲಾಯಿಸಬಹುದಾದ ಅಧಿಕಾರಗಳು;

(ಎಲ್) ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸುವ ಉದ್ದೇಶಕ್ಕಾಗಿ ನೇಮಕಗೊಂಡ ಅಧಿಕಾರಿಗಳ ಕರ್ತವ್ಯಗಳು ಮತ್ತು ಅಧಿಕಾರಗಳು;

(ಎಮ್) ಅಪೀಲು ನ್ಯಾಯಾಧಿಕರಣದ ಸದಸ್ಯರ ಪದಾವಧಿ ಮತ್ತು ಸೇವಾ ಷರತ್ತುಗಳು;

(ಎನ್) ನೋಂದಣಿ ಪ್ರಮಾಣ ಪತ್ರಗಳು ಅಥವಾ ಲೈಸೆನ್ಸ್‌ಗಳ ನಕಲು ಪ್ರತಿಗಳ ಅಥವಾ ಅಂಥ ಪ್ರಮಾಣ ಪತ್ರಗಳ ಮತ್ತು ಲೈಸನ್ಸ್‌ಗಳ ಅಥವಾ ಯಾವುದೇ ಇತರ ದಸ್ತಾವೇಜಿನ ಪ್ರತಿಗಳ ನೀಡಿಕೆಗಾಗಿ ಸಂದಾಯ ಮಾಡಬೇಕಾದ ಶುಲ್ಕಗಳು;

(ಓ) ವ್ಯಾಪಾರಿಗಳು, ಖರೀದಿ ಬಿಲ್ಲುಗಳು ಅಥವಾ ಖರೀದಿಗಳ ಮತ್ತು ಮಾರಾಟಗಳ ಲೆಕ್ಕ ಪತ್ರಗಳ ನಿರ್ವಹಣೆ ಮತ್ತು ಅವುಗಳನ್ನು ರಕ್ಷಿಸಿಡತಕ್ಕ ಅವಧಿ.

(ಪಿ) ಚಿಲ್ಲರೆ ವ್ಯವಹಾರಿಗಳಿಗೆ ಮಾಡಿದ ಮಾರಾಟಗಳ ಅನುಸರಣೆಯಲ್ಲಿ ಅವರಿಗೆ ಬಟವಾಡೆ ಮಾಡಿದ ಅಥವಾ ವರ್ಗಾವಣೆ ಮಾಡಿದ ಸರಕುಗಳಿಗೆ ಸಂಬಂಧಿಸಿದಂತೆ ರವಾನೆ ಚೀಟಿಗಳು ಅಥವಾ ಸರಕು ಪಟ್ಟಿಗಳನ್ನು ನೀಡುವುದು, ಅವುಗಳನ್ನು ನೀಡುವ ನಮೂನೆ ಮತ್ತು ರೀತಿ ಮತ್ತು ಅವುಗಳನ್ನು ರಕ್ಷಿಸಿಡತಕ್ಕ ಅವಧಿ;

(ಕ್ಯೂ) ಯಾವೊಬ್ಬ ಪ್ರಧಾನಕರ್ತನ ಪರವಾಗಿ ಸರಕುಗಳನ್ನು ಖರೀದಿಸುವ, ಮಾರಾಟ ಮಾಡುವ, ಸರಬರಾಜು ಮಾಡುವ ಅಥವಾ ವಿತರಣೆ ಮಾಡುವ ವ್ಯವಹಾರವನ್ನು ನಡೆಸುತ್ತಿರುವ, ಕಮಿಷನ್ ಏಜೆಂಟ್, ದಳ್ಳಾಳಿ, ಭರವಸೆ ಕೊಡುವ ಏಜೆಂಟ್, ಹರಾಜುದಾರ ಅಥವಾ ಯಾವನೇ ಇತರ ವಾಣಿಜ್ಯ ಏಜೆಂಟನ ಬದ್ಧತೆಯ ವ್ಯಾಪ್ತಿ;

(ಆರ್) ಮಾರಾಟ ತೆರಿಗೆ ವೃತ್ತಿದಾರರ ಅರ್ಹತೆಗಳು ಮತ್ತು ಅನರ್ಹತೆಗಳು, ಅವರನ್ನು ಪಟ್ಟಿಯಲ್ಲಿ ಸೇರಿಸುವುದಕ್ಕಾಗಿನ ಕಾರ್ಯವಿಧಾನ, ಪಟ್ಟಿಯಲ್ಲಿ ಸೇರಿಸುವುದಕ್ಕಾಗಿ ಸಂದಾಯ ಮಾಡಬೇಕಾದ ಶುಲ್ಕಗಳು ಮತ್ತು ಅಂಥ ಪಟ್ಟಿಯಲ್ಲಿ ಸೇರಿಸುವಿಕೆಯ ವಾರ್ಷಿಕ ನವೀಕರಣಕ್ಕಾಗಿ ಸಂದಾಯ ಮಾಡಬೇಕಾದ ಶುಲ್ಕಗಳು;

(ಎಸ್) ಈ ಅಧಿನಿಯಮದ ಅಡಿಯಲ್ಲಿಯ ವ್ಯವಹರಣೆಯಲ್ಲಿ ಅನುಸರಿಸಬೇಕಾದ ಕಾರ್ಯವಿಧಾನ ಮತ್ತು ಅಳವಡಿಸಿಕೊಳ್ಳಬೇಕಾದ ನಮೂನೆಗಳನ್ನು ಸಾಮಾನ್ಯವಾಗಿ ನಿಯಮಿಸುವುದು;

(ಟಿ) ಈ ಅಧಿನಿಯಮದಲ್ಲಿ ಉಪಬಂಧಿಸಿರದ ಅಥವಾ ಸಾಕಷ್ಟು ಉಪಬಂಧಿಸಿರದ, ಸರ್ಕಾರದ ಅಭಿಪ್ರಾಯದಲ್ಲಿ ಈ ಅಧಿನಿಯಮದ ಉದ್ದೇಶಗಳನ್ನು ಈಡೇರಿಸುವುದಕ್ಕಾಗಿ ಅವಶ್ಯವಾಗಿರುವಂಥ ಯಾವುದೇ ಇತರ ವಿಷಯ,

– ಇವುಗಳಿಗಾಗಿ ಉಪಬಂಧಿಸಬಹುದು.

(3) ಮೇಲಿನ (1)ನೇ ಉಪಪ್ರಕರಣದ ಅಥವಾ (2)ನೇ ಉಪಪ್ರಕರಣದ ಅಡಿಯಲ್ಲಿ ನಿಯಮಗಳನ್ನು ರಚಿಸುವಲ್ಲಿ ಸರ್ಕಾರವು, ಅದರ ಉಲ್ಲಂಘನೆಯ ತಪ್ಪಿತಸ್ಥನಾದ ವ್ಯಕ್ತಿಯು ಮೊದಲನೇ ದರ್ಜೆಯ ಮ್ಯಾಜಿಸ್ಟ್ರೇಟನಿಂದ ಅಪರಾಧ ನಿರ್ಣಯವಾದ ಮೇಲೆ ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಮತ್ತು ಆ ಉಲ್ಲಂಘನೆಯು ಮುಂದುವರೆಯುತ್ತಿರುವಲ್ಲಿ, ಮೊದಲನೆಯ ಉಲ್ಲಂಘನೆಯ ತರುವಾಯ, ಆ ಉಲ್ಲಂಘನೆಯು ಮುಂದುವರೆಯುತ್ತಿರುವ ಪ್ರತಿಯೊಂದು ದಿವಸಕ್ಕೆ ಒಂದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾಂಥ ಇನ್ನೂ ಹೆಚ್ಚಿನ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದೆಂದು ಉಪಬಂಧಿಸಬಹುದು.

(4) ಈ ಅಧಿನಿಯಮದ ಅಡಿಯಲ್ಲಿನ ಯಾವುದೇ ನಿಯಮವನ್ನು ಪೂರ್ವಾನ್ವಯ ಪರಿಣಾಮವುಳ್ಳಂತೆ ಮಾಡಬಹುದು ಮತ್ತು ಯಾವುದೇ ಅಂಥ ನಿಯಮವನ್ನು ರಚಿಸಿದಾಗ, ಅಂಥ ನಿಯಮವನ್ನು ರಚಿಸುವುದಕ್ಕಾಗಿನ ಕಾರಣಗಳನ್ನು ನಿರ್ದಿಷ್ಟಪಡಿಸುವ ವಿವರ ಪತ್ರವನ್ನು 90ನೇ ಪ್ರಕರಣದ ಅಡಿಯಲ್ಲಿಯ ನಿಯಮದೊಂದಿಗೆ ರಾಜ್ಯ ವಿಧಾನ ಮಂಡಲದ ಎರಡೂ ಸದನಗಳ ಮುಂದೆ ಮಂಡಿಸತಕ್ಕದ್ದು ಮತ್ತು ಎಲ್ಲಾ ನಿಯಮಗಳು, 90ನೇ ಪ್ರಕರಣದ ಅಡಿಯಲ್ಲಿ ಮಾಡಿದ ಯಾವುವೇ ಮಾರ್ಪಾಟುಗಳಿಗೆ ಒಳಪಟ್ಟು ಈ ಅಧಿನಿಯಮದಲ್ಲಿ ಅಧಿನಿಯಮಿತವಾಗಿದ್ದರೆ ಹೇಗೋ ಹಾಗೆ ಪರಿಣಾಮವುಳ್ಳವುಗಳಾಗಿರತಕ್ಕದ್ದು.

**89. ನಿಯಮಗಳು ಮತ್ತು ಅಧಿಸೂಚನೆಗಳನ್ನು ರಾಜ್ಯ ವಿಧಾನ ಮಂಡಲದ ಮುಂದೆ ಮಂಡಿಸುವುದು.**– ಈ ಅಧಿನಿಯಮದ ಅಡಿಯಲ್ಲಿ ರಚಿಸಿದ ಪ್ರತಿಯೊಂದು ನಿಯಮವನ್ನು ಹಾಗೂ [1][ಈ ಅಧಿನಿಯಮದ ಅಡಿಯಲ್ಲಿ][1] ಹೊರಡಿಸಿದ ಪ್ರತಿಯೊಂದು ಅಧಿಸೂಚನೆಯನ್ನು, ಅದನ್ನು ಪ್ರಕಟಿಸಿದ ತರುವಾಯ ಆದಷ್ಟು ಬೇಗನೆ ರಾಜ್ಯ ವಿಧಾನ ಮಂಡಲದ ಪ್ರತಿಯೊಂದು ಸದನದ ಮುಂದೆ ಅದು ಅಧಿವೇಶನದಲ್ಲಿರುವಾಗ ಒಂದು ಅಧಿವೇಶನ ಅಥವಾ ಒಂದಾದ ಮೇಲೊಂದರಂತೆ ಬರುವ ಎರಡು ಅಥವಾ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಬಹುದಾದಂಥ ಮೂವತ್ತು ದಿನಗಳ ಒಟ್ಟು ಅವಧಿಯವರೆಗೆ ಮಂಡಿಸತಕ್ಕದ್ದು ಮತ್ತು ಅದನ್ನು ಹಾಗೆ ಮಂಡಿಸಲಾದ ಅಧಿವೇಶನದ ಅಥವಾ ಅದರ ನಿಕಟೋತ್ತರದ ಅಧಿವೇಶನಗಳ ಮುಕ್ತಾಯಕ್ಕೆ ಮುಂಚೆ ಅ ನಿಯಮ ಅಥವಾ ಅಧಿಸೂಚನೆಯಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಆ ನಿಯಮ ಅಥವಾ ಅಧಿಸೂಚನೆಯನ್ನು ರಚಿಸತಕ್ಕದ್ದಲ್ಲವೆಂದು ಎರಡೂ ಸದನಗಳು ಒಪ್ಪಿದರೆ, ಆ ನಿಯಮ ಅಥವಾ ಅಧಿಸೂಚನೆಯು ಆ ತರುವಾಯ, ಸಂದರ್ಭಾನುಸಾರ, ಅಂಥ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ; ಆದಾಗ್ಯೂ ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮ ಅಥವಾ ಅಧಿಸೂಚನೆಯ ಅಡಿಯಲ್ಲಿ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟು ಮಾಡತಕ್ಕದ್ದಲ್ಲ.

1. 2006ರ ಅಧಿನಿಯಮ ಸಂಖ್ಯೆ 4ರ ಮೂಲಕ ದಿನಾಂಕ: 11.3.2005 ರಿಂದ ಪ್ರತಿಯೋಜಿಸಲಾಗಿದೆ.

**90. ತೊಂದರೆಗಳನ್ನು ನಿವಾರಿಸಲು ಅಧಿಕಾರ.-** (1) ಈ ಅಧಿನಿಯಮವು ಪ್ರಾರಂಭವಾಗುವುದಕ್ಕೆ ನಿಕಟಪೂರ್ವದಲ್ಲಿ ಜಾರಿಯಲ್ಲಿದ್ದ ಅಧಿನಿಯಮಗಳ ಉಪಬಂಧಗಳಿಂದ, ಈ ಅಧಿನಿಯಮದ ಉಪಬಂಧಗಳಿಗೆ ಆದ ಪರಿವರ್ತನೆಯಿಂದಾಗಿ ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸುವಲ್ಲಿ ಯಾವುದೇ ತೊಂದರೆಯು ಉದ್ಭವಿಸಿದರೆ, ಸರ್ಕಾರವು, ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ಆ ತೊಂದರೆಯನ್ನು ನಿವಾರಿಸುವುದಕ್ಕಾಗಿ, ಅವಶ್ಯಕ ಅಥವಾ ಯುಕ್ತವೆಂದು ಅದಕ್ಕೆ ಕಂಡುಬರುವ ಅಂಥ ಉಪಬಂಧಗಳನ್ನು ರಚಿಸಬಹುದು.

(2) ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸುವಲ್ಲಿ, ಈ ಅಧಿನಿಯಮವು ಪ್ರಾರಂಭವಾಗುವುದಕ್ಕೆ ಮೊದಲು ಜಾರಿಯಲ್ಲಿದ್ದ ಅಧಿನಿಯಮಗಳ ಉಪಬಂಧಗಳಿಂದ ಆದ ಪರಿವರ್ತನೆಗೆ ಸಂಬಂಧಪಟ್ಟಿರುವುದನ್ನು ಹೊರತುಪಡಿಸಿದಂತೆ, ಯಾವುದೇ ತೊಂದರೆಯು ಉದ್ಭವಿಸಿದರೆ ಸರ್ಕಾರವು, ಅಧಿಸೂಚನೆಯ ಮೂಲಕ ಆ ತೊಂದರೆಯನ್ನು ನಿವಾರಿಸುವುದಕ್ಕಾಗಿ, ಅವಶ್ಯಕ ಅಥವಾ ಯುಕ್ತವೆಂದು ಅದಕ್ಕೆ ಕಂಡುಬರುವ ಈ ಅಧಿನಿಯಮದ ಉದ್ದೇಶಗಳಿಗೆ ಅಸಂಗತವಲ್ಲದ ಅಂಥ ಉಪಬಂಧಗಳನ್ನು ರಚಿಸಬಹುದು.

## [1][ಒಂದನೇ ಅನುಸೂಚಿ

### (5ನೇ ಪ್ರಕರಣದ (1)ನೇ ಉಪಪ್ರಕರಣದ ಅಡಿಯಲ್ಲಿ ತೆರಿಗೆಯಿಂದ ವಿನಾಯಿತಿಗೊಳಿಸಿದ ಸರಕುಗಳು)

| ಕ್ರಮ ಸಂಖ್ಯೆ | ಸರಕುಗಳ ವಿವರ |
|---|---|
| 1 | 2 |
| 1. | ಕೈಯಿಂದ ನಡೆಸುವ ಅಥವಾ ಪ್ರಾಣಿಗಳಿಂದ ಎಳೆಸುವ ಕೃಷಿ ಉಪಕರಣಗಳು |
| 2. | ಅಂಗವಿಕಲ ವ್ಯಕ್ತಿಗಳು ಉಪಯೋಗಿಸುವ ಸಹಾಯಕ ಸಾಧನಗಳು ಮತ್ತು ಉಪಕರಣಗಳು |
| 3. | ಎಣ್ಣೆ ಬೀಜಗಳನ್ನು ಹೊರತುಪಡಿಸಿ ಎಲ್ಲಾ ಬಿತ್ತನೆ ಬೀಜಗಳು. |
| [1][4. | ಎಲ್ಲ ಬಗೆಯ ಜವಳಿಗಳು ಮತ್ತು ಬಟ್ಟೆಗಳು, ಆದರೆ, ಮೂರನೇ ಅನುಸೂಚಿಯಲ್ಲಿ ಎಲ್ಲಿಯಾದರೂ ನಿರ್ದಿಷ್ಟಪಡಿಸಿದವುಗಳನ್ನು ಅಥವಾ ಸರ್ಕಾರದಿಂದ ಅಧಿಸೂಚಿತವಾದವುಗಳನ್ನು ಹೊರತುಪಡಿಸಿ.][1] |

1. 2012ರ ಅಧಿನಿಯಮ ಸಂಖ್ಯೆ 17ರ ಮೂಲಕ ದಿನಾಂಕ: 1.4.2012 ರಿಂದ ಪ್ರತಿಯೋಜಿಸಲಾಗಿದೆ.

[3][5. (i) ಪಶು ಆಹಾರ ಮತ್ತು ಪೂರಕ ಆಹಾರಗಳು ಎಂದರೆ, ಕೋಳಿ ಆಹಾರ, ಜಾನುವಾರು ಆಹಾರ, ಹಂದಿ ಆಹಾರ, ಮೀನಿನ ಆಹಾರ, ಫಿಷ್‌ಮೀಲ್, ಪ್ರಾನ್ ಫೀಡ್, ಸೀಗಡಿ ಆಹಾರವೆಂದು ಮಾರಾಟ ಮಾಡುವ ಸಂಸ್ಕರಿತ ವಸ್ತುಗಳು ಹಾಗೂ ಪೂರಕ ಆಹಾರಗಳು ಮತ್ತು ಖನಿಜ ಮಿಶ್ರಣಗಳು, ಆಹಾರ ಪೂರಕಗಳಾಗಿ ಉಪಯೋಗಿಸುವ ಉದ್ದೇಶವುಳ್ಳ ಪೂರಕ ಆಹಾರಗಳು.

(ii) ಬೇಳೆಕಾಳುಗಳ ಹೊಟ್ಟು (ಚುನ್ನಿ), [1][ಗೋಧಿ ಬೂಸ ಮತ್ತು ಸೋಯಾಬೀನ್‌ನ ಎಣ್ಣೆ ತೆಗೆದ ಹಿಂಡಿಯನ್ನು ಹೊರತುಪಡಿಸಿ ಎಣ್ಣೆ ತೆಗೆದ ಹಿಂಡಿ][3]][1]

1. 2013ರ ಅಧಿನಿಯಮ ಸಂಖ್ಯೆ 32ರ ಮೂಲಕ ದಿನಾಂಕ: 1.4.2013 ರಿಂದ ಪ್ರತಿಯೋಜಿಸಲಾಗಿದೆ.

| | |
|---|---|
| 6. | [3][ಲಾಳ ಮತ್ತು ಮೊಳೆಗಳು][3] |
| 7. | ಏವಿಯೇಷನ್ ಟರ್ಬೈನ್ ಫ್ಯೂಯೆಲ್ |
| 8. | ಅವಲಕ್ಕಿ ಮತ್ತು ಮಂಡಕ್ಕಿ |
| 9. | ಅಮೂಲ್ಯ ಲೋಹಗಳ ಬಳೆಗಳನ್ನು ಹೊರತುಪಡಿಸಿ ಎಲ್ಲಾ ವಸ್ತುಗಳ ಬಳೆಗಳು |
| 10. | ವೀಳ್ಯೆದೆಲೆ |
| 11. | ಭೂಪಟಗಳು, ಚಾರ್ಟ್‌ಗಳು ಮತ್ತು ಗ್ಲೋಬ್ ಒಳಗೊಂಡಂತೆ ಪುಸ್ತಕಗಳು, ನಿಯತಕಾಲಿಕಗಳು ಹಾಗೂ ಪತ್ರಿಕೆಗಳು |
| 12. | ಬ್ರೆಡ್ ಮತ್ತು ಬನ್ |

13. ಪ್ರಾಣಿಗಳಿಂದ ಎಳೆಸಲಾಗುವ ಗಾಡಿಗಳು [2][ಮತ್ತು ಅವುಗಳ ಭಾಗಗಳು, ಆದರೆ, ರಬ್ಬರ್ ಟೈರುಗಳು, ಟ್ಯೂಬ್‌ಗಳು ಮತ್ತು ಫ್ಲಾಪ್‌ಗಳನ್ನು ಹೊರತುಪಡಿಸಿ][2]

14. ಚರಕ, ಅಂಬರಚರಕ, ಕೈಮಗ್ಗ ಬಟ್ಟೆಗಳು ಮತ್ತು ಗಾಂಧಿ ಟೋಪ್ಪಿಗೆ

15. ಇದ್ದಲು ಮತ್ತು ಸರ್ವೆ ಮರ ಮತ್ತು ನೀಲಗಿರಿ ಮರದ ಮರಮಟ್ಟುಗಳನ್ನು ಹೊರತುಪಡಿಸಿ

16. ಭತ್ತ, ಅಕ್ಕಿ ಹಾಗೂ ಗೋಧಿ ಹಾಗೂ ಅದರ ಹಿಟ್ಟನ್ನು ಹೊರತುಪಡಿಸಿ, ಕಚ್ಚಾ ಧಾನ್ಯಗಳು ಮತ್ತು ಅವುಗಳ ಹಿಟ್ಟು.

17. ಕಾಂಡಮ್‌ಗಳು ಮತ್ತು ಗರ್ಭನಿರೋಧಕಗಳು

18. ಲಡಿಗಳಲ್ಲಿ ಹತ್ತಿ ಮತ್ತು ರೇಷ್ಮೆ ನೂಲು

19. ಮೊಸರು ಮತ್ತು ಮಜ್ಜಿಗೆ

20. ಡೀಸೆಲ್

21. ಮಣ್ಣಿನ ಪಾತ್ರೆಗಳು

22. ವಿದ್ಯುಚ್ಛಕ್ತಿ

23. ಮೀನಿನ ತಳಿ, ಪ್ರಾನ್ ತಳಿ, ಸೀಗಡಿ ತಳಿ, ಮೀನುಹಿಡಿಯುವ ಬಲೆ ಮತ್ತು ದಾರ; ದೋಣಿಗಳು ಟ್ರಾಲರ್‌ಗಳು ಹಾಗೂ ಇತರ ಯಾಂತ್ರಿಕ ದೋಣಿಗಳನ್ನು ಹೊರತುಪಡಿಸಿದಂತೆ ಬಲೆ-ಚೀಲಗಳು ಮತ್ತು ಕಿವಿರು ಬಲೆಗಳು ಒಳಗೊಂಡಂತೆ ಮೀನುಗಾರಿಕೆ ಸಲಕರಣೆಗಳು.

24. ತಾಜಾ ಹಾಲು ಹಾಗೂ ಪಾಶ್ಚೀಕೃತ ಹಾಲು

25. ತಾಜಾ ಸಸಿಗಳು, ಎಳೆಸಸಿಗಳು, ತಾಜಾ ಹೂಗಳು, ಬಾಳೆ ಎಲೆಗಳು, ಪತ್ರಾವಳಿ (ಊಟದ ಎಲೆ) ಹಾಗೂ ಅವುಗಳ ಉತ್ಪನ್ನಗಳು.

26. ತಾಜಾ ತರಕಾರಿಗಳು ಹಾಗೂ ತಾಜಾ ಹಣ್ಣುಗಳು

27. ಬೆಳ್ಳುಳ್ಳಿ, ಶುಂಠಿ, ಹಸಿಮೆಣಸಿನಕಾಯಿ, ಈರುಳ್ಳಿ, ಆಲೂಗಡ್ಡೆ, ಗೆಣಸು, ಮರಗೆಣಸು ಮತ್ತು ಅವುಗಳ ಬಿತ್ತನೆ ಬೀಜಗಳು.

28. (ಹಸಿ ಅಥವಾ ಒಣಗಿದ) ಹುಲ್ಲು

29. [3][ಎಲ್ಲ ಸಂಯುಕ್ತಗಳನ್ನು ಒಳಗೊಂಡಂತೆ ಮಾನವರಕ್ತ][3]

30. ಬೆಲ್ಲ

31. ತಯಾರಿಸಿದ ವಸ್ತುಗಳು ಸೇರಿದಂತೆ ಖಾದಿ ಸಿದ್ಧ ಉಡುಪುಗಳು; ಅಧಿಸೂಚಿಸಬಹುದಾದಂತೆ ಖಾದಿ ಮತ್ತು ಗ್ರಾಮೋದ್ಯಮಗಳಿಂದ ಮಾರಾಟ ಮಾಡಲಾದ ಇತರ ಸರಕುಗಳು

32. ಕುಂಕುಮ, ಬಿಂದಿ ಹಾಗೂ ಸಿಂಧೂರ

33. ಪ್ರೆಸ್ ಮಾಡಿದ ಅಥವಾ ಹಚ್ಚಿದ ಎಲೆಗಳ ತಟ್ಟೆಗಳು ಮತ್ತು ಬಟ್ಟಲುಗಳು

34. [1][XXX][1]

1. 2014ರ ಅಧಿನಿಯಮ ಸಂಖ್ಯೆ 15ರ ದಿನಾಂಕ: 1.3.2014ರಿಂದ ಬಿಟ್ಟುಬಿಡಲಾಗಿದೆ.

35. ಲಾಟರಿ ಟಿಕೆಟ್‌ಗಳು

36. [3][ಕ್ಯೂರ್ಡ್ ಅಥವಾ ಫ್ರೋಜನ್ ಅಲ್ಲದ][3] ಕೋಳಿ, ಮೀನು, ಪ್ರಾನ್, ಸೀಗಡಿ ಹಾಗೂ ಲಾಬ್‌ಸ್ಟರ್‌ಗಳ ಮಾಂಸಗಳನ್ನು ಒಳಗೊಂಡಂತೆ, ಮಾಂಸ; ಮೊಟ್ಟೆಗಳು, ಕೋಳಿಗಳನ್ನು ಒಳಗೊಂಡಂತೆ, ಆದರೆ ಕುದುರೆಗಳನ್ನು ಹೊರತುಪಡಿಸಿದಂತೆ ಜಾನುವಾರುಗಳು; ಕಚ್ಚಾ ಉಣ್ಣೆ.

37. ರಾಷ್ಟ್ರಧ್ವಜ

38. ಸರ್ಕಾರಿ ಖಜಾನೆಗಳಿಂದ ಮತ್ತು ಅಧಿಕೃತ ಮಾರಾಟಗಾರರಿಂದ ಮಾರಾಟ ಮಾಡಲಾದ ನಾನ್‌ಜುಡೀಶಿಯಲ್ ಸ್ಟಾಂಪ್ ಪೇಪರ್; ಸರ್ಕಾರದಿಂದ ಮಾರಾಟ ಮಾಡಲಾಗುವ ಅಂಚೆ ಲಕೋಟೆಗಳು, ಅಂಚೆ ಕಾರ್ಡುಗಳು ಒಳಗೊಂಡಂತೆ ಶುಭಾಶಯ ಪತ್ರಗಳು ಹಾಗೂ ಸ್ಟಾಂಪುಗಳಂಥ ಅಂಚೆ ವಸ್ತುಗಳು; ಭಾರತೀಯ ರಿಜರ್ವ್ ಬ್ಯಾಂಕಿಗೆ ಮಾರಾಟ ಮಾಡಿದ ರೂಪಾಯಿ ನೋಟು; ಬಿಡಿ ಅಥವಾ ಪುಸ್ತಕ ರೂಪದಲ್ಲಿಯ ಚೆಕ್‌ಗಳು.

39. ಸಾವಯವ ಗೊಬ್ಬರ, ಕಾಂಪೋಸ್ಟ್ ಗೊಬ್ಬರ, ಮೀನುಗೊಬ್ಬರ ಹಾಗೂ ಕೋಳಿ ಗೊಬ್ಬರ.

40. ಹಪ್ಪಳ

41. ಸ್ಪೆಷಲ್ ಬಾಯ್ಲಿಂಗ್ ಸ್ಪಿರಿಟ್ ಸೇರಿದಂತೆ ಪೆಟ್ರೋಲ್

42. [1][XXX][1]

1. 2007ರ ಅಧಿನಿಯಮ ಸಂಖ್ಯೆ 6ರ ಮೂಲಕ ದಿನಾಂಕ: 1.4.2007 ರಿಂದ ಬಿಟ್ಟುಬಿಡಲಾಗಿದೆ.

43. ಉಪ್ಪು

44. ಶೀಥಲೀಕೃತ ವೀರ್ಯವನ್ನು ಒಳಗೊಂಡಂತೆ ವೀರ್ಯ

45. ರೇಷ್ಮೆ ಹುಳು ಮೊಟ್ಟೆಗಳು, ರೇಷ್ಮೆ ಹುಳು ಮರಿಗಳು, ರೇಷ್ಮೆ ಗೂಡುಗಳು ಹಾಗೂ ಕಚ್ಚಾ ರೇಷ್ಮೆ ನೂಲು ಸೇರಿದಂತೆ ಆದರೆ ದೇಶದ ಹೊರಗಿನಿಂದ ಆಮದು ಮಾಡಿಕೊಂಡ ಕಚ್ಚಾ ರೇಷ್ಮೆಯನ್ನು ಹೊರತುಪಡಿಸಿ ಕಚ್ಚಾ ರೇಷ್ಮೆ.

46. ಸ್ಲೇಟುಗಳು, ಬಳಪ ಮತ್ತು ಸೀಮೆಸುಣ್ಣದ ಕ್ರೇಯಾನ್‌ಗಳು

47. [2][[1][XXX][1]][2]

1. 2012ರ ಅಧಿನಿಯಮ ಸಂಖ್ಯೆ 17ರ ಮೂಲಕ ದಿನಾಂಕ: 8.4.2011 ರಿಂದ ಪ್ರತಿಯೋಜಿಸಲಾಗಿದೆ.
2. 2013ರ ಅಧಿನಿಯಮ ಸಂಖ್ಯೆ 54ರ ಮೂಲಕ ದಿನಾಂಕ: 1.8.2013 ರಿಂದ ಬಿಟ್ಟುಬಿಡಲಾಗಿದೆ.

48. ಕಬ್ಬು

49. ಎಳನೀರು

50. [1][XXX][1]

1. 2007ರ ಅಧಿನಿಯಮ ಸಂಖ್ಯೆ 6ರ ಮೂಲಕ ದಿನಾಂಕ: 1.4.2007 ರಿಂದ ಬಿಟ್ಟುಬಿಡಲಾಗಿದೆ.

51. ಹೆಂಡ, ನೀರಾ ಹಾಗೂ ಸಾರಾಯಿ

52. ಬ್ರ್ಯಾಂಡ್ ಇರದ ಪೊರಕೆ ಕಡ್ಡಿಗಳು

53. ವಿಭೂತಿ

54. i) ಇಂಗಾಲಾಮ್ಲ ಮಿಶ್ರಿತ ನೀರು, ಖನಿಜ ನೀರು, ಭಟ್ಟಿ ಇಳಿಸಿದ ಡಿಸ್ಟಿಲ್ ನೀರು, ಔಷಧೀಯ ನೀರು, ಅಯೋನಿಕ್ ನೀರು, ಬ್ಯಾಟರಿ ನೀರು ಹಾಗೂ ಖನಿಜ ರಹಿತಗೊಳಿಸಿದ ನೀರು; ಮತ್ತು

    ii) ಸೀಲು ಮಾಡಿದ ಕಂಟೇನರುಗಳಲ್ಲಿ ಮಾರಾಟ ಮಾಡಿದ ನೀರು

    – ಇವುಗಳನ್ನು ಹೊರತುಪಡಿಸಿದ ನೀರು.][1]

1. 2005ರ ಅಧಿನಿಯಮ ಸಂಖ್ಯೆ 27ರ ಮೂಲಕ ದಿನಾಂಕ: 7.6.2005 ರಿಂದ ಪ್ರತಿಯೋಜಿಸಲಾಗಿದೆ.
2. 2006ರ ಅಧಿನಿಯಮ ಸಂಖ್ಯೆ 4ರ ಮೂಲಕ ದಿನಾಂಕ: 1.4.2006 ರಿಂದ ಸೇರಿಸಲಾಗಿದೆ.
3. 2006ರ ಅಧಿನಿಯಮ ಸಂಖ್ಯೆ 4ರ ಮೂಲಕ ದಿನಾಂಕ: 1.4.2006 ರಿಂದ ಪ್ರತಿಯೋಜಿಸಲಾಗಿದೆ.

## ಎರಡನೇ ಅನುಸೂಚಿ

### ಶೇಕಡಾ ಒಂದರ ದರದಲ್ಲಿ ತೆರಿಗೆಗೆ ಗುರಿಯಾಗತಕ್ಕ ಸರಕುಗಳು

[4(1)(ಎ)(i)ನೇ ಪ್ರಕರಣ]

| ಕ್ರಮ ಸಂಖ್ಯೆ | ಸರಕುಗಳ ವಿವರ |
|---|---|
| 1 | 2 |
| 1. | ಚಿನ್ನ ಅಥವಾ ಬೆಳ್ಳಿ ಗಟ್ಟಿಗಳು ಹಾಗೂ ನಾಣ್ಯಗಳು |
| [1][2. | XXX |
| [3. | XXX][1] |

1. 2011ರ ಅಧಿನಿಯಮ ಸಂಖ್ಯೆ 12ರ ಮೂಲಕ ದಿನಾಂಕ: 1.4.2011 ರಿಂದ ಬಿಟ್ಟುಬಿಡಲಾಗಿದೆ.

## [1][ಮೂರನೇ ಅನುಸೂಚಿ

[1][XXX] [1]

1. 2010ರ ಅಧಿನಿಯಮ ಸಂಖ್ಯೆ 4ರ ಮೂಲಕ ದಿನಾಂಕ: 1.4.2010 ರಿಂದ ಬಿಟ್ಟುಬಿಡಲಾಗಿದೆ.

[4(1)(ಎ)(ii)ನೇ ಪ್ರಕರಣ]

| ಕ್ರಮ ಸಂಖ್ಯೆ | ಸರಕುಗಳ ವಿವರ |
|---|---|
| 1 | 2 |
| 1. | ಕೈಯಿಂದ ನಡೆಸದಿರುವ ಅಥವಾ ಪ್ರಾಣಿಗಳಿಂದ ಎಳೆಸದಿರುವ ಕೃಷಿ ಉಪಕರಣಗಳು |
| 2. | ಹಾರು ಬೂದಿ (ಫ್ಲೈಆ್ಯಷ್) ಇಟ್ಟಿಗೆಗಳು, ರಿಪ್ರಾಕ್ಟರಿ ಇಟ್ಟಿಗೆಗಳು ಮತ್ತು ಅಂತಹವುಗಳನ್ನು ಒಳಗೊಂಡಂತೆ ಎಲ್ಲ ಬಗೆಯ ಇಟ್ಟಿಗೆಗಳು; ಡಾಂಬರು ಲೇಪಿತ ಮೇಲ್ಹಾವಣಿ ಹಾಳೆಗಳು, ಮಣ್ಣಿನ ಹೆಂಚುಗಳು. |
| 3. | (ಸೀಲು ಮಾಡಿದ ಕಂಟೇನರುಗಳಲ್ಲಿರುವ ಅಥವಾ ಇತರ ರೀತಿಯಲ್ಲಿರುವ) ಹಣ್ಣಿನ ಜಾಮ್, ಜಲ್ಲಿ, ಉಪ್ಪಿನಕಾಯಿ, ಫ್ರೂಟ್ ಸ್ಕ್ವಾಷ್, ಪೇಸ್ಟ್, ಹಣ್ಣಿನ ಪಾನೀಯ ಮತ್ತು ಹಣ್ಣಿನ ರಸ ಒಳಗೊಂಡಂತೆ ಸಂಸ್ಕರಿಸಿದ ಎಲ್ಲಾ ಹಣ್ಣುಗಳು ಮತ್ತು ತರಕಾರಿಗಳು. |
| 4. | ಲಡಿಗಳಲ್ಲಿರುವ ಹತ್ತಿ ಮತ್ತು ರೇಷ್ಮೆ ನೂಲುಗಳನ್ನು ಹೊರತುಪಡಿಸಿ, ಎಲ್ಲ ಬಗೆಯ ನೂಲು; ಹೊಲಿಗೆ ದಾರ. |
| 5. | [2][5 ಪ್ರೆಷರ್ ಕುಕ್ಕರು ಮತ್ತು ಪ್ಯಾನ್‌ಗಳೂ ಸೇರಿದಂತೆ [4][XXX][4] ಎಲ್ಲಾ ಪಾತ್ರೆಗಳು ಆದರೆ ಅಡಿಗೆ ಮನೆಯಲ್ಲಿ ಬಳಸುವ ಅಥವಾ ಗೃಹೋಪಯೋಗಿಯಾಗಿ ಬಳಸುವ ಸ್ಟೋವ್‌ಗಳು, ಟ್ರೇಗಳು, ಬಾಸ್ಕೆಟ್‌ಗಳು ಮತ್ತು ಇತರ ಕಂಟೇನರುಗಳು, ಪೀಠೋಪಕರಣ, ಸಲಕರಣೆಗಳು, ಅಳವಡಿಕೆಗಳು ಮತ್ತು ಸಲಕರಣೆಗಳು ಹಾಗೂ ಬೆಲೆಬಾಳುವ ಲೋಹಗಳಿಂದ ಮಾಡಿದ ಪಾತ್ರೆಗಳು ಹೊರತುಪಡಿಸಿದಂತೆ.][2] |
| 6. | ಪ್ರಾಣಿಗಳ ಕೂದಲು |
| 7. | ಅಡಿಕೆ ಮತ್ತು ಅಡಿಕೆ ಪುಡಿ |
| 8. | ಬಿದಿರಿನ ದಬ್ಬೆಗಳು ಮತ್ತು ಕಡ್ಡಿಗಳು ಒಳಗೊಂಡಂತೆ ಬಿದಿರು (ಬಂಬು) ಮತ್ತು ಬೆತ್ತ |
| 9. | ಬೇರಿಂಗ್‌ಗಳು; [3][ಮೋಟಾರು ವಾಹನಗಳ ಭಾಗಗಳನ್ನು ಹೊರತುಪಡಿಸಿ][3] ಎಂದರೆ:<br>(1) ಬಾಲ್ ಬೇರಿಂಗ್‌ಗಳು<br>(2) ಕೋನ್ ಮತ್ತು ಟ್ಯಾಪರ್ಡ್ ರೋಲರ್ ಜೋಡಣೆಗಳು ಒಳಗೊಂಡಂತೆ, ಟ್ಯಾಪರ್ಡ್ ರೋಲರ್ ಬೇರಿಂಗ್‌ಗಳು |

(3) ಸ್ಫೆರಿಕಲ್ ರೋಲರ್ ಬೇರಿಂಗ್‌ಗಳು

(4) ನೀಡಲ್ ರೋಲರ್ ಬೇರಿಂಗ್‌ಗಳು

(5) ಇತರ ಸಿಲಿಂಡರಿಕಲ್ ರೋಲರ್ ಬೇರಿಂಗ್‌ಗಳು

(6) ಸಂಯೋಜಿತ ಬಾಲ್ ಅಥವಾ ರೋಲರ್ ಬೇರಿಂಗ್‌ಗಳು ಒಳಗೊಂಡಂತೆ, ಇತರೆ

(7) ಪ್ಲಮ್ಮರ್ ಬ್ಲಾಕ್‌ಗಳು, ಬೇರಿಂಗ್ ಹೌಸಿಂಗ್‌ಗಳು, ಲೋಕೇಟ್ ರಿಂಗ್‌ಗಳು ಮತ್ತು ಕವರ್‌ಗಳು, ಅಡಾಪ್ಟರ್ ವಿತ್‌ಡ್ರಾವಲ್ ಸ್ಲೀವ್‌ಗಳು, ಲಾಕ್‌ನಟ್‌ಗಳು, ಲಾಕ್ ವಾಷರ್‌ಗಳು, ಕ್ಲಾಂಪ್ಸ್ ಮತ್ತು ರೋಲಿಂಗ್ ಎಲಿಮೆಂಟ್‌ಗಳು

10. ಬೀಡಿ ಎಲೆಗಳು

11. ಜೇನುಗೂಡು

12. ಪಟ್ಟಿ (ಬೆಲ್ಟಿಂಗ್) ಗಳು ಎಂದರೆ, ಯಾವುದೇ ಬಟ್ಟೆಗಳಂಥ ವಸ್ತುವಿನೊಂದಿಗೆ ಸೇರಿರುವ ಅಥವಾ ಸೇರಿರದ ವಲ್ಕನೈಸ್ಡ್ ರಬ್ಬರಿನ ಟ್ರಾನ್ಸ್‌ಮಿಷನ್, ಕನ್ವೇಯರ್ ಅಥವಾ ಎಲಿವೇಟರ್ ಬೆಲ್ಟ್‌ಗಳು ಅಥವಾ ಬೆಲ್ಟಿಂಗ್.

13. ಬೈಸಿಕಲ್‌ಗಳು, ಟ್ಯಾಂಡಮ್ ಸೈಕಲ್‌ಗಳು, ಸೈಕಲ್ ಜೋಡಣೆಗಳು, ಸೈಕಲ್ ರಿಕ್ಷಾಗಳು, ಮಕ್ಕಳ ತ್ರಿಚಕ್ರ ಸೈಕಲ್‌ಗಳು ಮತ್ತು ಅಂಥವೇ ವಸ್ತುಗಳು ಮತ್ತು ಟೈರ್‌ಗಳು, ಟ್ಯೂಬುಗಳು ಮತ್ತು ಫ್ಲಾಪ್‌ಗಳೂ ಒಳಗೊಂಡಂತೆ ಅವುಗಳ ಭಾಗಗಳು ಮತ್ತು ಉಪ-ಸಾಧನಗಳು.

14. ಬಯೋಮಾಸ್ ಬ್ರಿಕೆಟ್‌ಗಳು

15. ಬಿಟ್ಯುಮೆನ್ [3][ಮತ್ತು ಕೋಲ್ಡ್‌ಟಾರ್][3]

16. ಮೂಳೆಪುಡಿ

17. ಅಮೂಲ್ಯ ಲೋಹಗಳ ಹೊರತಾಗಿ, ಕಬ್ಬಿಣ ಮತ್ತು ಉಕ್ಕು, ಅಲ್ಯುಮಿನಿಯಂ, ಪ್ಲಾಸ್ಟಿಕ್ ಅಥವಾ ಇತರ ವಸ್ತುಗಳಿಂದ ತಯಾರಿಸಿದ ಬಕೆಟ್‌ಗಳು

18. ಬಲ್ಕ ಡ್ರಗ್‌ಗಳು

19. ಮೇಣದ ಬತ್ತಿಗಳು

20. ಅಧಿಸೂಚಿಸಬಹುದಾದ ಬಂಡವಾಳ ಸರಕುಗಳು

21. ಸೆಂಟ್ರಿಫ್ಯೂಗಲ್, ಮನೋಬ್ಲಾಕ್ ಮತ್ತು ಸಬ್‌ಮರಿಸಬಲ್ ಪಂಪ್‌ಸೆಟ್‌ಗಳು ಮತ್ತು ಅವುಗಳ ಭಾಗಗಳು.

22. ಬಳಪದ ಕಡ್ಡಿ (ಚಾಕ್ ಸ್ಟಿಕ್)

[1][23. ರಸಗೊಬ್ಬರಗಳು ಮತ್ತು ರಸಗೊಬ್ಬರ ಮಿಶ್ರಣಗಳು, ಜೈವಿಕ ಗೊಬ್ಬರಗಳು, ಸೂಕ್ಷ್ಮಾಣು ಪೋಷಕಾಂಶಗಳು, ಜಿಪ್ಸಂ, ಸಸ್ಯಬೆಳವಣಿಗೆ ಪ್ರವರ್ಧಕಗಳು ಮತ್ತು ಸಸ್ಯ ಬೆಳವಣಿಗೆ ನಿಯಂತ್ರಕಗಳು ; ದಂಶಕ ನಾಶಕಗಳು, ಶಿಲೀಂದ್ರನಾಶಕಗಳು, ಕಳೆನಾಶಕಗಳು ಮತ್ತು ಸಸಿನಾಶಕಗಳು ; ಕೀಟನಾಶಕಗಳು ಅಥವಾ ಪೀಡೆನಾಶಕಗಳು, ಆದರೆ ಕೃಷಿಯೇತರ ಅಥವಾ ತೋಟಗಾರಿಕೆಯೇತರ ಉದ್ದೇಶಗಳಿಗಾಗಿ ಬಳಸಲಾಗುವ ಫಿನೈಲ್, ಶೌಚಾಲಯ ಸ್ವಚ್ಛಗೊಳಿಸುವ ದ್ರಾವಕಗಳು, ನೆಲದ ಶುದ್ಧೀಕಾರಕಗಳು, ಸೊಳ್ಳೆ ಬತ್ತಿಗಳು, ಸೊಳ್ಳೆ ನಿವಾರಕಗಳು, ಮತ್ತು ಅಂಥವುಗಳನ್ನು ಹೊರತುಪಡಿಸಿ.][1]

1. 2008ರ ಅಧಿನಿಯಮ ಸಂಖ್ಯೆ 5ರ ಮೂಲಕ ದಿನಾಂಕ: 1.8.2008 ರಿಂದ ಪ್ರತಿಯೋಜಿಸಲಾಗಿದೆ.

24. ಕಾಫಿ ಬೀನ್ಸ್‌ಗಳು ಮತ್ತು ಬೀಜಗಳು (ಕಚ್ಚಾ ಅಥವಾ ಹುರಿದ); ಕೋಕೊ ಕಾಯಿ ಮತ್ತು ಬೀಜಗಳು; ಹಸಿ ಚಹ ಎಲೆಗಳು ಮತ್ತು ಚಿಕೋರಿ.

25. ರಬ್ಬರಿನಿಂದ ಕೂಡಿದ ತೆಂಗಿನ ನಾರು ಉತ್ಪನ್ನಗಳನ್ನು ಹೊರತುಪಡಿಸಿ, ತೆಂಗಿನ ನಾರು ಮತ್ತು ತೆಂಗಿನ ನಾರಿನ ಉತ್ಪನ್ನಗಳು.

26. ಬಾಚಣಿಕೆಗಳು

27. ಕಾಟನ್ ವೇಸ್ಟ್ ಮತ್ತು ಕಾಟನ್ ಯಾರ್ನ್ ವೇಸ್ಟ್

28. ಕ್ರುಸಿಬಲ್‌ಗಳು

29. ಕಾಗದದ ಮತ್ತು ಪ್ಲಾಸ್ಟಿಕಿನ ಲೋಟಗಳು ಮತ್ತು ತಟ್ಟೆಗಳು

[4][30. XXX][4]

[30. ಹೆಚ್.ಡಿ.ಪಿ.ಇ. ಮತ್ತು ಇತರ ಪ್ಲಾಸ್ಟಿಕ್‌ನಿಂದ ನೇಯ್ದ ಜವಳಿಗಳು.][1]

1. 2012ರ ಅಧಿನಿಯಮ ಸಂಖ್ಯೆ 17ರ ಮೂಲಕ ದಿನಾಂಕ: 1.4.2012 ರಿಂದ ಸೇರಿಸಲಾಗಿದೆ.

31. ಖಾದ್ಯ ತೈಲಗಳು (ನಾನ್‌ರಿಫೈನ್ಡ್ ಮತ್ತು ರಿಫೈನ್ಡ್), ಆದರೆ ಪ್ರತಿಯೊಂದು 200 ಗ್ರಾಂ ಅಥವಾ 200 ಮಿ.ಲೀ.ಗಳ ಅಥವಾ ಅದಕ್ಕಿಂತ ಕಡಿಮೆ ಪ್ರಮಾಣದ ಗ್ರಾಹಕ ಸ್ಯಾಶೆಗಳಲ್ಲಿ, ಬಾಟಲಿಗಳಲ್ಲಿ ಅಥವಾ ಟಿನ್‌ಗಳಲ್ಲಿ ಮಾರಾಟ ಮಾಡಿದ, ಅಂಥ ಗ್ರಾಹಕ ಧಾರಕಗಳನ್ನು ಒಂದೇ ಧಾರಕದಲ್ಲಿ ಇಟ್ಟು ಸಗಟಾಗಿ ಮಾರಾಟ ಮಾಡಿದವುಗಳನ್ನೂ ಒಳಗೊಂಡಂತೆ ಕೊಬ್ಬರಿ ಎಣ್ಣೆಯನ್ನು ಹೊರತುಪಡಿಸಿ, ಎಣ್ಣೆ ಸಹಿತವಾದ ಹಿಂಡಿಗಳು

32. ಕಸೂತಿಯ ಅಥವಾ ಜರಿ ವಸ್ತುಗಳು, ಎಂದರೆ ಇಮಿ, ಜರಿ, ಕಸಬ್, ಸೈಮಾ, ದಬ್ಕ, ಚುಮ್ಕಿ, ಗೋಟ, ಸಿತಾರ, ನಕ್ಸಿ, ಕೋರಾ, ಗಾಜುಮಣಿ, ಬಡಿಯಾ, ಗಿಜಲ್.

33. ನೋಟ್ ಪುಸ್ತಕಗಳು, ವಿದ್ಯಾರ್ಥಿ ನೋಟ್ ಪುಸ್ತಕಗಳು, ಗ್ರ್ಯಾಫ್ ಪುಸ್ತಕಗಳು ಮತ್ತು ಪ್ರಯೋಗಾಲಯ ನೋಟ್ ಪುಸ್ತಕಗಳು

34. ಎಕ್ಸಿಮ್ ಸ್ಕ್ರಿಪ್‌ಗಳು, ಆರ್‌ಇಪಿ ಲೈಸೆನ್ಸ್‌ಗಳು, ವಿಶೇಷ ಆಮದು ಲೈಸೆನ್ಸ್‌ಗಳು (ಎಸ್‌ಐಎಲ್), ಮೌಲ್ಯಾಧಾರಿತ ಮುಂಗಡ ಲೈಸೆನ್ಸ್‌ಗಳು (ವಿಎಬಿಎಲ್), ರಫ್ತು ಕೋಟಾಗಳು, ಡಿಇಪಿಬಿ ಲೈಸೆನ್ಸ್‌ಗಳು, ಕೃತಿ ಸ್ವಾಮ್ಯಗಳು, ಪೇಟೆಂಟ್‌ಗಳು ಮತ್ತು [1][ಯಾವುದೇ ಹೆಸರಿನಿಂದ ಕರೆಯಬಹುದಾದ ಸಾಫ್ಟ್‌ವೇರ್ ಲೈಸನ್ಸುಗಳನ್ನು ಒಳಗೊಂಡಂತೆ][1] ಅಂಥವುಗಳು

1. 2007ರ ಅಧಿನಿಯಮ ಸಂಖ್ಯೆ 6ರ ಮೂಲಕ ದಿನಾಂಕ: 1.4.2007 ರಿಂದ ಸೇರಿಸಲಾಗಿದೆ.

35. ಹಾಲುಣಿಸುವ ಬಾಟಲಿಗಳು ಮತ್ತು ನಿಪ್ಪಲ್‌ಗಳು

36. ಎಲ್ಲಾ ಬಗೆಯ ಫೈಬರ್‌ಗಳು ಮತ್ತು ಫೈಬರ್ ವೇಸ್ಟ್

37. ಫೈರ್‌ಕ್ಲೇ, ಜೇಡಿಮಣ್ಣು, ಇದ್ದಿಲು ಬೂದಿ, ಕೋಲ್ ಬಾಯ್ಲರ್ ಬೂದಿ, ಹಾರು ಬೂದಿ, ಕೋಲ್ ಸಿಂಡರ್ ಬೂದಿ, ಇದ್ದಿಲು ಪುಡಿ ಮತ್ತು ಕ್ಲಿಂಕರ್.

38. ಗೋಧಿಯ ಹಿಟ್ಟು, ಮೈದಾ ಮತ್ತು ರವೆ; ಅಕ್ಕಿಯ ಹಿಟ್ಟು ಮತ್ತು ರವೆ; [2][ಮೆಕ್ಕೆ ಜೋಳದ ರವೆ ಮತ್ತು ಅವಲಕ್ಕಿ][2], ದ್ವಿದಳ ಧಾನ್ಯಗಳ ಹಿಟ್ಟು.

39. ಹುರಿಗಡಲೆ

40. ಹ್ಯಾಂಡ್ ಪಂಪ್‌ಗಳು ಮತ್ತು ಅವುಗಳ ಭಾಗಗಳು ಮತ್ತು ಜೋಡಣೆಗಳು

41. ಪೀಠೋಪಕರಣಗಳನ್ನು ಹೊರತುಪಡಿಸಿದಂತೆ ಕರಕುಶಲ ವಸ್ತುಗಳು

42. ಜೇನುತುಪ್ಪ

43. ಮೆದುನೀರ್ಕೊಳವೆಗಳು (ಹೋಸ್ ಪೈಪ್‌ಗಳು) ಮತ್ತು ಅವುಗಳ [3][ಮೋಟಾರು ವಾಹನಗಳ ಭಾಗಗಳನ್ನು ಹೊರತುಪಡಿಸಿ][3] ಜೋಡಣೆಗಳು

44. ಹೊಸೈರಿ ಸರಕುಗಳು

45. ಆಹಾರ ಧಾನ್ಯಗಳ ಮತ್ತು ದ್ವಿದಳ ಧಾನ್ಯಗಳ ಸಿಪ್ಪೆ ಮತ್ತು ಹೊಟ್ಟು

46. ಐಸ್ (ಮಂಜುಗಡ್ಡೆ)

47. ಜೇಡಿ ಮಣ್ಣಿನ ಮೂರ್ತಿಗಳು ಮತ್ತು ಜೇಡಿ ಮಣ್ಣಿನ ಹಣತೆಗಳು

48. ನಕಲಿ ಆಭರಣಗಳು, ಕೃತಕ ಮಣಿಗಳು ಮತ್ತು ಹೇರ್ ಪಿನ್‌ಗಳು

49. ಸಾಂಬ್ರಾಣಿ ಮತ್ತು ಲೋಬಾನಗಳು ಒಳಗೊಂಡಂತೆ ಅಗರಬತ್ತಿ, ಧೂಪಕಡ್ಡಿ ಮತ್ತು ಧೂಪದ ಬತ್ತಿ ಎಂದು ಸಾಮಾನ್ಯವಾಗಿ ಕರೆಯಲಾಗುವ ಸುಗಂಧ ಕಡ್ಡಿಗಳು

50. ಭಾರತೀಯ ಸಂಗೀತ ವಾದ್ಯಗಳು ಎಂದರೆ, ವೀಣೆ, ವೈಯೋಲಿನ್, ತಂಬೂರಿ, ಮೃದಂಗ, ಘಟಂ, ಖಂಜರ, ಹಾರ್ಮೋನಿಯಂ, ಕೊಳಲು, ಸ್ವಾರ್, ಸರೋದ್, ಸಂತೂರ್, ದಿಲ್‌ರೂಬಾ, ನಾದಸ್ವರ, ಡೋಲು, ತಬಲಾ, ಶಹನಾಯ್, ಪಕ್‌ವಾಜ್, ವಿಚಿತ್ರ ವೀಣೆ, ಗೋಟುವಾದ್ಯ, ಮೋರ್‌ಸಿಂಗ್, ಚಂಡೆ, ತ್ರೈಂಗಲ್, ರುದ್ರವೀಣಾ ಮತ್ತು ಸಾರಂಗಿ ಮತ್ತು ಅವುಗಳ ಭಾಗಗಳು ಮತ್ತು ಉಪಸಾಧನ ಸಾಮಗ್ರಿಗಳು.

51. ಅಧಿಸೂಚಿಸಬಹುದಾದ ಕೈಗಾರಿಕಾ ಕಚ್ಚಾವಸ್ತುಗಳು ಮತ್ತು ಪ್ಯಾಕಿಂಗ್ ವಸ್ತುಗಳು.

[1][52. 1100 ವೋಲ್ಟ್‌ಗಳವರೆಗಿನ ಉಪಯೋಗಕ್ಕಾಗಿ ಆರು ಚದರ ಮಿಲಿ ಮೀಟರುಗಳ ವರೆಗಿನ ತಾಮ್ರ ಮತ್ತು ಅಲ್ಯೂಮಿನಿಯಂ ಸಿಂಗಲ್ ಕೋರ್ ಪಿವಿಸಿ ಕೇಬಲ್‌ಗಳನ್ನು ಹೊರತುಪಡಿಸಿ ಕೈಗಾರಿಕಾ ಕೇಬಲ್‌ಗಳು.][1]

1. 2007ರ ಅಧಿನಿಯಮ ಸಂಖ್ಯೆ 6ರ ಮೂಲಕ ದಿನಾಂಕ: 1.4.2007 ರಿಂದ ಪ್ರತಿಯೋಜಿಸಲಾಗಿದೆ.

53. ಅಧಿಸೂಚಿಸಬಹುದಾದ ದೂರಸಂಪರ್ಕ ಸಲಕರಣೆಗಳೂ ಸೇರಿದಂತೆ ಮಾಹಿತಿ ತಂತ್ರಜ್ಞಾನ ಉತ್ಪನ್ನಗಳು.

54. ಸೀಮೆ ಎಣ್ಣೆ ಲ್ಯಾಂಪ್‌ಗಳು ಮತ್ತು ಲಾಂದ್ರಗಳು, ಪೆಟ್ರೋಮ್ಯಾಕ್ಸ್ ಮತ್ತು ಗ್ಲಾಸ್ ಚಿಮಿಣಿ

55. ಸಾರ್ವಜನಿಕ ವಿತರಣಾ ಪದ್ಧತಿಯ (ಪಿಡಿಎಸ್) ಮೂಲಕ ಮಾರಾಟ ಮಾಡಿದ ಸೀಮೆಎಣ್ಣೆ.

56. ಖೋವಾ

57. ಗಾಳಿಪಟಗಳು

58. ಲಿಗ್ನೈಟ್.

59. ಸುಣ್ಣ, ಸುಣ್ಣದ ಕಲ್ಲು, ಸುಣ್ಣದ ಉತ್ಪನ್ನಗಳು, ಡಾಲೊಮೈಟ್ ಮತ್ತು ಇತರ ಸ್ವಚ್ಛಗೊಳಿಸುವ ವಸ್ತುಗಳು.

[1][59–ಎ. ಬೀರ್, ಫೆನ್ನಿ, ಲಿಕ್ವೇರ್ ಹಾಗೂ ವೈನನ್ನು ಒಳಗೊಂಡಂತೆ ಮದ್ಯ][1]

1. 2014ರ ಅಧಿನಿಯಮ ಸಂಖ್ಯೆ 15ರ ಮೂಲಕ ದಿನಾಂಕ: 1.3.2014 ರಿಂದ ಸೇರಿಸಲಾಗಿದೆ.

60. ಔಷಧಿಯ ಮತ್ತು ಫಾರ್ಮಾಸ್ಯುಟಿಕಲ್ ತಯಾರಿಕೆಗಳು; ಔಷಧಗಳು ಮತ್ತು ಪ್ರಸಾಧನಗಳ ಅಧಿನಿಯಮ, 1940ರ ಅಡಿಯಲ್ಲಿ ನೀಡಲಾದ ಲೈಸೆನ್ಸಿಗೆ ಅನುಸಾರವಾಗಿ ತಯಾರಿಸಲಾದ ಅಥವಾ ಆಮದು ಮಾಡಿಕೊಳ್ಳಲಾದ ಔಷಧೀಯ ಮುಲಾಮುಗಳು, ಐಪಿ–ಗ್ರೇಡಿನ ಲೈಟ್ ಲಿಕ್ವಿಡ್ ಪ್ಯಾರಾಫಿನ್, ವಾಡಿಂಗ್‌ಗಾಜುಗಳು; ವೈದ್ಯಕೀಯ ಶಸ್ತ್ರಚಿಕಿತ್ಸೆಯ, ದಂತ ಅಥವಾ ಪಶುವೈದ್ಯಕೀಯ ಉದ್ದೇಶಗಳಿಗಾಗಿನ ಬ್ಯಾಂಡೇಜ್‌ಗಳು ಮತ್ತು ಅದೇ ಬಗೆಯ ವಸ್ತುಗಳು; [2][ಸರ್ಜಿಕಲ್ ಗ್ಲೌಸ್‌ಗಳು ಮತ್ತು ಸೂಜಿಗಳೂ ಒಳಗೊಂಡಂತೆ ಸಿರಂಜ್‌ಗಳು][2] ರೋಗವನ್ನು ಪತ್ತೆ ಹಚ್ಚುವ ಅಥವಾ ಪ್ರಯೋಗಾಲಯದಲ್ಲಿ ಬಳಸುವ ಸಿದ್ಧಪಡಿಸಲಾದ ರಿಏಜಂಟ್‌ಗಳು ಒಳಗೊಂಡಂತೆ ರೋಗ ಪತ್ತೆ ಹಚ್ಚುವ ಅಥವಾ ಪ್ರಯೋಗಾಲಯ ರಿಏಜಂಟ್‌ಗಳು.

61. ವೈದ್ಯಕೀಯ ಸಲಕರಣೆಗಳು, ಸಾಧನಗಳು ಮತ್ತು ಇಂಪ್ಲಾಂಟ್‌ಗಳು.

62. ಆಯುರ್ವೇದ ಔಷಧಿಗಳ ತಯಾರಿಕೆಯಲ್ಲಿ ಬಳಸುವ ಔಷಧೀಯ ಸಸ್ಯಗಳು, ಬೇರುಗಳು, ಗಿಡಮೂಲಿಕೆ ಮತ್ತು ಮರದ ತೊಗಟೆಗಳು.

63. ಮಿಕ್ಸಡ್ ಪಿವಿಸಿ ಸ್ಟೆಬಿಲೈಸರ್ [1][;ಸರಕುಗಳ ಸಾಗಣೆಗಾಗಿ ಅಥವಾ ಪ್ಯಾಕಿಂಗಿಗಾಗಿ ಪ್ಲಾಸ್ಟಿಕ್ ಪೆಟ್ಟಿಗೆಗಳು, ಕೇಸುಗಳು ಮತ್ತು ಕ್ರೇಟುಗಳು][1]

1. 2008ರ ಅಧಿನಿಯಮ ಸಂಖ್ಯೆ 5ರ ಮೂಲಕ ದಿನಾಂಕ: 7.6.2005 ರಿಂದ ಸೇರಿಸಲಾಗಿದೆ ಎಂದು ಭಾವಿಸತಕ್ಕದ್ದು.

[2][64. ಸಂಪೂರ್ಣವಾಗಿ ಪ್ಲಾಸ್ಟಿಕ್‌ನಿಂದ ತಯಾರಿಸಿದ ಮತ್ತು ಸಿಂಗಲ್ ಮೌಲ್ಡ್ ಆಗಿರುವ ಮೌಲ್ಡ್ ಮಾಡಿದ ಪ್ಲಾಸ್ಟಿಕ್ ಪಾದರಕ್ಷೆಗಳು, ಹವಾಯಿ ಚಪ್ಪಲಿಗಳು (ರಬ್ಬರ್) ಮತ್ತು ಅವುಗಳ ಸ್ಟ್ರಾಪ್‌ಗಳು][2]

65. ನಾಪಾಸ್ಲ್ಯಾಬ್‌ಗಳು (ಒರಟು ನೆಲಹಾಸು ಕಲ್ಲುಗಳು) ಮತ್ತು ಶಹಬಾದ್ ಕಲ್ಲುಗಳು

66. ನಾನ್‌ಫೆರಸ್ ಕಾಸ್ಟಿಂಗ್‌ಗಳು

67. ನಾನ್‌ಫೆರಸ್ ಲೋಹಗಳು ಮತ್ತು ಮಿಶ್ರಲೋಹಗಳು; ಅಲ್ಯುಮಿನಿಯಂನ, ಹಿತ್ತಾಳೆಯ, ಕಂಚಿನ, ತಾಮ್ರದ, ಕ್ಯಾಡ್‌ಮಿಯಮ್ಮಿನ, ಸೀಸದ ಮತ್ತು ಸತುವಿನ ಗಟ್ಟಿಗಳು, ಸ್ಲ್ಯಾಬ್‌ಗಳು, ಬ್ಲಾಕ್‌ಗಳು, ಬಿಲೆಟ್‌ಗಳು ಹಾಳೆಗಳು, ಬಿಲ್ಲೆಗಳು, ಹೂಪ್‌ಗಳು, ಸ್ಟ್ರಿಪ್‌ಗಳು, ಬಾರ್‌ಗಳು, ಸರಳುಗಳು, ರೌಂಡ್‌ಗಳು, ಸ್ಕ್ವೇರ್‌ಗಳು, ಪ್ಲ್ಯಾಟ್‌ಗಳು ಮತ್ತು ಇತರೆ ಎಕ್ಸ್‌ಟ್ರೂಶನ್‌ಗಳು; ಲೋಹದ ಪುಡಿ, ಎಲ್ಲ ಬಗೆಯ ಮತ್ತು ಗ್ರೇಡ್‌ಗಳ ಲೋಹದ ಪೇಸ್ಟ್‌ಗಳು; ಮೆಟಲ್ ಸ್ಕ್ರ್ಯಾಪ್‌ಗಳು ಮತ್ತು ವೇಸ್ಟ್‌ಗಳು.

68. ಕ್ರಮಸಂಖ್ಯೆ 30 ರಲ್ಲಿ ನಿರ್ದಿಷ್ಟಪಡಿಸಿದವುಗಳ ಹೊರತಾಗಿ ಎಣ್ಣೆ ಕಾಳುಗಳು

[2][69. (i) ಅಮೋನಿಯಾ ಕಾಗದ, ಬ್ಲಾಟಿಂಗ್ ಕಾಗದ, ಕಾರ್ಬನ್ ಕಾಗದ, ಸೆಲೋಫೇನ್, ಪಿವಿಸಿ ಲೇಪಿತ ಕಾಗದ, ಸ್ಟೆನ್ಸಿಲ್ ಕಾಗದ, ಟಿಶ್ಯೂ ಕಾಗದ, ವಾಟರ್ ಪ್ರೂಫ್ ಕಾಗದ, ಆರ್ಟ್‌ಬೋರ್ಡ್‌ಗಳು, ಕಾರ್ಡ್ ಬೋರ್ಡ್‌ಗಳು, ಕಾರೋಗೇಟೆಡ್ ಬೋರ್ಡ್‌ಗಳು, ಡೂಪ್ಲೆ ಬೋರ್ಡ್‌ಗಳು, ಪಲ್ಪ್ ಬೋರ್ಡ್‌ಗಳು, ಸ್ಟ್ರಾ ಬೋರ್ಡ್‌ಗಳು, ಟ್ರಿಪ್ಲೆ ಬೋರ್ಡ್‌ಗಳು ಸೇರಿದಂತೆ ಅಂತಹವೇ ಎಲ್ಲ ಬಗೆಯ ಕಾಗದಗಳು ಆದರೆ ಫೋಟೋಗ್ರಾಫಿಕ್ ಕಾಗದ ಇದರಲ್ಲಿ ಸೇರುವುದಿಲ್ಲ.

(ii) ಅನುಪಯುಕ್ತ (ವೇಸ್ಟ್) ಕಾಗದ, ಪೇಪರ್ ವೇಸ್ಟ್ ಮತ್ತು ನ್ಯೂಸ್ ಪ್ರಿಂಟ್.][2]

70. ಇಲೆಕ್ಟ್ರಿಕ್ ಕಾಂಡಕ್ಟ್ ಕೊಳವೆ (ಪೈಪ್)ಗಳು ಮತ್ತು ಅದರ ಜೋಡಣೆಗಳನ್ನು ಹೊರತುಪಡಿಸಿ ಪೈಪ್‌ಗಳು, ಟ್ಯೂಬ್‌ಗಳು ಮತ್ತು ಎಲ್ಲ ಬಗೆಯ ಜೋಡಣೆಗಳು.

71. ಓದುವ ಪುಸ್ತಕಗಳ ಹೊರತಾಗಿ ಮುದ್ರಿತ ವಸ್ತುಗಳು, ಲೇಖನ ಸಾಮಗ್ರಿಗಳು ಎಂದರೆ, ಲೆಕ್ಕದ ಪುಸ್ತಕಗಳು, ಕಾಗದದ ಲಕೋಟೆ (ಎನ್‌ವೆಲಪ್) ಗಳು, ಡೈರಿಗಳು, ಕ್ಯಾಲೆಂಡರ್‌ಗಳು, ರೇಸ್‌ಕಾರ್ಡ್‌ಗಳು, ಕಾಟ್‌ಲಾಗ್‌ಗಳು, ಗ್ರೀಟಿಂಗ್ ಕಾರ್ಡ್‌ಗಳು, ಆಮಂತ್ರಣ ಕಾರ್ಡ್‌ಗಳು, ಹ್ಯೂಮರ್ ಪೋಸ್ಟ್ ಕಾರ್ಡುಗಳು, ಚಿತ್ರದಿಂದ ಕೂಡಿದ ಪೋಸ್ಟ್ ಕಾರ್ಡ್‌ಗಳು, ವಿಶೇಷ ಸಂದರ್ಭಗಳಿಗಾಗಿ ಕಾರ್ಡ್‌ಗಳು, ಫೋಟೋ ಮತ್ತು ಸ್ಟ್ಯಾಂಪ್ ಆಲ್ಬಮ್‌ಗಳು, ಕಂಪೂಟರ್ ಲೇಖನ ಸಾಮಗ್ರಿಗಳು.

72. ಟೋನರ್ ಮತ್ತು ಕಾರ್ಟ್‌ಟ್ರಿಜ್‌ಗಳನ್ನು ಹೊರತುಪಡಿಸಿದಂತೆ ಮುದ್ರಣ ಇಂಕ್

[2][73. ಕ್ಯೂರ್ ಮಾಡಿದ ಅಥವಾ ಶೀಥಲೀಕೃತ ಅಥವಾ ಸಂಸ್ಕರಿಸಿದ ಕೋಳಿ ಮಾಂಸ, ಮೀನು, ಪ್ರಾನ್, ಸೀಗಡಿ ಮತ್ತು ಲಾಬ್‌ಸ್ಟರ್‌ಗಳು ಒಳಗೊಂಡಂತೆ ಮಾಂಸ][2]

74. ಬಿದಿರಿನ, ಮರದ ಮತ್ತು ಕಾಗದದ ತಿರುಳು

75. ಕ್ರಮಸಂಖ್ಯೆ 30 ರಲ್ಲಿ ನಿರ್ದಿಷ್ಟಪಡಿಸಿದವುಗಳ ಹೊರತಾಗಿ ದ್ವಿದಳ ಧಾನ್ಯಗಳು

76. ರೈಲು ಬೋಗಿಗಳು, ಎಂಜಿನ್‌ಗಳು ಮತ್ತು ವ್ಯಾಗನ್‌ಗಳು ಮತ್ತು ಅವುಗಳ ಭಾಗಗಳು

77. ರಾಖಿ

78. ಸಿದ್ಧ ಉಡುಪುಗಳು, ಜವಳಿಯಿಂದ ತಯಾರಿಸಿದ ಬಟ್ಟೆಯ ದಿರಿಸುಗಳು ಮತ್ತು ಇತರ ವಸ್ತುಗಳು,-

(1) ಹೆಣಿಗೆ ಅಥವಾ ಕ್ರೋಶಾ ಮಾಡಿದ ಸಾಕ್ಸ್‌ಗಳು, ಸ್ಟಾಕಿಂಗ್‌ಗಳು, ಗ್ಲೋವ್‌ಗಳು, ಶಾಲುಗಳು, ಸ್ಕಾರ್ಫ್‌ಗಳು, ಮಫ್ಲರ್‌ಗಳು, ಮೆಂಟಿಲ್ಲಾಗಳು, ವೇಲ್‌ಗಳು, ಟೈಗಳು, ಬೋ ಟೈಗಳು ಸೇರಿದಂತೆ ಬಟ್ಟೆ ದಿರಿಸುಗಳು.

(2) ಹೆಣಿಗೆ ಅಥವಾ ಕ್ರೋಶಾ ಮಾಡಿರದ ಕರವಸ್ತ್ರಗಳು, ಶಾಲುಗಳು, ಸ್ಕಾರ್ಫ್‌ಗಳು, ಮಫ್ಲರ್‌ಗಳು, ಮಂಟಿಲ್ಲಾಗಳು, ವೇಲ್‌ಗಳು, ಟೈಗಳು, ಬೋ ಟೈಗಳು, ಕ್ರವಾಟ್‌ಗಳು, ಗ್ಲೋವ್‌ಗಳು, ಕೈಚೀಲಗಳು ಒಳಗೊಂಡಂತೆ ಬಟ್ಟೆ ದಿರಿಸುಗಳು.

(3) ಕಂಬಳಿಗಳು ಮತ್ತು ಪ್ರಯಾಣ ಕಾಲದಲ್ಲಿ ಬಳಸುವ ರಗ್ಗುಗಳು

(4) ಬೆಡ್‌ಲಿನಿನ್, ಟೇಬಲ್ ಲಿನಿನ್, ಟಾಯಲೆಟ್ ಲಿನಿನ್ ಮತ್ತು ಕಿಚನ್ ಲಿನಿನ್ ಮತ್ತು ತಯಾರಿಕೆಗಳು

(5) ಕರ್ಟನ್‌ಗಳು (ಡ್ರಾಪ್‌ಗಳು ಸೇರಿದಂತೆ) ಮತ್ತು ಇಂಟೀರಿಯರ್ ಬ್ಲೈಂಡ್‌ಗಳು, ಕರ್ಟನ್ ಮತ್ತು ಬೆಡ್ ವ್ಯಾಲನ್ಸ್‌ಗಳು

(6) ಇತರ ಸಜ್ಜುಗೊಳಿಸುವ ವಸ್ತುಗಳು

[3][(7) ವೊವನ್ ಲೇಬಲ್‌ಗಳು, ಬ್ಯಾಡ್ಜ್‌ಗಳು ಮತ್ತು ಆದೇತರಹದವು.][3]

79. ಕ್ಯಾಲೆಂಡರ್ ಆಗಿ ಬಳಸದಿರುವ ಧಾರ್ಮಿಕ ಚಿತ್ರಗಳು

80. ರಿನ್ಯೂವೆಬಲ್ ಎನರ್ಜಿ ಡಿವೈಸ್‌ಗಳು ಮತ್ತು ಅವುಗಳ ಭಾಗಗಳು

81. ಜನಿವಾರಗಳು

82. ಸುರಕ್ಷಿತ ಬೆಂಕಿಕಡ್ಡಿಗಳು

83. ಮರಳು ಮತ್ತು ಗ್ರಿಟ್ಸ್‌ಗಳು (ಜಲ್ಲಿಕಲ್ಲುಗಳು)

84. ಹೊಲಿಗೆ ಯಂತ್ರಗಳು ಮತ್ತು ಅದರ ಭಾಗಗಳು ಮತ್ತು ಉಪಭಾಗಗಳು

85. ಯಾಂತ್ರೀಕೃತವಲ್ಲದ ನಾಡದೋಣಿಗಳು ಒಳಗೊಂಡಂತೆ ಹಡಗು ಮತ್ತು ಇತರೆ ಜಲ ಸಾರಿಗೆ ನಾವೆಗಳು

86. ಕೆನೆ ತೆಗೆದ ಹಾಲಿನ ಪುಡಿ, ಯುಹೆಚ್‌ಟಿ ಹಾಲು ಮತ್ತು ಗಿಣ್ಣು (ಪನೀರ್)

87. ಆರ್ಗ್ಯಾನಿಕ್ ದ್ರಾವಕ ತೈಲವನ್ನು ಹೊರತುಪಡಿಸಿದಂತೆ ಇತರೆ ದ್ರಾವಕ ತೈಲಗಳು

88. ಕನ್ನಡಕಗಳು, [3][ಆದರೆ ತಂಪು ಕನ್ನಡಕಗಳು ಮತ್ತು ಗಾಗಲ್‌ಗಳು ಮತ್ತು ಅವುಗಳ ಲೆನ್ಸ್‌ಗಳು, ಫ್ರೇಮ್‌ಗಳು, ಇತರ ಜೋಡಣೆಗಳು, ಭಾಗಗಳು ಮತ್ತು ಬಿಡಿಭಾಗಗಳನ್ನು ಹೊರತುಪಡಿಸಿ][3] ಅವುಗಳ ಜೋಡಣೆಗಳು, ಭಾಗಗಳು ಮತ್ತು ಉಪಭಾಗಗಳು ಒಳಗೊಂಡಂತೆ ಲೆನ್ಸ್‌ಗಳು ಮತ್ತು ಫ್ರೇಮ್‌ಗಳು.

89. ಜೀರಿಗೆ, ಮೆಂತ್ಯಾ, ಗಸಗಸೆ, ದನಿಯಾ, ಷಾಜೀರಿಗೆ, ಸೋಂಪ್, ಕಾಚು (ಕತ್ತಾ), ಅಜವಾನ, ಕಬಾಬ್‌ಚೀನಿ, ಬೊಜರ್ ಪೂಲ್, ತೇಜ್‌ಪತ್ತಾ, ಜಾಪತ್ರೆ, ಮರಾಠಮೊಗ್ಗು, ಕಲ್ಲುಹೂವು, ಸುಗಂಧ ಸಸ್ಯ ಬೀಜಗಳು, ಅರಿಸಿನ, ಏಲಕ್ಕಿ, ಮೆಣಸು, ಸಿನ್ನಾಮನ್, ದಾಲ್‌ಚಿನ್ನಿ, ಲವಂಗ, ಹುಣಸೇಹಣ್ಣು ಮತ್ತು [3][ತುಂಡು ಮಾಡಿದ ಮೆಣಸಿನ ಕಾಯಿ, ತುಂಬು ತೆಗೆದ ಮೆಣಸಿನ ಕಾಯಿ ಮತ್ತು ಮೆಣಸಿನ ಕಾಯಿ ಬೀಜಗಳನ್ನು ಒಳಗೊಂಡಂತೆ ಆದರೆ ಮಸಾಲೆ ಪುಡಿಯ ರೂಪದಲ್ಲಿ, ದಢೀರ್ ಮಿಶ್ರಣಗಳು ಅಥವಾ ಒಂದಕ್ಕಿಂತ ಹೆಚ್ಚು ಮಸಾಲೆ ಅಥವಾ ಇತರ ವಸ್ತುವುಳ್ಳ ಮಸಾಲೆಯ ಮಿಶ್ರಣಗಳನ್ನು ಹೊರತುಪಡಿಸಿ][3] ಒಣಮೆಣಸಿನ ಕಾಯಿ; ಖಜೂರ; ಇಂಗು

90. ದೇಹಾದಾರ್ಢ್ಯ ಸಲಕರಣೆಗಳು ಸೇರಿದಂತೆ ಆದರೆ ಧರಿಸುವ ಉಡುಪುಗಳು ಮತ್ತು ಪಾದರಕ್ಷೆಗಳನ್ನು ಹೊರತುಪಡಿಸಿದಂತೆ ಕ್ರೀಡಾ ಸಾಮಗ್ರಿಗಳು (ಒಳಾಂಗಣ ಮತ್ತು ಹೊರಾಂಗಣ)

91. ಸಾಬುದಾನಿ (ಸಬ್ಬಕ್ಕಿ) ಒಳಗೊಂಡಂತೆ ಬಟ್ಟೆಗೆ ಹಾಕುವ ಗಂಜಿ (ಸ್ಟಾರ್ಚ್); ಹುಣಿಸೆ ಬೀಜ ಮತ್ತು ಹುಣಿಸೆ ಹಣ್ಣಿನ ಪುಡಿ.

92. ಚಹಾ

93. ಸಾಧನಗಳು, ಎಂದರೆ,-

(1) ಕೈ ಗರಗಸಗಳು; ಎಲ್ಲಾ ಬಗೆಯ ಗರಗಸಕ್ಕಾಗಿ ಬಳಸುವ ಬ್ಲೇಡ್‌ಗಳು

(2) ಕಟಿಂಗ್ ಪ್ಲೈಯರುಗಳೂ ಸೇರಿದಂತೆ ಪ್ಲೈಯರುಗಳು

(3) ಟಾರ್ಕ್ ಮೀಟರ್ ರೆಂಚೆಸ್‌ಗಳು ಒಳಗೊಂಡಂತೆ ಆದರೆ, ಟ್ಯಾಪ್ ರೆಂಚಸ್‌ಗಳನ್ನು ಹೊರತುಪಡಿಸಿ ಕೈಯಿಂದ ನಿರ್ವಹಿಸಲಾಗುವ ಸ್ಪಾನರುಗಳು ಮತ್ತು ರೆಂಚಸ್‌ಗಳು ಹ್ಯಾಂಡಲ್ (ಹಿಡಿ) ಇರುವ ಅಥವಾ ಇಲ್ಲದಿರುವ ಪರಸ್ಪರವಾಗಿ ಬದಲಾಯಿಸಬಹುದಾದ ಸ್ಪಾನರ್ ಸಾಕೆಟ್‌ಗಳು.

(4) ಡ್ರಿಲ್ಲಿಂಗ್, ತ್ರೆಡಿಂಗ್ ಅಥವಾ ಟ್ಯಾಪಿಂಗ್ ಸಾಧನಗಳು

(5) ಪ್ಲೇನ್‌ಗಳು, ಕಬ್ಬಿಣದ ಚಾಣ(ಉಳಿ)ಗಳು, ಉಗುರುಳಿಗಳು (ಗೌಜ್‌ಸ್) ಮತ್ತು ಮರದ ಕಾಮಗಾರಿಕೆಗಾಗಿ ಬಳಸುವ ಅಂಥದೇ ಕತ್ತರಿಸುವ ಸಾಧನಗಳು.

(6) ಸ್ಕ್ರೂ ಡ್ರೈವರುಗಳು

(7) ವಿದ್ಯುಚ್ಛಕ್ತಿಯಿಂದ ನಡೆಸಬಹುದಾದ ಅಥವಾ ನಡೆಸದಿರುವ ಕೈ ಸಾಧನಗಳಿಗಾಗಿ ಅಥವಾ ಯಂತ್ರ ಸಾಧನಗಳಿಗಾಗಿ ಡ್ರಾಯಿಂಗ್ ಅಥವಾ ಹೊರನೂಕಿ ಲೋಹ ಮತ್ತು ಕಲ್ಲು ಕೊರೆಯುವ ಅಥವಾ ಭೂಮಿಯನ್ನು ಕೊರೆಯುವ ಸಾಧನಗಳಿಗೆ ಡೈಗಳನ್ನು ಒಳಗೊಂಡಂತೆ ಪರಸ್ಪರವಾಗಿ ಬದಲಾಯಿಸಬಹುದಾದ ಸಾಧನಗಳು.

(8) ನ್ಯೂಮಾಟಿಕ್, ಹೈಡ್ರಾಲಿಕ್ ಅಥವಾ ಸೆಲ್ಫ್ ಕಂಟೇನ್ಡ್ ವಿದ್ಯುಚ್ಛಕ್ತಿ ಅಥವಾ ವಿದ್ಯುಚ್ಛಕ್ತಿಯಿಂದಲ್ಲದ ಮೋಟಾರು ಇರುವ ಕೈಯಿಂದ ಕಾರ್ಯನಿರ್ವಹಿಸಬಹುದಾದ ಸಾಧನಗಳು.

94. ಎಲೆಕ್ಟ್ರಾನಿಕ್ ಆಟಿಕೆಗಳನ್ನು ಹೊರತುಪಡಿಸಿದಂತೆ ಉಳಿದ ಆಟಿಕೆಗಳು

95. ಟ್ರಾಕ್ಟರ್ ಮತ್ತು ಪವರ್ ಟಿಲ್ಲರ್‌ಗಳು, ಅವುಗಳ ಭಾಗಗಳು ಮತ್ತು ಟ್ರೇಲರ್‌ಗಳೂ ಸೇರಿದಂತೆ ಆದರೆ, ಬ್ಯಾಟರಿಗಳು, ಟೈರುಗಳು, ಟ್ಯೂಬ್‌ಗಳು ಮತ್ತು ಫ್ಲ್ಯಾಪ್‌ಗಳನ್ನು ಹೊರತುಪಡಿಸಿದಂತೆ ಸಾಧನ ಸಾಮಗ್ರಿಗಳು.

96. ಟ್ರಾನ್ಸ್‌ಮಿಷನ್ ಟವರ್‌ಗಳು (ಎಲೆಕ್ಟ್ರಿಕಲ್) ಮತ್ತು ತಂತಿಗಳು ಹಾಗೂ ಉಕ್ಕಿನಿಂದ ಬಲಪಡಿಸಿದ ಅಲ್ಯುಮಿನಿಯಂ ಕಂಡಕ್ಟರ್ ನಂತಹ ಕಂಡಕ್ಟರ್‌ಗಳು

97. ಉದ್ಯಾನವನ ಮತ್ತು ಕಡಲತೀರ-ಕೊಡೆಗಳನ್ನು ಹೊರತುಪಡಿಸಿ ಕೊಡೆಗಳು

98. ಪ್ರಸಾಧನ ವಸ್ತುವಾಗಿ ಮತ್ತು ಖಾದ್ಯತೈಲವಾಗಿ ಬಳಸುವ ವನಸ್ಪತಿ ತೈಲಗಳನ್ನು ಹೊರತುಪಡಿಸಿದಂತೆ ಎಳ್ಳೆಣ್ಣೆ, ತೌಡಿನ ಎಣ್ಣೆ ಮತ್ತು ಹರಳೆಣ್ಣೆ ಒಳಗೊಂಡಂತೆ ವನಸ್ಪತಿ ತೈಲ.

99. ಯಾನೋಡ್‌ಗಳು, ವೆಲ್ಡಿಂಗ್ ರಾಡ್‌ಗಳು, ಸಾಲ್ಡರಿಂಗ್ ರಾಡ್‌ಗಳು ಮತ್ತು ಸಾಲ್ಡರಿಂಗ್ ವೈರ್‌ಗಳೂ ಸೇರಿದಂತೆ ಎಲ್ಲಾ ಬಗೆಯ ವೆಲ್ಡಿಂಗ್ ಎಲೆಕ್ಟ್ರೋಡ್‌ಗಳು.

100. ಬರವಣಿಗೆಗಾಗಿನ ಸಾಧನಸಲಕರಣೆಗಳು ಮತ್ತು ಬರವಣಿಗೆಯ ಶಾಯಿಗಳು, ಎಂದರೆ,-

1) ಬಾಲ್‌ಪಾಯಿಂಟ್ ಪೆನ್‌ಗಳು

2) ಫೆಲ್ಟ್ ಟಿಪ್ಡ್ ಮತ್ತು ಇತರೆ ಪೋರಸ್ ಟಿಪ್ಡ್ ಪೆನ್ನುಗಳು ಮತ್ತು ಮಾರ್ಕರ್‌ಗಳು

3) ಇಂಡಿಯನ್ ಶಾಯಿ ಡ್ರಾಯಿಂಗ್ ಪೆನ್‌ಗಳು

4) ಫೌಂಟೆನ್ ಪೆನ್‌ಗಳು

5) ಪ್ರೋಪೆಲಿಂಗ್ ಅಥವಾ ಸ್ಲೈಡಿಂಗ್ ಪೆನ್ಸಿಲ್‌ಗಳು

6) ಬಾಲ್‌ಪಾಯಿಂಟ್ ಪೆನ್‌ಗಳಿಗಾಗಿ ಬಾಲ್‌ಪಾಯಿಂಟ್ ಸ್ಲೈ ಮತ್ತು ಶಾಯಿ ರಿಸರ್ವ್ ವಾಯರ್‌ಗಳು ಒಳಗೊಂಡ ರೀಫಿಲ್‌ಗಳು.

7) ಪೆನ್‌ನಿಬ್‌ಗಳು ಮತ್ತು ನಿಬ್ ಪಾಯಿಂಟ್‌ಗಳು

8) ಪೆನ್ಸಿಲ್‌ಗಳು ಮತ್ತು ಗಟ್ಟಿ ಕವಚವಿರುವ ಲೆಡ್‌ಗಳಿಂದ ಕೂಡಿದ ಕ್ರೇಯಾನುಗಳು

9) ಕಪ್ಪು ಅಥವಾ ಬಣ್ಣದ ಪೆನ್ಸಿಲ್ ಲೆಡ್‌ಗಳು

10) ಸೀಮೆ ಸುಣ್ಣವನ್ನು ಹೊರತುಪಡಿಸಿದ ಪ್ಯಾಸ್ಟೆಲ್‌ಗಳು ಮತ್ತು ಡ್ರಾಯಿಂಗ್ ಚಾರ್‌ಕೋಲ್‌ಗಳು

11) ಜಾಮಿಟ್ರಿ ಬಾಕ್ಸ್‌ಗಳು, ಕಲರ್ ಬಾಕ್ಸ್‌ಗಳು, ಪೆನ್ಸಿಲ್ ಶಾರ್ಪನರ್‌ಗಳು

12) ಬರೆಯುವುದಕ್ಕಾಗಿನ ಶಾಯಿಗಳು][1]

1. 2005ರ ಅಧಿನಿಯಮ ಸಂಖ್ಯೆ 27ರ ಮೂಲಕ ದಿನಾಂಕ: 7.6.2005 ರಿಂದ ಪ್ರತಿಯೋಜಿಸಲಾಗಿದೆ.

2. 2006ರ ಅಧಿನಿಯಮ ಸಂಖ್ಯೆ 4ರ ಮೂಲಕ ದಿನಾಂಕ: 1.4.2006 ರಿಂದ ಪ್ರತಿಯೋಜಿಸಲಾಗಿದೆ.

3. 2006ರ ಅಧಿನಿಯಮ ಸಂಖ್ಯೆ 4ರ ಮೂಲಕ ದಿನಾಂಕ: 1.4.2006 ರಿಂದ ಸೇರಿಸಲಾಗಿದೆ.

4. 2011ರ ಅಧಿನಿಯಮ ಸಂಖ್ಯೆ 12ರ ಮೂಲಕ ದಿನಾಂಕ: 1.4.2011 ರಿಂದ ಬಿಟ್ಟುಬಿಡಲಾಗಿದೆ.

## ನಾಲ್ಕನೇ ಅನುಸೂಚಿ

### ಶೇಕಡಾ ಇಪ್ಪತ್ತರ ದರದಲ್ಲಿ ತೆರಿಗೆಗೆ ಗುರಿಯಾಗತಕ್ಕ ಸರಕುಗಳು

[4(1)(ಎ)(iii)ನೇ ಪ್ರಕರಣ]

| ಕ್ರಮ ಸಂಖ್ಯೆ | ಸರಕುಗಳ ವಿವರ |
|---|---|
| 1 | 2 |
| 1. | ನಿದ್ರಾಜನಕಗಳು (ನಾರ್ಕೋಟಿಕ್ಸ್) |
| 2. | ಕಾಕಂಬಿ |
| [1][3. | ಡಿನೇಚರ್ಡ್ ಅನ್‌ಹೈಡ್ರಸ್ ಅಲ್ಕೋಹಾಲ್ |
| 4. | ಡಿನೇಚರ್ಡ್ ಸ್ಪಿರಿಟ್ |
| 5. | ಈಥೆಲ್ ಅಲ್ಕೋಹಾಲ್ |
| 6. | ರೆಕ್ಟಿಫೈಡ್ ಸ್ಪಿರಿಟ್.][1] |
| 7. | [2][7. ಸಕ್ಕರೆಯನ್ನು ಅಥವಾ ಇತರ ಸಿಹಿಗೊಳಿಸುವ ಪದಾರ್ಥ ಅಥವಾ ಸುವಾಸಿತ ಅಥವಾ ಯಾವುದೇ ಇತರ ಸೇರ್ಪಡಿತ ಪದಾರ್ಥವನ್ನು (ಅಡೆಟಿವ್) ಒಳಗೊಂಡಿರುವ ಅಥವಾ ಒಳಗೊಳ್ಳದಿರುವ ಅನಿಲಗೂಡಿದ (ಏರೇಟೆಡ್) ಮತ್ತು ಕಾರ್ಬನ್ ಡೈ ಆಕ್ಸೈಡ್ ತುಂಬಿದ (ಕಾರ್ಬೋನೇಟೆಡ್) ಮದ್ಯಸಾರ ರಹಿತ (ನಾನ್–ಆಲ್ಕೋಹಾಲಿಕ್) ಪಾನೀಯಗಳು, ಲಘು ಪಾನೀಯಗಳು (ಸಾಫ್ಟ್ ಡ್ರಿಂಕ್ಸ್) ಮತ್ತು ಲಘು ಪಾನೀಯಗಳ ಸಾರಗಳನ್ನು ಒಳಗೊಂಡಂತೆ (ಮೊಹರು ಮಾಡಿದ ಧಾರಕಗಳಲ್ಲಿರಲಿ ಅಥವಾ ಇಲ್ಲದಿರಲಿ),][2] |

1. 2007ರ ಅಧಿನಿಯಮ ಸಂಖ್ಯೆ 6ರ ಮೂಲಕ ದಿನಾಂಕ: 1.4.2007 ರಿಂದ ಸೇರಿಸಲಾಗಿದೆ.
2. 2016ರ ಅಧಿನಿಯಮ ಸಂಖ್ಯೆ 06ರ ಮೂಲಕ ದಿನಾಂಕ 1.4.2016 ರಿಂದ ಸೇರಿಸಲಾಗಿದೆ.

---

## ಐದನೇ ಅನುಸೂಚಿ

### ಹೂಡುವಳಿ ತೆರಿಗೆ ಸೌಲಭ್ಯ ನಿರ್ಬಂಧಿತ ಸರಕುಗಳು

[11(3)ನೇ ಪ್ರಕರಣ]

| ಕ್ರಮ ಸಂಖ್ಯೆ | ಸರಕುಗಳ ವಿವರ |
|---|---|
| 1 | 2 |
| 1. | ಎಲ್ಲ ಬಗೆಯ ಮೋಟಾರು ವಾಹನಗಳು, ಏರೋಪ್ಲೇನ್‌ಗಳು, ಹೆಲಿಕಾಪ್ಟರ್‌ಗಳು ಅಥವಾ ಯಾವುದೇ ಇತರ ರೀತಿಯ ಹಾರುವ ಯಂತ್ರ, ಟೈರ್, ಟ್ಯೂಬ್‌ಗಳು ಹಾಗೂ ಫ್ಲಾ ್ಯಪಿಗಳು ಒಳಗೊಂಡಂತೆ ಅವುಗಳ ಭಾಗಗಳು ಹಾಗೂ ಉಪಸಾಧನಗಳು. |
| 2. | ಕೇಕ್‌ಗಳು, ಬಿಸ್ಕಟ್ಟುಗಳು ಹಾಗೂ ಮಿಠಾಯಿಗಳು ಒಳಗೊಂಡಂತೆ ಆಹಾರ ವಸ್ತುಗಳು ಹಾಗೂ ಪಾನೀಯಗಳು, ಸರಬರಾಜಿಗೆ ಸಿದ್ಧವಾದ ಆಹಾರಗಳು, ಸಂಸ್ಕರಿತ ಅಥವಾ ಅರೆ ಸಂಸ್ಕರಿತ ಅಥವಾ ಅರೆಬೆಂದ ಆಹಾರ ಪದಾರ್ಥಗಳು ಹಣ್ಣುಗಳು, ಸೀಲು ಮಾಡಿದ ಕಂಟೇನರುಗಳಲ್ಲಿ ಮಾರಾಟ ಮಾಡುವ ಯಾವುದೇ ವಿಧವಾದ ಹಣ್ಣು ಅಥವಾ ತರಕಾರಿಯ ಉತ್ಪನ್ನಗಳು, ಸೀಲು ಮಾಡಿದ ಕಂಟೇನರುಗಳಲ್ಲಿ ಮಾರಾಟ ಮಾಡುವ ಯಾವುದೇ ವಿಧವಾದ ಸಿದ್ದಪಡಿಸಿದ ಕೋಳಿಮಾಂಸ, ಮೀನು, ಪ್ರಾನ್‌ಗಳು, ಸೀಗಡಿಗಳು ಹಾಗೂ ಏಡಿ (ಲಾಬ್‌ಸ್ಟರ್)ಗಳು; ಲಘು ಪಾನೀಯಗಳು. |

3. ಮಾರಾಟದ ಸರಕುಗಳ ಸಂಸ್ಕರಣೆ, ಉತ್ಪಾದನೆ ಪ್ಯಾಕಿಂಗ್ ಅಥವಾ ಸಂಗ್ರಹಣೆಯಲ್ಲಿ ಬಳಸುವವುಗಳನ್ನು ಹಾಗೂ ತೆರಿಗೆ ಬೆಲೆ ಪಟ್ಟಿ ಅಥವಾ ಮಾರಾಟದ ಬಿಲ್ಲುಗಳನ್ನು ನೀಡುವಲ್ಲಿ ಮಾಹಿತಿ, ರಕ್ಷಣೆ ಮತ್ತು ಸಂಗ್ರಹಣೆಯಲ್ಲಿ ಬಳಸುವವುಗಳನ್ನು ಹೊರತುಪಡಿಸಿ ವಿದ್ಯುತ್ ಅಥವಾ ಎಲೆಕ್ಟ್ರಾನಿಕ್‌ನ ಎಲ್ಲಾ ಸರಕುಗಳು ಮತ್ತು ಏರ್ ಕಂಡೀಶನರುಗಳು, ಏರ್ ಕೂಲರ್‌ಗಳು, ಟೆಲಿಫೋನ್‌ಗಳು, ಫ್ಯಾಕ್ಸ್ ಯಂತ್ರಗಳು, ಡ್ಯೂಪ್ಲಿಕೇಟಿಂಗ್ ಯಂತ್ರಗಳು, ಫೋಟೋ ಕಾಪಿಯರ್‌ಗಳು ಮತ್ತು ಸ್ಕ್ಯಾನರುಗಳು ಒಳಗೊಂಡಂತೆ ಉಪಕರಣಗಳು ಹಾಗೂ ಅವುಗಳ ಭಾಗಗಳು ಮತ್ತು ಉಪಸಾಧನಗಳು.
4. ಜವಳಿ, ಕ್ರಾಕರಿಗಳು, ಕತ್ತರಿಗಳು, ಕಾರ್ಪೆಟ್‌ಗಳು, ಪೇಂಟಿಂಗ್‌ಗಳು ಹಾಗೂ ಕೌಶಲದಿಂದ ನಿರ್ಮಿಸಿದ ಪ್ರಾಚೀನ ವಸ್ತುಗಳು.
5. ಸ್ಲಾಟೆಡ್ ಎಂಗಲ್‌ಗಳು ಹಾಗೂ ಜೋಡಿಸಲು ಸಿದ್ಧವಾದ ಭಾಗಗಳನ್ನು ಒಳಗೊಂಡಂತೆ ಪೀಠೋಪಕರಣಗಳು, ಕಾಗದ ಒಳಗೊಂಡಂತೆ ಲೇಖನ ಸಾಮಗ್ರಿಗಳು, ಸ್ಯಾನಿಟರಿ ಫಿಟಿಂಗ್‌ಗಳು, ಇಟ್ಟಿಗೆಗಳು, ಚೌಬೀನೆ, ಮರ, ಗ್ಲಾಸ್, ಕನ್ನಡಿ, ರೂಫಿಂಗ್ ಸಾಮಗ್ರಿಗಳು, ಕಲ್ಲುಗಳು, ಟೈಲ್ಸ್ ಮತ್ತು ಪೇಂಟ್, ಪ್ರಸಾಧನ (ಟಾಯ್ಲೆಟ್) ವಸ್ತುಗಳು ಒಳಗೊಂಡಂತೆ ಸೀಮೆಂಟ್ ಮತ್ತು ಇತರ ನಿರ್ಮಾಣ ಸಾಮಗ್ರಿಗಳು.

## [1][**ಆರನೇ ಅನುಸೂಚಿ**

## [**ಪ್ರಕರಣ 4(1) (ಸಿ)**]

| ಕ್ರಮ ಸಂಖ್ಯೆ | ಕಾಮಗಾರಿಗಳ ಕರಾರಿನ ವಿವರಣೆ | ತೆರಿಗೆಯ ದರ |
|---|---|---|
| 1 | 2 | 3 |
| 1 | ಸರಕುಗಳ ಬಾಟ್ಲಿಂಗ್, ಕ್ಯಾನಿಂಗ್ ಮತ್ತು ಪ್ಯಾಕಿಂಗ್ | [3][[2][ಶೇಕಡಾ ಐದೂವರೆ][2]][3] |
| 2 | ಬಟ್ಟೆಗಳಿಗೆ ಬಣ್ಣ ಹಾಕುವುದು ಮತ್ತು ಪ್ರಿಂಟ್ ಮಾಡುವುದು | [3][[2][ಶೇಕಡಾ ಐದೂವರೆ][2]][3] |
| 3 | ಇಲೆಕ್ಟ್ರೋ ಪ್ಲೇಟಿಂಗ್, ಇಲೆಕ್ಟ್ರೋ ಗಾಲ್ವನೈಸಿಂಗ್, ಆ್ಯನೋಡೈಜಿಂಗ್ ಮತ್ತು ಅಂಥವೇ | [3][[2][ಶೇಕಡಾ ಐದೂವರೆ][2]][3] |
| 4 | [1][ಕಬ್ಬಿಣದ ಆಸರೆ ಕಟ್ಟುಗಳು, ಉದ್ದಸರಗಳು ಮತ್ತು ಅಂತಹುವುಗಳ ನಿರ್ಮಾಣ, ಸರಬರಾಜು ಮತ್ತು ಕಟ್ಟುವಿಕೆಯನ್ನು ಒಳಗೊಂಡು ಕಬ್ಬಿಣ ಮತ್ತು ಉಕ್ಕಿನ ರಚನಾ ಕಾಮಗಾರಿಗಳ ನಿರ್ಮಾಣ ಮತ್ತು ಕಟ್ಟುವಿಕೆ.][1]<br><br>1. 2016 ರ ಅಧಿನಿಯಮ ಸಂಖ್ಯೆ06 ರ ಮೂಲಕ ದಿನಾಂಕ 1.4.2016 ರಿಂದ ಪ್ರತಿಯೋಜಿಸಲಾಗಿದೆ. | [3][[2][ಶೇಕಡಾ ಐದೂವರೆ][2]][3] |
| 5 | ಮೂರನೇ ಅನುಸೂಚಿಯಲ್ಲಿನ 20ನೇ ಕ್ರಮಸಂಖ್ಯೆಯಲ್ಲಿ ನಿರ್ದಿಷ್ಟಪಡಿಸಿದ ಬಂಡವಾಳ ಸರಕುಗಳ ನಿರ್ಮಾಣ ಅಥವಾ ಸರಬರಾಜು ಮತ್ತು ಸ್ಥಾಪನೆ | [3][[2][ಶೇಕಡಾ ಐದೂವರೆ][2]][3] |
| 6 | [1][ಪೌಡರ್ ಕೋಟಿಂಗನ್ನು ಒಳಗೊಂಡಂತೆ][1] ಲ್ಯಾಮಿನೇಷನ್, ರಬ್ಬರೈಸೇಷನ್, ಕೋಟಿಂಗ್ ಮತ್ತು ಅಂಥವೇ ಸಂಸ್ಕರಣ | [3][[2][ಶೇಕಡಾ ಐದೂವರೆ][2]][3] |

| ಕ್ರಮ ಸಂಖ್ಯೆ | ಕಾಮಗಾರಿಗಳ ಕರಾರಿನ ವಿವರಣೆ | ತೆರಿಗೆಯ ದರ |
|---|---|---|
| | 1. 2008ರ ಅಧಿನಿಯಮ ಸಂಖ್ಯೆ 5ರ ಮೂಲಕ ದಿನಾಂಕ: 1.8.2008 ರಿಂದ ಸೇರಿಸಲಾಗಿದೆ. | |
| [1][7 | XXX<br>1. 2011ರ ಅಧಿನಿಯಮ ಸಂಖ್ಯೆ 12ರ ಮೂಲಕ ದಿನಾಂಕ: 1.4.2011 ರಿಂದ ಬಿಟ್ಟುಬಿಡಲಾಗಿದೆ. | XXX][1] |
| [1][7 | ಬಣ್ಣ ಹಾಕುವುದು, ಮುದ್ರಣ ಮಾಡುವುದು, ಹೊಲಿಯುವುದು, ಕಸೂತಿ ಕೆಲಸ ಮತ್ತು ಅಂತಹುದನ್ನು ಒಳಗೊಂಡಂತೆ ಸಿದ್ಧ ಉಡುಪುಗಳು, ಜವಳಿಯಿಂದ ತಯಾರಿಸಿದ ಬಟ್ಟೆಯ ದಿರಿಸುಗಳು ಮತ್ತು ಇತರ ಜವಳಿಯಿಂದ ಮಾಡಿದ ವಸ್ತುಗಳನ್ನು ತಯಾರಿಸಿ ಪೂರೈಸುವುದು.<br>1. 2012ರ ಅಧಿನಿಯಮ ಸಂಖ್ಯೆ 17ರ ಮೂಲಕ ದಿನಾಂಕ: 1.4.2012 ರಿಂದ ಸೇರಿಸಲಾಗಿದೆ. | [3][ಶೇಕಡಾ ಐದೂವರೆ][1]][3] |
| 8 | ಮುದ್ರಣ ಮತ್ತು ಬ್ಲಾಕ್ ತಯಾರಿಕೆ | [3][[2][ಶೇಕಡಾ ಐದೂವರೆ][2]][3] |
| 9 | ಫೋಟೋಗ್ರಾಫ್ಸ್, ಫೋಟೋ ಪ್ರಿಂಟ್ಸ್ ಮತ್ತು ಫೋಟೋ ನೆಗೆಟಿವ್‌ಗಳ ಸಂಸ್ಕರಣ ಮತ್ತು ಸರಬರಾಜು. | [3][[2][ಶೇಕಡಾ ಐದೂವರೆ][2]][3] |
| 10 | ಸಿನಿಮಾಟೋಗ್ರಾಫಿಕ್ ಫಿಲ್ಮ್‌ಗಳ ಸಂಸ್ಕರಣ ಮುದ್ರಣ ಮತ್ತು ಸರಬರಾಜು. | [3][[2][ಶೇಕಡಾ ಐದೂವರೆ][2]][3] |
| 11 | ಕಂಪ್ಯೂಟರ್ ಸಾಫ್ಟ್‌ವೇರ್ ಪ್ರೋಗ್ರಾಮಿಂಗ್ ಮತ್ತು ಅದನ್ನು ಒದಗಿಸುವುದು | [3][[2][ಶೇಕಡಾ ಐದೂವರೆ][2]][3] |
| 12 | ಪ್ಲಂಬಿಂಗ್‌ಗಾಗಿ, ಚರಂಡಿಗಾಗಿ ಮತ್ತು ಅಂಥ ಕಾರ್ಯಗಳಿಗಾಗಿ ಹೊರತು ಇತರೆ ಉದ್ದೇಶಗಳಿಗಾಗಿ ಸ್ಟೀಲ್ ಪೈಪ್‌ಗಳನ್ನು ಒದಗಿಸುವುದು ಮತ್ತು ಜೋಡಿಸುವುದು.<br>1. 2011ರ ಅಧಿನಿಯಮ ಸಂಖ್ಯೆ 12ರ ಮೂಲಕ ದಿನಾಂಕ: 1.4.2011 ರಿಂದ ಪ್ರತಿಯೋಜಿಸಲಾಗಿದೆ. | [1][ಕೇಂದ್ರ ಮಾರಾಟ ತೆರಿಗೆ ಅಧಿನಿಯಮ, 1956ರ(1956ರ ಕೇಂದ್ರ ಅಧಿನಿಯಮ 74) 15ನೇ ಪ್ರಕರಣದಲ್ಲಿ ಘೋಷಿಸಲಾದ ಸರಕುಗಳಿಗೆ ನಿರ್ದಿಷ್ಟಪಡಿಸಿದಂಥ ಗರಿಷ್ಠ ದರದಲ್ಲಿ][1] |
| 13 | ಎಲೆಕ್ಟ್ರಿಕಲ್ ಮೋಟಾರುಗಳ ರೀವೈಂಡಿಂಗ್ | [3][[2][ಶೇಕಡಾ |

| ಕ್ರಮ ಸಂಖ್ಯೆ | ಕಾಮಗಾರಿಗಳ ಕರಾರಿನ ವಿವರಣೆ | ತೆರಿಗೆಯ ದರ |
|---|---|---|
| | | ಐದೂವರೆ][2]][3] |
| 14 | ಮೂರನೇ ಅನುಸೂಚಿಯ 53ನೇ ಕ್ರಮ ಸಂಖ್ಯೆಯಲ್ಲಿ ನಿರ್ದಿಷ್ಟಪಡಿಸಿದ ಟೆಲಿಕಮ್ಯೂನಿಕೇಷನ್ ಸಾಧನ ಸಲಕರಣೆಗಳೂ ಸೇರಿದಂತೆ ಐ.ಟಿ. ಉತ್ಪನ್ನಗಳ ಸರ್ವೀಸ್ ಮತ್ತು ನಿರ್ವಹಣೆ | [3][[2][ಶೇಕಡಾ ಐದೂವರೆ][2]][3] |
| 15 | ನೂಲಿನ ಸೈಜಿಂಗ್ ಮತ್ತು ಬಣ್ಣಹಾಕುವುದು | [3][[2][ಶೇಕಡಾ ಐದೂವರೆ][2]][3] |
| 16 | ಎಲೆಕ್ಟ್ರಿಕಲ್ ಟ್ರಾನ್ಸ್‌ಮಿಷನ್ ಟವರ್‌ಗಳ ಸರಬರಾಜು ಮತ್ತು ನಿರ್ಮಾಣ | [3][[2][ಶೇಕಡಾ ಐದೂವರೆ][2]][3] |
| 17 | ಷಾಬಾದ್ ಸ್ಲ್ಯಾಬುಗಳು ಮತ್ತು ಕಲ್ಲುಗಳ ಸರಬರಾಜು ಮತ್ತು ಜೋಡಣೆ | [3][[2][ಶೇಕಡಾ ಐದೂವರೆ][2]][3] |
| 18 | ಸೆಂಟ್ರಿಫ್ಯುಗಲ್ ಮನೋಬ್ಲಾಕ್ ಮತ್ತು ಸಬ್‌ಮರ್ಸಿಬಲ್ ಪಂಪ್ ಸೆಟ್ಟುಗಳ ಸರಬರಾಜು ಮತ್ತು ಜೋಡಣೆ | [3][[2][ಶೇಕಡಾ ಐದೂವರೆ][2]][3] |
| 19 | ದಪ್ಪ ಜಲ್ಲಿ ಕಲ್ಲುಗಳ ಸರಬರಾಜು ಮತ್ತು ಹರಡುವುದು. | [3][[2][ಶೇಕಡಾ ಐದೂವರೆ][2]][3] |
| 20 | ಪುನರ್ನವೀಕರಿಸಬಹುದಾದ ಊರ್ಜಶಕ್ತಿ ಉಪಕರಣಗಳ ಸರಬರಾಜು, ನಿರ್ಮಾಣ, ಸ್ಥಾಪನೆ ಮತ್ತು ಕಾರ್ಯಚಾಲನೆ | [3][[2][ಶೇಕಡಾ ಐದೂವರೆ][2]][3] |
| 21 | ಟೈರು ರಿಟ್ರೆಡ್ಡಿಂಗ್ | [3][[2][ಶೇಕಡಾ ಐದೂವರೆ][2]][3] |
| 22 | ಮೇಲಿನ ಎರಡು ಅಥವಾ ಹೆಚ್ಚಿನ ಪ್ರವರ್ಗಗಳನ್ನು ಒಳಗೊಂಡ ಸಂಯೋಜಿತ ಕರಾರುಗಳು | [3][[2][ಶೇಕಡಾ ಐದೂವರೆ][2]][3] |
| 23 | ಮೇಲಿನ ಒಂದು ಅಥವಾ ಹೆಚ್ಚಿನ ಪ್ರವರ್ಗಗಳೊಂದಿಗೆ ಸಂಯೋಜಿತ ಕರಾರುಗಳೂ ಸೇರಿದಂತೆ ಮೇಲಿನ ಯಾವುದೇ ಪ್ರವರ್ಗಗಳಲ್ಲಿ ನಿರ್ದಿಷ್ಟ ಪಡಿಸದಿರುವ ಇತರ ಎಲ್ಲಾ ಕಾಮಗಾರಿಗಳ ಕರಾರು.<br><br>1. 2011ರ ಅಧಿನಿಯಮ ಸಂಖ್ಯೆ 12ರ ಮೂಲಕ ದಿನಾಂಕ:1.4.2011ರಿಂದ ಪ್ರತಿಯೋಜಿಸಲಾಗಿದೆ. | [3][[2][[1][ಶೇಕಡಾ ಹದಿನಾಲ್ಕೂವರೆ][1]][2]][3] |

**ವಿವರಣೆ:** ಈ ಅನುಸೂಚಿಯಲ್ಲಿನ ಯಾವುದೇ ಕ್ರಮಸಂಖ್ಯೆಯಲ್ಲಿ ನಿರ್ದಿಷ್ಟಪಡಿಸಿದ ಕಾಮಗಾರಿಗಳ ಕರಾರು ಅಭಿವೃದ್ಧಿ, ಮಾರ್ಪಾಟುಗಳು ಅಥವಾ ದುರಸ್ತಿಗಳನ್ನು ಮಾಡುವುದಕ್ಕಾಗಿನ ಕಾಮಗಾರಿ ಕರಾರುಗಳನ್ನು ಒಳಗೊಳ್ಳತಕ್ಕದ್ದು.][1]

1. 2006ರ ಅಧಿನಿಯಮ ಸಂಖ್ಯೆ 4ರ ಮೂಲಕ ದಿನಾಂಕ: 1.4.2006 ರಿಂದ ಸೇರಿಸಲಾಗಿದೆ.
2. 2010ರ ಅಧಿನಿಯಮ ಸಂಖ್ಯೆ 4ರ ಮೂಲಕ ದಿನಾಂಕ:1.4.2010ರಿಂದ ಪ್ರತಿಯೋಜಿಸಲಾಗಿದೆ.
3. 2012ರ ಅಧಿನಿಯಮ ಸಂಖ್ಯೆ 27ರ ಮೂಲಕ ದಿನಾಂಕ: 1.08.2012ರಿಂದ ಪ್ರತಿಯೋಜಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ
ಹೆಸರಿನಲ್ಲಿ
**ಜಿ. ದಕ್ಷಿಣಾಮೂರ್ತಿ**
ಸರ್ಕಾರದ ಕಾರ್ಯದರ್ಶಿ
ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ

**ತನಿಖೆ ವ್ಯವಹರಣೆಗಳ ಸಿಂಧುತ್ವ ಇತ್ಯಾದಿಗಳು.–** ಮೂಲ ಅಧಿನಿಯಮದ ಅಡಿಯಲ್ಲಿ ಯಾವುದೇ ನ್ಯಾಯಾಲಯ, ನ್ಯಾಯಾಧಿಕರಣ ಅಥವಾ ಇತರ ಪ್ರಾಧಿಕಾರದ ಯಾವುದೇ ತೀರ್ಪು, ಡಿಕ್ರಿ ಅಥವಾ ಆದೇಶದಲ್ಲಿ ವಿರುದ್ಧವಾದುದು ಏನೇ ಇದ್ದರೂ, ಈ ಅಧಿನಿಯಮವು ಪ್ರಾರಂಭವಾಗುವುದಕ್ಕೆ ಮೊದಲು ಮಾಡಲಾದ ಅಥವಾ ಕೈಗೊಳ್ಳಲಾದ ಅಥವಾ ಮಾಡಲಾಗಿದೆ ಅಥವಾ ಕೈಗೊಳ್ಳಲಾಗಿದೆ ಎಂದು ತಾತ್ಪರ್ಯವಾಗುವ ಯಾವುದೇ ಕಾರ್ಯ ಅಥವಾ ಯಾವುದೇ ಕ್ರಮವು (ತೆರಿಗೆ ಅಥವಾ ದಂಡವನ್ನು ವಿಧಿಸುವುದಕ್ಕಾಗಿ, ನಿರ್ಧರಣೆಗಾಗಿ ಮತ್ತು ವಸೂಲಿಗಾಗಿ ಹೊರಡಿಸಿದ ಯಾವುದೇ ನೋಟೀಸು ಅಥವಾ ಆದೇಶಗಳು ಹಾಗೂ ನಡೆಸಿದ ಎಲ್ಲ ವ್ಯವಹರಣೆಗಳು ಸೇರಿದಂತೆ) ಈ ಅಧಿನಿಯಮದ ಮೂಲಕ ತಿದ್ದುಪಡಿಯಾದ ಸದರಿ ಅಧಿನಿಯಮದ ಅಡಿಯಲ್ಲಿ ಮಾಡಲಾಗಿದೆ ಅಥವಾ ಕೈಗೊಳ್ಳಲಾಗಿದೆ ಎಂಬಂತೆ ಸಿಂಧುವಾಗತಕ್ಕದ್ದು ಮತ್ತು ಪರಿಣಾಮಕಾರಿಯಾಗತಕ್ಕದ್ದು ಮತ್ತು ಸಿಂಧುವಾಗಿದೆ ಮತ್ತು ಪರಿಣಾಮಕಾರಿಯಾಗಿದೆ ಎಂದು ಭಾವಿಸತಕ್ಕದ್ದು ಮತ್ತು ತದನುಸಾರವಾಗಿ.–

(ಎ) ಯಾವುದೇ ಪ್ರಕರಣದಲ್ಲಿ ಪ್ರವೇಶ, ಶೋಧನೆ ಮತ್ತು ವಶಪಡಿಸಿಕೊಳ್ಳುವಿಕೆಯ ಸಂಬಂಧದಲ್ಲಿ ಯಾವುದೇ ಪ್ರಾಧಿಕಾರವು ಕೈಗೊಂಡ ಅಥವಾ ಮಾಡಿದ ಎಲ್ಲ ಕಾರ್ಯಗಳು, ಎಲ್ಲ ವ್ಯವಹರಣೆಗಳು ಅಥವಾ ಎಲ್ಲ ಕ್ರಮಗಳನ್ನು ಎಲ್ಲ ಉದ್ದೇಶಗಳಿಗಾಗಿ ಕಾನೂನಿಗನುಸಾರವಾಗಿ ಕೈಗೊಳ್ಳಲಾಗಿದೆ ಅಥವಾ ಮಾಡಲಾಗಿದೆ ಎಂದು ಭಾವಿಸತಕ್ಕದ್ದು ;

(ಬಿ) ಯಾವುದೇ ನ್ಯಾಯಾಲಯ ಅಥವಾ ನ್ಯಾಯಾಧಿಕರಣ ಅಥವಾ ಯಾವುದೇ ಪ್ರಾಧಿಕಾರದ ಮುಂದೆ ಅಂಥ ಕಾರ್ಯಗಳ ಅಥವಾ ವ್ಯವಹರಣೆಗಳ ಸಿಂಧುತ್ವವನ್ನು ಪ್ರಶ್ನಿಸುವ ಯಾವುದೇ ದಾವೆ ಅಥವಾ ಇತರ ವ್ಯವಹರಣೆಗಳನ್ನು ನಡೆಸತಕ್ಕದ್ದಲ್ಲ ಅಥವಾ ಮುಂದುವರಿಸತಕ್ಕದ್ದಲ್ಲ.

(ಸಿ) ಅಂಥ ಕಾರ್ಯಗಳ ಅಥವಾ ವ್ಯವಹರಣೆಗಳ ಅನುಸರಣೆಯಲ್ಲಿ ವಸೂಲುಮಾಡಿದ ಯಾವುದೇ ಅಂಥ ತೆರಿಗೆಯ ಅಥವಾ ದಂಡದ ಮರುಪಾವತಿಯನ್ನು ನಿರ್ದೇಶಿಸಿ ಯಾವ ನ್ಯಾಯಾಲಯವೂ ಯಾವುದೇ ಡಿಕ್ರಿ ಅಥವಾ ಆದೇಶವನ್ನು ಜಾರಿಮಾಡತಕ್ಕದ್ದಲ್ಲ.

**2013ನೇ ಕರ್ನಾಟಕ ಅಧಿನಿಯಮ ಸಂಖ್ಯೆ: 32**

(2013ರ ಮಾರ್ಚ್ ಹನ್ನೆರಡನೇ ದಿನಾಂಕದಂದು ಕರ್ನಾಟಕ ರಾಜ್ಯ ಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

**ಕರ್ನಾಟಕ ಮೌಲ್ಯವರ್ಧಿತ ತೆರಿಗೆ (ತಿದ್ದುಪಡಿ) ಅಧಿನಿಯಮ, 2013**

(2013ರ ಮಾರ್ಚ್ ಐದನೇ ದಿನಾಂಕದಂದು ರಾಜ್ಯಪಾಲರಿಂದ ಅನುಮತಿಯನ್ನು ಪಡೆಯಲಾಗಿದೆ)

ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಅಧಿನಿಯಮ, 2003ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ಅಧಿನಿಯಮ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಅಧಿನಿಯಮ, 2003ನ್ನು (2004ರ ಕರ್ನಾಟಕ ಅಧಿನಿಯಮ 32) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ನಾಲ್ಕನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು:-

1. **ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಮೌಲ್ಯವರ್ಧಿತ ತೆರಿಗೆ (ತಿದ್ದುಪಡಿ) ಅಧಿನಿಯಮ, 2013 ಎಂದು ಕರೆಯತಕ್ಕದ್ದು.

(2) ಇದು 2013ರ ಏಪ್ರಿಲ್ ಒಂದನೇ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

(ಪ್ರಕರಣಗಳು 10, 38, 39, 47, 62, 63, 63ಎ, 74,76 ಮತ್ತು ಒಂದನೆಯ ಅನುಸೂಚಿಯನ್ನು ಮೂಲ ಅಧಿನಿಯಮದಲ್ಲಿ ಅಳವಡಿಸಲಾಗಿದೆ)

**2013ರ ಕರ್ನಾಟಕ ಅಧಿನಿಯಮ ಸಂಖ್ಯೆ 54**

(2013ರ ಜುಲೈ ಮುವತ್ತೊಂದನೇ ದಿನಾಂಕದಂದು ಕರ್ನಾಟಕ ರಾಜ್ಯ ಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

**ಕರ್ನಾಟಕ ಮೌಲ್ಯವರ್ಧಿತ ತೆರಿಗೆ (ಎರಡನೇ ತಿದ್ದುಪಡಿ) ಅಧಿನಿಯಮ, 2013**

(2013ರ ಜುಲೈ ಮುವತ್ತೊಂದನೇ ದಿನಾಂಕದಂದು ರಾಜ್ಯಪಾಲರಿಂದ ಅನುಮತಿಯನ್ನು ಪಡೆಯಲಾಗಿದೆ)

ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಅಧಿನಿಯಮ, 2003ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ಅಧಿನಿಯಮ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಅಧಿನಿಯಮ, 2003ನ್ನು (2004ರ ಕರ್ನಾಟಕ ಅಧಿನಿಯಮ 32) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ನಾಲ್ಕನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಮೌಲ್ಯವರ್ಧಿತ ತೆರಿಗೆ (ಎರಡನೇ ತಿದ್ದುಪಡಿ) ಅಧಿನಿಯಮ, 2013 ಎಂದು ಕರೆಯತಕ್ಕದ್ದು.

(2) ಇದು 2013ರ ಆಗಸ್ಟ್ ಒಂದನೇ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

(ಪ್ರಕರಣಗಳು 40, 60 ಮತ್ತು ಒಂದನೆಯ ಅನುಸೂಚಿಯನ್ನು ಮೂಲ ಅಧಿನಿಯಮದಲ್ಲಿ ಅಳವಡಿಸಲಾಗಿದೆ)

**2014ರ ಕರ್ನಾಟಕ ಅಧಿನಿಯಮ ಸಂಖ್ಯೆ 15**

(2014ರ ಫೆಬ್ರವರಿ ಇಪ್ಪತ್ತೆಂಟನೇ ದಿನಾಂಕದಂದು ಕರ್ನಾಟಕ ರಾಜ್ಯ ಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

**ಕರ್ನಾಟಕ ಮೌಲ್ಯವರ್ಧಿತ ತೆರಿಗೆ (ತಿದ್ದುಪಡಿ) ಅಧಿನಿಯಮ, 2014**

(2014ರ ಫೆಬ್ರವರಿ ಇಪ್ಪತ್ತೆಂಟನೇ ದಿನಾಂಕದಂದು ರಾಜ್ಯಪಾಲರಿಂದ ಅನುಮತಿಯನ್ನು ಪಡೆಯಲಾಗಿದೆ)

ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಅಧಿನಿಯಮ, 2003ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ಅಧಿನಿಯಮ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಅಧಿನಿಯಮ, 2003ನ್ನು (2004ರ ಕರ್ನಾಟಕ ಅಧಿನಿಯಮ 32) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ತೈದನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು:–

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.–** (1) ಈ ಅಧಿನಿಯಮವನ್ನು ಕರ್ನಾಟಕ ಮೌಲ್ಯವರ್ಧಿತ ತೆರಿಗೆ (ತಿದ್ದುಪಡಿ) ಅಧಿನಿಯಮ, 2014 ಎಂದು ಕರೆಯತಕ್ಕದ್ದು.

(2) ಇದು 2014ರ ಮಾರ್ಚ್ ಒಂದನೇ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

(ಪ್ರಕರಣ 22, 27, 31, 63, 72, 74 ಅನುಸೂಚಿ 1, ಅನುಸೂಚಿ 3 ಗಳನ್ನು ಮೂಲ ಅಧಿನಿಯಮದಲ್ಲಿ ಅಳವಡಿಸಲಾಗಿದೆ)

**2015ರ ಕರ್ನಾಟಕ ಅಧಿನಿಯಮ ಸಂಖ್ಯೆ 05**

(2015ರ ಜನವರಿ ಒಂಭತ್ತನೇ ದಿನಾಂಕದಂದು ಕರ್ನಾಟಕ ರಾಜ್ಯ ಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

**ಕರ್ನಾಟಕ ಮೌಲ್ಯವರ್ಧಿತ ತೆರಿಗೆ (ಎರಡನೇ ತಿದ್ದುಪಡಿ) ಅಧಿನಿಯಮ, 2014**

(2015ರ ಜನವರಿ ಏಳನೇ ದಿನಾಂಕದಂದು ರಾಜ್ಯಪಾಲರಿಂದ ಅನುಮತಿಯನ್ನು ಪಡೆಯಲಾಗಿದೆ)

ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಅಧಿನಿಯಮ, 2003ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ಅಧಿನಿಯಮ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಅಧಿನಿಯಮ, 2003ನ್ನು (2004ರ ಕರ್ನಾಟಕ ಅಧಿನಿಯಮ 32) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ತೈದನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು:–

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.–** (1) ಈ ಅಧಿನಿಯಮವನ್ನು ಕರ್ನಾಟಕ ಮೌಲ್ಯವರ್ಧಿತ ತೆರಿಗೆ (ಎರಡನೇ ತಿದ್ದುಪಡಿ) ಅಧಿನಿಯಮ, 2014 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

(ಪ್ರಕರಣ 21ನ್ನು ಮೂಲ ಅಧಿನಿಯಮದಲ್ಲಿ ಅಳವಡಿಸಲಾಗಿದೆ)

**2015ರ ಕರ್ನಾಟಕ ಅಧಿನಿಯಮ ಸಂಖ್ಯೆ: 15**

(2015ರ ಮಾರ್ಚ್ ಮೂವತ್ತೊಂದನೇ ದಿನಾಂಕದಂದು ಕರ್ನಾಟಕ ರಾಜ್ಯ ಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

**ಕರ್ನಾಟಕ ಮೌಲ್ಯ ವರ್ಧಿತ ತೆರಿಗೆ (ತಿದ್ದುಪಡಿ) ಅಧಿನಿಯಮ, 2015**

(2015ರ ಮಾರ್ಚ್ ಮೂವತ್ತೊಂದನೇ ದಿನಾಂಕದಂದು ರಾಜ್ಯಪಾಲರಿಂದ ಅನುಮತಿಯನ್ನು ಪಡೆಯಲಾಗಿದೆ)

ಕರ್ನಾಟಕ ಮೌಲ್ಯ ವರ್ಧಿತ ತೆರಿಗೆ ಅಧಿನಿಯಮ, 2003ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ಅಧಿನಿಯಮ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಮೌಲ್ಯ ವರ್ಧಿತ ತೆರಿಗೆ ಅಧಿನಿಯಮ, 2003ನ್ನು (2004ರ ಕರ್ನಾಟಕ ಅಧಿನಿಯಮ 32) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ತಾರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು:-

1\. **ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಮೌಲ್ಯವರ್ಧಿತ ತೆರಿಗೆ (ತಿದ್ದುಪಡಿ) ಅಧಿನಿಯಮ, 2015 ಎಂದು ಕರೆಯತಕ್ಕದ್ದು.

(2) ಇದು 2015ರ ಏಪ್ರಿಲ್ ಒಂದನೇ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

(ಪ್ರಕರಣ 04, 9ಎ, 9ಬಿ, 10, 11, 22, 27, 62, 63 ಮತ್ತು 72 ಗಳನ್ನು ಮೂಲ ಅಧಿನಿಯಮದಲ್ಲಿ ಅಳವಡಿಸಲಾಗಿದೆ)

**2016ರ ಕರ್ನಾಟಕ ಅಧಿನಿಯಮ ಸಂಖ್ಯೆ: 06**

(2016ರ ಮಾರ್ಚ್ ಮೂವತ್ತೊಂದನೇ ದಿನಾಂಕದಂದು ಕರ್ನಾಟಕ ರಾಜ್ಯ ಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

**ಕರ್ನಾಟಕ ಮೌಲ್ಯವರ್ಧಿತ ತೆರಿಗೆ (ತಿದ್ದುಪಡಿ) ಅಧಿನಿಯಮ, 2016**

(2016ರ ಮಾರ್ಚ್ ಮೂವತ್ತೊಂದನೇ ದಿನಾಂಕದಂದು ರಾಜ್ಯಪಾಲರಿಂದ ಅನುಮತಿಯನ್ನು ಪಡೆಯಲಾಗಿದೆ)

ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಅಧಿನಿಯಮ, 2003ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ಅಧಿನಿಯಮ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಅಧಿನಿಯಮ, 2003ನ್ನು (2004ರ ಕರ್ನಾಟಕ ಅಧಿನಿಯಮ 32) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ತೇಳನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು:-

1\. **ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಮೌಲ್ಯವರ್ಧಿತ ತೆರಿಗೆ (ತಿದ್ದುಪಡಿ) ಅಧಿನಿಯಮ, 2016 ಎಂದು ಕರೆಯತಕ್ಕದ್ದು.

(2) ಇದು 2016ರ ಏಪ್ರಿಲ್ ಒಂದನೇ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

(ಪ್ರಕರಣ 10, 31, 35, 38, 72, ಅನುಸೂಚಿ 4 ಮತ್ತು ಅನುಸೂಚಿ 6 ಗಳನ್ನು ಮೂಲ ಅಧಿನಿಯಮದಲ್ಲಿ ಅಳವಡಿಸಲಾಗಿದೆ)